ಅಧ್ಯಕ್ಷರು: ಮಧ್ಯಾಹ್ನ ಅವಕಾಶ ಕೊಡುತ್ತೇನೆ. Lunch Break ಆದಮೇಲೆ ಗಮನ ಸೆಳೆಯುವ ಸೂಚನೆ ತೆಗದುಕೊಳ್ಳೋಣ. ಈಗ ಅವರು ಮಾತನಾಡಲಿ.

5. ವಿತ್ತೀಯ ಕಾರ್ಯಕಲಾಪಗಳು

2012–13ನೇ ಸಾಲಿನ ಅನುದಾನ ಬೇಡಿಕೆಗಳ ಮೇಲೆ ಚರ್ಚೆ

ಶ್ರೀ ಕಿಮ್ಮನೆ ರತ್ನಾಕರ್ : (ತೀರ್ಥಹಳ್ಳಿ): ಮಾನ್ಯ ಅಧ್ಯಕ್ಷರೆ, Demands, ಮೇಲೆ ನಾನು ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ಕೃತಜ್ಞತೆ ಸಲ್ಲಿಸುತ್ತೇನೆ. ಬಹಳ ಪ್ರಮುಖವಾಗಿ, ರಾಜ್ಯ ಸರ್ಕಾರ Demands, ಮೇಲೆ ಸದನ ಒಪ್ಪಗೆ ಕೊಡಬೇಕೆಂದು ಏನು ಹೇಳಿದೆ, ಅದಕ್ಕೆ ಪೂರಕವಾಗಿ ಈವರಗೆ ಕಾರ್ಯನಿರ್ವಹಿಸಿದೆಯೇ ಎನ್ನುವುದು ಬಹಳ ಮುಖ್ಯ.

(ಈ ಹಂತದಲ್ಲಿ ಸನ್ಮಾನ್ಯ ಉಪಾಧ್ಯಕ್ಷರು ಪೀಠವನ್ನಲಂಕರಿಸಿದರು)

ನನ್ನ ತಿಳುವಳಿಕೆ ಪ್ರಕಾರ, ಈಗಿರುವ ಅರ್ಥಿಕ ವಿವರಣೆ ನೀಡುವ ಸಂದರ್ಭದಲ್ಲಿ ವಾಸ್ತವದಲ್ಲಿ ಸರಿಯಾದ ರೀತಿಯಾದ ಮಾಹಿತಿಯನ್ನು ಕೊಡತಕ್ಕಂಥದ್ದರಲ್ಲಿ ಸರ್ಕಾರ ವಿಫವಾಗಿದೆ. ಎನ್ನುವ ಮಾತನ್ನು ಹೇಳಬಯಸುತ್ತೇನೆ. ಮೊದಲನೆಯದಾಗಿ, ಕಳೆದ 3–4 ವರ್ಷಗಳಲ್ಲಿ ನಡೆದಿರತಕ್ಕಂಥ ಆರ್ಥಿಕ ಅವಲೋಕನ ಮಾಡಿದೆ. 2009–10, 2010–11, ಈ ರೀತಿ ನಾವು ಯೋಚನೆ ಮಾಡಿದಾಗ ಸರ್ಕಾರದ ಆರ್ಥಿಕ ಪರಿಸ್ಥಿತಿ ಹೇಗಿದೆ? ಕಳೆದ 3 ಅವಧಿಗಳಲ್ಲಿ ಯೋಚನೆ ಮಾಡಿದಾಗ ಕರ್ನಾಟಕ ರಾಜ್ಯದ ಒಟ್ಟು ಆದಾಯ 65 ಸಾವಿರ ಕೋಟಿ ರೂಪಾಯಿಗಳು, ಶಾಸಾಕಾಂಗ, ಕಾರ್ಯಂಗ ಮತ್ತು ನ್ಯಾಯಾಂಗ ಈ ಮೂರೂ ವ್ಯವಸ್ಥೆಗಳಿಂದ ಒಟ್ಟು ಆದಾಯ ಬಂದಿರುವುದು ಕೇವಲ 65 ಕೋಟಿ ರೂಪಾಯಿಗಳು ಆ 65 ಸಾವಿರ ಕೋಟಿ ರೂಪಾಯಿಗಳಲ್ಲಿ 9–10 ಸಾವಿರ ಕೋಟಿ ರೂಪಾಯಿಗಳು ಕೇಂದ್ರದಿಂದ ಬಂದಿರುವ ಅನುದಾನವಾಗಿದೆ. ರಾಜ್ಯ ಸರ್ಕಾರದ ಆದಾಯ ಕೇವಲ 50 ಸಾವಿರ ಕೋಟಿ ರೂಪಾಯಿ ಮಾತ್ರ ಇದೆ. ಅದನ್ನು ನಮ್ಮಲ್ಲಿರುವ ವೆಚ್ಚಗಳು ಎಷ್ಟೆಂದು ಗಮನಿಸಿದಾಗ, 11–12 ಸಾವಿರ ಕೋಟಿ ರೂಪಾಯಿಗಳು ಸಂಬಳಕ್ಕಾಗಿಯೇ ವೆಚ್ಚವಾಗುತ್ತದೆ. ಕರ್ನಾಟಕ ಸರ್ಕಾರ ಬಿಡುಗಡೆ ಮಾಡತಕ್ಕಂಥ ಸೂಕ್ತ ಮಾಹಿತಿಯಲ್ಲೇ ಅದನ್ನು ತೋರಿಸಿದ್ದಾರೆ. ಸುಮಾರು 12 ಸಾವಿರ ಕೋಟಿ ರೂಪಾಯಿ ಸಂಬಳಕ್ಕೆ ಹೋಗುತ್ತಿದೆ. Pension ಗಾಗಿ 4 ಸಾವಿರ ಕೋಟಿ ರೂಪಾಯಿ ಹೋಗುತ್ತಿದೆ. ಅಂದಾಜು 5900 ಕೋಟಿ ರೂಪಾಯಿಗಳನ್ನು

ವಿವಿಧ ಸಂಸ್ಥೆಗಳಿಗೆ ಕೇವಲ ಬಡ್ಡಿ ರೂಪದಲ್ಲಿ ಕೊಡುತ್ತಿದ್ದೇವೆ. ಹಾಗೇಯೇ, ಒಟ್ಟು 27 ಸಾವಿರ ಕೋಟಿ ರೂಪಾಯಿಗಳಲ್ಲಿ 12 ಸಾವಿರ ಕೋಟಿ ರೂಪಾಯಿ ಸಂಬಳಕ್ಕೆ, ಬಡ್ಡಿ ಪಾವತಿಗಾಗಿ 6 ಸಾವಿರ ಕೋಟಿ ರೂಪಾಯಿಗಳು ಮತ್ತು pension items ಗೆ ನಾವು 4 ಸಾವಿರ ಕೋಟಿ ರೂಪಾಯಿಗಳನ್ನು ವ್ಯಯ ಮಾಡುತ್ತಿದ್ದೇವೆ. ಇನ್ನು ಸಹಾಯ ಧನಗಳ ವಿಷಯ. Social Security and other subsidies ಗೆ ಸುಮಾರು 5,500 ಕೋಟಿ ರೂಪಾಯಿಗಳನ್ನು ವ್ಯಯ ಮಾಡುತ್ತಿದ್ದೇವೆ. ಅಂದರೆ, ನಮ್ಮ ಬಳಿ ಇರುವ ಹಣದಲ್ಲಿ ಅಭಿವೃದ್ಧಿಗೆ ಉಳಿಯುವುದು ಕೇವಲ 8–9 ಸಾವಿರ ಕೋಟಿ ರೂಪಾಯಿಗಳು ಮಾತ್ರ. ಉಳಿದೆಲ್ಲ ಹಣವನ್ನು ನಾವು ಸಾಲದ ರೂಪದಲ್ಲಿ ಅಭಿವೃದ್ಧಿಪಡಿಸಬೇಕು. ನಾನು ತಮ್ಮಲ್ಲಿ ವಿನಂತಿಸುವುದೇನೆಂದರೆ, ಸರ್ಕಾರದ ಜನಪ್ರಿಯ ಯೋಜನೆಗಳೇನಿವೆ. ಅದನ್ನು cut down ಮಾಡಬೇಕು ಮತ್ತು ಕಡಿಮೆ ಮಾಡಬೇಕು. ಜನಪರವಾದ ಯೋಜನೆಗಳೇನಿವೆ, ಅದಕ್ಕೆ ಪ್ರಾಮುಖ್ಯತೆಯನ್ನು ಕೊಡಬೇಕು. ಆದರೆ, ಅದಕ್ಕೆ ಈವರೆಗೂ ಕೂಡ ರಾಜ್ಯ ಸರ್ಕಾರ ಪ್ರಾಮುಖ್ಯತೆ ಕೊಡುತ್ತಿಲ್ಲ. ಇದರಲ್ಲಿ ಬಹಳ ಪ್ರಮುಖವಾದ 2–3 ವಿಷಯಗಳನ್ನು ಇಲ್ಲಿ ಹೇಳಲು ಪ್ರಯತ್ನಿಸುತ್ತೇನೆ. ನಾವು ಇಲ್ಲಿ 1 ಲಕ್ಷ ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚಿನ ಹಣಕ್ಕೆ ಸಮ್ಮತಿ ಕೊಟ್ಟಮೇಲೆ ನಮ್ಮ ಆಡಳಿತ ಹೇಗಿರಬೇಕು? ಆದರೆ, ಇವತ್ತು ನಮ್ಮ ಆಡಳಿತ ವ್ಯವಸ್ಥೆಯಲ್ಲಿ ಲೋಪದೋಷಗಳೇನಿವೆ? ಬಹಳ ಪ್ರಮುಖವಾಗಿ, ಎಲ್ಲಾ ಇಲಾಖೆಯ ಮಂತ್ರಿಗಳು ಉತ್ತರ ಕೊಡುವ ಸಂದರ್ಭದಲ್ಲಿ ನಮಗೆ ಆರ್ಥಿಕ ಇಲಾಖೆಯಿಂದ ತೊಂದರೆ ಇದೆ, ಅನುಮತಿ ಕೊಡುತ್ತಿಲ್ಲವೆಂದು ಹೇಳುತ್ತಾರೆ. ಬಹಶಃ ನಮಗೆ ದಕ್ಷ ಆಡಳಿತ ಕೊಡುವುದಕ್ಕೆ ಬಹಳ ತೊಂದರೆಯಾಗಿರುವುದು, ಬಹಳ ಪ್ರಮುಖವಾಗಿ ನಮ್ಮ ಹತ್ತಿರ Infrastructure ಸರಿ ಇಲ್ಲ. Infrastructure ಅಂದರೆ ಯಾವುದು? 1 ಲಕ್ಷದ 76 ಸಾವಿರ ಹುದ್ದೆಗಳು ರಾಜ್ಯದಾದ್ಯಂತ ಖಾಲಿ ಇವೆ. ಇದು 4 ವರ್ಷಗಳ ಬಿಜೆಪಿ ಆಡಳಿತದ್ದು ಮಾತ್ರ ಎಂದು ನಾನು ಹೇಳುತ್ತಿಲ್ಲ. It is the carried problem from the previous Governments also. Ido not allege only against BJP Government. ಆದರೆ, ನಾವು ಇತರರಿಗಿಂತ ತುಂಬಾ ಭಿನ್ನನಾಗಿ, ಪರಿಶುದ್ಧವಾದ, ಅತ್ಯುತ್ತಮವಾದ, ಕರ್ನಾಟಕಕ್ಕೆ ಬಿಜೆಪಿಯೇ ಪರಿಹಾರ ಎಂದು ಹೇಳಿ ಆಡಳಿತಕ್ಕೆ ಬಂದಾಗ, what are the measures that they have taken from the past four years? There should be a difference. ಹಿಂದೆ ಎಲ್ಲಾ ಆಡಳಿತ ವ್ಯವಸ್ಥೆಯ ವಿಫಲತೆಗಾಗಿ ಅವರೆಲ್ಲರೂ ಬಂದು ಈ ಕಡೆ ಕುಳಿತಿದ್ದಾರೆ. ನೀವು ಆಡಳಿತ ಬಂದಾಗ, what is the measure that you

have taken? ನಮ್ಮ ಒಂದು Assembly segment ನಲ್ಲಿಯೇ 1 ಸಾವಿರ ಹುದ್ದೆಗಳು ಖಾಲಿ ಇವೆ. ಬಹಶಃ ಅದು ಮಂಗಳೂರಿಗೇನೂ ಹೊಸದಲ್ಲ. ಇಡೀ ನನ್ನ Assembly segment ನಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯಲ್ಲಿ 200 teachers ಇಲ್ಲ. 1996ರಲ್ಲಿ ಉದಾಸಿಯವರೂ ಸಹ ಮಂತ್ರಿಯಾಗಿದ್ದರೆಂದು ನಾನು ಭಾವಿಸಿಕೊಂಡಿದ್ದೇನೆ. ಬಹಶಃ ರಾಮಕೃಷ್ಣ ಹೆಗಡೆಯವರ ಆಡಳಿತದಲ್ಲಿ ಗೋವಿಂದೇಗೌಡರವರು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರಾಗಿದ್ದರು. ಅವರನ್ನು ನಮ್ಮಲ್ಲಿ ಮಲೇನಾಡಿನ ಗಾಂಧಿ ಎಂದು ಕರೆಯುತ್ತಿದ್ದಾರೆ. See, at one instance he has taken 14,000 teachers only on merit critiria. ಯಾರೂ ಯಾರೋ influence ಗೂ ಹೋಗಿಲ್ಲ. ಯಾರ ಹತ್ತಿರವೂ ಕೇಳಲಿಲ್ಲ. ಯಾವ Minister, MLA ಬಾಗಿಲಿಗೂ ಹೋಗಿಲ್ಲ. They have sent the orders to their houses. ತಮಗೆ ಕೆಲಸ ಸಿಕ್ಕಿದೆ ಎಂದು ನಮ್ಮ ಮನೆಗೆ ಬಂದು ಹೇಳಿದವರಿದ್ದಾರೆ. ನಾವು ಯಾರನ್ನು ಕೇಳಲಿಲ್ಲ, ಮಾಡಲಿಲ್ಲ, ನಾವು ಅರ್ಜಿ ಹಾಕಿದ್ದೆವು only on merit basis ತಮಗೆ ಕೆಲಸ ಸಿಕ್ಕಿದೆ ಎಂದು ಹೇಳಿದರು. ಈಗೇನಾಗಿದೆ ಎಂದರೆ, ಕಳೆದ 4 ವರ್ಷಗಳಿಂದ teachers problems ಇದೆ. you have not solved it. higher Education ನ ವಿಚಾರದಲ್ಲಿ ನಾನು ಈಗಾಗಲೇ ಮಾತನಾಡುವಾಗ ಕೇವಲ ನಮ್ಮ ತೀರ್ಥಹಳ್ಳಿ ಒಂದು ಕಾಲೇಜಿನಲ್ಲಿ 1500 ಮಕ್ಕಳಿದ್ದಾರೆ. 50–60 ಜನ teachers ಬೇಕಾಗಿತ್ತು, ಆದರೆ ಅಲ್ಲಿಗೆ ಕೇವಲ 18 teachers ನೇಮಿಸಿದ್ದೀರಿ. you have failed. ನಮ್ಮ District Minister ರವರು Deputy Chief Minister. ಆಗಿದ್ದಾರೆ. ಅವರು ನಮ್ಮ ಶಿವಮೊಗ್ಗ ಜಿಲ್ಲೆಯವರು. ತೀರ್ಥಹಳ್ಳಿಯ ಒಂದು ತಾಲ್ಲೂಕು ಕಛೇರಿಯಲ್ಲಿ 32 ಹುದ್ದೆಗಳು ಖಾಲಿ ಇದೆ. How you can give an impressive administration? ನನಗೆ ಅದು ಅರ್ಥವಾಗುತ್ತಿಲ್ಲ. ಮಾನ್ಯ ಮುಖ್ಯ ಮಂತ್ರಿಯವರು ಉತ್ತರ ಕೊಡುವ ಸಮಯದಲ್ಲಿ ಹೇಳಬೇಕು. ಮೀನುಗಾರಿಕೆ ಇಲಾಖೆಯಲ್ಲಿ ಇಡೀ ಶಿವಮೊಗ್ಗ ಜಿಲ್ಲೆಗೆ ಇಬ್ಬರು ಅಧಿಕಾರಿಗಳು ಮಾತ್ರ ಇದ್ದಾರೆ. Youth services ಇಲಾಖೆಯಲ್ಲಿ ಇಡೀ ಶಿವಮೊಗ್ಗ ಜಿಲ್ಲೆಗೆ ಒಬ್ಬ ಅಧಿಕಾರಿ ಮಾತ್ರ ಇದ್ದಾರೆ. ನಮ್ಮ ತಾಲ್ಲೂಕು ಪಂಚಾಯಿತಿ ಇದೆ. Rural Development ಕೂಡ ಅವರಿಗೇ ಬರುತ್ತದೆ. Rural Development ನಲ್ಲಿ Assistant Executive Engineer ಸೇರಿದಂತೆ 9 ಜನ Engineers ಇರಬೇಕಾಗಿತ್ತು. ಆದರೆ ಅಲ್ಲಿ 6 ಜನ Engineers ಇಲ್ಲ. ಹಾಗಾದರೆ, ನೀವು ಹೇಗೆ ಕೆಲಸ ತೆಗೆದುಕೊಳ್ಳುತ್ತೀರಿ? ಕೇರಳದಲ್ಲಿ ಒಂದು ಗ್ರಾಮ ಪಂಚಾಯಿತಿಗೆ 14 ಜನ ನೌಕರರಿದ್ದಾರೆ. Junior Engineer is there to each Gram Panchayat ನಮ್ಮಲ್ಲಿ 10 ಗ್ರಾಮ ಪಂಚಾಯಿತಿಗೆ ಒಬ್ಬ ಇಂಜಿನಿಯರ್

ಇರುತ್ತಾರೆ. How he can draw the bills? How he can place the bills ? ನನಗನಿಸುತ್ತದೆ, it is not at all an administration. ಇದೊಂದು ಆಡಳಿತ ಯಂತ್ರದ ವ್ಯವಸ್ಥೆಯೇ ಅಲ್ಲ. ಇದಕ್ಕಿಂತ ಕುಲಗೆಟ್ಟ ವ್ಯವಸ್ಥೆಯನ್ನು ನಾವು ನೋಡಲಿಕ್ಕೆ ಸಾಧ್ಯವೇ ಇಲ್ಲ. ಈ ಎಲ್ಲಾ ಕಾರಣಗಳಿವೆ. ಟೀಚರ್ಸ್ ಇಲ್ಲವೆಂದು ಶಾಸಕರ ಮನೆಗೆ ಬಂದು ಬಯ್ಯುತ್ತಾರೆ. ಇದರಲ್ಲಿ ಆಡಳಿತ ಪಕ್ಷದ ಶಾಸಕರು, ವಿರೋಧ ಪಕ್ಷದ ಶಾಸಕರು ಎನ್ನುವ ಪ್ರಶ್ನೆ ಇಲ್ಲ. It is concerned to the Education Minister also. ಅವರ ಕ್ಷೇತ್ರದಲ್ಲೂ ಈ ಸಮಸ್ಯೆ ಇದೆ. ಹಾಗಾದರೆ ಅವರೆಲ್ಲರೂ ಬಂದು ಬಯ್ಯುವುದೇನೆಂದರೆ, ನೀವು failure. It is a failure on the part of the Government not on the part of the Legislator. ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, when they have taken the responsibility, they have to discharge their duties. Otherwise, they should get down from the responsibilities. ಇದು ಒಂದು ಭಾಗ. ಬಹಳ ಪ್ರಮುಖವಾಗಿರುವ ಅಂಶವೇನೆಂದರೆ, ನಮ್ಮ ಶಾಸಕ ಮಿತ್ರರು ಅಧಿಕಾರಿಗಳ ಬಗ್ಗೆ ಅನೇಕ ವಿಚಾರಗಳನ್ನು ಮಾತನಾಡಿದ್ದಾರೆ. ಇತ್ತೀಚೆಗೆ, ಸದಸ್ಯರಾದ ಚಿಕ್ಕಣ್ಣನವರ ಕ್ಷೇತ್ರದಲ್ಲಿ ಒಂದು ಘಟನೆ ನಡೆಯಿತು. ಇಲ್ಲಿರುವ ಎಲ್ಲಾ ಶಾಸಕರಿಗೂ ಕೂಡ ನಾವು ಅಧಿಕಾರಿಗಳ ಜೊತೆ ಹೇಗೆ ನಡೆದುಕೊಳ್ಳಬೇಕೆನ್ನುವುದು ದೊಡ್ಡ ಸಮಸ್ಯೆಯಾಗಿದೆ. ನಾವು ಫೋನ್ ಮಾಡಿ ಹೇಳಿದರೆ ನಮ್ಮ ಮಾತು ಕೇಳುವುದಿಲ್ಲ. ನಾವು ಲೆಟರ್ ಬರೆದರೆ ಅದಕ್ಕೆ ರೆಸ್ಪಾಂಡ್ ಮಾಡುವುದಿಲ್ಲ. ಕಛೇರಿಗೆ ಹೋಗಿ ಅಲ್ಪಮಟ್ಟಿಗೆ ಮಾತನಾಡಿದರೆ ನಾವು ಮಾಡುವುದಕ್ಕಾಗಲ್ಲ ಎನ್ನುತ್ತಾರೆ. ಗಲಾಟೆ ಮಾಡಿದರೆ ನಮ್ಮ ಮೇಲೆ official discharge of duties ಗೆ ತೊಂದರೆ ಕೊಡುತ್ತಾರೆ ಎಂದು ನಮ್ಮ ಮೇಲೆ complaint ಕೊಡುತ್ತಾರೆ. See, ನಾವು ಜಾಸ್ತಿ ಮಾತನಾಡಿದರೆ ರೌಡಿ ಆಗುತ್ತೇವೆ, ಕಡಿಮೆ ಮಾತನಾಡಿದರೆ ಕೆಲಸ ಆಗಲ್ಲ. What is the role of the Legislator in the Taluk Administration? This should be explained ಸರ್ಕಾರ ಅದನ್ನು explain ಮಾಡಬೇಕಾಗುತ್ತದೆ. ಇಲ್ಲಿ ನಮ್ಮ ಪಾತ್ರ ಏನು? ನಾನು ಹೇಳಿದ್ದನ್ನು ಅವರು ಮಾಡುವುದಿಲ್ಲವೆಂದರೆ ಅಥವಾ ನನ್ನ ಪ್ರಶ್ನೆ ಇರುವುದು ಒಂದು ಮಾತ್ರವಲ್ಲ ತೀರ್ಥಹಳ್ಳಿಯಲ್ಲಿ ನಡೆದ ಒಂದು ಘಟನೆ ತಮಗೆ ಹೇಳುತ್ತೇನೆ. ಹಮಾಲಿ ಮಾಡಿದಂಥ ಸಾವಿರ ಜನರಿಗೆ 20–30 ವರ್ಷಗಳಿಂದ ಸೈಟ್ ಸಿಕಿಲ್ಲ. ಮನೆ ಕೆಲಸಕ್ಕೆ ಹೋಗುತ್ತಾರೆ, ಅವರಿಗೆ ಸೈಟ್ ಸಿಕ್ಕಿಲ್ಲ. ಅವರು ನಮಗೆ ಸೈಟ್ ಕೊಡಿ ಎಂದು ಕೇಳುತ್ತಿದ್ದಾರೆ. ಹತ್ತಾರು ಸಾರಿ ಪ್ರತಿಭಟನೆ ಮಾಡುತ್ತಾರೆ. ನಾನು ಪುರ ಪಂಚಾಯಿತಿಯ ಅಧ್ಯಕ್ಷರು, ಉಪಾಧ್ಯಕ್ಷರು, ಚೀಫ್ ಆಫೀಸರ್‌ಗೆ

ಕರೆದು ನೀವು 18 ಸೈಟ್ ಮಾರುತ್ತೀರಿ, ಹರಾಜು ಮಾಡುತ್ತೀರಿ ಎಂದು ಹೇಳುತ್ತೀರಿ 10–15 ಲಕ್ಷಕ್ಕೆ ಯಾರೋ ಶ್ರೀಮಂತರಿಗೆ ಆ ಸೈಟ್ ಹೋಗುತ್ತದೆ, ಅವರೆಲ್ಲಾ ನನ್ನ ಹತ್ತಿರ ಬಂದು ಪ್ರತಿಭಟನೆ ಮಾಡುತ್ತಿದ್ದಾರೆ, ಒಂದು ತಿಂಗಳು ಮುಂದಕ್ಕೆ ಹಾಕಿ ಎಂದು ವಿನಂತಿ ಮಾಡಿಕೊಂಡೆ ನಾನು ಹೇಳಿದ್ದು ಇಷ್ಟೇನೆ. I have not taken it as a challenge. ನಾನು ಯಾವುದೇ ಸಂದರ್ಭದಲ್ಲಿ ಇಂಥ challenge ಅನ್ನು ತೆಗೆದುಕೊಳ್ಳುವುದಕ್ಕೆ ಹೋಗುವುದಿಲ್ಲ. ನಾನು ಅವರನ್ನು ನನ್ನ ಕಛೇರಿಗೆ ಕರೆಸಿ ಟೀ ಕೊಟ್ಟು ಅವರಿಗೆ ಕೇಳಿದೆ. See, they have taken it as a challenge. ನಾವು ನಾಳೆ ಹರಾಜು ಹಾಕುತ್ತೇವೆ ಎಂದರೆ ನಾವೇನು ಮಾಡಬೇಕು? ನಾನು ಡಿ.ಸಿ.ಗೆ ಲೆಟರ್ ಬರೆದಿದ್ದೇನೆ. ಅವರಿಗೂ ಕೇಳಿಕೊಂಡಿದ್ದೇನೆ, ಒಂದು ತಿಂಗಳು ಮುಂದಕ್ಕೆ ಹಾಕಿ ಎಂದು ಅವರನ್ನೆಲ್ಲಾ ಕರೆಸಿ ಕುಳಿತು ಮಾತುಕತೆ ಮಾಡಿ ಬಗೆಹರಿಸೋಣವೆಂದರೆ, they are not obliging it. See, ನಾವೊಬ್ಬ ಶಾಸಕರಾಗಿ ನಾವೇನು ಮಾಡಬೇಕು? ಇವೆಲ್ಲವೂ ಕೂಡ ಬಹುಶಃ ತಾವು ಉತ್ತರ ಕೊಡುವ ಸಮಯದಲ್ಲಿ ಸರ್ಕಾರ ಇದಕ್ಕೆ ಉತ್ತರ ಕೊಡುತ್ತದೆಂದು ನಾನು ಭಾವಿಸಿಕೊಂಡಿದ್ದೇನೆ. ಇಲ್ಲಿ ಬಹಳ ದೊಡ್ಡ ಸಮಸ್ಯೆ ಏನೆಂದರೆ ನಮ್ಮ ಅರಣ್ಯ ಇಲಾಖೆಯಲ್ಲಿದೆ. ನನಗೆ ಏನು ಅನ್ನಿಸಿದೆ ಎಂದರೆ, ಅರಣ್ಯ ಇಲಾಖೆಯ ಅಧಿಕಾರಿಗಳು ಅವರೇನು ಭೂಲೋಕದಲ್ಲಿ ಹುಟ್ಟಿದವರ ಹಾಗೆ ಆಡುತ್ತಿಲ್ಲ. ಆಕಾಶದಿಂದ ಬಂದು ನಾವು ಇಳಿದಿದ್ದೇವೆ ಎನ್ನುವ ರೀತಿಯಲ್ಲಿ ಅವರ behaviour. ಇಲ್ಲಿ ನನಗೆ ಬಹಳ ಮುಖ್ಯವಾಗಿರುವುದು ಕಂದಾಯ ಮತ್ತು ಅರಣ್ಯ ಇಲಾಖೆಯಲ್ಲಿ ಅನೇಕ ಗೊಂದಲಗಳಿರುವುದು. ಅದನ್ನು ಏಕೆ ಸರಿಪಡಿಸಲಿಕ್ಕೆ ಆಗುವುದಿಲ್ಲ? ಇದು ನನಗೆ ಅರ್ಥವಾಗುತ್ತಿಲ್ಲ. ಕಂದಾಯ ಇಲಾಖೆಯು ಸರ್ವೆನಂಬರ್ 6 ರಲ್ಲಿ 300 ಎಕರೆ ಇದ್ದರೆ 150 ಎಕರೆ ಅರಣ್ಯ ಇಲಾಖೆಗೆ ಸೇರಿದ್ದು 150 ಎಕರೆ land revenue ಎಂದು ಇದೆ. ಅದಕ್ಕೆ bifurcate ಆಗಿಲ್ಲ. It has not been divided by metes and bounds. It has not been bifurcated. ನಾವು ಯಾವುದೇ ಬಗರ್ ಹುಕುಂ ಸಮಿತಿ ರಚಿಸಿ grant ಕೊಟ್ಟರೆ ಅದು ನಮ್ಮದು ಫಾರೆಸ್ಟ್ ಎಂದೆನ್ನುತ್ತಾರೆ. ಇಲ್ಲಿ ಬಹಳ problem ಎಂದರೆ 300 ಎಕರೆಯೂ ಫಾರೆಸ್ಟ್ ಇದೆ, 300 ಎಕರೆಯೂ land revenue ಇದೆ. The Government is incapable of solving this problem. ಏಕೆ ಮಾಡುವುದಕ್ಕಾಗುತ್ತಿಲ್ಲ? ಕಂದಾಯ ಇಲಾಖೆ ಮತ್ತು ಅರಣ್ಯ ಇಲಾಖೆಯವರನ್ನು ಕರೆಸಿ ಜಂಟಿ ಸರ್ವೆ ಮಾಡಿಸಿ ಅದನ್ನು bifurcate ಮಾಡಿಸಿ metes and bounds ಮಾಡಿ ಯಾವುದು ಫಾರೆಸ್ಟ್ ಯಾವುದು land revenue ಎಂದು ಮಾಡುವುದಕ್ಕಾಗುವುದಿಲ್ಲವೆ?

ಪ್ರತಿನಿತ್ಯ ಹಳ್ಳಿಯಲ್ಲಿ ಇದರ ಬಗ್ಗೆ ಜಗಳವಾಡುತ್ತಿದ್ದಾರೆ. ಇವರು ಯಾರಿಗಾದರೂ ಅವನಿಗೆ ಬೇಕಾದವರಿಗೆ ಹತ್ತು ಸಾವಿರ ಕೊಟ್ಟರೆ ಇದು ಫಾರೆಸ್ಟ್‌ನೊಳಗೆ ಬರುವುದಿಲ್ಲ, ಹತ್ತು ಸಾವಿರ ಕೊಡದೇ ಇದ್ದರೆ ಫಾರೆಸ್ಟ್‌ನೊಳಗೆ ಬರುತ್ತದೆ. ಹಾಗಾದರೆ where is the solution? Suppose ಫಾರೆಸ್ಟ್‌ನವರನ್ನು ಕೇಳಿದರೆ ಅವರೊಂದು ಹೊಸ map ತಂದು ಚಿತ್ರ ಬಿಡಿಸಿ green ink ಬರೆದು ಇದೆಲ್ಲಾ ಫಾರೆಸ್ಟ್ ಎಂದು ತೋರಿಸುತ್ತಾರೆ, which is not substantiated by metes and bounds. ಟಿಪ್ಪಣಿ ಖಾತೆಯಲ್ಲಿ ಅವನ ಅಡ್ರೆಸ್ ಇಲ್ಲ. ಟಿಪ್ಪಣಿ ಖಾತೆಯಲ್ಲಿ Forest Department ನ ಹೆಸರೇ ಇಲ್ಲ, metes and bounds ಇಲ್ಲ. boundary fix ಆಗಿಲ್ಲ, but they are claiming that they are the owners. ಈ ಎಲ್ಲ ವಿಚಾರಗಳು ಬಗೆಹರಿಯದೆ ನಾಲ್ಕು ವರ್ಷಗಳಾಗಿ ಹೋಯಿತು. ಇನ್ನು ಯಾವಾಗ solve ಮಾಡುವುದು? ಮಾನ್ಯ ಉಪಾಧ್ಯಕ್ಷರಿಗೆ ಹೇಳುತ್ತೇನೆ, ಈಗಾಗಲೇ ನಾಲ್ಕು ವರ್ಷಗಳಾದವು, ನಾನು ಶಿವಮೊಗ್ಗದಲ್ಲಿ Law practice ಮಾಡುತ್ತಿದ್ದಾಗಲೇ, ಮಾನ್ಯ ಮಾಜಿ ಮುಖ್ಯಮಂತ್ರಿಗಳಾಗಿರುವ ಯಡಿಯೂರಪ್ಪನವರು ಎಲ್ಲರಿಗೂ ಕೂಡ ಬಗರ್‌ಹುಕುಂ ಅನ್ನು ಮಂಜೂರು ಮಾಡಬೇಕೆಂದು ಕಾಲ್ನಡಿಗೆಯಲ್ಲಿ ಬಂದಿದ್ದರು. ಅವರು ಮುಖ್ಯಮಂತ್ರಿಗಳಾದರು. ಅವರ ಹೋರಾಟದ ಬಗ್ಗೆ ನನಗೆ ಬಹಳ ಗೌರವವಿದೆ. ಈಗ ನಾಲ್ಕು ವರ್ಷವಾಯಿತು. ನಾನು ನಿನ್ನೆ ಬಗರ್ ಹುಕುಂ ಸಮಿತಿಯಲ್ಲಿ ಏನಾಗಿದೆ ಎಂದು ಪ್ರಶ್ನೆ ಕೇಳಿದ್ದೆ, ಅವರಿನ್ನು ಬಗರ್ ಹುಕುಂ ಸಮಿತಿಯನ್ನೇ 36 ತಾಲ್ಲೂಕುಗಳಲ್ಲಿ ರಚಿಸಿಲ್ಲ. ಇನ್ನು ಯಾವಾಗ ಮಾಡುವುದು? ಇನ್ನು ನಮಗೆ ಉಳಿದಿರುವ ಅವಧಿ 8 ತಿಂಗಳು ಮಾತ್ರ, ಅದು ಭಿನ್ನಮತೀಯ 18 ಜನರು ಸುಮ್ಮನೆ ಇದ್ದರೆ, ಇಲ್ಲಾಂದ್ರೆ ನಾಳೆಯೂ ಇಲ್ಲ. 27ಕ್ಕೆ ಇಲ್ಲ. ನಾನು ಹೇಳುವುದೇನೆಂದರೆ, ನಾಲ್ಕು ವರ್ಷಗಳಿಂದ ಬಗರ್ ಹುಕುಂ ಸಮಿತಿ ರಚನೆ ಮಾಡುವುದಕ್ಕೆ ಆಗಿಲ್ಲವೆಂದರೆ ಹೇಗೆ? ಮೂರೂವರೆ ವರ್ಷವಾದರೂ ಸರ್ಕಾರಕ್ಕೆ ಬಗರ್ ಹುಕುಂ ಸಮಿತಿ ರಚನೆ ಮಾಡುವುದಕ್ಕೆ ಆಗಿಲ್ಲವೆಂದರೆ ಕಾರಣ ಏನು? ಯಾರು ಬೇಡ ಎಂದಿದ್ದರು? ಹಾಗಾದರೆ ಒಂದು ವರ್ಷದ ಸಮಯದಲ್ಲಿ ಅವರ ಸಮಸ್ಯೆ ಎಲ್ಲಾ ನಾವು ಬಗೆಹರಿಸುತ್ತೇವೆಯೆ? ಆ ಜನರು ಬಂದು ಯಾರಿಗೆ ಬಯ್ಯುತ್ತಾರೆ? ಅಲ್ಲಿನ ಶಾಸಕರಿಗೆ. ಅದು ಆಡಳಿತ ಪಕ್ಷದವರಿರಬಹುದು, ವಿರೋಧ ಪಕ್ಷದವರಿರಬಹುದು. ಅಂದರೆ ನಾವು ಮಾಡದಿರುವ ತಪ್ಪಿಗೆ ನಾವು ಅವರ ಹತ್ತಿರ ಯಾವ ಕಾರಣಕ್ಕೆ ಬಯ್ಯಿಸಿಕೊಳ್ಳಬೇಕು? ಇದು ಒಂದು ಭಾಗ. ಇಂಥ ಅನೇಕ ಸಮಸ್ಯೆಗಳನ್ನು ತಮ್ಮ ಅವಗಾಹನೆಗೆ ತರುತ್ತೇನೆ. ಬಹಳ ಪ್ರಮುಖವಾಗಿ ನಮ್ಮ ಕಂದಾಯ ಮತ್ತು ಇಂಧನ

ಇಲಾಖೆ ಹಾಗೂ ಭಾರಿ ನೀರಾವರಿ ಇಲಾಖೆಗೆ ಸಂಬಂಧಪಟ್ಟಿರುವುದು. ನಾನು ಮುಳುಗಡೆ ಪ್ರದೇಶದಿಂದ ಬಂದಿರತಕ್ಕಂಥವನು. ಇಡೀ ಕರ್ನಾಟಕದಲ್ಲಿ ಭೌಗೋಳಿಕವಾಗಿ ಅತಿ ದೊಡ್ಡದಾಗಿರುವುದು ತೀರ್ಥಹಳ್ಳಿ ಕ್ಷೇತ್ರ, 61 ಗ್ರಾಮ ಪಂಚಾಯಿತಿಗಳು ಬರುತ್ತವೆ. ನಮಗೆ 3,500 ಕಿ.ಮೀ. ರಸ್ತೆ ಬರುತ್ತದೆ. ಸುಮಾರು 8–9 ಜಿಲ್ಲಾ ಪಂಚಾಯಿತಿ ಸದಸ್ಯರು ನಮ್ಮ ವ್ಯಾಪ್ತಿಗೆ ಬರುತ್ತಾರೆ. ಬಹಳ ದೊಡ್ಡ ಸಮಸ್ಯೆ ಏನೆಂದರೆ, ಅಷ್ಟು ಮುಳುಗಡೆ ಪ್ರದೇಶದ ಸಮಸ್ಯೆಗಳು ಇವತ್ತಿಗೂ ಕೂಡ ಬಗೆಹರಿದಿಲ್ಲ. ನಾನು ಈ ಬಗ್ಗೆ ಪ್ರಶ್ನೆ ಕೇಳಿದಾಗ ಎಲ್ಲವನ್ನೂ ಬಗೆಹರಿಸಿದ್ದೇವೆಂದು ಉತ್ತರ ಬಂತು. ಏನು ಬಗೆಹರಿಸಿದ್ದಾರೆ? ಬಹಳ ದೊಡ್ಡ ಸಮಸ್ಯೆ ಏನೆಂದರೆ, ಇವತ್ತು ನಮ್ಮಲ್ಲಿ ನಕ್ಸಲ್ ಪೀಡಿತ ಪ್ರದೇಶವಿದೆ. ನನಗೆ ಅನ್ನಿಸಿರುವಂಥದ್ದು ನಕ್ಸಲರು ಏನು ತಪ್ಪು ಮಾಡುತ್ತಿದ್ದಾರೆಂದು ನನಗೆ ಭಾವನೆ ಬರುತ್ತಿದೆ. ತಮ್ಮ ಅವಗಾಹನೆಗೆ ತರುತ್ತೇನೆ. ಯಾವ ಪರಿಸ್ಥಿತಿ ಇದೆ ಎಂದರೆ, ಆಗುಂಬೆಯಲ್ಲಿ 42 ಕುಟುಂಬಗಳಿಗೆ ಕರೆಂಟ್ ಲೈನ್ ಇರಲಿಲ್ಲ. ನಕ್ಸಲ್ ಪ್ಯಾಕೇಜ್ ಎಂದು ಇದೆ. ದೇವರ ದಯೆಯಿಂದ ಒಂದು ರೂಪಾಯಿ ಕೊಡಲಿಲ್ಲ. ಉಡುಪಿಯ ಪೇಜಾವರ ಮಠದ ಸ್ವಾಮಿಗಳು ಬಂದು 2 ಕುಟುಂಬಗಳಿಗೆ ಐದೈದು ಸಾವಿರ ಹಾಕಿ 3 ಲಕ್ಷ ರೂಪಾಯಿ ಹಾಕಿ ಎಲೆಕ್ಟ್ರಿಕ್ ಕನೆಕ್ಷನ್ ಕೊಡುತ್ತಾರೆ. ಸರ್ಕಾರ ಏನು ಮಾಡುತ್ತದೆ? ಹಾಗಾದರೆ ನಕ್ಸಲ್ ಪ್ಯಾಕೇಜ್ ಯಾರಿಗೋಸ್ಕರ? ಹಾಗಾದರೆ ಇದನ್ನೆಲ್ಲಾ ಯಾರು ಸರಿಪಡಿಸಬೇಕು? ಇದರಲ್ಲಿ ಸರ್ಕಾರದ ನ್ಯೂನತೆಯಿಲ್ಲವೆ? ಅಥವಾ ನಾವೇನಾದರೂ ಜನಪ್ರತಿನಿಧಿಗಳು ನಿಮ್ಮ ಗಮನಕ್ಕೆ ತಂದಿಲ್ಲವೆ? We have brought it to the notice of the Government. ನಾವು ಅದನ್ನು ತಂದಿದ್ದೇವೆ. ಇನ್ನೊಂದು ಬಹಳ ದೊಡ್ಡ ದುರಂತ ಏನೆಂದರೆ, ನಮ್ಮ ಆರ್ಥಿಕ ಇಲಾಖೆಯದು ಬಹಳ ದೊಡ್ಡ ಸಮಸ್ಯೆ. ನಾವು ವಿದೇಶಗಳೆಂದರೆ ಎಲ್ಲಾ ದೇಶಗಳೆಂದು ಹೇಳುವುದಿಲ್ಲ. ಅದು ಇಂಗ್ಲೆಂಡ್ ಇರಬಹುದು, ಅಮೆರಿಕ ಇರಬಹುದು, ಆಸ್ಟ್ರೇಲಿಯಾ ಆಗಬಹುದು ಅಥವಾ developed countries ಗಳ ಬಗ್ಗೆ ನಾವು ಯೋಚಿಸಿದಾಗ, ನಮ್ಮ ರಾಜಕಾರಣಿಗಳಾಗಲಿ ನಾವು ಎಲ್ಲರೂ ಮೊದಲು ಆಶ್ವಾಸನೆಗಳನ್ನು ಕೊಡುತ್ತೇವೆ, programmes announce ಮಾಡುತ್ತೇವೆ without any planning ನಮ್ಮ ಹತ್ತಿರ ಸ್ಥೂಲವಾದ ಪ್ಲಾನಿಂಗ್ ಇರುವುದಿಲ್ಲ. we in order to get the applaud from the mass, ಎದುರುಗಡೆ ಕುಳಿತಿರುವ ಜನ ನಮಗೆ ಎಲ್ಲಾ ಕ್ಲಾಪ್ಸ್ ಹೊಡೆಯುತ್ತಾರೆಂದಾಕ್ಷಣ ಆಶ್ವಾಸನೆ ಕೊಟ್ಟು ಬಿಡುತ್ತೇವೆ without any financial support, without any programme, without any plan ಒಂದು programme announce ಮಾಡಿ ಬಿಡುವುದು. ಇಂಥ ಪ್ರೋಗ್ರಾಂಗಳಿಂದ ಏನೇನು

ಅನಾಹುತಗಳಾಗಿವೆ ಎಂದರೆ, 2006-07 ರಲ್ಲಿ ನಾವು ಕರ್ನಾಟಕದಲ್ಲಿ 700-800 ಸೇತುವೆಗಳನ್ನು ಕಟ್ಟುತ್ತೇವೆಂದು ಹೇಳಿಬಿಟ್ಟರು. ಅದಕ್ಕೆ ಹಣ ಎಷ್ಟು? 1200 ಕೋಟಿ. ಶಂಕುಸ್ಥಾಪನೆ ಮಾಡಿದರು. ನಮ್ಮಲ್ಲಿ PWD Minister ಎಲ್ಲಾ ಬಂದು ಶಂಕುಸ್ಥಾಪನೆ ಮಾಡಿ ಊಟ ಮಾಡಿ ಅಲ್ಲಿ ಎಲ್ಲಾ ಶಾಮಿಯಾನ ಹಾಕಿ ಎಲ್ಲಾ ಆಗಿ ಹೋಯಿತು. ದೇವರ ದಯೆಯಿಂದ ಸೇತುವೆ ಆಗಲಿಲ್ಲ. 5-6 ಕೋಟಿ ರೂಪಾಯಿ ಸೇತುವೆ ಆಗಲಿಲ್ಲ. ನಾನು ಮೊನ್ನೆ ಸಮಿತಿಯಲ್ಲಿ ಪ್ರಧಾನ ಕಾರ್ಯದರ್ಶಿಗಳನ್ನು ಕೇಳಿದೆ. ಯಾವ ಪರಿಸ್ಥಿತಿ ಇದೆ ಎಂದರೆ, ಹಣ ಇಲ್ಲದೆ ಇವರು ಅದರ ಪ್ಲಾನ್ ಮಾಡಿದ್ದಾರೆ. 1200 ಕೋಟಿ ರೂಪಾಯಿಯ ಒಂದು ಪ್ರೋಗ್ರಾಂ ಕೊಟ್ಟರು. 300-500 ಸೇತುವೆಯನ್ನು ಉದ್ಘಾಟನೆ ಮಾಡಿದರು. There is no fund. ಅಲ್ಲಿ ಫಂಡ್ ಇಲ್ಲ. ನಾನು ಕೇಳಿದರೆ ಇದು ಚೆಂಗಾರ ಸೇತುವೆ ಆಗುವುದಿಲ್ಲ, there is no fund. ಮಹಿಷಿ ಸೇತುವೆ, PWD Minister, Deputy Chief Minister ಬಂದಿದ್ದರು, ಉದ್ಘಾಟನೆ ಮಾಡಿದ್ದರು. ಶಂಕುಸ್ಥಾಪನೆ ಮಾಡಿರುವ ಕಲ್ಲು ಅಲ್ಲಿಯೇ ಇದೆ, ಆರು ವರ್ಷವಾಯಿತು. ಫಂಡ್ಸ್ ಇಲ್ಲದಿದ್ದ ಮೇಲೆ why you are preparing for the programme? ಹಣ ಇಲ್ಲದಿದ್ದರೆ ಏಕೆ ಅಂಥ ಪ್ರೋಗ್ರಾಂಗಳನ್ನು ಹಾಕಿಕೊಳ್ಳುತ್ತೀರಿ? ಹಣ ಇಲ್ಲದಿದ್ದ ಮೇಲೆ we should not go for it. ನಮ್ಮ ಕರ್ನಾಟಕ ರಾಜ್ಯದಲ್ಲಿ ನಮ್ಮ ಹತ್ತಿರ ಈಗ ಎಷ್ಟು ಹಣ ಇದೆ? ವರ್ಷದಲ್ಲಿ 8 ಸಾವಿರ ಕೋಟಿ ರೂಪಾಯಿಗಳ ಸಾಲ ತೆಗೆಯುತ್ತಿದ್ದೇವೆ. ತಮಗೆ ಆಶ್ಚರ್ಯವಾಗಬಹುದು, I have taken a document. ಒಂದು ಅವಧಿಯಲ್ಲಿ 8 ಸಾವಿರ ಕೋಟಿ ಸಾಲ ಮಾಡಿ 8 ಸಾವಿರ ಕೋಟಿ ರಿಸರ್ವ್ ಬ್ಯಾಂಕ್‌ಗೆ ಹಣ ಜಮೆ ಮಾಡಿದ್ದೇವೆ. ನಮ್ಮ ಹತ್ತಿರ ಹಣವಿದೆ, ಖರ್ಚು ಮಾಡುವುದಕ್ಕೆ ಆಗಿಲ್ಲ. ನಾನು ಅದರ ಪ್ರಶ್ನೆ ಕೇಳಿದ್ದೆ. ಅದಕ್ಕೆ ಉತ್ತರ ಬಂದಿಲ್ಲ. ಕರ್ನಾಟಕ ಸರ್ಕಾರ ಆರ್‌ಬಿಐಗೆ ಪ್ರತಿ ದಿನ ಜಮೆ ಮಾಡಿರುವ ಹಣದ ಮಾಹಿತಿ ಕೊಡಿ ಎಂದು ಕೇಳಿದ್ದೆ. 8 ಸಾವಿರ ಕೋಟಿ ರೂಪಾಯಿ ಹಣ ಸಾಲ ತಂದು ಹೆಚ್ಚು ಕಡಿಮೆ ನಾವು 8 ಸಾವಿರ ಕೋಟಿ ಬಡ್ಡಿ ಕಟ್ಟಿದ್ದೇವೆ, ಆದರೆ, ನಾವು ಮಾಡಿರುವುದು ನಮ್ಮ ಹತ್ತಿರ ಹಣವಿದೆ, ಬಡ್ಡಿ ದುಡ್ಡನ್ನು ಕೊಡಬೇಕಾದ ಅಗತ್ಯವಿರಲಿಲ್ಲ.

ರಿಸರ್ವ್ ಬ್ಯಾಂಕ್‌ಗೆ ಆ ಹಣವನ್ನು ಕಟ್ಟಿದ್ದೇವೆ. I have taken the documents. ನಿಜವಾಗಿಯೂ ಕೂಡ ನನಗೆ ಇದು ಅರ್ಥವಾಗುತ್ತಿಲ್ಲ. ಇವತ್ತಿನ ದಿವಸ ಎಲ್ಲೋ ಒಂದು ಕಡೆ ನಮ್ಮ ಅಧಿಕಾರಿಗಳೂ ಕೂಡ ಸರಿಯಾದ ರೀತಿಯಲ್ಲಿ ಮಾಹಿತಿಗಳನ್ನು ಕೊಡತಕ್ಕಂಥದ್ದರಲ್ಲಿ ವಿಫಲರಾಗಿದ್ದಾರೆ. ಅದನ್ನು ನಾವುಗಳು

ಅಧ್ಯಯನ ಮಾಡಿ ಕಲಿತುಕೊಳ್ಳಬೇಕು ಅಥವಾ ಅವರನ್ನು ಸರಿಪಡಿಸತಕ್ಕಂಥ ಪ್ರಯತ್ನ ಮಾಡಬೇಕು. ಇವೆರಡೂ ಆಗದೇ ಇದ್ದರೆ ಈ ಕತೆ ಆಗುತ್ತದೆ. ಒಂದು ದೊಡ್ಡ ಸಮಸ್ಯೆ ಬಗ್ಗೆ ಹೇಳುವುದಾದರೆ, ಮೂರು ದಿನದ ಹಿಂದೆ ನನ್ನ ರೂಮ್‌ಗೆ ಯಡಿಯೂರಿನಿಂದ ಒಬ್ಬ ವ್ಯಕ್ತಿ ಬಂದಿದ್ದಾನೆ. 15 ವರ್ಷಗಳಿಂದ ಇಲ್ಲಿಯವರೆಗೆ ಆತನಿಗೆ ಇನ್ನೂ ಪರಿಹಾರ ಸಿಕ್ಕಿಲ್ಲ. ಆತನದು 12 ಗುಂಟೆ ಜಮೀನು ಇತ್ತು. ಅದರಲ್ಲಿ 5 ಗುಂಟೆ ಅಣ್ಣ ತಮ್ಮನಿಗೆ ಹಿಸ್ಸೆ ಆಗಿದೆ. ಆ 5 ಗುಂಟೆ ಜಮೀನಿನ ಪರಿಹಾರಕ್ಕೆ 10 ವರ್ಷಗಳಿಂದ ಓಡಾಡುತ್ತಿದ್ದಾನೆ. ಆತ ಓಡಾಡುತ್ತಿರುವ ದಿವಸಗಳನ್ನು ತೆಗೆದುಕೊಂಡರೆ ನಾನು ಮೂರನೇ ಅಥವಾ ನಾಲ್ಕನೇ ಶಾಸಕ ಇರಬಹುದು. ನಮ್ಮ ಇಂಜಿನಿಯರ್‌ಗಳು ಪ್ರಾಜೆಕ್ಟ್ ಮಾಡುವಾಗ ಪರಿಹಾರದ ಪೂರ್ಣ ಮಾಹಿತಿಯನ್ನು ಪಡೆದುಕೊಂಡು ಯಾರಿಗೆ ಕೊಡಬೇಕೆಂಬುದರ ಬಗ್ಗೆ ಯೋಚನೆ ಮಾಡುವುದು ಬೇಡವೇ? ಅಧಿಕಾರಿ ಮಿತ್ರರಿಗೆ ಕೆಲಸ ಸಿಗುವಾಗ ಏನೂ ತೊಂದರೆ ಇರುವುದಿಲ್ಲ. ಆದರೆ, ಕೆಲಸ ಸಿಕ್ಕಿದ ಮೇಲೆ ಅವರ ರೀತಿಗಳೇ ಬೇರೆ ಆಗುತ್ತವೆ. ಅನಾವಶ್ಯಕವಾಗಿ ಪ್ರತಿಯೊಂದಕ್ಕೂ ಸಹ ಅವರು ಕೊಕ್ಕೆ ಹಾಕತಕ್ಕಂಥದ್ದನ್ನು ಮಾಡುತ್ತಾರೆ. 1985ನೇ ಇಸವಿಯಲ್ಲಿ ಜಯಶೀಲಗೌಡನ ತಾಯಿಗೆ ಕೊಡಬೇಕಾಗಿರುವ 60 ಸಾವಿರ ರೂಪಾಯಿ ಪರಿಹಾರದ ಹಣವನ್ನು ದೇವರದಯೇಯಿಂದ ಈ ದಿನದವರೆಗೂ ಸಹ ಒಂದು ರೂಪಾಯಿ ಪೇಮೆಂಟ್ ಮಾಡಿಲ್ಲ. 60 ಸಾವಿರ ರೂಪಾಯಿಗೆ ಅವತ್ತಿನದಿವಸ ಎರಡು ಎಕರೆ ಅಡಕೆ ತೋಟ ಸಿಗುತ್ತಿತ್ತು. ಆದರೆ, ಇವತ್ತಿನ ದಿವಸ ಮೋಟರ್ ಬೈಕ್ ಸಿಗುವುದಿಲ್ಲ. ಆದ್ದರಿಂದ ನನ್ನ ಅಪೇಕ್ಷೆ ಪ್ರಕಾರ ಅವರು ನಕ್ಸಲೈಟ್ ಆಗಬೇಕು. what is the other alternative for him? 1985ನೇ ಇಸವಿಯಿಂದ ಇವತ್ತಿನವರೆಗೆ ಆತನಿಗೆ ಪೇಮೆಂಟ್ ಮಾಡುವುದಕ್ಕೆ ಅನಾವಶ್ಯಕವಾಗಿ ಆತ ಕೆಪಿಸಿ ಕಛೇರಿಯ ಮೇಲೆ ಕೆಳಗೆ ತಿರುಗಿಸುತ್ತಿದ್ದಾರೆಂದರೆ, what is the alternative for him? ನನ್ನ ಕ್ಷೇತ್ರದಲ್ಲಿರತಕ್ಕಂಥ ಸುಮಾರು 500 ಜನ ನಿರುದ್ಯೋಗಿಗಳಿಗೆ ಕೆಲಸ ಕೊಡುತ್ತೇವೆಂದು submission ನಲ್ಲಿ ಹೇಳಿದರು. ಯಾವುದೇ ಸರ್ಕಾರ ಹೇಳಿರಲಿ. It is a carried liability to the Government. ಇವತ್ತಿನವರೆಗೂ ಸಹ ಕೊಟ್ಟಿಲ್ಲ. ಅವರಿಗೋಸ್ಕರ 5 ಕೋಟಿ ರೂಪಾಯಿ ಘೋಷಣೆ ಮಾಡಿದ್ದರೆ ಒಬ್ಬ ಯುವಕನಿಗೆ 3 ಅಥವಾ 4 ಲಕ್ಷ ರೂಪಾಯಿ ಕೊಟ್ಟಿದ್ದರೆ ಆತ ಬೀಡಾ ಅಂಗಡಿಯನ್ನು ಇಟ್ಟುಕೊಳ್ಳುತ್ತಿದ್ದ. ನಾವು ಯಾವುದೋ ಒಂದು ಉತ್ಸವಕ್ಕೆ, ಸಮಾವೇಶಕ್ಕೆ, ದೇವಸ್ಥಾನಕ್ಕೆ, ಅದಕ್ಕೆ ಇದಕ್ಕೆ ಹಣ ಕೊಡುವುದರ ಬದಲು ಅಲ್ಲಿ ಹಣ

ಕೊಟ್ಟಿದ್ದರೆ 500 ಕುಟುಂಬ ಬದುಕುತ್ತಿತ್ತು. ಹಾಗಾದರೆ ಇವೆಲ್ಲ ಯೋಚನೆಗೆ ಬರುವುದಿಲ್ಲವೆ? whether we have not brought it to the notice of the Government? we have brought. ಸರ್ಕಾರದ ಗಮನಕ್ಕೆ ನಾವು ಇದನ್ನು ತಂದಿದ್ದೇವೆ. ಹಾಗಾದರೆ, ಕೆಪಿಸಿ ಅಧಿಕಾರಿಗಳು ಏನು ಮಾಡುತ್ತಿದ್ದಾರೆ? They have to do it. ಆ ವ್ಯಕ್ತಿ ನನ್ನ ರೂಮಿಗೆ ಮೂರು ದಿವಸದಿಂದ ಬರುತ್ತಿದ್ದಾನೆ. ನಾನು ಸುಮಾರು 50 ಸಾರಿ ಕೆಪಿಸಿ ಕಛೇರಿಗೆ ಹೋಗಿ ಕೇಳಿರಬಹುದು. ಇನ್ನು ಮುಂದೆ ಅಲ್ಲಿಗೆ ಕಾಲಿಡಬಾರದೆಂದು ಯೋಚನೆ ಮಾಡಿದ್ದೇನೆ. ಆತನಿಗೆ ನೀವು ಏನು ಉತ್ತರ ಹೇಳುತ್ತೀರಿ? 1952ನೇ ಇಸವಿಯಲ್ಲಿ ಮಾನ್ಯ ಕಡಿದಾಳ್ ಮಂಜಪ್ಪನವರು ಉದ್ಘಾಟನೆ ಮಾಡಿ ಕಟ್ಟಿರುವಂಥ ತುಂಗಾ ಅಣೆಕಟ್ಟಿನಲ್ಲಿ ಮುಳುಗಿರುವಂಥ ಜಮೀನಿಗೆ ಇವತ್ತಿನವರೆಗೆ ಪರಿಹಾರ ಸಿಕ್ಕಿಲ್ಲ. ಈಗಾಗಲೇ ಅವರಿಗೆಲ್ಲ ಮೊಮ್ಮಕ್ಕಳು ಬಂದಿದ್ದಾರೆ. ಖಂಡಿತವಾಗಿ ಜನರು ಆಡಳಿತಗಾರರ ಮೇಲೆ, ರಾಜಕಾರಣಿಗಳ ಮೇಲೆ, ಅಧಿಕಾರಿಗಳ ಮೇಲೆ ಏಕೆ ಸಿಟಾಗುತ್ತಾರೆಂದರೆ this is the foundation for it. We are incapable of discharging our duties. We have to accept it. 1952ನೇ ಇಸವಿಯಿಂದ 2012ರವರೆಗೆ ಆ ಕುಟುಂಬಕ್ಕೆ ಪರಿಹಾರ ಸಿಗುವುದಿಲ್ಲವೆಂದರೆ, what is the other alternative for him? We have to insist for the naxalities. ಇದಕ್ಕೆ ಏನೆಂದು ಹೇಳುತ್ತೀರಿ? ನನಗೆ ಇದಕ್ಕೆ ಉತ್ತರ ಬೇಕು. ಸರ್ಕಾರ ಅರ್ಥ ಮಾಡಿಕೊಳ್ಳದಿದ್ದರೆ ಹೇಗೆ? ಈ ವಿಷಯವನ್ನು ಮಾತನಾಡುವುದಕ್ಕೆ ನನಗೆ ಬಹಳ ನೋವಾಗುತ್ತದೆ. ಮತ್ತೆ ಮುಂದಿನ ಚುನಾವಣೆಗೆ ಹೋಗಬಾರದೆಂದು ಅನಿಸುತ್ತದೆ. ಏಕೆಂದರೆ, ಇಂಥ ಸರ್ಕಾರಗಳು ಮತ್ತು ಇಂಥ ಆಡಳಿತ ಇದ್ದಾಗ ಏನು ಮಾಡಬೇಕು? ಇದೊಂದೇ ಎಂದು ನಾನು ಹೇಳುತ್ತಿಲ್ಲ. ಹಿಂದೆ ಇದ್ದಂಥ ಎಲ್ಲರೂ ಸಹ failture ಆಗಿದ್ದಾರೆ. ಅಧಿಕಾರಿಗಳಿಂದ ನಾವು ಕೆಲಸ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲವೆಂದರೆ ನಾವು ಇಲ್ಲಿ ಏಕೆ ಇರಬೇಕು? ಇದು ನನಗೆ ಅನಿಸಿದ ವಿಚಾರವಾಗಿದೆ. ನಾವು ಒಂದು ಸ್ಯಾಂಪಲ್ ಅನ್ನು ಮಾತ್ರ ಇಲ್ಲಿ ಹೇಳಿದ್ದೇನಷ್ಟೆ. ಯಡಿಯೂರಿನಲ್ಲಿ ಒಂದು ಆಸ್ಪತ್ರೆಗೆ 10 ಲಕ್ಷ ರೂಪಾಯಿ ಖರ್ಚು ಮಾಡಲಾಗಿದೆ. ಆದರೆ, ಇವತ್ತಿನವರೆಗೂ ಸಹ ಸದರಿ ಕಟ್ಟಡ ಕಂಪ್ಲೀಟ್ ಆಗಿಲ್ಲ. ಅಲ್ಲಿ ಇಸ್ಪೀಟ್ ಆಟ ಆಡುತ್ತಿದ್ದಾರೆ. ಮತ್ತೆ 10–15 ಮರ ಗಿಡಗಳು ಅಲ್ಲಿ ಬೆಳೆದಿವೆ. ಇವತ್ತಿನವರೆಗೂ ಸಹ ಅದನ್ನು ಮುಗಿಸುವುದಕ್ಕೆ ಆಗಿಲ್ಲ. ಇದರ ಬಗ್ಗೆ ನಾವು ಎಷ್ಟು ಸಾರಿ ಪ್ರಶ್ನೆ ಕೇಳಬಹುದು? ನಿಮ್ಮ ಸರ್ಕಾರ ಬರುವುದಕ್ಕಿಂತ

ಮುಂಚೆಯಿಂದ ಕೂಡ ಇದು ಇದೆ. ಎಲ್ಲ ವರ್ಷದ ಬಜೆಟ್ ಪುಸ್ತಕದ ಪ್ರತಿಗಳು ಮತ್ತು ಮಾನ್ಯ ರಾಜ್ಯಪಾಲರ ಭಾಷಣದ ಪ್ರತಿಗಳನ್ನು ನಾನು ಇಲ್ಲಿ ಇಟ್ಟುಕೊಂಡಿದ್ದೇನೆ. ಈ ಸಂದರ್ಭದಲ್ಲಿ ಒಂದು ವಿಷಯ ಹೇಳುವುದಕ್ಕೆ ಬಯಸುತ್ತೇನೆ. ಅದೇನೆಂದರೆ, 15 ಲಕ್ಷ ಮನೆಗಳನ್ನು ಕೊಡುತ್ತೇವೆಂದು ಹೇಳಿದ್ದೀರಿ. ಅಂದರೆ, ಪ್ರತಿ ವರ್ಷ 3 ಲಕ್ಷ ಮನೆಗಳನ್ನು ಕೊಡುತ್ತಾ ಹೋಗುತ್ತೇವೆಂದು ಹೇಳಿದ್ದೀರಿ. ಈಗಾಗಲೇ ನಿಮ್ಮ ಸರ್ಕಾರ ಬಂದು ನಾಲ್ಕು ವರ್ಷ ಆಗಿದೆ. ಆದ್ದರಿಂದ, ಒಟ್ಟು 15 ಲಕ್ಷ ಮನೆಗಳಲ್ಲಿ ಇಲ್ಲಿಯವರೆಗೆ ಎಷ್ಟು ಲಕ್ಷ ಮನೆಗಳನ್ನು ಕೊಡುವುದಕ್ಕೆ ಆಗಿದೆ? ನನಗೆ ಒಂದು ವಿಷಯ ಅರ್ಥವಾಗುತ್ತಿಲ್ಲ. ಅದೇನೆಂದರೆ, ಎಲ್ಲದಕ್ಕೂ ಅಧಿಕಾರಿಗಳನ್ನು ಏಕೆ ಕೇಳಬೇಕು? ಅವರಿಂದ ನಿಮಗೇನು ತೊಂದರೆ? ಮಾನ್ಯ ಸುರೇಶ್ ಕುಮಾರ್‌ರವರೆ, ತಾವು ಕಾನೂನು ಇಲಾಖೆಯ ಸಚಿವರಾಗಿದ್ದೀರಿ. ತಮ್ಮಲ್ಲಿ ಕೇಳುವುದೇನೆಂದರೆ, 4 ಸಾವಿರ ಮನೆಗಳು ಬಂದಿವೆ. ಆದರೆ, 200 ಮನೆಗಳಿಗೆ ನಾವು ಹಕ್ಕು ಪತ್ರ ಕೊಡುವುದಕ್ಕೆ ಆಗಿಲ್ಲ. 200 ಮನೆಗಳನ್ನು ಕಟ್ಟಿಸುವುದಕ್ಕೆ ನಮಗೆ ಆಗಿಲ್ಲ. ಹಾಗಾದರೆ, ನಾವು ಇಲ್ಲಿ ಏತಕ್ಕೆ ಇರಬೇಕು? ಅಲ್ಲಿ ನಾನು ಶಾಸಕ ಎಂದು ಹೇಳುತ್ತೇವೆ. ಆದರೆ ನಾನು ಶಾಸಕನಾಗಿ ಏತಕ್ಕಾಗಿ ಇರಬೇಕು? ಹಕ್ಕು ಪತ್ರ ಕೊಡುವುದಕ್ಕೆ ಆಗುವುದಿಲ್ಲವೆಂದರೆ ಹೇಗೆ? ಹಕ್ಕು ಪತ್ರವನ್ನು ಕೊಡುವುದಕ್ಕೆ ಇರುವ ಸಮಸ್ಯೆಯನ್ನು ಸರಿಪಡಿಸಿ. ಅದನ್ನು ಏತಕ್ಕೆ ಸರಿಪಡಿಸುವುದಕ್ಕೆ ಆಗುವುದಿಲ್ಲ?

ಉಪಾಧ್ಯಕ್ಷರು:- ಮಾನ್ಯ ಮಂತ್ರಿಗಳು ಮುಂದಿನ ಬೆಂಚ್‌ನಲ್ಲಿ ಬಂದು ಕುಳಿತುಕೊಂಡರೆ ಒಳ್ಳೆಯದು. ಮಾನ್ಯ ಉಮೇಶ್ ಕತ್ತಿಯವರೆ, ತಾವು ಇಲ್ಲಿ ಬಂದು ಎದುರಿಗೆ ಕುಳಿತುಕೊಂಡರೆ ಒಳ್ಳೆಯದು.

ಶ್ರೀ ಕಿಮ್ಮನೆ ರತ್ನಾಕರ್:- ಮಾನ್ಯ ಉಪಾಧ್ಯಕ್ಷರೆ, ನನಗೆ ಬಹಳ ನೋವಾಗುವಂಥದ್ದು ಏನೆಂದರೆ, ಗ್ರಾಮ ಪಂಚಾಯಿತಿಯ ದೃಢೀಕರಣ ಪತ್ರ ಒಂದೇ ಸಾಕು ಎಂದು ಇತ್ತು. ಆದ್ದರಿಂದ, ಇದು ಏನಾಗಿದೆ? ಇದರ ಬಗ್ಗೆ Government Notification ಅನ್ನು ಹೊರ ಹಾಕಿ ಇಷ್ಟು ವರ್ಷಗಳವರೆಗೆ ಬೇರೆ ಸರ್ಕಾರಗಳು ಕೊಟ್ಟಿದ್ದವು. ಗ್ರಾಮಪಂಚಾಯಿತಿ ಕೊಡತಕ್ಕಂಥ ದೃಡೀಕರಣ ಪತ್ರದ ಆಧಾರದ ಮೇಲೆ ಅವರಿಗೆ ಹಕ್ಕು ಪತ್ರ ಕೊಟ್ಟು ಮನೆ ಮಂಜೂರು ಮಾಡಿ. ಇದಕ್ಕೆ ಮತ್ತೆ ಹಕ್ಕು ಪತ್ರ ಬೇಕಾಗಿಲ್ಲ. ಭರತ ಭೂಮಿ, ಮಹಾತ್ಮ ಗಾಂಧಿ , ವಿಧಾನ ಸೌಧ, ಪಾರ್ಲಿಮೆಂಟ್, ನಮ್ಮ Constitution ಇದ್ಯಾವುದೂ ನಮಗೆ ಅನ್ನ ಹಾಕುವುದಿಲ್ಲ. ನಮಗೆ ಬಟ್ಟೆ, ಅನ್ನ

ಮನೆ ಇದ್ದರೆ ಮತ್ತು ವಾಸ ಮಾಡುವುದಕ್ಕೆ 20' x 20' ಸೈಟ್ ಇದ್ದರೆ ಇವೆಲ್ಲವು ಬೇಕು. ಇಲ್ಲದಿದ್ದರೆ ಬದುಕುವುದಕ್ಕೆ ಈ ದೇಶ ಆದರೇನು ಅಥವಾ ಇನ್ನೊಂದು ದೇಶವಾದರೇನು? ಇವತ್ತಿನದಿವಸ ನಕ್ಸಲೈಟ್‌ನವರು ಕೇಳುತ್ತಿರುವುದು that is also one of the grounds. ಮನೆ ಕೊಡುವುದಕ್ಕೆ ಒಂದು ಸೂಕ್ತ ಆದೇಶ ಕೊಡುವುದಕ್ಕೆ ಆಗುವುದಿಲ್ಲವೆಂದರೆ ಹೇಗೆ? ಇದರ ಬಗ್ಗೆ ನಾವು ಎಷ್ಟು ಸಾರಿ ಪ್ರತಿಭಟನೆ ಮಾಡಬೇಕು? ಹಾಗೆಯೇ ಎಷ್ಟು ಸಾರಿ ಈ ವಿಷಯವನ್ನು ಸದನದಲ್ಲಿ ಕೇಳಬೇಕು? ಇದರ ಬಗ್ಗೆ ಜಿಲ್ಲಾ ಪಂಚಾಯತ್‌ನವರು ಮತ್ತು ತಾಲ್ಲೂಕು ಪಂಚಾಯತ್‌ನವರು ಹಾಗೂ ಗ್ರಾಮ ಪಂಚಾಯತ್‌ನವರು ಒಂದು ನಿರ್ಣಯ ಮಾಡಿದ್ದಾರೆ ಮತ್ತೆ ಸದನದಲ್ಲಿ ಚರ್ಚೆ ನಡೆಯುತ್ತದೆ. Till today he can't give a Land Grant Certificate. ಹಾಗಾದರೆ ನಮ್ಮ ಕರ್ತವ್ಯ ಏನು? 4 ಸಾವಿರ ಮನೆಗಳನ್ನು ಕೇವಲ 200 ಮನೆಗಳಿಗೆ ಮಂಜೂರು ಮಾಡುವುದಕ್ಕೆ ಆಗುತ್ತೆ ಮತ್ತೆ ಅವರಿಗೆ ಮಾತ್ರ ಮನೆ ಕಟ್ಟುವುದಕ್ಕೆ ಅವಕಾಶ ಸಿಗುತ್ತದೆಂದರೆ ಇದು ಏತಕ್ಕೆ ಬೇಕು? We have utterly failed. ನಾನು ಪ್ರಾಮಾಣಿಕವಾಗಿ ಹೇಳುವುದೇನೆಂದರೆ, ಉತ್ಸವಗಳು, ಸಂಸ್ಕೃತಿ, ಕಲೆ ಇವೆಲ್ಲವೂ ಸಹ ಇರಲಿ, ಇದನ್ನು ನಾನೂ ಸಹ ಒಪ್ಪಿಕೊಳ್ಳುತ್ತೇನೆ. ಆದರೆ, ನಮಗೆ ವಾಸದ ಮನೆ ಆದಮೇಲೆ ಇವೆಲ್ಲವೂ ಬೇಕು. ಅಂದರೆ, ಕಟ್ಟಕಡೆಯ ಬಡವನಿಗೆ ಒಂದು ವಾಸದ ಮನೆ, ಅನ್ನ, ಬಟ್ಟೆ ಸಿಕ್ಕಿದ ಮೇಲೆ ಇವೆಲ್ಲವನ್ನೂ ಕೂಡ ನಾವು ಮಾಡೋಣ. ಆದ್ದರಿಂದ, ಇದಕ್ಕೆ ಆಗುವಂಥ ವೆಚ್ಚವನ್ನು ಕಡಿತಗೊಳಿಸಿ. ಇವತ್ತಿನದಿವಸ ಅವರು ಸೈಟ್ ಕೇಳುವುದಕ್ಕೆ ಹೋದರೆ ಈ ಅರಣ್ಯ ಇಲಾಖೆಯವರದೊಂದು ಸಮಸ್ಯೆ. ಇವರನ್ನು ಏತಕ್ಕೆ ಕೇಳುವುದಕ್ಕೆ ಹೋಗಬೇಕು? ನಮ್ಮಲ್ಲಿ ರೆವಿನ್ಯೂ ಸೈಟ್ ಇಲ್ಲ. ಖಾಸಗಿಯವರಿಗೆ ಬಿಡುತ್ತಿಲ್ಲ. ಆದ್ದರಿಂದ, ಅವರೇನು ನೀರಿನ ಮೇಲೆ ಮನೆ ಕಟ್ಟಿಕೊಳ್ಳಬೇಕೆ? ಇವತ್ತಿನದಿವಸ ಬಡವ ಎಲ್ಲಿ ಮನೆ ಕಟ್ಟಬೇಕು? ಆತ ಮನೆ ಕಟ್ಟಿಕೊಂಡು ಊರಿನಲ್ಲಿರಬೇಕೆ? ಹಾಗಾದರೆ, ಇದು ಹೇಗೆ ಮಾಡುವುದು? ನನಗೆ ನಿಜವಾಗಿಯೂ ಅರ್ಥವಾಗದಂಥ ಸಮಸ್ಯೆಗಳಾಗಿವೆ. ಆಡಳಿತದಲ್ಲಿರುವಾಗ ಇವೆಲ್ಲವನ್ನು ಸರಿ ಮಾಡುವುದಕ್ಕೆ ಆಗುವುದಿಲ್ಲವೆ? ಒಂದು ವೇಳೆ ಸರಿ ಮಾಡುವುದಕ್ಕೆ ಆಗುವುದಿಲ್ಲವೆಂದರೆ ಖಂಡಿತ ನಾವು ಅದರಿಂದ ಹೊರಕ್ಕೆ ಬರಬೇಕು. ನಾನು ಹೇಳುವುದೇನೆಂದರೆ, ನಮ್ಮಲ್ಲಿರುವ ಕಡು ಬಡವರಿಗೆ ನಾವು ಸರಿಪಡಿಸುವುದಕ್ಕೆ ಆಗುವುದಿಲ್ಲವೆಂದರೆ ಅಂದರೆ, ಆತನಿಗೆ ಕನಿಷ್ಠ ಮಟ್ಟದ ವ್ಯವಸ್ಥೆಯನ್ನು ಮಾಡುವುದಕ್ಕೆ ನಮಗೆ ಆಗಿಲ್ಲವೆಂದರೆ ನಾವೆಂಥ

ಜನಪ್ರತಿನಿಧಿಗಳು? ಈ ಸಂದರ್ಭದಲ್ಲಿ ನಾನು ತಮ್ಮನ್ನು ಕೇಳಿಕೊಳ್ಳುವುದೇನೆಂದರೆ, ಈ ರಾಜ್ಯದ 6 ಕೋಟಿ ಜನರು ನಮ್ಮ 300 ಜನರ ಮೇಲೆ ಅವರ ಭಾರವನ್ನು ಕೊಟ್ಟಿದ್ದಾರೆ. ಆ 6 ಕೋಟಿ ಜನ ಬಂದು ವಿಧಾನ ಸೌಧದಲ್ಲಿ ಆಡಳಿತ ಮಾಡುವುದಕ್ಕೆ ಆಗುವುದಿಲ್ಲ ಎಂದು ನಮ್ಮ 300 ಜನರನ್ನು ಇಲ್ಲಿಗೆ ಕಳುಹಿಸಿದ್ದಾರೆ. ಹಾಗಾದರೆ ಇವತ್ತಿನದಿವಸ ನಾವೇನು ಮಾಡಿದ್ದೇವೆ? ಆ 6 ಕೋಟಿ ಜನರ ಎಲ್ಲ ಆಶಯಗಳನ್ನು ಕನಿಷ್ಠ ಮಟ್ಟದ ಪ್ರಯತ್ನ ಮಾಡುವುದಕ್ಕೆ ಆಗುತ್ತದೆಯೇ? ನಮಗೆ ಆಡಳಿತ ಮಾಡುವುದಕ್ಕೆ ಆಗದೆ ಇದ್ದರೆ, we have to get out of the House. ಇವತ್ತಿನದಿವಸ ಭ್ರಷ್ಟಾಚಾರ ನಡೆಯುತ್ತಿದೆ ಎಂದರೆ ಇದರ ಬಗ್ಗೆ ನಾನು ಹೇಳುವುದೇನೆಂದರೆ, the source of corruption is from Vidhana Soudha itself, not from the bottom. It has started from Vidhana Soudha, we have to rectify here itself. If there is any lacunaon the part of a system we have to rectify the system. ಸಿಸ್ಟಮ್‌ನಲ್ಲಿರುವ ನ್ಯೂನತೆಗಳನ್ನು ನಾವು ಸರಿಪಡಿಸಬೇಕು. ಸರಿಪಡಿಸುವುದಕ್ಕೆ ಆಗುವುದಿಲ್ಲವೆಂದರೆ, we should get out of the House, ಆಗುವುದಿಲ್ಲವೆಂದರೆ ಹೇಗೆ? ನಾನು ಒಬ್ಬ ಒಳ್ಳೆಯವನಾಗುವುದರಿಂದ ಬಹಳ ಏನೂ ಆಗುವುದಿಲ್ಲ. ಅಥವಾ ಒಬ್ಬೊಬ್ಬರು ಒಳ್ಳೆಯರಾಗಬೇಕೆಂಬ ಪ್ರಶ್ನೆ ಅಲ್ಲ. We have to change the system. To change the system ಜನ ನಮಗೆ ಅವಕಾಶ ಕೊಟ್ಟಿದ್ದಾರೆ. ಇತಿಹಾಸದ ಬುದ್ಧ, ಮಹಮದ್, ಬಸವಣ್ಣ ಅಥವಾ ಯಾರೇ ಆಗಲಿ, ಆ ಕಾಲದಲ್ಲಿ ಬಂದಿರುವ ವ್ಯವಸ್ಥೆಯ ವಿರುದ್ಧ ಹೋರಾಟ ಮಾಡಿ ಬದಲಾವಣೆಗಳನ್ನು ತಂದಿದ್ದಾರೆ. ಈಗಲೂ ಕೂಡ ಅದನ್ನೇ ಮಾಡಬೇಕೆಂದು ಹೇಳುವುದಕ್ಕೆ ಬಯಸುತ್ತೇನೆ. ಹಿಂದೆ ಮಾಡಿದ್ದು ಎಲ್ಲವೂ ಸರಿ ಇದೆ ಎಂದು ನಾವು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ. ಇವತ್ತು ಈ ಭೂತಕಾಲಕ ತಪ್ಪುಗಳನ್ನು ಕೈಬಿಟ್ಟು ವರ್ತಮಾನಕ್ಕೆ ಬೇಕಾಗಿರತಕ್ಕಂಥ ಮತ್ತು ಭವಿಷ್ಯತ್ತಿಗೆ ಅಗತ್ಯ ಇರತಕ್ಕಂಥ ತಿದ್ದುಪಡಿಗಳನ್ನು ಮತ್ತು ಕಾನೂನುಗಳನ್ನು ಸರಿಪಡಿಸುತ್ತಿಲ್ಲ, ಅದರ ಬಗ್ಗೆ ನನಗೆ ಅರ್ಥವಾಗುತ್ತಿಲ್ಲ. ನಿಯಮ 60ರ ಮೇಲೆ ಇಲ್ಲಿ ಚರ್ಚೆ ನಡೆಯುತ್ತದೆ, ಏತಕ್ಕೆ ನಡೆಯುತ್ತದೆಂದು ನನಗೆ ಇನ್ನೂ ಗೊತ್ತಾಗಿಲ್ಲ. ಅದನ್ನು ಹತ್ತಾರು ಸಲ ಹಿಂದೆ ಮುಂದೆ ಓದಿದೆ. ಏನಿದೆ ಅದರಲ್ಲಿ ಕಬ್ಬಿಣದ ಕಡಲೆ. 1952ನೇ ಇಸವಿಯಿಂದ ಇಲ್ಲಿಯವರೆಗೆ, I am having a document here, ಕೇವಲ 7 ಸಲ ಮಾತ್ರ ನಿಯಮ 60ರ ಮೇಲೆ ಚರ್ಚೆಗೆ ಕೊಟ್ಟಿದ್ದೀರಿ. 60ರ ಮೇಲೆ ಚರ್ಚೆಗೆ ಕೊಟ್ಟರೆ ಸರ್ಕಾರ ಬಿದ್ದು

ಹೋಗುತ್ತದೆಯೇ? ಸರ್ಕಾರ ಬಿದ್ದು ಹೋಗುವುದಿಲ್ಲ. ನಿಯಮ 60ರ ಮೇಲೆ ಚರ್ಚೆಗೆ ಕೊಟ್ಟಾಗ ಯಾವ ಸರ್ಕಾರವೂ ಬಿದ್ದು ಹೋದ ಉದಾಹರಣೆ ಇಲ್ಲ. 1962 ರಲ್ಲಿ ಮಾನ್ಯ ಸಿದ್ದವೀರಪ್ಪನವರು ಪ್ರಾರಂಭ ಮಾಡಿದಂಥದ್ದರಲ್ಲಿ ಅದು ಅಡ್ಮಿಟ್ ಆಗಿದೆ. 1994 ರಲ್ಲಿ ಎರಡು ಮಾನ್ಯ ಖರ್ಗೆಯವರು ಕೇಳಿದ್ದಾರೆ. ಮಾನ್ಯ ಎಸ್. ಬಂಗಾರಪ್ಪನವರು ಕೇಳಿದ್ದಾರೆ. 1971 ರಲ್ಲಿ ಎಕ್ಸ್‌ಪೊ–70 ಗಲಾಟೆಯಾದಾಗ ಕೇಳಿದ್ದಾರೆ. ಒಟ್ಟು 7 ಸಲ ಮಾತ್ರ ಅವಕಾಶ ಕೊಟ್ಟಿದ್ದಾರೆ. ಚರ್ಚೆಯ ಪೂರ್ಣ ವಿಚಾರ ನನ್ನ ಹತ್ತಿರ ಇದೆ. ಕೊಟ್ಟವರು ಯಾರು ಎನ್ನುವುದು ನನ್ನ ಹತ್ತಿರ ಇದೆ. ಏನು ಘಟನೆ ಆಗಿದೆ, ಈ ನಾಡಿನಲ್ಲಿ ತಿದ್ದುಪಡಿಗೆ ಅವಕಾಶ ಇಲ್ಲವೆ? ನನಗೆ ಅರ್ಥವಾಗುತ್ತಿಲ್ಲ. what is the problem? It is a problem because we have not changed our mind. ನಾವು ನಮ್ಮ ಬದಲಾವಣೆಗಳನ್ನು ಮಾಡಬೇಕಾದಂಥ ಅಗತ್ಯ ಇದೆ ನಾವು ಮಾಡುತ್ತಿಲ್ಲ. ಏನು ಅಗತ್ಯ ಇತ್ತು. ಅದನ್ನು ನಾವು ಮಾಡುತ್ತಿಲ್ಲ. ನಾನು ತಮ್ಮಲ್ಲಿ ಕೇಳಿಕೊಳ್ಳುವಂಥದ್ದು ಇಷ್ಟೆ.

ಲೋಕೋಪಯೋಗಿ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಇಲಾಖೆ ಬಹಳ ಪ್ರಮುಖವಾಗಿ ಇರತಕ್ಕಂಥದ್ದು. ಲೋಕೋಪಯೋಗಿ ಇಲಾಖೆಯಲ್ಲಿ ನಾನು ಎಲ್ಲಾ ಇಲಾಖಾವಾರು ರಸ್ತೆಗಳನ್ನು ನೋಡಿದೆ. ನನಗೆ ಅನಿಸತಕ್ಕಂಥದ್ದು ನೀವು 5 ವರ್ಷದ ಒಂದು ನಿರ್ದಿಷ್ಟವಾದಂಥ ಪ್ಲಾನ್‌ನ್ನು ಇಟ್ಟುಕೊಳ್ಳಬೇಕಾಗಿತ್ತು. ಒಟ್ಟು ಕರ್ನಾಟಕದಲ್ಲಿ ಎಷ್ಟು ಕಿಲೋಮೀಟರ್ ರಸ್ತೆ ಇದೆ? We are having it ಇಲ್ಲಿ. ಎನ್.ಹೆಚ್. ರಸ್ತೆ ಎಷ್ಟು ಇದೆ, ಅದು ನಮ್ಮ ಹತ್ತಿರ ಇದೆ. State Highway ಎಷ್ಟು ಇದೆ, ಇಡೀ ರಾಜ್ಯದಲ್ಲಿ 5 ಅಥವಾ 10 ವರ್ಷದಲ್ಲಿ ಎಲ್ಲಾ ರಸ್ತೆಗಳು ಆಗಬೇಕಾದರೆ ನಮಗೆ ಎಷ್ಟು ಹಣ ಬೇಕಾಗುತ್ತದೆ ಎನ್ನುವುದನ್ನು ಮಾಡಬೇಕು. ಇಡೀ 224 ಕ್ಷೇತ್ರವನ್ನು ಅಭಿವೃದ್ಧಿಪಡಿಸಬೇಕಾದಂಥ ಸಂದರ್ಭದಲ್ಲಿ ಎಲ್ಲವನ್ನೂ ಗಣನೆಗೆ ತೆಗೆದುಕೊಂಡು ಮಾಡಬೇಕು. ಮಿನಿಸ್ಟರ್ ಆದವರಲ್ಲಿ ಪವರ್ ಇದ್ದವರಲ್ಲಿ 50 ಕೋಟಿ ರೂ.ಗಳವರೆಗೆ ನೀವು ಜಾಸ್ತಿ ಮಾಡಿ. But all round development should be there ಎಂದಾಗ ನೀವು ಏನು ಮಾಡಬೇಕು ? 224 ಕ್ಷೇತ್ರದಲ್ಲಿ ಎಷ್ಟು ಕಿ.ಮೀ. ರಸ್ತೆ ಇದೆ, ಎಲ್ಲವನ್ನೂ equal ಆಗಿ development ಮಾಡುವುದಕ್ಕೆ ನಾವು ಎಷ್ಟು ಹಣ ಕೊಡಬೇಕು ಅದಕ್ಕೆ there should be a plan. We are not having a plan. ನನ್ನ ಕ್ಷೇತ್ರಕ್ಕೆ 3500 ಕಿ.ಮೀ. ರಸ್ತೆ ಬರುತ್ತದೆ. ಶಿಕಾರಿಪುರಕ್ಕೆ ಕೊಟ್ಟಷ್ಟು ನನ್ನ ಕ್ಷೇತ್ರಕ್ಕೆ ಕೊಟ್ಟರೆ ಏನು ಉಪಯೋಗ ಇದೆ? ಅದ ಆಗುವುದಿಲ್ಲ. ನಾನು ಏನು ತಪ್ಪು ಮಾಡಿದ್ದೇನೆಂದು ಜನರ ಹತ್ತಿರ ನಾನು

ಬಯ್ಯಿಸಿಕೊಳ್ಳಬೇಕು? Your plan is defective. It is not the failure of an MLA. It is the failure on the part of the Government. ಶಿಕಾರಿಪುರದಲ್ಲಿ 600–700 ಕಿ.ಮೀ. ಜಿಲ್ಲಾ ಪಂಚಾಯಿತಿ ರಸ್ತೆ ಇದೆ. ಆದರೆ ನನ್ನ ಕ್ಷೇತ್ರದಲ್ಲಿ 2500 ಕಿ.ಮೀ. ರಸ್ತೆ ಇದೆ. ಅವರಿಗೂ 10 ಕಿ.ಮೀ. ರಸ್ತೆ ನನಗೂ 10 ಕಿ.ಮೀ. ರಸ್ತೆ ಕೊಡುವುದಾದರೆ ನಾನು resign ಮಾಡಿ ಹೊರಗೆ ಹೋಗುವುದು ಒಳ್ಳೆಯದು. You should plan it. The Government should tackle the problem in that way. ನೀವು ರಸ್ತೆ ರಿಪೇರಿ ಮಾಡುವಾಗ ರಸ್ತೆಗೆ ಹಣ ಕೊಡುವಾಗ ಎಷ್ಟು ಕಿ.ಮೀ. ರಸ್ತೆ ಎನ್ನುವುದನ್ನು ಮಾಡಿ. ನೀವು food ಕೊಡುವಾಗ ಕುಟುಂಬದಲ್ಲಿ ಎಷ್ಟು ಜನ ಇದ್ದಾರೆಂದು ನೋಡಿ ಕೊಡಿ. ಸೀಮೆಎಣ್ಣೆ ಮತ್ತು ಆಹಾರ ಧಾನ್ಯ ಕೊಡುವಾಗ ಜನ ಸಂಖ್ಯೆಯನ್ನು ಆಧರಿಸಿ ಕೊಡುತ್ತೀರಿ. ರಸ್ತೆಯನ್ನು ಕೊಡುವಾಗ ಕಿ.ಮೀ.ನ್ನು ನೋಡಬೇಕು. ಕಿ.ಮೀ. ಮತ್ತು ಜನಸಂಖ್ಯೆಯನ್ನು ಒಂದೇ ಮಾಡಿದಾಗ ಏನು ಅರ್ಥವಿದೆ? ನನಗೆ ಅರ್ಥವಾಗುತ್ತಿಲ್ಲ ನಿಮ್ಮ planning strategy ಏನು? Rural Development ನಲ್ಲಿ ಏನಾಗಿದೆ? ನಮ್ಮ ಮಲೆನಾಡಿನ ಎಲ್ಲಾ ಭಾಗ ನಮ್ಮ ಒಂದೊಂದು ಕ್ಷೇತ್ರಕ್ಕೆ 200 ಸೇತುವೆಗಳು ಬೇಕಾಗುತ್ತದೆ. ನಮಗೆ ಕನಿಷ್ಠ ಒಂದು ವರ್ಷಕ್ಕೆ 50 ಸೇತುವೆಗಳನ್ನು ಕಟ್ಟಿದರೂ ಸಾಕಾಗುವುದಿಲ್ಲ. ನಾನು ಲೋಕೋಪಯೋಗಿ ಸಚಿವರ ಹತ್ತಿರ 4 ವರ್ಷದಿಂದ ಪತ್ರ ಕೊಡುತ್ತಿದ್ದೇನೆ. ಹೊಸಗದ್ದೆ ಎನ್ನತಕ್ಕಂಥದ್ದು ಅರಳಸುರಳಿಯಿಂದ 6 ಕಿ.ಮೀ. ದೂರದಲ್ಲಿದೆ. ಅಲ್ಲಿ ಈಡಿಗ ಸಮುದಾಯದವರು ಇರತಕ್ಕಂಥದ್ದು, ಈಡಿಗ ಸಮುದಾಯದ ಒಬ್ಬ ಹೆಣ್ಣುಮಗಳು ಗ್ರಾಮ ಪಂಚಾಯತಿಯ ಅಧ್ಯಕ್ಷರು. ಅವರು ಅರಳಸುರುಳಿ ಗ್ರಾಮ ಪಂಚಾಯಿತಿಗೆ ಹೋಗಬೇಕಾದರೆ 14 ಕಿ.ಮೀ. ನಡೆದುಕೊಂಡು ಬರಬೇಕು. ನಮಗೆ ಇದರಿಂದ ಹೊರಗೆ ಹೋಗುವುದಕ್ಕೆ ಆಗುವುದಿಲ್ಲವೆ ನಾನು ಅವರ ಹತ್ತಿರ 4 ಸಲ ಹೋಗಿ ಕೊಟ್ಟಿದ್ದೇನೆ. That has been changed. ಏತಕ್ಕೆ ಚೇಂಜ್ ಮಾಡಿದಿರಿ ನನಗೆ ಗೊತ್ತಿಲ್ಲ. ನಾನು Principal Secretary ಅವರಿಗೂ ಹೋಗಿ ಕೊಟ್ಟಿದ್ದೇನೆ. 60 ಲಕ್ಷ ರೂ.ಗಳಲ್ಲಿ ಒಂದು ಸೇತುವೆ ಕಟ್ಟಿದರೆ ಸಾಕು 3. ಕಿ.ಮೀ.ನಲ್ಲಿ ಅವರು ಬರಬಹುದು. ಅಲ್ಲಿ ಹಳ್ಳ ದಾಟುವುದಕ್ಕೆ ಆಗುವುದಿಲ್ಲ. ಒಂದು ಮಳೆ ಬಂದರೆ 6 ಅಡಿ ನೀರು ಬರುತ್ತದೆ. ಅವರು 14 ಕಿ.ಮೀ. ದೂರದಿಂದ ಬರಬೇಕು. 60 ವರ್ಷದಿಂದ ಆ ಊರಿನ ಜನರಿಗೆ ಒಂದು ಸೇತುವೆಯನ್ನು ಮಾಡುವುದಕ್ಕಾಗುವುದಿಲ್ಲವೆಂದರೆ ನಾವು ಏಕೆ ಇಲ್ಲಿ ಇರಬೇಕು? Whether it is a failure on my part? Whether

I have not brought it to the knowledge of the Government? I have brought it to the knowledge of the Government. ಅವರ Signature ಆಗಿರುವ ಲೆಟರ್ ನನ್ನ ಹತ್ತಿರ ಇದೆ. But the programme has not been implemented. ಏನು ಉದ್ದೇಶವಿದೆ ನನಗೆ ಗೊತ್ತಿಲ್ಲ ಎಂತಹ ದುರಂತಗಳು ಎಂದರೆ ನನಗೆ ಬಹಳ ನೋವಾಗುತ್ತದೆ. ಮಾನ್ಯ ಬಸವರಾಜ ಬೊಮ್ಮಾಯಿಯವರು ಸದನದಲ್ಲಿ ಇಲ್ಲ; ಅವರನ್ನು ನಾನು appreciate ಮಾಡುತ್ತೇನೆ. ನಮಗೆ UTP ನಲ್ಲಿ ತುಂಬಾ ಹಣ ಬಂದಿದೆ. ಅವರು ಮೊನ್ನೆ ನನಗೆ ಕೇಳಿದರು, ನೀವು ನಮ್ಮನ್ನು ಕರೆಯಲಿಲ್ಲ, ನಮ್ಮನ್ನು ಅಭಿನಂದಿಸಲಿಲ್ಲ ಎಂದರು. ನಾನೆ ಉದ್ಘಾಟನೆ ಮಾಡಲಿಲ್ಲ. I am not interested in that. ಕಾರ್ಯಕರ್ತರು ಹೇಳಿದರೆ ಮಾತ್ರ ಉದ್ಘಾಟನೆಗೆ ಹೋಗುತ್ತೇನೆ. ಇಲ್ಲವೆಂದರೆ ನಾನು ಹೋಗುವುದಿಲ್ಲ. ನನಗೆ ಆಸಕ್ತಿಯೇ ಇಲ್ಲ. ಏಕೆಂದರೆ ಮಾನ್ಯ ಗೋಪಾಲಗೌಡರು ಮತ್ತು ಕಡಿದಾಳರು ಇಡೀ ತೀರ್ಥಹಳ್ಳಿ ವಿಧಾನಸಭೆ ಕ್ಷೇತ್ರವನ್ನು ಮೊದಲು ಪ್ರತಿನಿಧಿಸುತ್ತಿದ್ದರು. ಇಡೀ ಕ್ಷೇತ್ರದಲ್ಲಿ ಹುಡುಕಿದರೂ ಅವರ ಹತ್ತು ಕಲ್ಲುಗಳು ಇಲ್ಲ. ಆದರೆ ಅವರ ಹೆಸರು ಇಡೀ ತೀರ್ಥಹಳ್ಳಿ ವಿಧಾನಸಭೆ ಕ್ಷೇತ್ರದ ಪ್ರತಿಯೊಬ್ಬರ ಹೃದಯದಲ್ಲಿದೆ. ಉದ್ಘಾಟನೆ ಮಾಡಿದರೆ ಮಾತ್ರ ಜನರಿಗೆ ಗೊತ್ತಾಗುವುದಾ? ನನಗೆ ಒಂದೂ ಅರ್ಥವಾಗುತ್ತಿಲ್ಲ. ಕು.ಶೋಭಾ ಕರಂದ್ಲಾಜೆಯವರು ನಮ್ಮ ಕ್ಷೇತ್ರಕ್ಕೆ ಬರುತ್ತಾರೆ, ನಮಗೆ ಹೇಳುವುದೇ ಇಲ್ಲ. ಲೋಕೋಪಯೋಗಿ ಇಲಾಖೆಯ ಒಂದು ಕಾಮಗಾರಿಗೆ ನಾನು 1.50 ಕೋಟಿ ರೂ.ಗಳನ್ನು ಮಂಜೂರು ಮಾಡಿಸಿಕೊಂಡು ಬಂದೆ, ಅವರು ಬಂದು ಉದ್ಘಾಟನೆ ಮಾಡಿದರು, ಅವರಿಗೆ ಖಂಡಿತ ಒಳ್ಳೆಯದು ಆಗಲಿ. ಅವರು ಇನ್ನೂ 10 ಉದ್ಘಾಟನೆ ಮಾಡಲಿ, ಬೇಜಾರು ಇಲ್ಲ. Atleast ಒಬ್ಬರು ಶಾಸಕರು ಇದ್ದಾರೆ, ನಮಗೆ ಒಂದು courtesy ಗೆ ಆದರೂ ತಿಳಿಸಬೇಕು. ಮೊನ್ನೆ ಶಿವಮೊಗ್ಗ ಗಾಜನೂರು ಪಂಚಾಯಿತಿಯಲ್ಲಿ ಉದ್ಘಾಟನೆ ಸಮಾರಂಭ ಮಾಡಿದರು ಎಂ.ಎಲ್.ಸಿ.ಯವರು. She is my very close friend. ಅವರಂಥ ಒಳ್ಳೆಯ ಜನರನ್ನು ನಾನು ನೋಡಿಯೇ ಇಲ್ಲ. She has practised with me. ಅವರನ್ನು ಉದ್ಘಾಟನೆ ಹಾಕಿ ನನ್ನನ್ನು ಅತಿಥಿಯನ್ನಾಗಿ ಹಾಕಿದ್ದರು. ನಾನು actually ಹೊರಟಿದ್ದೆ ನಮ್ಮ workers ನನಗೆ ಹೋಗುವುದಕ್ಕೆ ಬಿಡಲಿಲ್ಲ. ಏಕೆ ಇಂತಹದ್ದೆಲ್ಲಾ ನಡೆಯುತ್ತದೆ. ನಿಮ್ಮ ವ್ಯವಸ್ಥೆಯಲ್ಲಿ ಏಕೆ ಈ ರೀತಿ? I am not interested in any inaugural functions. ನನಗೆ ಅದರೊಳಗೆ ಆಸಕ್ತಿಯೇ ಇಲ್ಲ. ಏಕೆಂದರೆ, ಈ ವ್ಯವಸ್ಥೆಯೊಳಗೆ ನಾವು

ಬದುಕುಳಿಯುವುದಕ್ಕೆ ಸಾಧ್ಯ ಎನ್ನುವ ಭಾವನೆ ಹೊಂದಿಲ್ಲ. ನಾವು ಅದಕ್ಕೆ ಹೊಂದಿಕೊಳ್ಳುವುದು ಕಷ್ಟವಾಗುತ್ತದೆ. ವ್ಯವಸ್ಥೆಯನ್ನು ಸರಿ ಮಾಡುವ ಶಕ್ತಿ ನಮಗೂ ಇಲ್ಲ. ಆದ್ದರಿಂದ ಇಂಥದ್ದೆಲ್ಲಾ ಏಕೆ ನಡೆಯಬೇಕು? ಹಾಗಾದರೆ ಅವರಿಗೂ ಇಂತಹ ಅವಘಡಗಳು ಹಿಂದೆ ನಡೆದಿರಬೇಕು ಅಲ್ಲವೆ? we have not played such humiliation to anybody. ಇದನ್ನೆಲ್ಲಾ ಏಕೆ ಮಾಡುತ್ತಾರೆ? ಅನೇಕ ಸಲ ಬರುತ್ತಾರೆ, ನನಗೆ ಫೋನ್ ಮಾಡುವುದಿಲ್ಲ. ಹತ್ತಾರು ಸಲ ಬಂದಿದ್ದಾರೆ. ಒಂದು ಸಲ ಮಾತ್ರ ನಮ್ಮನ್ನು ಕರೆದು ಅಫಿಷಿಯಲ್ ಮೀಟಿಂಗ್ ಮಾಡಿದ್ದಾರೆ. ಆದರೆ ಸಮಸ್ಯೆ ಏನಿದೆ? ನಾನು ಆರಿಸಿ ಬರುವಾಗ 5000 ಮನೆಗಳಿಗೆ ಕರಂಟ್ ಇರಲಿಲ್ಲ. ಇನ್ನೂ 2000 ಮನೆಗಳಿಗೆ ಕರೆಂಟ್ ಇಲ್ಲ. ನಮಗೆ 159 ಟಿ.ಸಿ. ಬೇಕು. ಅದಕ್ಕೆ ಇನ್ನೂ ದುಡ್ಡು ಬಂದಿಲ್ಲ. 2500 ಜನರಿಗೆ ಕರೆಂಟ್ ಇಲ್ಲ. It includes A.E.H. also. ನಾನು ಮಾಹಿತಿಯನ್ನು ಸಂಗ್ರಹಿಸಿ ಕೊಟ್ಟಿದ್ದೇನೆ. ಅವರು ಇಂಧನ ಸಚಿವರು. ಅವರಿಗೆ 2500 ಮನೆಗಳಿಗೆ ಕರೆಂಟ್ ಕೊಡುವುದಕ್ಕಾಗಿಲ್ಲ. ಈ ರಾಜ್ಯಕ್ಕೆ ನಾವು ಬೆಳಕು ಕೊಟ್ಟಿದ್ದೇವೆ. ಶರಾವತಿ ನಮ್ಮಲ್ಲೇ ಹುಟ್ಟುವುದು, ತುಂಗಾ ನದಿ ನಮ್ಮಲ್ಲಿ ಹರಿಯುತ್ತದೆ. ಮುಳುಗಡೆ ಅನುಭವಿಸುತ್ತಿರುವವರು ನಾವು. ನಮ್ಮ ಇಂಜಿನಿಯರ್ಸ್‌ಗಳು ಯಾವ ಟೈಪ್ ಇದ್ದಾರೆಂದರೆ ಮುಳುಗಡೆ ಆದ ಜಮೀನಿಗೆ ಪರಿಹಾರ ಕೊಡುವಾಗ ಉಳಿದಿರುವವರ ಕತೆ ಏನು ಎಂದು ಯೋಚನೆ ಮಾಡಲಿಲ್ಲ. ಅಲ್ಲಿ ಮಾಗಲು ಎನ್ನತಕ್ಕಂಥ ಒಂದು ಊರು ಇದೆ, ಆ ಊರಿಗೆ ಈಗಲೂ ಕೂಡ ಹೋಗುವುದಕ್ಕೆ ಸಾಧ್ಯವಿಲ್ಲ. ಪರಿಹಾರ ಕೊಟ್ಟು ಅವರನ್ನು ಹೊರಗೆ ಹಾಕಬೇಕು. ಇಲ್ಲವೆಂದರೆ ಅವರಿಗೆ ಸೇತುವೆ ರಸ್ತೆಯನ್ನಾದರೂ ಮಾಡಿ ಕೊಡಬೇಕು. ಸೇತುವೆಯನ್ನು ಮಾಡುವುದಿಲ್ಲ, ಬ್ಯಾಕ್ ವಾಟರ್ ಬಂದು ಬಿಡುತ್ತದೆ. ಇನ್ನು 6 ತಿಂಗಳು ಅವರು ತೆಪ್ಪದಲ್ಲಿ ಓಡಾಡಬೇಕು. ಏಕೆ ಈ ದೇಶ ಬೇಕು, ನನಗೆ ಅರ್ಥವಾಗುತ್ತಿಲ್ಲ. ಇಂತಹ ದೇಶದಲ್ಲಿ ನಾವು ಇದ್ದೇವಲ್ಲಾ! ಇಂತಹ ಆಡಳಿತದಲ್ಲಿ ಏಕೆ ಇರಬೇಕು? It is not the fault on the part of the present Government. It is a carried problem of all the previous Governments. ಇಂತಹ ಘಟನೆಗಳು ನಮ್ಮ ವಿಧಾನಸಭೆ ಕ್ಷೇತ್ರದಲ್ಲಿ ಎಷ್ಟು ಇವೆ ಎಂದರೆ ನಾವು 100 ಘಟನೆಗಳನ್ನು ಹೇಳಬಹುದು. ಹಾಗಾದರೆ, Whether we have not brought it to the knowledge of the Government? I have brought it. ಹಾಗಾದರೆ ಇದನ್ನು ಸರಿಪಡಿಸುವುದಕ್ಕೆ ಆಗುವುದಿಲ್ಲವೆ? ಹಣಕಾಸು ಖಂಡಿತ ಇದೆ.

ದುಂದುವೆಚ್ಚಗಳನ್ನು curtail ಮಾಡಬೇಕು, ಅನವಶ್ಯಕವಾದ ಉತ್ಸವಗಳನ್ನು ಮೂರು ವರ್ಷ ನಿಲ್ಲಿಸಬೇಕು. ಅದು ಏನೂ ಬೇಕಾಗಿಲ್ಲ. ಅದರಿಂದ ಏನೂ ಆಗಬೇಕಾಗಿಲ್ಲ, ಮೂರು ವರ್ಷಗಳ ನಂತರ ಪ್ರಾರಂಭ ಮಾಡೋಣ. ನಮ್ಮ ಎಲ್ಲಾ ಅಭಿವೃದ್ಧಿ ಯೋಜನೆಗಳೂ ಕೂಡ ನಾವು ಇನ್ನು 50 ವರ್ಷ ಮುಂದಕ್ಕೆ ಏನು ಬೇಕು ಅದನ್ನು ನೋಡಿ ಮಾಡಬೇಕು. ತಾತ್ಕಾಲಿಕವಾದ ಯೋಜನೆಗಳನ್ನು ನಾವು ಕೈಬಿಡಬೇಕು. ಸೀರೆ ಮತ್ತು ಸೈಕಲ್ ಕೊಡುವುದು, function ಮಾಡುವುದು ಇವೆಲ್ಲಾ waste ಎಂದು ನನಗೆ ಅನಿಸುತ್ತದೆ. ಖಂಡಿತವಾಗಿಯೂ ನೀವು ಸೇತುವೆ ಮಾಡಿ. ನೀವು ಬೇಕಾದರೆ ಕೊಡಿ. ಅದಕ್ಕೆ ನನ್ನ ವಿರೋಧವಿಲ್ಲ. As far as my knowledge is concerned, ನನ್ನ , ವಿಚಾರದಲ್ಲಿ ಇದಕ್ಕಿಂತ ಸೇತುವೆ ಉತ್ತಮವೆಂದು ಹೇಳುತ್ತೇನೆ. ಏಕೆಂದರೆ, ನಮ್ಮ ಕ್ಷೇತ್ರದಲ್ಲಿ ಸೇತುವೆ ಇಲ್ಲದೇ ಎರಡು ಹೆಣ್ಣುಮಕ್ಕಳು ತೇಲಿಕೊಂಡು ಹೋದರು. ಸೀರೆ ಕೊಟ್ಟಿದ್ದರಿಂದ ಏನೂ ಉಪಯೋಗವಾಗಲಿಲ್ಲ. ಸೇತುವೆ ಕೊಟ್ಟಿದ್ದರೆ ಆ ಹೆಣ್ಣುಮಕ್ಕಳು ಉಳಿಯುತ್ತಿದ್ದರು. ಹಾಲಪ್ಪನವರು ಪರಿಹಾರ ಕೊಟ್ಟು ಬಂದರು, ನಾನೂ ಪರಿಹಾರ ಕೊಟ್ಟು ಬಂದೆ. ಮಾನ್ಯ ಬೇಳೂರು ಗೋಪಾಲಕೃಷ್ಣರವರೂ ಪರಿಹಾರ ಕೊಟ್ಟು ಬಂದರು. ಸ್ಕೂಲ್‌ಗೆ ಹೋಗುವಾಗ ನೀರು ಇರಲಿಲ್ಲ. ವಾಪಸ್ಸು ಬರುವಾಗ ನೀರು ಬಂತು. ಎರಡೂ ಮಕ್ಕಳು ತೇಲಿಕೊಂಡು ಸತ್ತೇ ಹೋದರು. ಇದನ್ನೆಲ್ಲಾ ಯಾರು ಮಾಡಬೇಕು? whether it is not civic amenities? ಮಾಡಲಿಲ್ಲ ಎಂದ ತಕ್ಷಣ MLA failure ಆಗುತ್ತಾನೆ ಎಂದಾಗುತ್ತದೆ. Whether we have not brought it to the knowledge of the Government? We have brought it to the knowlege of the Government. It is a failure on the part of the Government. ಇದು ನನ್ನ ಅನಿಸಿಕೆ. ಆರ್ಥಿಕ ಇಲಾಖೆಯ ಬಗ್ಗೆ ಹೇಳುವುದಾದರೆ, ನನ್ನ ಅನಿಸಿಕೆ ಹೇಳುತ್ತಿದ್ದೇನೆ. It is a suggestion to the House. ಪ್ರತಿ ಏಪ್ರಿಲ್ ಒಂದನೇ ತಾರೀಖಿನಿಂದ ಮಾರ್ಚ್, ಡಿಸೆಂಬರ್‌ವರೆಗೆ 224 constituency ಗೆ ಒಂದು ಪುಸ್ತಕವನ್ನು ಹೊರ ತನ್ನಿ. ನಮ್ಮ ಪರಿಚಯ ಪುಸ್ತಕಕ್ಕಿಂತ ಅದು ಒಳ್ಳೆಯದು. ಏಕೆಂದರೆ, all of us should know. ಅಲ್ಲಿ ಮಹಿಳೆಯರ ಸಂಖ್ಯೆ ಎಷ್ಟಿದೆ, ಪುರುಷರ ಸಂಖ್ಯೆ ಎಷ್ಟಿದೆ, literacy ಎಷ್ಟಿದೆ, ಅಲ್ಲಿ education ಎಷ್ಟು ಪ್ರಮಾಣದಲ್ಲಿದೆ. ಎಲ್ಲವೂ ಕೂಡ ಮಾಹಿತಿಯನ್ನು ಒದಗಿಸುವಂತಹ ಪುಸ್ತಕ ಬರಬೇಕು. ಇದಕ್ಕೆ ಎಷ್ಟು ಖರ್ಚು ಬರುತ್ತದೆ? I should know about the facts, about other areas also. ಅಲ್ಲಿ ಮುಖ್ಯ ಬೆಳೆ ಏನು?

ವಾಡಿಕೆ ಮಳೆ ಎಷ್ಟು? ಇಂಥದ್ದು ಒಂದು ಪುಸ್ತಕ ತಂದರೆ, atleast ನಾವು ಅದನ್ನು ನೋಡಬಹುದು. ಎಷ್ಟು ಗ್ರಾಮ ಪಂಚಾಯಿತಿಗಳು ಒಂದು ವಿಧಾನಸಭಾ ಕ್ಷೇತ್ರಕ್ಕೆ ಬರುತ್ತದೆ? ಅಥವಾ ಎಷ್ಟು ಹಣ ತೊಡಗಿಸಬಹುದು, ಇವೆಲ್ಲವೂ ಕೂಡ ಅದರೊಳಗೆ ಆಗುತ್ತದೆ ಎನ್ನುವುದು ನನ್ನ suggestion to the Government.

ಇಲ್ಲಿ ಬಹಳ ಪ್ರಮುಖವಾಗಿ, ನಾನು ಕಳೆದ 4 ವರ್ಷಗಳಿಂದ ನೋಡುತ್ತಿದ್ದೇನೆ, ಗುತ್ತಿಗೆ ನೌಕರರು, ನಮ್ಮ ದಿನಗೂಲಿ ನೌಕರರು 25,000 ಜನರು ಇದ್ದಾರೆ. ನಡೆದ ಎಲ್ಲಾ ಅಧಿವೇಶನಗಳಲ್ಲೂ ಹೆಚ್ಚು ಕಡಿಮೆ ನಾನು ಪ್ರಶ್ನೆ ಕೇಳಿದ್ದೇನೆ ಹಾಗೂ ಉತ್ತರ ಪಡೆದುಕೊಂಡಿದ್ದೇನೆ. ಹಾಗಾದರೆ ಸರ್ಕಾರಕ್ಕೆ ಅವರ ಬಗ್ಗೆ ಏನಾದರೂ ಒಂದು ಯೋಚನೆ ಮಾಡಬೇಕೆಂದು ಅವರಿಗೆ ಯೋಚನೆಯೇ ಇಲ್ಲವೇ? ಒಬ್ಬ Forest Guard ನಿನ್ನೆ ನನಗೆ ಆಗುಂಬೆಯಿಂದ ಫೋನ್ ಮಾಡಿ ನನಗೆ ಸಂಬಳ ಸಿಗದೇ 2–3 ತಿಂಗಳಾಯಿತು ಎಂದು ಹೇಳುತ್ತಾನೆ. ಅವರಿಗೆ ಕೊಡುವುದು ಎಷ್ಟು? ಇವರು collect ಮಾಡುವುದು ಒಬ್ಬನಿಗೆ 3,500, 4,000, 5,000 ರೂಪಾಯಿ ಅವನಿಗೆ ಕೊಡುವುದು 1,000 ರೂಪಾಯಿ, 2000 ರೂಪಾಯಿ. ಅದಕ್ಕೆ ಅವನು 5 ತಿಂಗಳು ಕಾಯಬೇಕು. ಯಾವ ಪರಿಸ್ಥಿತಿ ಇದೆ ಎಂದರೆ, ಒಬ್ಬ ಸತ್ತಾಗ, ಈಗ ಅಲ್ಲಿ ದಿನಗೂಲಿ ನೌಕರರು 40–50 ವರ್ಷದವರು ಇದ್ದಾರೆ. ನಮ್ಮಲ್ಲಿ ಒಬ್ಬ ಕಬ್ಬಡ್ಡಿ ಕ್ಯಾಪ್ಟನ್ ಆದವನು, state represent ಮಾಡಿದವನು, heart attack ಆಗಿ ಸತ್ತು ಹೋದ. Heart attack ಆಗಿ ಸತ್ತು ಹೋದ ತಕ್ಷಣವೇ he did not get anything from the Forest Department. Forest Department ನಿಂದ ಒಂದು ರೂಪಾಯಿಯೂ ಸಿಗಲಿಲ್ಲ. ಅನಂತರ Forestನವರು, RFO ಅವರು ಇವರು ಎಲ್ಲಾ ಸೇರಿಕೊಂಡು 2 ಲಕ್ಷ ರೂಪಾಯಿ ಹಣ ಮಾಡಿದರೆ, ನಮ್ಮಲ್ಲಿ ಪರಿಸರವಾದಿಗಳು ಮತ್ತು ಇವರೆಲ್ಲಾ ಜಾಸ್ತಿ. ರೂಮ್‌ನಲ್ಲಿ ಕುಳಿತುಕೊಂಡು ಕಣ್ಣಿನ ಎದುರುಗಡೆ ಸಾವಿಗೆ 5 ರೂಪಾಯಿ ಹಾಕದಿದ್ದವರು, ಕಾನೂನು, ಕೇಳುತ್ತಾರೆ. ನೀನು ಎಲ್ಲಿಂದ ಕೊಟ್ಟೆ? ಯಾರಿಂದ ಕೊಟ್ಟೆ? ಅದು ಬೇರೆ ಕೇಳುವುದು. ಇವರು 5 ರೂಪಾಯಿ ದಾನ ಮಾಡಿರುವುದಿಲ್ಲ. ಪ್ರಶ್ನೆ 50 ಕೇಳುತ್ತಾರೆ. ನಾನು ಉದಾಹರಣೆ ಏಕೆ ಹೇಳುತ್ತೇನೆಂದರೆ, ಆ 25,000 ನೌಕರರ ಭವಿಷ್ಯವನ್ನು ಹಾಳು ಮಾಡುತ್ತಿರುವವರು ಈ ಸರ್ಕಾರವೇ ಹೊರತು ಬೇರೆ ಯಾರೂ ಅಲ್ಲ. ಹಾಗಾದರೆ ನೀವು ಅವರಿಗೆ ಸರಿಯಾದ ರೀತಿಯಲ್ಲಿ ವೇತನ ಕೊಡುತ್ತಿದ್ದೀರಾ? ನಾನು ಈ ಪ್ರಶ್ನೆಯನ್ನು ಕಾರ್ಮಿಕ ಸಚಿವರಿಗೂ ಕೇಳಿದ್ದೇನೆ. ಅದರ ಬಗ್ಗೆ ಒಂದು

ಸಾರಿ ಉತ್ತರ ಪಡೆದುಕೊಂಡಿದ್ದೇನೆ. what is the minimum wage as per Minimum Wages Act? Whether you are paying the amount like that? You are not paying it. ಬಹಳ ದುರಂತವೆಂದರೆ, ನಮ್ಮ ಶಾಲೆಗೆ ಬರುತ್ತಾರೆ. "ಸಾರ್, 15,000 ಮಾಡಿದ್ದಾರೆ, ನನಗೆ BPL card ಸಿಗುವುದಿಲ್ಲ ಎಂದು ಹೇಳುತ್ತಾರೆ. ಮಾನ್ಯ ಸಭಾಧ್ಯಕ್ಷರಲ್ಲಿ ಹಾಗೂ ಇಲ್ಲಿರುವ ಎಲ್ಲಾ ಸಚಿವರಲ್ಲಿ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ರೂ. 11,000ದ ಒಳಗೆ ಆದಾಯ ಇರತಕ್ಕಂಥವರು ಎಷ್ಟು ಜನ ಇದ್ದಾರೆ ಎನ್ನುವುದನ್ನು ನೀವು ಹೇಳಿ. You can't find out a single person. You can't find out. ನಿಮ್ಮ ಉದ್ಯೋಗ ಖಾತ್ರಿ ಯೋಜನೆಯಲ್ಲಿಯೇ ಅದು 155ಕ್ಕೆ ಬಂದಿದೆ. ನೀವು 11,000 ರೂಪಾಯಿ ಒಳಗೆ ಇದ್ದವರಿಗೆ ಕೊಡಿ ಎಂದು ನಾವು village Secretary ಯವರಿಗೆ ಫೋನ್ ಮಾಡಿ ಹೇಳುತ್ತೇವೆ. village Secretary ಯವರೂ ಕೊಡುವುದು ಕಾನೂನು ಬಾಹಿರ. ಅವನು ಕಾನೂನುಬದ್ಧವಾಗಿ 40,000 ಎಂದು ಬರೆದರೆ he will be suspended. ಆದರೆ ಅವರು ಕೊಡದೇ ಇದ್ದರೆ ಇವರಿಗೆ ಕಾಲೇಜಿಗೆ admission ಆಗುವುದಿಲ್ಲ. ಇವರಿಗೆ medical allowance ಸಿಗುವುದಿಲ್ಲ. ಈಗ ನಮಗೆ ಕೊಟ್ಟಿರತಕ್ಕಂಥ C.M. fund ಗೆ ನಾವು ಹಣ ಕೊಟ್ಟರೆ ಅವರಿಗೆ ಆದಾಯ ಪತ್ರ ಕೇಳುತ್ತಾರೆ. ಹಾಗಾದರೆ ಈ 4 ವರ್ಷಗಳಲ್ಲಿ ಇದರೊಳಗೆ ಅವರಿಗೆ 40 ವರ್ಷಕ್ಕೆ, 40,000 ರೂಪಾಯಿಗೋ ಎಷ್ಟಕ್ಕೋ ಒಂದು ಆದಾಯ ಮಿತಿ ಹಾಕುವುದಕ್ಕೆ ಆಗುವುದಿಲ್ಲವೇ? 11,000 ರೂಪಾಯಿ rural ಗೆ, 17,000 ರೂಪಾಯಿ urban ಗೆ Whether you can't change it? ನನಗೆ ಅರ್ಥವೇ ಆಗುತ್ತಿಲ್ಲ. ಈಗ ಹೇಗಾಗಿದೆ ಎಂದರೆ ನಮ್ಮಲ್ಲಿ ಈ ಕಾಡುಪ್ರಾಣಿಗಳಿದ್ದು, Forest Department ನಲ್ಲಿ ಏನು problem ಆಗಿದೆ? Revenue Department ನಲ್ಲೂ ಅಷ್ಟೆ. ಪರಿಹಾರ ಕೊಡುವಾಗ ಒಂದು ಜಮೀನು ತರಿ ತೇಲಿಕೊಂಡು ಹೋಗಿದೆ. ಮಳೆ ಬಂದಿತು ಎಂದರೆ ಒಂದು ಎಕರೆಗೆ 800 ರೂಪಾಯಿ ಕೊಡುತ್ತಾರೆ. ನಮ್ಮಲ್ಲಿ ನಾಲ್ಕು ಆಳು ಕೆಲಸ ಎಂದು ಹೇಳುತ್ತೇವೆ. ನಾಲ್ಕು ಜನ ಕೆಲಸ ಮಾಡಿದರೆ ಅದರ ಕತೆ ಮುಗಿಯಿತು. ಒಂದೂವರೆ, ಎರಡು ಲಕ್ಷ ರೂಪಾಯಿ ಇರತಕ್ಕಂಥ ತರಿ ಮೂರು ವರ್ಷದ ಹಿಂದೆ ಮಣ್ಣು ಬಂದು ಕುಳಿತುಕೊಂಡಿರುವುದು ಇವತ್ತಿನವರೆಗೂ ನೆಡುವುದಕ್ಕಾಗಿಲ್ಲ. 800 ರೂಪಾಯಿ ಸರ್ಕಾರದಿಂದ ಸಿಕ್ಕಿದೆ. ನಾವು ಸರ್ಕಾರದಲ್ಲಿ ಏನು fight ಮಾಡಬಹುದು? ಅವನು ನಮಗೇನು ಬೈಯಬಹುದು? ಹಾಗಾದರೆ ಕಾನೂನುಗಳು ತಿದ್ದುಪಡಿಯಾಗಲು

ಸಾಧ್ಯವೇ ಇಲ್ಲವೇ? ಪರಿಹಾರದ ರೂಪವನ್ನು ಬದಲಾವಣೆ ಮಾಡಲಿಕ್ಕೆ ಸಾಧ್ಯವೇ ಇಲ್ಲವೇ? ಹಾಗಾದರೆ ಅದನ್ನು ಯಾರು ಸರಿ ಮಾಡುವುದು? ನಾವು ಇರುವುದೇ ಅದಕ್ಕೆ. ಶಾಸನ ಸಭೆಯ ಉದ್ದೇಶ ಏನು? ಶಾಸನ ಸಭೆಯ ಅರ್ಥ ಏನು? We are here to change the system. We are here to create the Law. 50-60 ವರ್ಷದ್ದು ಅಪ್ಪನ ಕಾಲದ್ದು, ಅಜ್ಜನ ಕಾಲದ್ದು ಇಟ್ಟುಕೊಂಡು, ನಮ್ಮ ಸಂಪ್ರದಾಯ ಸಂಪ್ರದಾಯಗಳು ಯಾವುವೂ ಕೂಡ ಆಕಾಶದಿಂದ ಬಿದ್ದಿರುವುದು ಅಲ್ಲ. ಯಾವುದೇ ಕಾನೂನು, ಸಂವಿಧಾನ ಎಲ್ಲವೂ ಕೂಡ ಆಕಾಶದಿಂದ ಯಾವುದೂ ಬಿದ್ದಿಲ್ಲ. ನಾವು, ನಮಗಾಗಿ, ಮುಂದಿನ ಜನಾಂಗಕ್ಕೆ ನಾವು ಮಾಡಿಕೊಟ್ಟಿರುವುದು. What is the worng in changing it? ಮೊನ್ನೆ Principal Secretary, Forest Department ನವರು ಬಂದಿದ್ದರು. ಮಂಗ ಯಾವುದಕ್ಕೆ ಬರುತ್ತದೆ ಎಂದು ಕೇಳಿದೆ. ಚೂರು ತಿಳಿದು ಹೇಳುತ್ತೇನೆ ಎಂದು ಇವತ್ತು ಉತ್ತರ ಕೊಟ್ಟಿದ್ದಾರೆ. ಏಕೆಂದರೆ ಮಂಗ, ಕಾಡಿಗೆ ಬರುತ್ತದೆಯೋ, ಮನುಷ್ಯನ ರೂಪ, ಇನ್ಯಾವುದೋ ಎಂದು. ಇಲ್ಲಿ problem ಏನೆಂದರೆ, ನಮ್ಮಲ್ಲಿ ಮಂಗನ ಕಾಟವಿದೆ. ಅಡಿಕೆ ಫಸಲು ಹಾಳು ಮಾಡುತ್ತದೆ. ಭತ್ತದ ಫಸಲು ಹಾಳು ಮಾಡುತ್ತದೆ. ಬಾಳೆತೋಟ ಹಾಳು ಮಾಡುತ್ತದೆ. ಇದಕ್ಕೆ ಪರಿಹಾರ ಕೊಡುವುದಿಲ್ಲ. ನಾವು ಪರಿಹಾರ ಕೇಳಿದರೆ, ಮಂಗ ವನ್ಯಜೀವಿಯೊಳಗೆ ಬರುವುದಿಲ್ಲ ಎಂದು ಹೇಳುತ್ತಾರೆ. ಹಾಗಾದರೆ ಅದು ಮನುಷ್ಯನೇ? ಸಾಕುಪ್ರಾಣಿಯಾ? Forest Department ನವರೆ ಅಷ್ಟು confusion ನಲ್ಲಿದ್ದರೆ, if Government itself is in such a condition, ಇದಕ್ಕೆ ಅರ್ಥವೇನು? ಇದು ಮೂಲ ಮಾನವ ಎಂದು consider ಮಾಡಿದರೋ ಏನು ಎಂದು ಪ್ರಶ್ನೆ ಕೇಳಿದೆ. ಅದಕ್ಕೆ ಒಂದು ಉತ್ತರ ಕೊಟ್ಟಿದ್ದಾರೆ. ನನ್ನ ಹತ್ತಿರ ಇದೆ. ಅದನ್ನೇನೂ ಹೇಳುವುದಕ್ಕೆ ಹೋಗುವುದಿಲ್ಲ. ನಾನು ಏತಕ್ಕೆ ಇದನ್ನು ಹೇಳುತ್ತೇನೆಂದರೆ, ಸರ್ಕಾರವೇ confusion ನಲ್ಲಿದ್ದು ಬಿಟ್ಟರೆ, ಜನರಿಗೆ ಏನು ಆಡಳಿತ ಸಿಗುತ್ತದೆ? ಜನರಿಗೆ ಒಳ್ಳೆಯ ಆಡಳಿತ ಸಿಗುತ್ತದೆಯೇ? ಇವರಿಗೇ ಕಾನೂನು ಗೊತ್ತಿಲ್ಲ. ಮಂಗ ಕಾಡಿಗೆ ಬರುತ್ತದೆಯೋ, ಊರಿನ ಒಳಗೆ ಬರುತ್ತದೆಯೋ, ಸಾಕು ಪ್ರಾಣಿಯೇ ಎನ್ನುವ ಯೋಚನೆಯಲ್ಲಿಯೇ ಅವರು confusion ನಲ್ಲಿದ್ದರೆ, ಅವರು ಇಷ್ಟು ವರ್ಷ ಕಳೆದರಲ್ಲಾ, ಇದಕ್ಕೆ ತಾವೇನೆಂದು ಹೇಳುತ್ತೀರಿ? ಸರ್ಕಾರ ಉತ್ತರ ಹೇಳಬೇಕಾಗುತ್ತದೆ. ಬಹಳ confusion. ಖಂಡಿತವಾಗಿಯೂ ಇವೆಲ್ಲಾ ಬದಲಾವಣೆಗಳನ್ನು ಮಾಡದೇ ಇದ್ದರೆ, ಏನು ಉಪಯೋಗವಿದೆ? ಸಮಾಜ ಕಲ್ಯಾಣ ಇಲಾಖೆಯಿದ್ದು, ನಮ್ಮಲ್ಲಿ

problem ಇದೆ. ಎಷ್ಟು ನೋವಾಗುತ್ತದೆ ಎಂದರೆ, ಈ ಸದನಕ್ಕೆ ಇನ್ನು ಬರಬಾರದೆನ್ನುವಷ್ಟು ಮನಸ್ಸಿಗೆ ನೋವಾಗುತ್ತದೆ. 4 ವರ್ಷಗಳ ಹಿಂದೆ ನಾನು ಆಯ್ಕೆಯಾದೆ. ಹಾಸ್ಟೆಲ್‌ಗೆ 50–60 ಜನ ಹೆಣ್ಣುಮಕ್ಕಳು ಜಾಸ್ತಿ ಸೀಟು ಕೇಳಿದರು. ಕೊಡತಕ್ಕಂಥ ಪರಿಸ್ಥಿತಿ ನಮಗೆ ಇರಲಿಲ್ಲ. ನಮಗೆ ಇರುವುದು 55, ನನಗೆ ಅವರ್ಯಾರನ್ನೂ ವಾಪಸ್ಸು ಕಳುಹಿಸುವುದಕ್ಕೆ ಮನಸ್ಸಿರಲಿಲ್ಲ. ಏಕೆಂದರೆ, ಆ ಹೆಣ್ಣುಮಕ್ಕಳೆಲ್ಲಾ 5 ಕಿ.ಮೀ., 6 ಕಿ.ಮೀ. ನಡೆದುಕೊಂಡು ಕಾಲೇಜಿಗೆ ಬರಬೇಕು. 200 ಇಂಚು ಮಳೆ ಇರತಕ್ಕಂಥ ಪ್ರದೇಶ, ಕಾಡು ಪ್ರದೇಶ, ನಕ್ಸಲ್ ಸಮಸ್ಯೆ ಇದೆ. ಸರಿ ಜಾಸ್ತಿ ಮಾಡಿದೆವು. ಅಲ್ಲಿ ಒಬ್ಬರು CS ಇದ್ದರು ನನ್ನ ಹತ್ತಿರ undertake ಮಾಡಿಸಿಕೊಂಡರು. ನಿಮ್ಮ ಪ್ರದೇಶಾಭಿವೃದ್ಧಿ ಹಣದಲ್ಲಿ ನಾನು 2 ಲಕ್ಷ ರೂಪಾಯಿಗಳನ್ನು ಕಟ್ ಮಾಡಿಕೊಳ್ಳುತ್ತೇನೆ. ನೀವು 10 ಲಕ್ಷ ರೂಪಾಯಿಯ building ಕಟ್ಟಿಸಿಕೊಡಿ ಎಂದು ಹೇಳಿದರು. 10 ಲಕ್ಷ ರೂಪಾಯಿದು ನಮ್ಮ ಅನುದಾನದಲ್ಲಿ 2 ರೂಮ್ ಕಟ್ಟಿಸಿದ್ದು ಆಯಿತು, electrification ಕೊಡಿಸಿದ್ದು ಆಯಿತು. ಆ 2 ಲಕ್ಷ ರೂಪಾಯಿಗಳನ್ನು ಬರೆದುಕೊಟ್ಟೆ. ಆನಂತರ D.C. ಯವರು ಇದನ್ನು ಬಿಡುಗಡೆ ಮಾಡುವುದಕ್ಕೆ ಬರುವುದಿಲ್ಲವೆಂದು query ಹಾಕಿದರು. ಈಗ ತಾಲ್ಲೂಕು ಸೊಸೈಟಿಯಲ್ಲಿ food ಕೊಟ್ಟವನು 4 ವರ್ಷದಿಂದ ನನಗೆ ಫೋನ್ ಮಾಡುತ್ತಿದ್ದಾನೆ. ಹಾಗಾದಾಗ ನಾನು Principal Secretary ರವರಿಗೆ ಅರ್ಜಿ ಕೊಟ್ಟೆ. Commissioner ನವರಿಗೆ ಅರ್ಜಿ ಕೊಟ್ಟೆ. Minister ರವರಿಗೆ ಕೊಟ್ಟಿದ್ದೇನೆ. ಜಿಲ್ಲಾ ಪಂಚಾಯತ್‌ನವರಿಗೆ ಹೇಳಿದ್ದೇನೆ. ಇವತ್ತಿನವರೆಗೂ ಆ 2 ಲಕ್ಷ ರೂಪಾಯಿ ಹಣ release ಆಗಿಲ್ಲ. ನಾವು ಏಕೆ ಇಲ್ಲಿ ಇರಬೇಕು? Is there any meaning in it? is it the House of legislation? 2 ಲಕ್ಷ ರೂಪಾಯಿ ಹಣವನ್ನು release ಮಾಡಲು ಒಬ್ಬ ಸ್ಥಳೀಯ ಅಧಿಕಾರಿಗಳಿಗೆ ಆಗುವುದಿಲ್ಲವೆಂದರೆ ಹೇಗೆ? ಅದೂ authenticated, it is not a created document. ನಾವು ಏತಕ್ಕಾಗಿ ಈ ಶಾಸನ ಸಭೆಗೆ ಬರಬೇಕು? ಮಾನ್ಯ ಅಧ್ಯಕ್ಷರು ಸರ್ಕಾರಕ್ಕೆ ಈ ವಿಚಾರಗಳನ್ನೆಲ್ಲಾ ಹೇಳಬೇಕೆನ್ನುವ ಮಾತನ್ನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ಅಧ್ಯಕ್ಷರಲ್ಲಿ ಸರ್ಕಾರಕ್ಕೆ ಮನವಿ ಮಾಡಿಕೊಳ್ಳುವುದೇನೆಂದರೆ, ಈ ರಾಜ್ಯದಲ್ಲಿ 189 ಗ್ರಾಮೀಣ ವಿಧಾನಸಭಾ ಸದಸ್ಯರು ಇದ್ದಾರೆ, as identified by the Rural Development Minister. ನಾನು ಹೇಳುವುದೇನೆಂದರೆ, ಈ .ಬರಕ್ಕಾಗಿ ಇಷ್ಟು 3 ಗಂಟೆ, 4 ಗಂಟೆ, 5 ಗಂಟೆ ಮಾತನಾಡಿದೆವಲ್ಲಾ, ಸರ್, ಹಾಗಾದರೆ ಬರ

ಬರುವುದು, ಅತಿವೃಷ್ಟಿ, ಅನಾವೃಷ್ಟಿ ಸರ್ಕಾರದ ಗಮನದಲ್ಲಿ ಇರುವುದೇ ಇಲ್ಲವೇ ಹಿಂದೆ ಬಂದಿಲ್ಲವೇ? ಮುಂದೆ ಬರುವುದಿಲ್ಲವೇ? ಹಾಗಾದರೆ ಅಂಥದ್ದಕ್ಕೆ ನಾವು ಏನು ಕ್ರಮ ತೆಗೆದುಕೊಳ್ಳಬೇಕು? Drinking Water problem is a permanent problem. ಎರಡೆರಡು ಕೋಟಿ ರೂಪಾಯಿಗಳಂತೆ ಶಾಸಕರ taskforce ಗೆ ನೀವು ಕೊಟ್ಟರೆ, ಏನು ದಂಡವಾಗುತ್ತೆ ಎಂದು ನನಗೆ ಅರ್ಥವಾಗುತ್ತಿಲ್ಲ. ಹೆಚ್ಚು ಕಡಿಮೆ 400 ಕೋಟಿ ರೂಪಾಯಿಗಳಾಗುತ್ತವೆ. ಹೋಗಲಿ ಅವರು ಕೇಳಿರತಕ್ಕಂಥ ಬಾವಿಗೋ, ಕುಡಿಯುವ ನೀರಿಗೋ ಕೊಡುತ್ತಾರೆ. ಅದರಿಂದ ಏನಾಗುತ್ತದೆ? Only for drinking purpose ಗೆ 2 ಕೋಟಿ ರೂಪಾಯಿ ಕೊಡುವುದರಿಂದ ಏನು ತೊಂದರೆಯಾಗುತ್ತದೆ? ಅಲ್ಲಿ ಉತ್ಸವಕ್ಕೆ ಕೊಡುತ್ತಾರೆ. ನಾನು ಹೆಸರು ಹೇಳುವುದಕ್ಕೆ ಹೋಗುವುದಿಲ್ಲ. ಬಳ್ಳಾರಿಯಲ್ಲಿ ಉತ್ಸವಕ್ಕೆ 78 ಕೋಟಿ ರೂಪಾಯಿ ಖರ್ಚಾಯಿತು. ಅವರು ಯಾರಿಂದಲೋ ಡ್ಯಾನ್ಸ್ ಮಾಡಿಸುವುದಕ್ಕೆ ಅವರು ಏರೋಪ್ಲೇನ್‌ನಲ್ಲಿ ಬರುವಂತಹ ಟೀಮ್‌ಗೆ 25 ರಿಂದ 35 ಲಕ್ಷ ರೂಪಾಯಿಗಳನ್ನು ಕೊಟ್ಟರು. ಒಂದು ಉತ್ಸವಕ್ಕಾಗಿ ಸುಮಾರು 78 ಕೋಟಿ ರೂಪಾಯಿಗಳನ್ನು ಕೊಟ್ಟರು. ಇಲ್ಲಿ ನಮಗೆ ಕುಡಿಯುವ ನೀರಿಗಾಗಿ ದುಡ್ಡಿಲ್ಲವೆಂದರೆ why I have to be here? ಅದಕ್ಕೇನಾದರೂ ಅರ್ಥವಿದೆಯಾ? ಹೇಮಮಾಲಿನಿ ಡ್ಯಾನ್ಸ್ programmeಗೆ ಸುಮಾರು 78 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಕುಡಿಯುವುದಕ್ಕೆ ನೀರಿಲ್ಲವೆಂದು ನಾವು 189 ಜನ ಪ್ರತಿನಿಧಿಗಳು ಜನರ ಹತ್ತಿರ ಬೈಸಿಕೊಳ್ಳಬೇಕೇ? Is there any meaning in it? ನಮ್ಮ thoughts ಗಳನ್ನು ಬದಲಾವಣೆ ಮಾಡಿಕೊಳ್ಳಬೇಕು. ಆಡಳಿತದಲ್ಲಿರುವಂತಹವರು ತಮ್ಮ ಯೋಚನಾ ಲಹರಿಯನ್ನು ಖಂಡಿತವಾಗಿ ಬದಲಾವಣೆ ಮಾಡಿಕೊಳ್ಳಬೇಕು. ಈ ಬದಲಾವಣೆಗಳನ್ನು ನಾವು ಮಾಡದೆ ಇದ್ದರೆ we cannot change the system. Acquiring power is not important ಇಲ್ಲಿ ಕುರ್ಚಿಯ ಮೇಲೆ ಕುಳಿತುಕೊಳ್ಳುವುದು ಬಹಳ ಮುಖ್ಯವಲ್ಲ. ಕುರ್ಚಿಯ ಮೇಲೆ ಕುಳಿತುಕೊಂಡಾಗ ಏನು ಮಾಡುತ್ತಾರೆಂಬುದು ಬಹಳ ಮುಖ್ಯವಾಗುತ್ತದೆ. ಈ ದೇಶದಲ್ಲಿ ನಮ್ಮ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಅರ್ಹತೆ ಇದ್ದವರೆಲ್ಲರೂ ಗೆದ್ದು ಬರುವುದಿಲ್ಲ. ಈ ದೇಶದಲ್ಲಿ ಅರ್ಹತೆ ಇಲ್ಲದೆ ಇದ್ದವರು ಅನೇಕ ಜನರು, ಅನೇಕರು ನಾಮಾವಶೇಷವಾಗಿ ಹೋಗಿದ್ದಾರೆ. We have to accept, ಏಕೆ ಎಂದು ಹೇಳಿದರೆ ತಲೆ ಒಡೆಯುವವರು ಬರುವುದಕ್ಕಿಂತ ತಲೆ ಒಡೆಯುವವರು ಬರುವುದಕ್ಕಿಂತ ತಲೆ ಎಣಿಸಿ ಬರುವುದು ಉತ್ತಮವೆನ್ನುವ ಕಾರಣಕ್ಕಾಗಿ ಇದನ್ನು ನಾವು

ಒಪ್ಪಿಕೊಂಡಿದ್ದೇವಷ್ಟೆ. There is no other alternative method to select this. ಹಾಗಾದರೆ ಈಗ change ಮಾಡುವುದು ಹೇಗೆ? ಶಿವಮೊಗ್ಗ ಜಿಲ್ಲೆಯನ್ನು ಬರ ಪೀಡಿತ ಪ್ರದೇಶವೆಂದು ಘೋಷಣೆ ಮಾಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ಮತ್ತು ಮಾನ್ಯ ಉಪಮುಖ್ಯಮಂತ್ರಿಗಳಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ನಮ್ಮ ಕಿಮ್ಮನೆಯಲ್ಲಿ 250 ಇಂಚು ಮಳೆಯಾಗುತ್ತದೆ, ಆದರೆ ಇನ್ನೂ ಕೂಡ 50 ಇಂಚು ಮಳೆಯಾಗಿರುವುದಿಲ್ಲ. ನಮಗೆ ಮಳೆ ಬರದೆ ಇದ್ದರೆ ಬಯಲು ಸೀಮೆಯ ಎಲ್ಲಾ ಭಾಗಕ್ಕೂ ನಮ್ಮದು ಎಂದರೆ ನಮ್ಮದು ಮಾತ್ರವಲ್ಲ, ಚಿಕ್ಕಮಗಳೂರು, ಮೂಡಿಗೆರೆ ಸೇರಿ, ನಮ್ಮಲ್ಲಿ ಮಳೆ ಬಾರದೆ ಇದ್ದರೆ ಎಲ್ಲಾ ಕಡೆಗೂ ತೊಂದರೆಯಾಗುತ್ತದೆ. ಆದ್ದರಿಂದ ಈ ಎಲ್ಲವನ್ನೂ ಗಮನದಲ್ಲಿಟ್ಟುಕೊಂಡು ಸರ್ಕಾರ ಖಂಡಿತವಾಗಿಯೂ ಕೂಡ ಆಸಕ್ತಿಯನ್ನು ವಹಿಸಿ ಎಲ್ಲಾ ಪ್ರಮುಖ ವಿಚಾರಗಳನ್ನು ಬಗೆಹರಿಸುವುದಕ್ಕೆ ಪ್ರಯತ್ನ ಮಾಡುತ್ತಾರೆನ್ನುವಂತಹ ಮಾತನ್ನು ಹೇಳುತ್ತೇನೆ. ನಮಗೆ ಇನ್ನೂ ಕೂಡ 100 ಸೀಟು ಹೆಚ್ಚಿಗೆ ಕೊಡಬೇಕೆಂದು ನಮ್ಮ ಸಮಾಜ ಕಲ್ಯಾಣ ಇಲಾಖೆಯ ಮಂತ್ರಿಗಳಲ್ಲಿ ನಾನು ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಕೃಷಿ ಸಚಿವರು ಮತ್ತು Horticulture Minister ರವರು ಈ ಸದನದಲ್ಲಿದ್ದಾರೆ. ಈ ಬಗ್ಗೆ ಎರಡು ಪ್ರಮುಖವಾದಂತಹ ವಿಚಾರಗಳನ್ನು ಹೇಳುತ್ತೇನೆ. ನಮ್ಮ ತೀರ್ಥಹಳ್ಳಿಯಲ್ಲಿ ಸುಮಾರು ನಾಲ್ಕು ಕಟ್ಟಡಗಳು ಆಗಿದೆ. ಮಾನ್ಯ ಕೃಷಿ ಸಚಿವರೆ, ನಿಮ್ಮ ಇಲಾಖೆಗೆ ಸಂಬಂಧಪಟ್ಟಂತೆ ಎರಡು ವಿಚಾರಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮೊದಲು ವ್ಯವಸ್ಥೆ decentralize ಆಗಿತ್ತು. ಈಗ centralize ಆಗಿದೆ. ನಮ್ಮ ಪರಿಸ್ಥಿತಿ ಹೇಗಿದೆ ಎಂದರೆ 3,000 ರೂಪಾಯಿಗಳಿಗೆ ಸಿಗುವಂತಹ ನಮ್ಮ agricultural implements ಸುಮ್ಮನೆ 8,000 ರೂಪಾಯಿಗಳಿಗೆ ಹೋಗಿದೆ. ನಾವು ನೇರವಾಗಿ ಕಾರ್ಖಾನೆಗೆ ಹೋದರೆ 2,500 ರೂಪಾಯಿಗಳಿಗೆ ಸಿಗುತ್ತದೆ. ನಿಮ್ಮ ಸಬ್ಸಿಡಿ ನಮಗೆ ಸಿಗುವುದೇ ಇಲ್ಲ. ಇದನ್ನು ಆ ಮಧ್ಯವರ್ತಿಯು ತೆಗೆದುಕೊಂಡು ಹೋಗುತ್ತಿದ್ದಾರೆ. ಇದನ್ನು you have to change it. ನಾನು ನನ್ನ ಮಾತನ್ನು complete ಮಾಡಿಬಿಡುತ್ತೇನೆ.

ಶ್ರೀ ಉಮೇಶ್ ವಿ. ಕತ್ತಿ : ನಾನು ಈ ಬಗ್ಗೆ ಮಾತನಾಡುತ್ತೇನೆ.

ಶ್ರೀ ಕಿಮ್ಮನೆ ರತ್ನಾಕರ್ ; ನಾನು ಒಂದು ನಿಮಿಷ ಹೇಳುತ್ತೇನೆ. ನಾನು ನನ್ನ ಮಾತನ್ನು ಹೇಳಿ ಮುಗಿಸಿಬಿಡುತ್ತೇನೆ.

ಉಪಾಧ್ಯಕ್ಷರು ; ಮಾನ್ಯ ಸಚಿವರು ಮಾತನಾಡುವುದಕ್ಕೆ ಒಂದು ನಿಮಿಷ ಅವಕಾಶವನ್ನು ಕೊಡಿ.

ಶ್ರೀ ಕಿಮ್ಮನೆ ರತ್ನಾಕರ್ : ನನ್ನ ಮಾತನ್ನು ಹೇಳಿ ಮುಗಿಸುತ್ತೇನೆ.

ಉಪಾಧ್ಯಕ್ಷರು ; ಮಾನ್ಯ ರತ್ನಾಕರ್‌ರವರೆ, ಮಾನ್ಯ ಸಚಿವರು ಒಂದು ಸಲ ಮಾತನಾಡಲಿ.

ಶ್ರೀ ಕಿಮ್ಮನೆ ರತ್ನಾಕರ್ : ಇಲ್ಲಾ ಸ್ವಾಮಿ, ನಾನು ನನ್ನ ಮಾತನ್ನು close ಮಾಡಿಬಿಡುತ್ತೇನೆ. ಏಕೆಂದರೆ ತಾವು ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದೀರಿ. ಅದಕ್ಕೆ ತಮಗೆ ಧನ್ಯವಾದಗಳು. ನಾನು ಮಾತನಾಡುವ ಬಗ್ಗೆ ಪೂರ್ಣವಾಗಿ prepare ಆಗಿರಲಿಲ್ಲ. ನಾನು ಮತ್ತೆ ಮಾತನಾಡುತ್ತೇನೆಂದರೆ, ನನಗೆ ಮಾತನಾಡುವುದಕ್ಕೆ ಅವಕಾಶವೇ ಸಿಗುವುದಿಲ್ಲ. ನಾನು ಮಾತನಾಡಬೇಕೆಂದು ಇಡೀ ದಿನ ಒಂದೊಂದು ಗಂಟೆ ಕಾದು ಮನೆಗೆ ಹೋಗಿದ್ದೇನೆ. ಆದ್ದರಿಂದ ನಾನು ಎದ್ದು ನಿಂತುಕೊಂಡು ಮಾತನಾಡುವುದಕ್ಕೆ ಪ್ರಾರಂಭ ಮಾಡಿದ್ದೇನೆ. ಏತಕ್ಕಾಗಿ ಈ ಮಾತನ್ನು ಹೇಳುತ್ತೇನೆಂದರೆ, ಇವತ್ತು ಟಿಲ್ಲರ್, ಟ್ರಾಕ್ಟರ್‌ಗಳು ಯಾವ ಪರಿಸ್ಥಿತಿಗೆ ಬಂದಿದೆ ಎಂದರೆ Area processing ತೆಗೆದುಕೊಂಡರೆ ಅವನು ಅದನ್ನು 50,000 ರೂಪಾಯಿಗಳಿಗೆ ಕೊಡುವುದಕ್ಕೆ ರೆಡಿಯಾಗಿದ್ದಾನೆ. ಆದರೆ ಅಲ್ಲಿ ಏನಾಗಿದೆ ಎಂದರೆ ಸಬ್ಸಿಡಿಯನ್ನು ನೇರವಾಗಿ ಅವನಿಗೆ ಕೊಡುವುದರಿಂದ they have raised the bill. ಇದರಿಂದ ರೈತನಿಗೆ 5 ಪೈಸೆ ಉಪಯೋಗವಾಗುತ್ತಿಲ್ಲ. ನೀವು ಏನು ರೈತನಿಗೆ ಹಣ ಕೊಡಬೇಕೆಂದು ಇದ್ದೀರೋ ನೀವು ಅವನಿಗೆ original bills ಅನ್ನು ಕೊಡುವುದಕ್ಕೆ ಹೇಳಿ ಅವನಿಗೆ ಪೇಮೆಂಟ್ ಮಾಡಿ. ಇದು ಯಾತಕ್ಕೆ ಆಗಿತ್ತು. ಎಂದರೆ, ನನಗೆ ಮೂರು ವರ್ಷದಿಂದ, ತಾಲ್ಲೂಕು ಪಂಚಾಯಿತಿ ಅಧ್ಯಕ್ಷರು ಇದ್ದರು, ಅವರು ಕರೆದರು, Copper Sulphate ಬಂದಿದೆ ನೀವು distribute ಮಾಡಬೇಕು ಅದಕ್ಕೆ subsidy rate ನಲ್ಲಿ ಕೊಡುತ್ತಿದ್ದಾರೆಂದು ಹೇಳಿದರು. ನಾನು ಅಲ್ಲಿಗೆ ಬಹಳ ಖುಷಿಯಲ್ಲಿ ಹೋದೆ. Copper Sulphate ಅನ್ನು distribute ಮಾಡುವುದಕ್ಕೆ ಹೋದೆ. ಬೆಳಿಗ್ಗೆ ಅಲ್ಲಿಗೆ ಹೋಗಿ ಚೌಚೌಬಾತ್ ತಿಂದಿದ್ದು ಆಯಿತು. Copper Sulphate distribute ಮಾಡುವುದಕ್ಕೆ ಹೋದರೆ ಒಂದು ಕೆಜಿಗೆ ಎಷ್ಟೆಂದರೆ 131 ರೂಪಾಯಿಗಳು ಆಗುತ್ತದೆ. ನಾನು ಬೆಂಗಳೂರಿನಲ್ಲಿರುವ ನಮ್ಮ ಸ್ನೇಹಿತರಿಗೆ phone ಮಾಡಿ ನಿಮ್ಮಲ್ಲಿ ಎಷ್ಟು ಇದೆ ಎಂದು

ಕೇಳಿದೆ. ಇಲ್ಲಿ ಲೋಕಲ್‌ನಲ್ಲಿ ಅದಕ್ಕೆ 87.00 ರೂಪಾಯಿ ಇದೆ ಎಂದು ಹೇಳಿದರು. ಈ ಸಬ್ಸಿಡಿಯನ್ನು ಫ್ಯಾಕ್ಟರಿಯವರು ತಿಂದುಕೊಂಡು ಹೋಗುತ್ತಿದ್ದಾರೆ. It is a lapse on the part of the government. The Commission is going to the commission agent, not to the farmer. ರೈತರಿಗೆ 87 ರಿಂದ 100 ರೂಪಾಯಿಗೆ ಸಿಗುವಂತಹ Copper Sulphate ಗೆ ಸುಮ್ಮನೆ ಸರ್ಕಾರವು 131.00 ರೂಪಾಯಿಗಳನ್ನು ಮಾಡಿ ಅವನನ್ನು ಮಂಗನನ್ನಾಗಿ ಮಾಡುವುದಕ್ಕೆ ಅಂತ ಏತಕ್ಕಾಗಿ ಸಾರ್ ನಾವು ಇಲ್ಲಿ ಇರಬೇಕು? ರೈತನ ಉಪಕರಣಗಳು ನೀವು ಥಾಯ್‌ಲ್ಯಾಂಡ್‌ಗೆ ಹೋಗಿ, ಚೈನಾಕ್ಕೆ ಹೋಗಿ 2700 ರೂಪಾಯಿಗಳಿಗೆ ಕೆಲವು ವೀಡಿಂಗ್ ಮೆಷಿನ್‌ಗಳು ಸಿಗುತ್ತದೆ. It is available here also. ಸಬ್ಸಿಡಿ ವ್ಯವಹಾರದಲ್ಲಿ ಅದೆಲ್ಲವೂ ವ್ಯತ್ಯಾಸವಾಗುತ್ತದೆ. ಸಬ್ಸಿಡಿ ಸಿಗುತ್ತದೆ ಎಂದು ಹೇಳಿ ರೇಟ್ ಅನ್ನು ಸುಮ್ಮನೆ ರೈಸ್ ಮಾಡಿಕೊಂಡು ಬಿಲ್ ರೆಡಿ ಮಾಡಿಕೊಳ್ಳುವುದಕ್ಕೆ, ಬಿಲ್ ಅನ್ನು ಕೊಡುವುದಕ್ಕೆ ಒಂದಷ್ಟು ಜನರು ಇದ್ದಾರೆ. ಅವರ ಹತ್ತಿರ ಫ್ಯಾಕ್ಟರಿಯೂ ಸಹ ಇಲ್ಲ, ಏನೂ ಇಲ್ಲ. ಆ ಬಿಲ್ ಅನ್ನು ಕೊಡುವುದಕ್ಕೆ ಒಂದಷ್ಟು ಜನರು ತಯಾರಾಗಿದ್ದಾರೆ. They are not having any implements. They are printing. ಇಲ್ಲಿ ನಾನು ಹೇಳುವುದೇನೆಂದರೆ, ನೀವು ಮುಂದಿನ ಎಲ್ಲಾ ದಿನಗಳಲ್ಲಿ ರೈತರಿಗೆ ನೇರವಾಗಿ ತಲುಪುವಂತಹ ವ್ಯವಸ್ಥೆಯನ್ನು ನಿರ್ಮಾಣ ಮಾಡಬೇಕು. ನೀವು ಸಬ್ಸಿಡಿಯನ್ನು ಕೊಟ್ಟು ಆ commission agents ಗೆ ಹೋಗುವುದಾದರೆ ಇದರಿಂದ 5 ಪೈಸೆ ಉಪಯೋಗವಿಲ್ಲ. ನಾನು ಈ ಮಾತನ್ನು ಏತಕ್ಕಾಗಿ ಹೇಳುತ್ತಿದ್ದೇನೆಂದರೆ, ನಮ್ಮಲ್ಲಿ ನಾಲ್ಕು ಕೃಷಿ ಕೇಂದ್ರಗಳು open ಆಗಿವೆ. ಅಲ್ಲಿ ಬಿಲ್ಡಿಂಗ್ ರೆಡಿಯಾಗಿದೆ. ಇದು ಯಾವಾಗ inaugurate ಆಗುತ್ತದೆ ಎಂದು ಕೇಳುತ್ತಿರುತ್ತಾರೆ. ಇದರ ಬಗ್ಗೆ ನಾನು ತಲೆ ಕೆಡಿಸಿಕೊಳ್ಳುವುದಕ್ಕೆ ಹೋಗುವುದಿಲ್ಲ. ಅಲ್ಲಿ problem ಏನೆಂದರೆ, ಅದನ್ನು ಯಾರು ಕಟ್ಟಿದ್ದಾರೆಂದು ನನಗೆ ಗೊತ್ತಿಲ್ಲ. ಯಾರು ಕಟ್ಟುತ್ತಿದ್ದಾರೆಂದು ಸಹ ಗೊತ್ತಿಲ್ಲ. ಯಾರೋ ಒಬ್ಬ ಬೆಂಗಳೂರಿನವನಂತೆ ಅವನು ಇಡೀ ರಾಜ್ಯದ್ದು ಹಿಡಿದವನಂತೆ ಎಂದು ಹೇಳಿದರು. ಅಲ್ಲಿ ಒಬ್ಬ ಯಾವ ಒಬ್ಬ ಕೂಲಿ ಕಾರ್ಮಿಕ ಮೂರು-ಮೂರು ಕೋಟ್ ಅನ್ನು ಹಾಕಿಕೊಂಡು ಸುಮ್ಮನೆ ನಿಂತುಕೊಂಡಿರುತ್ತಾನೆ. ಅಲ್ಲಿ ಯಾರು ಕೆಲಸವನ್ನು ಮಾಡುತ್ತಾರೋ, ಏನೋ ಎಂದು ಒಂದೂ ನಮಗೆ ಗೊತ್ತಿಲ್ಲ. ಕೇಳುವುದಕ್ಕೆ ಹೋದರೆ ನಮಗೆ ಗೊತ್ತಿಲ್ಲವೆಂದು ಹೇಳುತ್ತಾರೆ. ಇದರ ಬಗ್ಗೆ ಯಾರು ಟೆಂಡರ್ ಹಿಡಿದಿದ್ದಾರೋ ಗೊತ್ತಿಲ್ಲ. Where we have to enquire ? ಇದನ್ನು ಜಿಲ್ಲೆಗೆ ವಹಿಸಿ, ಜಿಲ್ಲಾ ಟೆಂಡರ್‌ಗೆ

ವಹಿಸಿದರೆ ನಾವು ಪ್ರಶ್ನೆಗಳನ್ನು ಕೇಳಬಹುದು. ಇದರ ಬಗ್ಗೆ ಯಾರಿಗೆ ಕೊಟ್ಟಿದ್ದಾರೆ, ಯಾರು ಟೆಂಡರ್ ಹಾಕಿದ್ದಾರೆಂದು ಗೊತ್ತಾಗುತ್ತದೆ. ಸಿಂಗಲ್ ಟೆಂಡರ್ ಅನ್ನು ಏತಕ್ಕಾಗಿ ಮಾಡುವುದಕ್ಕೆ ಹೋಗಬೇಕು? ಸಿಂಗಲ್ ಟೆಂಡರ್ ಮಾಡುವುದಕ್ಕೆ ಹೋದರೆ ಏನಾಗುತ್ತದೆ.? ನಾನು ಹೇಳುವುದಾದರೆ ನಾವು ಜನರ ಪರವಾಗಿ ಯೋಜನೆಯನ್ನು ಮಾಡುತ್ತಿರುವವರು ಎಂದು ಹೇಳಿ ಹಣವನ್ನು ಅನಾವಶ್ಯಕವಾಗಿ waste ಮಾಡಬಾರದು ಎಂದು total tender ಅನ್ನು ಏತಕ್ಕಾಗಿ ಕೊಡಬೇಕು. ಅಂತಹ ಬಿಲ್ಡಿಂಗ್ ಅನ್ನು ತಾಲ್ಲೂಕು ಹಾಗೂ ಜಿಲ್ಲೆಗೆ ಮಾಡಿದರೆ ಅವರು ಕಟ್ಟಿಕೊಂಡು ಹೋಗುತ್ತಾರೆ. ಇವೆಲ್ಲವು ನನಗೆ ಅರ್ಥವೇ ಆಗುತ್ತಿಲ್ಲ. You see, we are spoilling the system, we are not amending the system, we are not correcting the system. We are creating a problem to the nation. We are creating a problem to the people at large. ಹಾಗಾದರೆ ಇದನ್ನು ಸರಿ ಮಾಡುವುದಕ್ಕಾಗುವುದಿಲ್ಲವೇ? ಏತಕ್ಕಾಗಿ ಸರಿಮಾಡುವುದಕ್ಕಾಗುವುದಿಲ್ಲ, ಏತಕ್ಕಾಗಿ ಹೀಗೆ ಆಗುತ್ತಿದೆ. ನನ್ನ ಸ್ನೇಹಿತರೆ Areca machine ತಯಾರು ಮಾಡುತ್ತಿದ್ದಾರೆ. ನಾವು ಇದನ್ನು ಕಡಿಮೆಗೆ ಕೊಡಬಹುದು ಎಂದು ಅವರು ನನಗೆ ಹೇಳುತ್ತಿದ್ದಾರೆ. ಏಕೆ ಕೊಡುವುದಕ್ಕಾಗುವುದಿಲ್ಲವೆಂದರೆ it is due to the policy of the Government. ಅವರಿಗೆ ಏನು problem ಇದೆ ಎಂದರೆ, ಸಬ್ಸಿಡಿಯನ್ನು ಅವರು ಸರ್ಕಾರದಿಂದಲೇ ತೆಗೆದುಕೊಳ್ಳಬೇಕು. ಅವನು ತೆಗೆದುಕೊಳ್ಳುವುದಕ್ಕೆ ಇಲ್ಲಿ ಬಂದು ದುಡ್ಡನ್ನು ಕಟ್ಟಿದರೆ ಮಾತ್ರ release ಆಗುವುದು. ಇದು ಎಂತಹ ದುರಂತವೆಂದರೆ, ಅವರಿಗೆ 25 ಲಕ್ಷ ರೂಪಾಯಿಗಳು ದುಡ್ಡು ಬರಬೇಕಾಗಿದೆ. ಇಲ್ಲಿ ಮೇಲಿರುವವರು ಅವರಿಗೆ ಹಣವನ್ನು ಬಿಡುಗಡೆ ಮಾಡುವುದಿಲ್ಲ. ಇವರಿಗೆ ಹಣವನ್ನು ಕೊಟ್ಟರೆ ಮಾತ್ರ ಅವರು ಬಿಡುಗಡೆ ಮಾಡುತ್ತಾರೆ. We are spoilling the system. We are not here to spoil the system. We are here to the rectify the system, to change the system. ಆದ್ದರಿಂದ ಇಂತಹ ವಿಚಾರಗಳಲ್ಲಿ ನಾನು ಆಪಾದನೆಯನ್ನು ಸಹ ಮಾಡುವುದಿಲ್ಲ. But you have to the change the corrective measure. ಇದನ್ನು ತೆಗೆದುಕೊಳ್ಳದೆ ಹೋದರೆ ಖಂಡಿತವಾಗಿ ಜನರು ನಮ್ಮನ್ನು ಉಳಿಸುವುದಿಲ್ಲ. ಜನರಿಗೆ ನಮ್ಮ ಮೇಲೆ ಸಾರ್ವಜನಿಕವಾಗಿ ನಾವು ಎಲ್ಲೂ ಬಸ್‌ಸ್ಟಾಂಡ್‌ನಲ್ಲಿ ಎಂಎಲ್‌ಎ ಎಂದು ಹೇಳಿಕೊಳ್ಳುವುದಿಲ್ಲ. ಜನರಿಗೆ ನಮ್ಮ ಬಗ್ಗೆ ಗೌರವವೇ ಹೋಗಿಬಿಟ್ಟಿದೆ. ಮಾಧ್ಯಮದವರ ಹಾಗೂ ನಮ್ಮ ಸ್ಥಿತಿಯೂ ಒಂದೇ

ಆಗಿದೆ. ಅಂತಹ ಪರಿಸ್ಥಿತಿ ಆಗಿದೆ. ನಾನು KSRTC ಬಸ್ಸಿನಲ್ಲಿ ಪ್ರತಿನಿತ್ಯ ರೆಗ್ಯುಲರ್ ಆಗಿ ಓಡಾಡುತ್ತೇನೆ. ಒಂದಿಬ್ಬರು ವಯಸ್ಸಾದವರು ಹಿಗ್ಗಾಮುಗ್ಗ ಬೈದು ಬಿಟ್ಟರು. ನಾನು ಅವರು ಹೇಳಿರುವ ಮಾತನ್ನು ಸದನದಲ್ಲಿ ಹೇಳುವಹಾಗಿಲ್ಲ. ನಾನು ಶಾಸಕನೆಂದು ಅವರಿಗೆ ಗೊತ್ತಿಲ್ಲ. ದೇವರ ದಯೆಯಿಂದ ಅದೃಷ್ಟ ನಾನು ಸುಮ್ಮನಾದೆ, ಎಲ್ಲಾದರೂ ನಾನು ಮೊದಲೇ identify card ಅನ್ನು ಕೊಟ್ಟಿದ್ದರೆ ಅವರು ಹೇಳಿರುವ ಮಾತೆಲ್ಲವೂ ನನಗೆ apply ಆಗಿಬಿಡುತ್ತಿತ್ತು. ನಾನು ಏತಕ್ಕಾಗಿ ಹೇಳುತ್ತಿದ್ದೇನೆಂದರೆ, We have to change the system, ಇದನ್ನು change ಮಾಡುವುದಕ್ಕಾಗುವುದಿಲ್ಲವೆಂದರೆ ನಾವು ಏತಕ್ಕಾಗಿ ಇಲ್ಲಿಗೆ ಬರಬೇಕು? We should not come here. ನಮಗೆ ಜನರು change ಮಾಡಬೇಕೆಂದು ಅವಕಾಶವನ್ನು ಕೊಟ್ಟಿದ್ದಾರೆ. ಇದನ್ನು ಏತಕ್ಕಾಗಿ change ಮಾಡುವುದಕ್ಕಾಗುವುದಿಲ್ಲ? ನಾವು ಇದನ್ನು change ಮಾಡುವುದಕ್ಕಾಗದಿದ್ದರೆ we should not be here. We should get out of the House. ಆದ್ದರಿಂದ corrective measure ಅನ್ನು ತಾವು ಮಾಡಿಕೊಳ್ಳಬೇಕೆಂಬ ಮಾತನ್ನು ನಾನು ಹೇಳುತ್ತೇನೆ. ಗ್ರಾಮೀಣ ಪ್ರದೇಶದ ಏನು problems ಇವೆ ಅದನ್ನು ಕೂಡ, ನಾನು ಸರ್ಕಾರಕ್ಕೆ ಹೇಳುವುದಿಷ್ಟೇ, ಗ್ರಾಮೀಣ ಪ್ರದೇಶದ ವಿಧಾನಸಭಾ ಸದಸ್ಯರು ಏನು ಇದ್ದಾರೆ, ಅವರೆಲ್ಲರಿಗೂ ಕೂಡ immediately ಬರದ ಅನುದಾನದಡಿಯಲ್ಲಿ ಕನಿಷ್ಠ 2–2 ಕೋಟಿ ರೂಪಾಯಿಗಳನ್ನು ನೀವು taskforce ಗೆ, exclusively for the drinking water ಎಂದು ಮಾಡಬೇಕೆನ್ನುವಂತಹ ಮಾತನ್ನು ಹೇಳುತ್ತೇನೆ. ನನಗೆ ಅನೇಕ ವಿಚಾರಗಳ ಬಗ್ಗೆ ಮಾತನಾಡಬೇಕೆಂದು ಇದೆ. ಆದರೆ ಈ ಸದನದ ಎಲ್ಲಾ ಸದಸ್ಯರು ತಾವು ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದೀರಿ. ನಾನು ಇಷ್ಟು ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಕೃತಜ್ಞತೆಯನ್ನು ಹೇಳುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು : ಸದನವು ಮಧ್ಯಾಹ್ನ 3–00 ಗಂಟೆಗೆ ಮತ್ತೆ ಸೇರಲಾಗುವುದು.

(ಸದನವು ಭೋಜನದ ವಿರಾಮಕ್ಕೆ ಮಧ್ಯಾಹ್ನ 2 ಗಂಟೆ 30 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ಮಧ್ಯಾಹ್ನ 3–00 ಗಂಟೆಗೆ ಸಮಾವೇಶಗೊಳ್ಳುತ್ತದೆ).

---

* ಮಾನ್ಯ ಸದಸ್ಯರಿಂದ ಭಾಷಣವು ಪರಿಷ್ಕರಿಸಲ್ಪಟ್ಟಿದೆ.

(ಸದನವು ಪುನಃ ಮಧ್ಯಾಹ್ನ 3 ಗಂಟೆ 38 ನಿಮಿಷಕ್ಕೆ ಸಮಾವೇಶಗೊಂಡಿತ್ತು ಅಧ್ಯಕ್ಷರಾದ ಶ್ರೀ ಕೆ.ಜಿ. ಬೋಪಯ್ಯ ಅವರು ಪೀಠದಲ್ಲಿ ಉಪಸ್ಥಿತರಿದ್ದರು)

ಶ್ರೀ ತುಕಾರಾಮ್.ಈ (ಸಂಡೂರು): ಸನ್ಮಾನ್ಯ ಸಭಾಧ್ಯಕ್ಷರೆ, ನನಗೆ ಬೇಡಿಕೆಗಳ ಮೇಲೆ ಚರ್ಚೆಗೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳನ್ನು ಹೇಳುತ್ತೇನೆ. ಮಾನ್ಯ ಅಧ್ಯಕ್ಷರೆ, ಈ ಬೇಡಿಕೆಗಳ ಮೇಲೆ ಅನೇಕ ನಮ್ಮ ನಾಯಕರು ಮತ್ತು ಅನೇಕ ನಮ್ಮ ಶಾಸಕ ಮಿತ್ರರು ಇವತ್ತು ಬೆಳಕನ್ನು ಚೆಲ್ಲಿದ್ದಾರೆ. ಈ ನಿಟ್ಟಿನಲ್ಲಿ ನಾನು ನನ್ನ ಕ್ಷೇತ್ರದ ಬಗ್ಗೆ ಬೆಳಕನ್ನು ಚೆಲ್ಲುವುದಕ್ಕೆ ಇಷ್ಟಪಡುತ್ತೇನೆ. ನಂಜುಂಡಪ್ಪ ವರದಿ ಪ್ರಕಾರ ನನ್ನ ಕ್ಷೇತ್ರ ಬಹಳ ಹಿಂದುಳಿದ ಕ್ಷೇತ್ರವಾಗಿದೆ. ಈ ನಿಟ್ಟಿನಲ್ಲಿ ಇವತ್ತಿನ ದಿವಸ ಅನೇಕ ತೊಂದರೆಗಳನ್ನು ಅನುಭವಿಸುತ್ತಿದ್ದೇವೆ. ಬಹಳ ಮುಖ್ಯವಾಗಿ ನಮ್ಮಲ್ಲಿ ರಸ್ತೆಗಳು ಇರಬಹುದು, ವೈದ್ಯರ ಕೊರತೆ ಇರಬಹುದು, ಶಿಕ್ಷಕರ ಕೊರತೆ ಇರಬಹುದು, ಗ್ರಾಮೀಣಾಭಿವೃದ್ಧಿ ಇಲಾಖೆಯಲ್ಲಿ ಅನೇಕ ಸಿಬ್ಬಂದಿ ಕೊರತೆಯನ್ನು ನಾವು ಅನುಭವಿಸುತ್ತಿದ್ದೇವೆ. ಮುಖ್ಯವಾಗಿ ಮಾನ್ಯ ಅಧ್ಯಕ್ಷರೆ, ಯಾವುದೇ ಒಂದು ಆಡಳಿತ ಆರೋಗ್ಯಕರವಾಗಿ ಇರಬೇಕು, ಫಲಪ್ರದವಾಗಿ ಇರಬೇಕೆಂದು ಹೇಳಿದರೆ, ಮೊದಲನೆಯದಾಗಿ, ಸುಗಮ ಆಡಳಿತಕ್ಕೆ ಬೇಕಾಗಿರುವಂಥ ಮೂಲಭೂತ ಸೌಕರ್ಯ ಒದಗಿಸಬೇಕಾಗಿದೆ. ಅದನ್ನು ಸರ್ಕಾರ ಬಹಳ ಪ್ರಾಧಾನ್ಯತೆಗೆ ತೆಗೆದುಕೊಳ್ಳಬೇಕಾಗಿದೆ. ಇವತ್ತಿನ ದಿನ ನಾವು ಎಲ್ಲೋ ಒಂದು ಕಡೆ ಎಡವುತ್ತಿದ್ದೇವೆಂದು ಕಾಣಿಸುತ್ತಿದೆ. ನಿಜವಾಗಿಯೂ ನಾವು ಒಳ್ಳೆಯ ರಾಷ್ಟ್ರ ಕಟ್ಟಬೇಕು, ಒಳ್ಳೆಯ ನಾಡನ್ನು ಕಟ್ಟಬೇಕು, ಸಮಾಜಕ್ಕೆ ಏನಾದರೊಂದು ಬಲವಾದ ಶಕ್ತಿ ಕೊಡಬೇಕೆಂದರೆ ಅದು ಶಿಕ್ಷಣದಿಂದ ಮಾತ್ರ. ಇವತ್ತು ನಾವು ಗಮನಿಸುತ್ತಿರಬಹುದು, ಸುಮಾರು ನನ್ನ ಕ್ಷೇತ್ರದಲ್ಲಿ ಕೇವಲ ಇವತ್ತಿಗೂ 40% ಮಾತ್ರ ನಾನು ಇರುವುದಕ್ಕಿಂತ ಹೆಚ್ಚಿಗೆ ಹೇಳುತ್ತಿದ್ದೇನೆ, 35 ರಿಂದ 40% ಮಾತ್ರ ಶಿಕ್ಷಣವನ್ನು ಪಡೆದಿದ್ದಾರೆ. ಸ್ವಾತಂತ್ರ್ಯ ಬಂದು 64 ವರ್ಷಗಳಾಗಿದೆ. ಸುಮಾರು 60% ಜನ ಶಿಕ್ಷಣದಿಂದ ವಂಚಿತರಾಗಿದ್ದಾರೆ. ಇದಕ್ಕೆ ಮೂಲ ಕಾರಣವೇನೆಂದರೆ ನಮ್ಮ ಸರ್ಕಾರದ ಕಳಕಳಿ ಏನಿದೆ, ಅದರಲ್ಲಿ ನಾವು ಕುಂಠಿತವಾಗುತ್ತಿದ್ದೇವೆ. ನಿಜವಾಗಿಯೂ ಹೇಳಬೇಕೆಂದರೆ ಮೊನ್ನೆ ಒಂದು ಸಮಿತಿ ಸಭೆಯಲ್ಲಿ ಹೇಳಿದ್ದೇನೆ. ಉದಾಹರಣೆಗೆ ಹೇಳಬೇಕೆಂದರೆ ನಾನು M.Com ಮಾಡಿಕೊಂಡು PG Diploma in Business Administration & Finance ಅನ್ನು 1992ರಲ್ಲಿ ಮುಗಿಸಿದ್ದೇನೆ. ಯಶವಂತನಗರ ವಿಲೇಜ್‌ನಲ್ಲಿ 20 ವರ್ಷಗಳಾದರೂ ಒಬ್ಬ ಮಾಸ್ಟರ್ ಡಿಗ್ರಿ ಮಾಡಿರುವಂಥ ಒಬ್ಬ ವ್ಯಕ್ತಿ ಇಲ್ಲ. ನಾನು ವಾಲ್ಮೀಕಿ ಜನಾಂಗದಲ್ಲಿ ಇದ್ದೇನೆ. ಒಬ್ಬರೂ ಕೂಡಾ ಇಲ್ಲ. ಕಾರಣವೇನೆಂದರೆ ನಮ್ಮ ಈ ರೀತಿಯ ವ್ಯವಸ್ಥೆ ತನ್ನ ಮೌಲ್ಯಗಳನ್ನು ಕಳೆದುಕೊಳ್ಳುತ್ತಿದೆ. ಈ ರೀತಿಯಾದರೆ ನಾವು ಯಾವಾಗ ನಾಡನ್ನು ಕಟ್ಟುವುದಕ್ಕೆ

ಸಾಧ್ಯವಾಗುತ್ತದೆ? ಇವತ್ತಿನ ದಿನ ಲಕ್ಷ ಕೋಟಿಗಳ ಬಜೆಟ್ ಮಂಡನೆ ಮಾಡಿದ್ದಾರೆ. ಶಿಕ್ಷಣ ಇಲಾಖೆಯ ಒಂದು ಉದಾಹರಣೆಯನ್ನು ಕೊಟ್ಟಿದ್ದೇನೆ. ಏಕೆಂದರೆ ನನಗೆ ಸಿಕ್ಕಿದಂಥ ಶಿಕ್ಷಣ ಇವತ್ತು ಅದಕ್ಕಿಂತ ಹೆಚ್ಚಿನ ಮಟ್ಟದಲ್ಲಿ ಸಿಗಬೇಕಾಗಿತ್ತು. ನಿಜವಾಗಿಯೂ ಒಬ್ಬ ಬಡ ರೈತ ತನ್ನ ಮಗನಿಗೆ ಶಿಕ್ಷಣ ಕೊಡುವುದಕ್ಕೆ ಆಗುತ್ತಿಲ್ಲ. ಇವತ್ತಿನ ದಿನ ಇಂಥದೊಂದು ಸ್ಥಿತಿಗೆ ಬರುತ್ತಿದ್ದಾರೆ. ನಿಜವಾಗಿಯೂ ಹೇಳುತ್ತಿದ್ದೇನೆ, ಎಸ್.ಎಸ್.ಎಲ್.ಸಿ. ಮಾಡಿದವನಿಗೆ ಸಂಪೂರ್ಣ A,B,C,D ಬರೆಯುವುದಕ್ಕೆ ಆಗುತ್ತಿಲ್ಲ. ಇಂಥ ಒಂದು quality of education ಇವತ್ತು ಕಡಿಮೆಯಾಗುತ್ತಿದೆ. ಇದನ್ನು ಸರ್ಕಾರ ಗಮನಿಸಬೇಕು, ಅನೇಕ ನಿಯಮಾವಳಿಗಳ ಪ್ರಕಾರ ಸರ್ಕಾರವನ್ನು ಇವತ್ತು ಕೇಳಿಕೊಂಡಿದ್ದೇವೆ. ಬಹು ಮುಖ್ಯವಾಗಿ ಶಿಕ್ಷಕರ ಕೊರತೆಯನ್ನು ನೀಗಿಸಬೇಕು. ಈಗಾಗಲೇ ಸರ್ಕಾರ ಭರವಸೆ ಕೊಟ್ಟಿದ್ದಾರೆ. ಅದನ್ನು ಪೂರ್ತಿ ಮಾಡಿಕೊಡಬೇಕು. ಕೂಡಲೇ ಒದಗಿಸಿದರೆ, ವಿದ್ಯಾರ್ಥಿಗಳು ಒಂದು ಆದರ್ಶ ಸತ್ಪ್ರಜೆಯಾಗಿ ಒಂದು asset ಆಗುತ್ತಾರೆ. ಈ ನಿಟ್ಟಿನಲ್ಲಿ ಕೆಲಸ ಮಾಡಬೇಕು. ಜೊತೆಗೆ 1 ಲಕ್ಷ ಕೋಟಿಗಳ ಬಜೆಟ್ ಮಂಡನೆ ಮಾಡಿದ್ದಾರೆ. ಸುಮಾರು ನನ್ನ ಕ್ಷೇತ್ರದಲ್ಲಿ RDPR ವ್ಯಾಪ್ತಿಯ 21 ಗ್ರಾಮಪಂಚಾಯತಿಗಳಿವೆ, ಕೇವಲ 7 ಜನ ಪಿ.ಡಿ.ಓ.ಗಳು ಮಾತ್ರ ಇದ್ದಾರೆ, 14 ಜನ ಪಿ.ಡಿ.ಓ. ಹುದ್ದೆಗಳು shortage ಇದ್ದಾರೆ, ಇಂಜಿನಿಯರ್‌ಗಳು 3 ಜನ shortage ಇದ್ದಾರೆ. ಈ ರೀತಿಯಾದರೆ implementation ಮಾಡಲು ಹೇಗೆ ಆಗುತ್ತದೆ? ನಮ್ಮಲ್ಲಿ ಇರಬಹುದು, ಆದರೆ ಅದನ್ನು ಕಾರ್ಯರೂಪಕ್ಕೆ ತರುವ ವ್ಯವಸ್ಥೆ ಸರಿಯಿಲ್ಲ ಎಂದ ಮೇಲೆ ತೆಗೆದುಕೊಂಡು ಏನು ಮಾಡಬೇಕು? ಇದರ ಬಗ್ಗೆ ಸೂಕ್ಷ್ಮವಾಗಿ ಗಮನ ಹರಿಸಬೇಕು, ಒಬ್ಬ ತಹಶೀಲ್ದಾರ್ ಕೂಡಾ ಇಲ್ಲ. ಸರ್ಕಾರದಲ್ಲಿ ಕೇಳಿಕೊಳ್ಳುವುದು ರಾಜ್ಯದಲ್ಲಿ ಎಲ್ಲಿ ತಹಶೀಲ್ದಾರರುಗಳಿಲ್ಲ, ಎಲ್ಲಿ ಶಿರಸ್ತೇದಾರರುಗಳಿಲ್ಲ, ಎಲ್ಲಿ E.O. ಗಳಿಲ್ಲ. ಇಂಥ ಸಿಬ್ಬಂದಿಗಳ ಕೊರತೆಯನ್ನು ಹೋಗಲಾಡಿಸಲು ಸರ್ಕಾರ ಕೂಡಲೇ appoint ಮಾಡಬೇಕು. ಈ ನಿಟ್ಟಿನಲ್ಲಿ ಸುಮಾರು 100 ಬೆಡ್ ಆಸ್ಪತ್ರೆ, 2011 ರಲ್ಲಿ ಉದ್ಘಾಟನೆ ಆಗಿದೆ. ಇವತ್ತಿನವರೆಗೂ 100 ಬೆಡ್ ಆಸ್ಪತ್ರೆ ಓಪನ್ ಆಗಿ, ಒಬ್ಬೇ ಒಬ್ಬ ಡಾಕ್ಟರನ್ನು ಕೊಟ್ಟಿದ್ದಾರೆ. X-ray equipments, total blood equipments ಇತ್ಯಾದಿ ಎಲ್ಲಾ equipment ಗಳು ಬಂದು ಆಸ್ಪತ್ರೆಯಲ್ಲಿ ಬಿದ್ದಿದೆ, ಆದರೆ operate ಮಾಡುವವರು ಇಲ್ಲದೇ 100– Bed Hospital infrastructure total collapse ಆಗುತ್ತಿದೆ. ನಾವು ಎಲ್ಲಿಗೆ ಹೋಗುತ್ತಿದ್ದೇವೆ? ಇವತ್ತು ಇಂಥ ಬರಗಾಲ ಬಂದಿದೆ, ಇದನ್ನು ಸೂಕ್ಷ್ಮವಾಗಿ ಗಮನಿಸಬೇಕು. ಇವತ್ತು 100 ರೂ. ಸಿಗುವುದು ಕೂಡಾ ಕಷ್ಟವಾಗುತ್ತಿದೆ. ಸರಿಯಾದ ವೈದ್ಯಕೀಯ ಸೌಲಭ್ಯ ಕೊಟ್ಟಿಲ್ಲವೆಂದರೆ ಹಳ್ಳಿಗಳಿಗೆ ಇವತ್ತಿನ

ದಿನ ಸರಿಯಾದ ಆರೋಗ್ಯ ಕೂಡಾ ಸಿಗುವುದಿಲ್ಲ. Private ಆಸ್ಪತ್ರೆಗಳಿಗೆ ರೂ.300, ರೂ.400 ಕೊಡುವುದಕ್ಕೆ ಆಗುತ್ತಿಲ್ಲ. ಯಾರ ಮೇಲೆ ಇದು ಪರಿಣಾಮ ಬೀರುತ್ತಿದೆ. ನಮ್ಮ ರಾಷ್ಟ್ರ ಬಡವರ ರಾಷ್ಟ್ರ, ನಾವೆಲ್ಲರೂ ಅಧಿಕಾರಿಗಳು, ಪ್ರಜಾಪ್ರಭುತ್ವ ಅಸ್ತಿತ್ವದ ಅಂಗಗಳಾದ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗ ಎಲ್ಲರೂ ಗಮನಿಸಬೇಕಾಗಿದೆ. ಇವತ್ತಿನ ದಿನ ನಾವು ಬಡ ಜನರಿಗೆ, ರೈತನಿಗೆ ಸರಿಯಾದ ಒಂದು ಮೂಲಭೂತ ಸೌಕರ್ಯಗಳನ್ನು ಕೊಟಿಲ್ಲವೆಂದರೆ ನಾವು ಆಡಳಿತ ಮಾಡುವುದರಲ್ಲಿ ಅರ್ಥವೇನಿದೆ? ಇದನ್ನು ಬಹಳ ಸೂಕ್ಷ್ಮವಾಗಿ ಗಮನಿಸಬೇಕು. ಎರಡನೆಯದಾಗಿ, ಅನೇಕ ಸಾರಿ ಕೆಲವೊಂದು ಬೇಡಿಕೆಗಳ ಬಗ್ಗೆ ಚರ್ಚೆ ಮಾಡಬೇಕಾದರೆ, ನನಗೆ ಬಹಳ ಬೇಜಾರಾಗುತ್ತಿದೆ, ಕುಡಿತಿನಿ ಎನ್ನುವ ಒಂದು ಗ್ರಾಮ ಪಂಚಾಯತಿ, ರಾಜ್ಯದಲ್ಲಿ ಕುಡಿಯುವ ನೀರಿಲ್ಲದೆ 2002ರಲ್ಲಿ ಸುಮಾರು 3 ಕೋಟಿ ರೂ.ಗಳ ವೆಚ್ಚದಲ್ಲಿ project ಪ್ರಾರಂಭ ಮಾಡಿದ್ದು, ಇವತ್ತು 2012, ಅಂದರೆ 10 ವರ್ಷಗಳಾಗಿದ್ದರೂ ಇವತ್ತಿಗೂ ಕೂಡಾ ನೀರು ಕೊಡುವುದಕ್ಕೆ ಸಾಧ್ಯವಾಗಿಲ್ಲ. ಸುಮಾರು 6 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಕಳಪೆ ಕಾಮಗಾರಿಯಾಗಿದೆ. ಇನ್ನೂ ಒಂದು ಪೈಪ್‌ಲೈನ್ ಬೇರೆ ತರಬೇಕು ಎಂದು ಹೇಳುತ್ತಿದ್ದಾರೆ. ಇನ್ನೊಂದು 6 ಕೋಟಿ ರೂಪಾಯಿಗಳು ಬೇಕಾಗಬಹುದು, ಈ ರೀತಿಯ ದಾರಿ ತಪ್ಪಿಸುವ ಕೆಲಸ ಆಗುತ್ತಿದೆ ಎಂದರೆ ಇನ್ನು 100 ವರ್ಷವಾದರೂ ಖಂಡಿತವಾಗಿಯೂ ಈ ದೇಶಕ್ಕೆ ನಾವು ಕಂಡಂಥ ಕನಸನ್ನು ಸಾಕಾರ ಮಾಡುವುದಕ್ಕೆ ಸಾಧ್ಯವಿಲ್ಲವೆಂದು ಹೇಳಬೇಕಾಗುತ್ತದೆ. ಒಂದು ಕುಡಿಯುವ ನೀರಿನ ಯೋಜನೆಗೆ 10 ವರ್ಷ ಬೇಕೇ ನಮಗೆ? ಇದನ್ನು ಸೂಕ್ಷ್ಮವಾಗಿ ಅರ್ಥ ಮಾಡಿಕೊಳ್ಳಬೇಕು. ಮೊನ್ನೆ ಕೂಡಾ ಒಂದು ಕೆರೆ ಒಡೆದಿರುವುದನ್ನು ತೋರಿಸಿದ್ದೇವೆ. (ಈ ಹಂತದಲ್ಲಿ ಕೆರೆ ಹೊಡೆದಿರುವ ಛಾಯಾಚಿತ್ರವನ್ನು ಸದನದಲ್ಲಿ ತೋರಿಸಿದರು) ಇದು ಅಂಕುಬ್ನಾಳ ಕೆರೆ, 2010ರಲ್ಲಿ ಈ ಕೆರೆ ಒಡೆದಿದೆ, ರಾಜ್ಯದಲ್ಲಿ ಏನೇನಾಗುತ್ತಿದೆ ಎನ್ನುವುದಕ್ಕೆ ಉದಾಹರಣೆ ಅಷ್ಟೇ ಮಾನ್ಯ ಅಧ್ಯಕ್ಷರೆ, ಅಂಕುಬ್ನಾಳ ಕೆರೆ ಇದರ ಹಿಂದೆ ಸುಮಾರು 400 ಎಕರೆ ಪ್ರದೇಶಗಳಿಗೆ ನೀರಾವರಿ ನಡೆಯುತ್ತಿದೆ, ಜೊತೆಗೆ ಯಶವಂತನಗರ, ಸೋಮಲಾಪುರ, ಅಂಕುಬ್ನಾಳು ಮತ್ತು ಮಲ್ಲಾಪುರ ಗ್ರಾಮಗಳಿಗೆ ಸುಮಾರು 10 ಸಾವಿರ ಜನರಿಗೆ ಕುಡಿಯುವ ನೀರು ground water improve ಆಗಿ, ಕುಡಿಯುವ ನೀರಿಗೆ ಪಂಪುಸೆಟ್ಟುಗಳಿಗೆ ವ್ಯವಸ್ಥೆ ಆಗುತ್ತಿದೆ. ಸುಮಾರು 2 ವರ್ಷಗಳ ಕಾಲ ಕೇಳಿದರೂ ಇದರ ಬಗ್ಗೆ ಕಳಕಳಿ ಇಲ್ಲ, ಸುಮಾರು 4 ಕೋಟಿ ರೂಪಾಯಿಗಳು ಬೇಕಾಗಬಹುದು. ಇಂಥ ಒಂದು ವ್ಯವಸ್ಥೆ warfooting ನಲ್ಲಿ ಕೆಲಸ ಮಾಡಬೇಕಾಗಿರುವ ಕಡೆ ವಿಘ್ನ ಬಂದರೆ ನಾವು ಜನರಿಗೆ ಏನು ಉತ್ತರ ಹೇಳಬೇಕು?

ನಾವು ಎಲ್ಲಿಗೆ ಹೋಗುತ್ತಿದ್ದೇವೆ? ಇದನ್ನೆಲ್ಲಾ ಸೂಕ್ಷ್ಮವಾಗಿ ಗಮನಿಸಬೇಕು, ಮೊದಲನೆಯದಾಗಿ ಬೇಕಾಗಿರುವುದು ಮೂಲಭೂತವಾಗಿ ಕುಡಿಯುವ ನೀರಿನ ವ್ಯವಸ್ಥೆ, ಸರಿಯಾದ ಅಧಿಕಾರಿಗಳು ಕೆಲಸ ಮಾಡುವ ವ್ಯವಸ್ಥೆ, ಆ ಕೆಲಸವನ್ನು ಅನುಷ್ಠಾನ ಮಾಡುವ ವ್ಯವಸ್ಥೆ ಮಾಡಬೇಕಾಗಿದೆ. ಜೊತೆಗೆ ಇವತ್ತಿನ ದಿನ ಬರಗಾಲದ ಬಗ್ಗೆ ತಮ್ಮ ಗಮನಕ್ಕೆ ತಂದಿದ್ದೇವೆ. ತಾವು ಬೇಡಿಕೆಗಳ ಬಗ್ಗೆ ಮಾತನಾಡಿ ಎಂದು ಹೇಳಿದ್ದೀರಿ, ಬಹು ಮುಖ್ಯವಾಗಿ ನಮ್ಮಲ್ಲಿ ಕೂಡಾ ಇವತ್ತು ಬರಗಾಲವಿದೆ. ಶಾಶ್ವತವಾದ ಕುಡಿಯುವ ನೀರಿನ ವ್ಯವಸ್ಥೆ ಆಗಬೇಕು. ಗುಡ್ಡಗಾಡು ಪ್ರದೇಶದಲ್ಲಿ ಹೇಳಬೇಕೆಂದರೆ ಸುಮಾರು 12 ರಿಂದ 13 ಪಂಚಾಯಿತಿಗಳಲ್ಲಿ fluoride contents ಕುಡಿಯುವ ನೀರಿನಲ್ಲಿ ಮಿಕ್ಸ್ ಆಗಿರುವ ವ್ಯವಸ್ಥೆ ಇದೆ. ಇವತ್ತು ಸುಮಾರು ಆಸ್ಪತ್ರೆಗಳು ಇಲ್ಲ. ಜೊತೆಗೆ ಶಿಕ್ಷಣ ಇಲ್ಲ. ಕುಡಿಯುವ ನೀರಿಗೂ ಈ ರೀತಿಯ ವ್ಯವಸ್ಥೆ ಇದೆ ಎಂದರೆ ಇನ್ನೆಷ್ಟು ವರ್ಷ ಬೇಕಾಗುತ್ತದೆ ಜನಗಳಿಗೆ ಉತ್ತಮ ವ್ಯವಸ್ಥೆ ಕೊಡುವುದಕ್ಕೆ? ಸರ್ಕಾರದಲ್ಲಿ ಕೇಳಿಕೊಳ್ಳುವುದಿಷ್ಟೇ, ಆಗಿರುವ ತಪ್ಪು ಆಗಿರಬಹುದು, ಮುಂದೆ ಏನು ಮಾಡಬೇಕು ಎನ್ನುವ ಬಗ್ಗೆ ನಾವೆಲ್ಲರೂ ಪಕ್ಷಾತೀತವಾಗಿ ಕುಳಿತುಕೊಂಡು ದೃಢ ನಿರ್ಧಾರಕ್ಕೆ ಬಂದು ಇದನ್ನೆಲ್ಲಾ ಕಷ್ಟಗಳನ್ನು end ಮಾಡಲಿಕ್ಕೆ ಎಲ್ಲರೂ ಒಂದಾಗಿ ಹೋದರೆ ಒಳ್ಳೆಯದಾಗುತ್ತದೆ. ಈ ನಿಟ್ಟಿನಲ್ಲಿ ಸರ್ಕಾರ ಕೆಲಸ ಮಾಡಬೇಕು. ಅದಕ್ಕೆ ಏನು support ಬೇಕೋ, ಇವತ್ತು ನಮ್ಮ ನಾಯಕರೂ ಸಹ ಅನೇಕ ವಿಷಯಗಳ ಬಗ್ಗೆ ಬೆಳಕನ್ನು ಚೆಲ್ಲಿದ್ದಾರೆ. ಅಭಿವೃದ್ಧಿ ಮಾಡುವುದಕ್ಕೆ majority ನಿಮ್ಮ ಸರ್ಕಾರ ಇದೆ, ಖಂಡಿತವಾಗಿಯೂ ಒಳ್ಳೆಯದಕ್ಕೆ ನಾವು support ಕೊಡುತ್ತೇವೆ. ನೀವು ನಿರ್ಭಯವಾಗಿ ಮುಂದೆ ಹೋಗಿ, ನಿಮಗೆ ಏನು ಬೇಕೋ ಮಾಡುತ್ತೇವೆ ಎಂದು ಹೇಳಿದರೂ ಸಹ, ಸರ್ಕಾರ ಬಂದು ಇವತ್ತು 4 ವರ್ಷವಾಗುತ್ತಾ ಬಂದರೂ ಸರಿಯಾದ ಒಂದು ನಿಟ್ಟಿನಲ್ಲಿ ಆಗುತ್ತಿಲ್ಲ. ನಾನು ಕೇಳುವುದಿಷ್ಟೇ, ವ್ಯವಸ್ಥಿತವಾದ ರೀತಿಯಲ್ಲಿ ಏನು ಒಂದು ನಾವು vision ಕಾಣಬೇಕಾಗಿತ್ತೋ ಈ ನಿಟ್ಟಿನಲ್ಲಿ ಕೆಲಸ ಮಾಡಿದರೆ ಅನುಕೂಲವಾಗುತ್ತದೆ ಎಂದು ಹೇಳುತ್ತಿದ್ದೇನೆ. ಇವತ್ತಿನ ದಿನ ಬಹುಮುಖ್ಯವಾಗಿ ಮೀನುಗಾರರದ್ದು, ಬರಗಾಲ ಬಂದಿದೆ, ಇವತ್ತು ಏನಾಗಿದೆ ಎಂದರೆ ಮಳೆಗಾಲ ಇದ್ದರೂ ಎಲ್ಲಾ ಕೆರೆಗಳು ಬತ್ತಿ ಹೋಗಿವೆ. ಇದು ಬಹಳ ಮುಖ್ಯವಾದುದು. ಕಳೆದ ಬಾರಿ ಟೆಂಡರ್ ಕಾಮಗಾರಿ ಮುಗಿದು ಮೀನುಗಾರಿಕೆಗೆ ಅವಕಾಶ ಮಾಡಿಕೊಟ್ಟಿದ್ದರು. ಈಗ ಕೆರೆಗಳು ಬತ್ತಿ ಹೋಗಿರುವುದರಿಂದ ಮತ್ತೆ ಟೆಂಡರ್ ಮಾಡಲು ಯೋಚಿಸುತ್ತಿದ್ದಾರೆ. ಕಳೆದ ಬಾರಿ ಆಗಿರುವ ಟೆಂಡರನ್ನೇ ಮುಂದುವರೆಸಲು ಅವಕಾಶ ಮಾಡಿಕೊಡಬೇಕು. ನಾಳೆ ಕೂಡಾ ವಿರೋಧ ಪಕ್ಷದ ನಾಯಕರು ಮಾತನಾಡುತ್ತಾರೆ.

2007ರಲ್ಲಿ ನೀಡಲಾಗಿರುವ Order copy ಬೇಕಾದರೆ ಕೊಡುತ್ತೇನೆ. ಮೊನ್ನೆ ಕೂಡಾ ಇಲಾಖೆ ಕಡೆಯಿಂದ ಹೋಗಿ ಅವರ ಮೇಲೆ ದೌರ್ಜನ್ಯ ಮಾಡುವಂತಹ ರೀತಿ ನಡೆದಿದೆ. ಹಿಂದೆ ಏನು ಅವರು ನಷ್ಟ ಅನುಭವಿಸಿದ್ದಾರೆ, ಅವರಿಗೆ ನ್ಯಾಯ ಕೊಟ್ಟು ಮುಂದಿನ ವರ್ಷಕ್ಕೆ ಮುಂದುವರೆಸಲು ಅವಕಾಶ ಮಾಡಿಕೊಡಬೇಕೆಂದು ಸರ್ಕಾರಕ್ಕೆ ನಾನು ಮನವಿ ಮಾಡುತ್ತೇನೆ. ಇವತ್ತಿನ ದಿನ NREGS ಕಾರ್ಯಕ್ರಮದಡಿ ಏಪ್ರಿಲ್ ತಿಂಗಳಿನಿಂದ ವಿಠಲಾಪುರ ಕೆರೆಯಲ್ಲಿ ಹೂಳು ತೆಗೆಯುವ ಕೆಲಸ ನಡೆಯುತ್ತಿದೆ. ಅಲ್ಲಿ ಕೇವಲ 25 ಜನರ ಕೂಲಿಗೆ ಮಾತ್ರ ಕೆಲಸ ಇರುವುದು. ಆದರೆ ಸುಮಾರು 65 ಜನರು ನಮಗೆ ಕೆಲಸ ಕೊಡಿ ಎಂದು ಹೋಗುತ್ತಿದ್ದಾರೆ. ಇಂತಹ ದುರಂತ ಸ್ಥಿತಿ ನಮ್ಮ ಕ್ಷೇತ್ರದಲ್ಲಿದೆ. ನಮ್ಮಲ್ಲಿ ಯೋಜನೆಗೆ approval ಕೊಟ್ಟಿಲ್ಲವೆಂದು ಹೇಳುತ್ತಿದ್ದಾರೆ. ಏಪ್ರಿಲ್‌ನಿಂದ ಜುಲೈವರೆಗೆ ಒಂದು ಕೆಲಸವನ್ನು ಪ್ರಾರಂಭ ಮಾಡಿಲ್ಲ. ನಾನು ಕೇಳಿಕೊಳ್ಳುವುದಿಷ್ಟೆ, ಸರ್ಕಾರ ಕೂಡಲೇ ಈ ಬರಗಾಲದಲ್ಲಿ ಕೂಲಿಗಾಗಿ ಕಾಳು ಇಂತಹ ಯೋಜನೆಗಳ ಮೂಲಕ ವ್ಯವಸ್ಥೆ ಮಾಡಿಕೊಟ್ಟರೆ ಜನರಿಗೆ ಅನುಕೂಲವಾಗುತ್ತದೆ. ಜೊತೆಗೆ ನನ್ನ ಕ್ಷೇತ್ರದಲ್ಲಿ ರಸ್ತೆಗಳು ಹದಗೆಟ್ಟಿದೆ. ಈ ಕುರಿತು ಮಾನ್ಯ ಉದಾಸಿ ಸಾಹೇಬರಿಗೆ ಮನವಿ ಮಾಡಿದ್ದೇವೆ. ಅವರು ಸ್ಪಂದಿಸಿ ಮಾಡಿಕೊಡುವುದಾಗಿ ಹೇಳಿದ್ದಾರೆ. Financial year ಪ್ರಸಕ್ತ 2012–13ನೇ ಸಾಲಿನಲ್ಲಿ ಮಾಡಿಕೊಡಿ ಎಂದು ಮನವಿ ಮಾಡುತ್ತಾ, ಮೊದಲನೆಯದಾಗಿ ನಮ್ಮ ಸಮಾಜಕ್ಕೆ ಬೇಕಾಗಿರುವುದು ಶಿಕ್ಷಣ. Academic year ಪ್ರಾರಂಭವಾಗುತ್ತಿದ್ದಂತೆಯೇ ಶಿಕ್ಷಕರ ನೇಮಕಾತಿ ಮಾಡಬೇಕಿತ್ತು. ಸುಮಾರು 3 ವರ್ಷಗಳಿಂದ ಮಾಡಿಲ್ಲ. ಮಾನ್ಯ ಸಚಿವರು ಈಗ ಭರವಸೆ ಕೊಟ್ಟಿದ್ದಾರೆ. ಅವರಲ್ಲಿ ಕಳಕಳಿಯ ಮನವಿ ಮಾಡುತ್ತೇನೆ. ದಯಮಾಡಿ ಮಾಡಿಕೊಡಿ. ಏಕೆಂದರೆ ನಾವು ಕ್ಷೇತ್ರಕ್ಕೆ ಹೋಗುವ ಪರಿಸ್ಥಿತಿ ಇಲ್ಲ. ಜೊತೆಗೆ ಗ್ರಾಮೀಣಾಭಿವೃದ್ಧಿ ಮತ್ತು ಕಂದಾಯ ಇಲಾಖೆಗಳಲ್ಲಿ 50% ಸಿಬ್ಬಂದಿಗಳ ಕೊರತೆ ಇದೆ. ಹೀಗಾದರೆ implement ಹೇಗೆ ಮಾಡುವುದು? ಸರ್ಕಾರ ಇದನ್ನು ಮೊದಲ ಆದ್ಯತೆಯ ಮೇಲೆ ತೆಗೆದುಕೊಂಡು ಬರಗಾಲದ ತಾಲ್ಲೂಕುಗಳಲ್ಲಿ ತಹಶೀಲ್ದಾರರನ್ನು, ಶಿರಸ್ತೇದಾರರನ್ನು, ಪಿ.ಡಿ.ಓ.ಗಳನ್ನು ನೇಮಕ ಮಾಡಿ fulfilment ಮಾಡಿಕೊಡಬೇಕು. ಎಲ್ಲೆಲ್ಲಿ ಹಿಂದುಳಿದ ಪ್ರದೇಶಗಳಿವೆ, ಮತ್ತು ಎಲ್ಲೆಲ್ಲಿ ವೈದ್ಯಾಧಿಕಾರಿಗಳ ಕೊರತೆ ಇದೆ. ಮೊದಲ ಆದ್ಯತೆ ರೈತರಿಗೆ, ಬಡವರಿಗೆ ಒಳ್ಳೆಯ ಆರೋಗ್ಯ ಕೊಡಬೇಕೆಂದರೆ, ವೈದ್ಯಾಧಿಕಾರಿಗಳ ನೇಮಕಾತಿಯನ್ನು ಮೊದಲ ಆದ್ಯತೆಯಲ್ಲಿ ಮಾಡಿ ಹಳ್ಳಿಗಳಲ್ಲಿ ವೈದ್ಯಕೀಯ ಸೌಲಭ್ಯ ಕೊಡಬೇಕೆಂದು ಸರ್ಕಾರಕ್ಕೆ ಮನವಿ ಮಾಡುತ್ತೇನೆ. ನಾನು ಗಂಭೀರವಾದ ವಿಚಾರವನ್ನು ಹೇಳುತ್ತಿದ್ದೇನೆ. ಮಕ್ಕಳಲ್ಲಿ ಪೌಷ್ಟಿಕಾಂಶದ ಕೊರತೆ ಹೆಚ್ಚಾಗಿ ಕಂಡುಬರುತ್ತಿದ್ದು,

7–8 ನೇ ತರಗತಿಯಲ್ಲಿ ಓದುವ ಮಕ್ಕಳು 1 ಕಿ.ಮೀ.ಎದ್ದು ನಡೆಯದಂತಹ ಪರಿಸ್ಥಿತಿಯನ್ನು ಕಾಣುತ್ತಿದ್ದೇವೆ. ಹೀಗೆ ಮುಂದುವರೆದರೆ ನಾವು ನಮ್ಮ ಮುಂದಿನ ಪೀಳಿಗೆಯನ್ನು ದುರಂತಕ್ಕೆ ಈಡು ಮಾಡುತ್ತೇವೆ. ಮೊನ್ನೆ ದಿನವೂ ಕೂಡಾ ಮಂತ್ರಿಗಳಾದ ಅಪ್ಪಚ್ಚು ರಂಜನ್ ರವರನ್ನು ಕೇಳಿಕೊಂಡಿದ್ದೆ. ಅವರು ಒಳ್ಳೆಯ ಮಂತ್ರಿಗಳು. ಮುಂದಿನ ಯುವ ಪೀಳಿಗೆ, ಯುವ ಶಕ್ತಿಗೆ ಬೇಕಾದ ರೂಪುರೇಷೆಗಳನ್ನು ತಾವು ಮಾಡಬೇಕು. ಮುಂದಿನ ದೇಶದ ಭವಿಷ್ಯವನ್ನು ರೂಪಿಸುವುದಕ್ಕಾಗಿ ಇದನ್ನು challenging ಆಗಿ ತೆಗೆದುಕೊಂಡು ಇರುವ 10 ತಿಂಗಳ ಅವಧಿಯನ್ನು ಸದುಪಯೋಗ ಮಾಡಿಕೊಂಡು 10 ವರ್ಷಗಳ ಕೆಲಸವನ್ನು ಮಾಡಬೇಕು. ಅದನ್ನು ನೀವು ಮಾಡಿ ತೋರಿಸುತ್ತೀರೆಂದು ನಾವು ನಂಬಿದ್ದೇವೆ. ಇಂದಿನ ಮಕ್ಕಳು physically unfit ಇದ್ದಾರೆ. ಅವರನ್ನು strengthen ಮಾಡಿದರೆ ಮಾತ್ರ ಅವರಿಗೆ ಒಳ್ಳೆಯ ಮೌಲ್ಯಾಧಾರಿತ ಶಿಕ್ಷಣ ದೊರೆತು, ಜೀವನದಲ್ಲಿ ಮುಂದೆ ಧೈರ್ಯವಾಗಿ ಬದುಕಲು ಸಾಧ್ಯವಾಗುತ್ತದೆ. ಮುಖ್ಯವಾಗಿ ಇಲಾಖೆ–ಇಲಾಖೆಗಳ ನಡುವೆ lack of co-ordination ಇದೆ. ಒಂದಕ್ಕೊಂದು "ನಾನೊಂದು ತೀರ, ನೀನೊಂದು ತೀರ" ಎಂದು ನಡೆಯುತ್ತಿದೆ. ಇದನ್ನು avoid ಮಾಡಿಕೊಳ್ಳಬೇಕು. ಎಲ್ಲಾ ಇಲಾಖೆಗಳಿಗೂ inter links ಇರುತ್ತದೆ. ಒಂದು team work ಮಾಡಿದಾಗ ಮಾತ್ರ ನಮ್ಮ ಗುರಿ ಮುಟ್ಟಲು ಸಾಧ್ಯವಾಗುತ್ತದೆ. Revenue ಮತ್ತು Forest Department ಗಳಿಗೆ ಸಂಬಂಧಪಟ್ಟಹಾಗೆ ಹೇಳುವುದಾದರೆ, Forest Department ನವರು ನಮಗೆ ಸಂಬಂಧವಿಲ್ಲ ಎನ್ನುತ್ತಾರೆ. ಕಳೆದ ಬಾರಿಯ ಅಧಿವೇಶನದಲ್ಲಿಯೂ ಕೂಡಾ ರೈತರನ್ನು ಒಕ್ಕಲೆಬ್ಬಿಸುತ್ತಿರುವ ವಿಷಯವನ್ನು ತಮ್ಮ ಗಮನಕ್ಕೆ ತಂದಿದೆ ಮಾನ್ಯ ಅಧ್ಯಕ್ಷರೆ. ಇಂದು ಕಿಮ್ಮನೆ ರತ್ನಾಕರ್‌ರವರು ಕೂಡಾ ಅದರ ಬಗ್ಗೆ ಬೆಳಕನ್ನು ಚೆಲ್ಲಿದ್ದಾರೆ. ನಮ್ಮ ಕ್ಷೇತ್ರದಲ್ಲಿ unreserved villages ಬಹಳಷ್ಟಿದೆ. Joint survey ಮಾಡಿ ತಕ್ಷಣವೇ ರೈತರ revenue land ಯಾವುದು forest land ಯಾವುದು ಎಂದು separate ಮಾಡಿಕೊಡಬೇಕೆಂದು ಹೇಳುತ್ತಾ ವಿಠಲಾಪುರ, ರಾಮಸಾಗರ ಮೆಟ್ರಿಕ್ಕಿ, ಹುಲಿಕುಂಟೆ ಗ್ರಾಮಗಳಲ್ಲಿ ಮಾಡಬೇಕೆಂದು ತಾವು ಅಂದು ಆದೇಶ ಮಾಡಿದಿರಿ. ಆದರೆ ತಮ್ಮ ಆದೇಶವನ್ನು Forest Department ನವರು ಧಿಕ್ಕರಿಸಿದ್ದಾರೆ. Forest Departmentನ ಶಂಕರ್ ಎನ್ನುವವರು , ನಿಜವಾಗಿಯೂ ನಾನು ಈ ವಿಷಯವಾಗಿ privilege move ಮಾಡಬೇಕಾಗಿತ್ತು. ಏನ್ರಿ ಇಂತಹದನ್ನು ಮಾಡಲಾಗುವುದಿಲ್ಲವೇ ಎಂದರೆ,...

ಶ್ರೀ ಅಪ್ಪಚ್ಚುರಂಜನ್ (ಯುವಜನ ಸೇವೆ ಮತ್ತು ಕ್ರೀಡಾ ಸಚಿವರು): ಒಂದು ನಿಮಿಷ ಮಾನ್ಯ ಅಧ್ಯಕ್ಷರೆ, ಈಗಾಗಲೇ youth policy ಯನ್ನು ಸಮಗ್ರವಾಗಿ change ಮಾಡಬೇಕೆಂದು

ಚರ್ಚೆಯಾಗಿದೆ. ಅದರ ಜೊತೆಗೆ ನಾನು ಎಲ್ಲಾ ಶಾಸಕರಿಗೂ ಕೂಡಾ ಪತ್ರಗಳನ್ನು ಬರೆದಿದ್ದೇನೆ. ಅವರ ಸಲಹೆಗಳನ್ನು ಆದಷ್ಟು ಬೇಗ ಕಳುಹಿಸಿದರೆ ಬಹಳ ಉತ್ತಮ ಎಂದು ತಮ್ಮ ಮುಖಾಂತರ ಹೇಳಲಿಚ್ಛಿಸುತ್ತೇನೆ.

ಶ್ರೀ ಯು.ಟಿ. ಖಾದರ್: ನಮಗೆ ಸಮಯವನ್ನು ಕೊಟ್ರೆ ಯುವ ನೀತಿಯಲ್ಲಿ ಏನು ಬದಲಾವಣೆ ಮಾಡಬೇಕೆಂದು. ನಾವು ಹೇಳುತ್ತೇವೆ.

ಶ್ರೀ ಅಪ್ಪಚ್ಚು ರಂಜನ್:– ನೋಡಿ draft ಕೊಡಲು ಬರುವುದಿಲ್ಲ. Final ಹಂತದಲ್ಲಿ ಬರುವಂತಹದು. ತಾವು ತಮ್ಮ ಸಲಹೆಗಳನ್ನು ಕಳುಹಿಸಿಕೊಡಿ. ಅದನ್ನು ಚರ್ಚೆ ಮಾಡಿ ಅದನ್ನು ಏನು improve ಮಾಡಬೇಕು.. ಅದನ್ನು ಮಾಡೋಣ. ನೀವು search ಮಾಡಬೇಕು. yo have to search. ನಾನು ಈಗ ಏನು ಮಾಡಿದ್ದೇನೆ? ಎಲ್ಲಾ ರಾಜ್ಯದ ಮೂಲೆ ಮೂಲೆಯಿಂದ ತರಿಸುವಂತಹ ವ್ಯವಸ್ಥೆ ಮಾಡಿದ್ದೇನೆ. ಹೊರದೇಶದಲ್ಲಿ ಯುವನೀತಿ ಯಾವ ರೀತಿ ಇದೆ ಎನ್ನುವುದನ್ನು ತಿಳಿದುಕೊಳ್ಳುವಂತಹ ವ್ಯವಸ್ಥೆ ಮಾಡಿದ್ದೇನೆ. ತಮ್ಮ ವಿಚಾರವನ್ನು ಅದರಲ್ಲಿ include ಮಾಡಲು ತಾವೂ ಕೂಡಾ ಯುವನೀತಿ ಯಾವರೀತಿ ತರಬಹುದು, ಹೊರರಾಜ್ಯದಲ್ಲಿ, ಹೊರದೇಶದಲ್ಲಿ ಹೇಗಿದೆ, ನಿಮ್ಮ self-experience ಹೇಗಿದೆ ಎಂಬುದನ್ನು ಕೊಟ್ಟರೆ ಒಳ್ಳೆಯದು. ನಾವು ಕೊಟ್ಟದ್ದನ್ನು ನೀವು change ಮಾಡುವುದರಲ್ಲಿ ಅರ್ಥವೇನಿದೆ? ನೀವು search ಮಾಡಬೇಕಾಗುತ್ತದೆ. Internet ವ್ಯವಸ್ಥೆ ಇದೆ, search ಮಾಡಿ ನನಗೆ ಕೊಡಿ.

ಶ್ರೀ ಈ. ತುಕಾರಾಂ: ನಾವೆಲ್ಲಾ ಇದರ ಕುರಿತು ಚರ್ಚೆ ಮಾಡಿದ್ದೇವೆ. ನಮ್ಮ vision ಏನಿದೆ, ಮುಂದಿನ ಪೀಳಿಗೆಗೆ ಏನೇನು ಮಾಡಬೇಕೆಂಬ ಬಗ್ಗೆಯೂ ನಾವೆಲ್ಲಾ ಸಲಹೆ ಸೂಚನೆ ಕೊಡುತ್ತೇವೆಂದು ಹೇಳಿದ್ದೇವೆ. ನಮಗೇನು ಸಾರ್, ನಾವು ಕೊಟ್ಟಿರುವ ಸಲಹೆ ಸೂಚನೆಗಳನ್ನು ದಯಮಾಡಿ implementation ಮಾಡಿ. ನಮಗೇನು result ಬರಬೇಕಷ್ಟೆ.

ಮಾನ್ಯ ಅಧ್ಯಕ್ಷರೆ, ನಮ್ಮ ವ್ಯವಸ್ಥೆಯಲ್ಲಿ ಇವತ್ತಿನ ದಿನ ಸಮಾಜವನ್ನು ಹಾದಿ ತಪ್ಪಿಸುವ ಕೆಲಸವಾಗುತ್ತಿದೆ. Forest Department ನಲ್ಲಿರುವ ಶಂಕರ್ ಎನ್ನುವವರು ಒಂದು ಬೇರೆ ಅರ್ಥದಲ್ಲಿ ಹೇಳಿದರು. ಈ ಕೆಲಸ 1979–80ರಲ್ಲಿ ಎಂ.ವೈ. ಘೋರ್ಪಡೆಯವರು ಮಾಡಬೇಕಿತ್ತು. ಅವರು ಏಕೆ ಮಾಡಲಿಲ್ಲವೆಂದರು. ಈ ತರಹದ ದುರ್ವರ್ತನೆ ಸರಿಯಲ್ಲ. ಇಡೀ ವಿಧಾನಸೌಧಕ್ಕೆ ಒಂದು ಇತಿಹಾಸ ತರುವಂತಹ ವ್ಯಕ್ತಿಗಳು ತಮ್ಮದೇ ನಿಟ್ಟಿನಲ್ಲಿ ಸಂವಿಧಾನಕ್ಕೆ ಒಂದು ಕಳೆಯನ್ನು ಕೊಟ್ಟಿದ್ದಾರೆ. ಅಂಹ ವ್ಯಕ್ತಿಯ ಬಗ್ಗೆ ಅವರು ತಮ್ಮ

ಲೋಪವನ್ನು ಇಟ್ಟುಕೊಂಡು ಮಾತನಾಡುವುದು ಅಸಮಂಜಸ. ಅಧಿಕಾರಿಗಳು ಹೀಗೆ ಮಾತನಾಡಬಾರದು. ಇವತ್ತು ಚಿಕ್ಕಣ್ಣನವರು ಕೂಡಾ ತಾವು ಗಮನಿಸಿರಬಹುದು. ಅವರ ಬಗ್ಗೆಯೂ ನಮಗೆ ಗೌರವ ಇರುತ್ತದೆ. ಅವರೂ ಕೂಡಾ ಒಂದು ಕಣ್ಣು, ನಾವೂ ಕೂಡ ಒಂದು ಕಣ್ಣು. ಎರಡೂ ಕಣ್ಣುಗಳು ಸಮಾಜವನ್ನು ಒಂದು ದೃಷ್ಟಿಯಿಂದ ನೋಡಬೇಕು. ಇದೇ ರೀತಿ ಅವರದು ಒಂದು ಹೆಜ್ಜೆಯಾದರೆ, ನಮ್ಮದು ಒಂದು ಹೆಜ್ಜೆ. ಎರಡೂ ರೀತಿಯಲ್ಲಿ ಹೋದಾಗ ಮಾತ್ರ ನಾವು ಕಂಡ ಕನಸನ್ನು ನನಸು ಮಾಡಲು ಸಾಧ್ಯವಾಗುತ್ತದೆ. ಆ ಒಂದು ವಾತಾವರಣವನ್ನು ಸರ್ಕಾರ ಅವರಿಗೆ ಮಾರ್ಗದರ್ಶನ ಹೋಗಬೇಕು. ಎಲ್ಲರೂ ಒಂದು Family team ಆಗಿ ಹೋದಾಗ ಮಾತ್ರ ನಮ್ಮೆಲ್ಲರ ಉದ್ದೇಶ ಸಫಲವಾಗುತ್ತದೆ. ಈ ರೀತಿ ಒಂದು ಆಡಳಿತ ಬಂದಾಗ ಮಾತ್ರ ನಮ್ಮ ಕನಸು ನನಸು ಮಾಡಲು ಸಾಧ್ಯವಾಗುತ್ತದೆ. ಜೊತೆಗೆ ಇವತ್ತು ಅನೇಕ ವಿಷಯಗಳನ್ನು ನಾವು ಗಮನಿಸಿದ್ದೇವೆ. ಬಹಳ ಮುಖ್ಯವಾಗಿ ಇವತ್ತಿನ ದಿನ ನಾವು ಕೆಲವೊಂದು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೇವೆ, ಅವು ಸರಿಯಾಗಿ ಆಗುತ್ತಿಲ್ಲ. ಮುಂದಿನ ದಿನಗಳಲ್ಲಿ ಒಂದು ಸದೃಢ ಸಮಾಜವನ್ನು ಕಟ್ಟುವ ನಿಟ್ಟಿನಲ್ಲಿ ಸರ್ಕಾರ ಹೋಗಬೇಕು. ಅನೇಕ ಇಲಾಖೆಗಳಲ್ಲಿ District Officers ಮಾತ್ರ ಇರುತ್ತಿದ್ದಾರೆ. ತಾಲ್ಲೂಕು ಮಟ್ಟದ ಕಛೇರಿಗಳಿಗೆ ಹೋದರೆ ಸಾರ್ವಜನಿಕರಿಗೆ ಸರಿಯಾದಂತಹ ಸ್ಪಂದನೆ ಸಿಗುತ್ತಿಲ್ಲ. ಈ ನಿಟ್ಟಿನಲ್ಲಿ ಇವತ್ತೇನು ಹಿರಿಯರು ಗಮನಿಸಿದ್ದಾರೋ, ಅದನ್ನೆಲ್ಲಾ ಸರ್ಕಾರ ಮಾಡಿಕೊಡಲಿಕ್ಕೆ ಬದ್ಧರಾಗಬೇಕು. ಮುಂದಿನ ದಿನಗಳಲ್ಲಿ ಒಳ್ಳೆಯದಾಗಲಿ ಎಂದು ಆಶಿಸುತ್ತಾ, ಇಷ್ಟು ಮಾತನಾಡಲು ನನಗೆ ಅವಕಾಶ ಮಾಡಿಕೊಟ್ಟಂತಹ ಮಾನ್ಯ ಸಭಾಧ್ಯಕ್ಷರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ:– ಮಾನ್ಯ ಅಧ್ಯಕ್ಷರೆ, ಈಗ 4 ಗಂಟೆಯಾಗಿದೆ. ದಯವಿಟ್ಟು ಈಗಲೇ ಗಮನ ಸೆಳೆಯುವ ಸೂಚನೆಗಳನ್ನು ತೆಗೆದುಕೊಳ್ಳಿ. ನಿನ್ನೆ ರಾತ್ರಿ ಚರ್ಚಿಸಲು ಅವಕಾಶ ಸಿಗಲಿಲ್ಲ.

ಅಧ್ಯಕ್ಷರು:– ಈ ಚರ್ಚೆ ಕೂಡ ಮುಗಿಯಬೇಕಲ್ಲವೆ? ಇದು ಮುಗಿದ ಮೇಲೆ ನಂತರ ಅವುಗಳನ್ನೂ ತೆಗೆದುಕೊಳ್ಳೋಣ.

ಶ್ರೀ ಹೆಚ್.ಡಿ. ರೇವಣ್ಣ:– ಈ ಚರ್ಚೆ ಮುಗಿದ ಮೇಲೆ ಅವಕಾಶ ಕೊಡುತ್ತೀರಲ್ಲವೆ? ಹಾಗಾದರೆ ಸರಿ.

ಶ್ರೀ ಯು.ಟಿ. ಖಾದರ್ (ಮಂಗಳೂರು):- ಮಾನ್ಯ ಸಭಾಧ್ಯಕ್ಷರೆ, ಅನುದಾನ ಬೇಡಿಕೆಗಳ ಮೇಲೆ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಮೊದಲಿಗೆ ವಂದನೆಗಳನ್ನು ಅರ್ಪಿಸುತ್ತೇನೆ. ಯಾವುದೇ ಒಂದು ಸರ್ಕಾರವನ್ನು ಐದು ವರ್ಷಗಳ ಅವಧಿಗೆ ಮತ ಹಾಕಿ ಏತಕ್ಕಾಗಿ ಆರಿಸಿ ಕಳುಹಿಸುತ್ತಾರೆ ಎಂದರೆ, ನಾವು ಜನಪರವಾಗಿದ್ದು, ಜನರಿಗೆ ಬೇಕಾದಂತಹ ಅಥವಾ ಸಮಾಜದಲ್ಲಿರುವ ಕಟ್ಟಕಡೆಯ ವ್ಯಕ್ತಿಗೆ ಸ್ವಾಭಿಮಾನದ ಬದುಕು ನೀಡಲಿಕ್ಕೆ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕೆಂದು ಇವತ್ತು ಜನ ಸರ್ಕಾರಕ್ಕೆ ಮತ ಕೊಟ್ಟು ಆರಿಸಿ ಕಳುಹಿಸುತ್ತಾರೆ. ಅಂತಹ ಸಂದರ್ಭದಲ್ಲಿ ಕಳೆದ ನಾಲ್ಕು ವರ್ಷಗಳಾಯಿತು, ಬಹುಶಃ ಇದು last year 5ನೇ ವರ್ಷದಲ್ಲಿ ನಾವಿದ್ದೇವೆ. ಈ ವರ್ಷದಲ್ಲಿ ಸಲಹೆ/ ಸೂಚನೆಗಳನ್ನು ಪಡೆದುಕೊಂಡು, ಐದನೇ ವರ್ಷದ ಯೋಜನೆಯಲ್ಲಿ ಸೇರಿಸಲಿಕ್ಕೆ ಬಹುಶಃ ಯಾರಿಂದಲೂ ಸಾಧ್ಯವಿಲ್ಲ. ಏಕೆಂದರೆ, ಈ session ಮುಗಿದು, ಮುಂದಿನ session ಬರುವುದರೊಳಗಾಗಿ election ಬರುವಂತಹ ಪರಿಸ್ಥಿತಿ ಇದೆ. ಇಷ್ಟರತನಕ ಮತ್ತು ಈಗ ಆಗಿರುವಂತಹ ಯೋಜನೆಗಳನ್ನು ಅನುಷ್ಠಾನಗೊಳಿಸುವಂತಹ ಕೆಲಸವನ್ನು ಇವತ್ತು ನಮ್ಮ ಸರ್ಕಾರ ಮಾಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಈ ಸಂದರ್ಭದಲ್ಲಿ ನಾನು ಸ್ಪಷ್ಟವಾಗಿ ಹೇಳಲಿಕ್ಕೆ ಇಚ್ಛಿಸುತ್ತೇನೆ. ಕಳೆದ ನಾಲ್ಕೂವರೆ ವರ್ಷಗಳಿಂದ ನಾನು ನೋಡಿರುವಂತಹ ರೀತಿಯಲ್ಲಿ ಈ ಸರ್ಕಾರ ಜನಪರವಾಗಿರುವಂತಹ ಸರ್ಕಾರವಲ್ಲ, ಇದು ಜನ ವಿರೋಧಿಯಾಗಿರುವ ಸರ್ಕಾರವಾಗಿದೆ ಎಂದು ನಾನು ಹೇಳಲಿಚ್ಛಿಸುತ್ತೇನೆ. ಜನಪರವಾದಂತಹ ಯಾವುದೇ ಒಂದು ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾರದಂತಹ ಪರಿಸ್ಥಿತಿ ಈ ಸರ್ಕಾರದ್ದಾಗಿದೆ. ಸರ್ಕಾರ ಒಂದು ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತರುವಾಗ, ಒಂದು ಯೋಜನೆ ಯಾವ ರೀತಿ ಇರಬೇಕೆಂದರೆ, ಯಾರು ಒಂದು ಹೊತ್ತು ಊಟ ಮಾಡುತ್ತಿದ್ದಾನೋ, ಅವನು ಎರಡು ಹೊತ್ತು ಊಟ ಮಾಡುವಂತಾಗಬೇಕು. ಯಾರು ಎರಡು ಹೊತ್ತು ಊಟ ಮಾಡುತ್ತಿದ್ದಾನೋ, ಅವನು ಮೂರು ಹೊತ್ತು ಊಟ ಮಾಡುವಂತಾಗಬೇಕು. ಯಾರು ಮೂರು ಹೊತ್ತು ಊಟ ಮಾಡುತ್ತಿದ್ದಾನೋ, ಅವನು ಇನ್ನೊಬ್ಬನಿಗೆ ಊಟ ಕೊಡುವಂತಹ ಶಕ್ತಿ ಆ ಕಾರ್ಯಕ್ರಮದಿಂದ ಬರಬೇಕು. ಆ ಒಂದು ಯೋಜನೆ, ಕೇವಲ ಕೆಲವರಿಗೇ ಸೀಮಿತವಾಗಿರುವಂತಹ ಯೋಜನೆಯಾಗಬಾರದು. ಅದು ರಾಜ್ಯದಲ್ಲಿನ ಸಮಾಜದ ಎಲ್ಲಾ ವರ್ಗದವರಿಗೂ, ಜನ ಸಾಮಾನ್ಯರಿಗೂ ಆ ಒಂದು ಯೋಜನೆಯಿಂದ ಪ್ರೇರಣೆ ಸಿಗುವಂತೆ ಆಗುವಂತಹ ಅವಕಾಶ ಆಗಬೇಕು. ನಾನು ಇವತ್ತು ಈ ಸರ್ಕಾರವನ್ನು ಕೇಳುವುದೇನೆಂದರೆ, ಕಳೆದ ನಾಲ್ಕು ವರ್ಷಗಳಿಂದ ಈ

ರಾಜ್ಯದ ಉದ್ದಗಲಕ್ಕೂ ಸರ್ವರಿಗೂ ಪ್ರಯೋಜನವಾಗುವಂತಹ ಏನಾದರೂ ಒಂದೇ ಒಂದು ಯೋಜನೆ, ಈ ಸರ್ಕಾರ ಕೊಟ್ಟಿದೆಯೇ? ಎಂದು ಕೇಳಲಿಕ್ಕೆ ಇಚ್ಛಿಸುತ್ತೇನೆ. ಸರ್ವರಿಗೂ ಪ್ರಯೋಜನವಾಗುವಂತಹ ಒಂದೇ ಒಂದು ಯೋಜನೆ ಈ ಸರ್ಕಾರ ಮುಖಾಂತರ ಜಾರಿಯಾಗಲಿಲ್ಲ. ಇವತ್ತು ನಾವು ಸರ್ಕಾರಕ್ಕೆ ನೀವು ಏನು ಯೋಜನೆಗಳನ್ನು ಕೊಟ್ಟಿದ್ದೀರಿ ಎಂದು ಕೇಳಿದರೆ, ನಾವು ಸೈಕಲ್ ಕೊಟ್ಟಿದ್ದೇವೆ, ನಾವು ಭಾಗ್ಯಲಕ್ಷ್ಮಿ ಬಾಂಡ್ ಕೊಟ್ಟಿದ್ದೇವೆ, ನಾವು ಸ್ಯಾರಿ ಕೊಟ್ಟಿದ್ದೇವೆ ಎನ್ನುತ್ತಾರೆ. ಇನ್ನೂ ಏನು ಕೊಟ್ಟಿದ್ದೀರಿ ಎಂದರೆ, ಕೈಯಲ್ಲಿ ತಟ್ಟೆ ಕೊಡುತ್ತೇವೆ, ಅದರಲ್ಲಿ ಬೇಡಿ ಎನ್ನುವುದನ್ನು ಬಿಟ್ಟು ಬೇರೇನನ್ನೂ ಕೂಡ ಹೇಳುವುದಕ್ಕೆ ಈ ಸರ್ಕಾರ ಹೋಗುವುದಿಲ್ಲ. ಎಂದು ನಾನು ಹೇಳಲಿಚ್ಛಿಸುತ್ತೇನೆ, ಬಹುಶಃ ಎಲ್ಲರಿಗೂ ಅನುಕೂಲವಾಗುವಂತಹ ಒಂದೇ ಒಂದು ಕಾರ್ಯಕ್ರಮವನ್ನು ಈ ಸರ್ಕಾರ ಅನುಷ್ಠಾನಕ್ಕೆ ತರಲಿಲ್ಲ. ಇವತ್ತು ಯಾರು ಐದು ಸೆಂಟ್ಸ್ ಜಾಗದ ಆಶ್ರಯ ಮನೆಯಲ್ಲಿ ವಾಸಿಸುತ್ತಿದ್ದಾನೋ, ಅವನಿಗೆ ಬೇಕಾದಂತಹ ಸೌಕರ್ಯಗಳನ್ನು ಕಲ್ಪಿಸುವಂತಹ ಅವಕಾಶ ಈ ಸರ್ಕಾರದಿಂದ ಆಗಬೇಕಾಗಿತ್ತು. ಕಳೆದ ನಾಲ್ಕು ವರ್ಷಗಳಲ್ಲಿ ಸರಿಯಾಗಿ ಒಂದೇ ಒಂದು ಮನೆಯನ್ನು ಬಡವರಿಗೆ ಕೊಡುವಂತಹ ಕೆಲಸ ನಮ್ಮಿಂದಾಗಲಿಲ್ಲ. ಸರ್ಕಾರದ ಜಾಗದಲ್ಲಿ ಈಗಾಗಲೇ ಇರುವವರಿಗೆ ಒಂದೇ ಒಂದು ಹಕ್ಕುಪತ್ರ ಕೊಡುವಂತಹ ಪರಿಸ್ಥಿತಿ ಇವತ್ತು ಇಲ್ಲ. ಸ್ವಾಭಿಮಾನದಿಂದ ಊಟ ಮಾಡಲು ಆಹಾರ ಧಾನ್ಯಗಳನ್ನು ಕೊಡುವಂತಹ ಅವಕಾಶ ಬಹುಶಃ ಇವತ್ತು ಆಗಲಿಲ್ಲ. ಮಕ್ಕಳಿಗೆ ಓದಲಿಕ್ಕೆ ಸ್ಕೂಲ್ ಕೊಡಲಿಕ್ಕಾಗಲಿಲ್ಲ. ಇಡೀ ರಾಜ್ಯದಲ್ಲಿ ಇವತ್ತು ಬಹುಶಃ ಒಂದೇ ಒಂದು ಹೈಸ್ಕೂಲ್ ಅನ್ನು ಸಹ ಸರ್ಕಾರ ಪ್ರಾರಂಭ ಮಾಡಲಿಲ್ಲ. ಒಂದೇ ಒಂದು ಸರ್ಕಾರಿ ಪದವಿ ಪೂರ್ವ ಕಾಲೇಜನ್ನು ಸಹ ಈ ಸರ್ಕಾರ ಇವತ್ತು ಪ್ರಾರಂಭ ಮಾಡಲಿಲ್ಲ. ಒಂದೇ ಒಂದು ಸರ್ಕಾರಿ Degree College ಆದರೂ ಕಳೆದ 4 ವರ್ಷಗಳಲ್ಲಿ ರಾಜ್ಯದ ಉದ್ದಗಲದಲ್ಲಿ ಎಲ್ಲಿಯೂ ಕೂಡ ಪ್ರಾರಂಭವಾಗಲಿಲ್ಲ. ವಾಸಕ್ಕೆ ಮನೆಯಿಲ್ಲ, ತಿನ್ನಲಿಕ್ಕೆ ಆಹಾರ ಧಾನ್ಯ ಇಲ್ಲ. ಮಕ್ಕಳು education ಕಲಿಯಲಿಕ್ಕೆ ಆಗಲಿಲ್ಲ. ಹೀಗಿರುವಾಗ ಈ ಸರ್ಕಾರವನ್ನು ಜನಪರ ಸರ್ಕಾರ ಎಂದು ಹೇಗೆ ಹೇಳಲಿಕ್ಕಾಗುತ್ತದೆ? ಆದ ಕಾರಣ ಇನ್ನಾದರೂ ಕೂಡ, ಯಾವುದು ಸಾಧ್ಯವಿದೆಯೋ, ಜನರಿಗೆ ಪ್ರಯೋಜನವಾಗುತ್ತದೆಯೋ, ಅಂತಹ ಕಾರ್ಯಕ್ರಮಗಳನ್ನು ಉಳಿದ ಅವಧಿಯಲ್ಲಿ ಈ ಸರ್ಕಾರ ಮಾಡಬೇಕೆಂದು ಕೇಳುವಂತಹ ಪರಿಸ್ಥಿತಿ ಉಂಟಾಗಿದೆ. ಇನ್ನು ನಮ್ಮ ಜಿಲ್ಲೆಗೆ ಸಂಬಂಧಿಸಿದಂತೆ ಹೇಳುವುದಾದರೆ, ಕರಾವಳಿ ಭಾಗಕ್ಕೆ ಯಾವತ್ತಿಗೂ ಅನ್ಯಾಯವಾಗುತ್ತಿದೆ. ನಾವು ಯಾವಾಗಲೂ ಕೂಡ ನಿರ್ಲಕ್ಷಕ್ಕೆ ಒಳಪಡುತ್ತೇವೆ. ಕರಾವಳಿ

ಮತ್ತು ಕೊಡಗು ಪ್ರದೇಶದವರಾದ ನಾವು ಯಾವತ್ತಿಗೂ ನಮಗೆ ಏತ ನೀರಾವರಿಗಾಗಿ 1 ಸಾವಿರ ಕೋಟಿ ರೂ.ಗಳನ್ನು ಕೊಡಿ, ಡ್ಯಾಂ ನಿರ್ಮಾಣಕ್ಕಾಗಿ 500 ಕೋಟಿ ರೂ. ಗಳನ್ನಾದರೂ ಕೊಡಿ ಎಂದೇನೂ ಕೂಡಾ ನಾವು ಕೇಳುವುದಿಲ್ಲ.

ನಮ್ಮ ಕರಾವಳಿ ಪ್ರದೇಶದ ಜನರು ಕೇಳುವುದು ಏನಾದರೂ ಇದ್ದರೆ, ಅದು 50 ಕೋಟಿ ರೂ. ಗಳನ್ನು ನಮ್ಮ ರಸ್ತೆಗೆ ಕೊಡಿ, ಕುಡಿಯಲಿಕ್ಕೆ ನೀರು ಕೊಡಿ ಎನ್ನುವುದನ್ನು ಬಿಟ್ಟರೆ, ಬೇರೇನನ್ನೂ ದೊಡ್ಡ ಯೋಜನೆಗಳನ್ನು ಕೇಳುವುದಿಲ್ಲ. ಇವತ್ತು ಕರ್ನಾಟಕದಲ್ಲಿಯ ಕರಾವಳಿ ಪ್ರದೇಶ ಅತ್ಯುನ್ನತ ಸ್ಥಾನಕ್ಕೆ ಹೋಗಿದ್ದರೆ, ಇದರಲ್ಲಿ ಸರ್ಕಾರದ ಕೊಡಗೆ ಬಹಳಷ್ಟು ಕಡಿಮೆ ಎಂದೇ ಹೇಳಬೇಕು. ಆ ಪ್ರದೇಶದ ಜನ ಸಾಮಾನ್ಯರು **Bombay, Gulf** ಮುಂತಾದ ಬೇರೆ ಬೇರೆ ಕಡೆಗಳಿಗೆ ಹೋಗಿ ಬಹಳ ಕಷ್ಟಪಟ್ಟು ದುಡಿದ ಕಾರಣ, ಸ್ವಾಭಿಮಾನದ ಬದುಕನ್ನು ಈ ಕರಾವಳಿ ಪ್ರದೇಶದ ಜನರು ರೂಪಿಸಿಕೊಂಡಿದ್ದಾರೆ ಎಂದು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಬೇರೆ ಕಡೆಗಳಿಗೆ ಹೋಲಿಸಿದಾಗ ನಮಗೆ ಬಹಳ ಅನ್ಯಾಯವಾಗಿದೆ. ಡಾ॥ ನಂಜುಂಡಪ್ಪ ವರದಿಯನ್ನು ಆಧಾರವಾಗಿಟ್ಟುಕೊಂಡು ಉತ್ತರ ಕರ್ನಾಟಕ ಭಾಗಗಳಿಗೆ ಹೆಚ್ಚಿನ ಹಣ ಕೊಡುತ್ತಿದ್ದಾರೆ. ಈ ಹಿಂದೆ ಕೂಡ, ನಮಗೆ ಕೊಡುವಷ್ಟೇ ಗ್ರ್ಯಾಂಟ್ ಅನ್ನು ಅವರಿಗೂ ಕೊಡುತ್ತಿದ್ದರು. ಅವರ ತಪ್ಪಿನಿಂದಾಗಿ ಬಹುಶಃ ಅವರು ಹಿಂದುಳಿದಿದ್ದಾರೆ. ನಾವು ಕಷ್ಟಪಟ್ಟು, ಶ್ರಮ ಪಟ್ಟಿದ್ದಕ್ಕಾಗಿ ಇವತ್ತು ನಮಗೆ ಏಕೆ ಶಿಕ್ಷೆ? ಡಾ॥ ನಂಜುಂಡಪ್ಪ ವರದಿಯಿಂದಾಗಿ, ಇದ್ದ ಎಲ್ಲಾ ಅನುದಾನಗಳು ಮತ್ತು ಬೇರೆ ಬೇರೆ ಯೋಜನೆಗಳನ್ನು ಆ ಪ್ರದೇಶಕ್ಕೆ ನೀಡಲಾಗಿದ್ದು, ನಮಗೇನು ಇಲ್ಲದಂತಹ ಪರಿಸ್ಥಿತಿ ಇವತ್ತು ಉಂಟಾಗಿದೆ. ಡಾ॥ ನಂಜುಂಡಪ್ಪ ವರದಿ ಏನಾದರೂ ಇದೇ ರೀತಿಯಲ್ಲಿ ಅನುಷ್ಠಾನವಾಗುತ್ತಿದ್ದರೆ, ಹಿಂದುಳಿದಿರುವ ಜಿಲ್ಲೆಗಳು ನಮ್ಮ ತರಹ ಮುಂದುವರೆದ ಜಿಲ್ಲೆಗಳಾಗುವುದಿಲ್ಲ. ಮುಂದುವರೆದಿರುವಂತಹ ಜಿಲ್ಲೆಗಳು ಹಿಂದುಳಿದಿರುವಂತಹ ಜಿಲ್ಲೆಗಳಾಗುವ ಪರಿಸ್ಥಿತಿ ಉಂಟಾಗಬಹುದು. ಆದ ಕಾರಣ ಯಾವ ರೀತಿಯಲ್ಲಿ ಡಾ॥ ನಂಜುಂಡಪ್ಪ ವರದಿಯನ್ನು ಆಧಾರವಾಗಿಟ್ಟುಕೊಂಡು ಹಿಂದುಳಿದ ಪ್ರದೇಶದ ಜಿಲ್ಲೆಗಳಿಗೆ ಬೇರೆ ಬೇರೆ ರೀತಿಯ ಸವಲತ್ತುಗಳನ್ನು ಕೊಡುತ್ತಿದ್ದೀರೋ, ಅದೇ ರೀತಿಯಲ್ಲಿ ಮುಂದುವರೆದ ಜಿಲ್ಲೆಗಳೇನಿವೆಯೋ, ಅವುಗಳನ್ನು ಇನ್ನಷ್ಟು ಮುಂದುವೆಸಲು ಮತ್ತು ಅಭಿವೃದ್ಧಿಪಡಿಸಲು ಇನ್ನಷ್ಟು ಬೇರೆ ಬೇರೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದಕ್ಕೆ ಇವತ್ತು ಅವಕಾಶವಾಗಬೇಕೆಂದು ಕೇಳಿಕೊಳ್ಳುತ್ತೇನೆ. ಇವತ್ತು ಬರಗಾಲಪೀಡಿತ ಪ್ರದೇಶದಲ್ಲಿ ನಮ್ಮನ್ನು ಸೇರಿಸಿಲ್ಲ.

ಶ್ರೀ ಅಮರೇಶ್:- ಮಾನ್ಯ ನಂಜುಂಡಪ್ಪನವರ ವರದಿಯ ಬಗ್ಗೆ ಈಗ ಉಲ್ಲೇಖ ಮಾಡಿದಿರಿ. ಆ ವರದಿ ಆಧಾರವಾಗಿಟ್ಟುಕೊಂಡು ಯಾವುದೇ ಸವಲತ್ತುಗಳನ್ನು ನಮ್ಮ ಜಿಲ್ಲೆಗೆ ಕೊಡುತ್ತಿಲ್ಲ. ಡಾ॥ ನಂಜುಂಡಪ್ಪ ವರದಿಯಲ್ಲಿ ಸರ್ಕಾರದ ಮಾನದಂಡಗಳೇನಿವೆಯೋ, ಆ ಮಾನದಂಡಗಳು ಯಾವುವು ಕೂಡ ಈ ಜಿಲ್ಲೆಗಳಿಗೆ ಸಿಗುತ್ತಿಲ್ಲ. ಆ ಮಾನದಂಡಗಳನ್ನು ತೆಗೆಯಬೇಕೆಂದು ನಿಜವಾಗಿಯೂ ಕೂಡ ನೀವು Suggestion ಅನ್ನು ಕೊಡಬೇಕು. ಏಕೆಂದರೆ, ಬಯಲುಸೀಮೆ ಇರಬಹುದು, ನಂಜುಂಡಪ್ಪ ವರದಿ ಇರಬಹುದು, ಇದೆಲ್ಲವೂ ಕೂಡ ಆ ಮಾನದಂಡಗಳನ್ನು ಒಳಗೊಂಡು ಕೆಲಸವನ್ನು ಮಾಡಬೇಕಾಗುತ್ತದೆ.

ಶ್ರೀ ಯ.ಟಿ. ಖಾದರ್:- ಡಾ: ನಂಜುಂಡಪ್ಪ ವರದಿಯಲ್ಲಿನ ಮಾನದಂಡಗಳನ್ನು ತೆಗೆಯಬೇಕೆಂದು ನಾನು ಹೇಳಲಿಕ್ಕೆ ಹೋಗುವುದಿಲ್ಲ. ಬಹುಶಃ ಅದೇ ರೀತಿಯ ಏನಾದರೊಂದು ವರದಿ ತರಿಸಿಕೊಂಡು, ನಮ್ಮ ಈ ಪ್ರದೇಶಕ್ಕೆ ಏನಾದರೊಂದು ಯೋಜನೆ ತರುವಂತಹ ಕೆಲಸವಾಗಬೇಕಾಗಿದೆ. ಡಾ: ನಂಜುಂಡಪ್ಪ ವರದಿಯ ಫಲಶೃತಿ ಸಹ ಆ ಜಿಲ್ಲೆಗಳಿಗೆ ಮುಟ್ಟುವಂಥಾದ್ದು ಆಗಬೇಕಾಗಿದೆ ಎಂದು ಕೇಳಿಕೊಳ್ಳುತ್ತೇನೆ. ನಮ್ಮ ಕರಾವಳಿ ಭಾಗದಿಂದ ಮುಖ್ಯಮಂತ್ರಿಗಳೊಬ್ಬರು ಇದ್ದರು. ಅವರನ್ನೂ ಕೂಡಾ ಅಧಿಕಾರದಿಂದ ಇಳಿಸುವಂತಹ ಪರಿಸ್ಥಿತಿ ಉಂಟಾಯಿತು. ಒಬ್ಬ ಮಂತ್ರಿಗಳು ಇದ್ದರು. ಆ ಮಂತ್ರಿಗಳು ಕೂಡ ಇಲ್ಲದಂತಹ ಪರಿಸ್ಥಿತಿ ಇವತ್ತು ನಮ್ಮ ಜಿಲ್ಲೆಯಲ್ಲಿ ನಿರ್ಮಾಣವಾಗಿದೆ. ಈ ರೀತಿಯಲ್ಲಿ ಆರ್ಥಿಕವಾಗಿಯೂ, ರಾಜಕೀಯವಾಗಿಯೂ ಸಂಪೂಣವಾಗಿ ನಮ್ಮ ಜಿಲ್ಲೆಯನ್ನು ನಿರ್ಲಕ್ಷಿಸುವಂತಹ ಕೆಲಸ ನಡೆದಿದೆ. ಇದು ಸರಿಯಿಲ್ಲವೆಂದು ನಾನು ಈ ಸರ್ಕಾರಕ್ಕೆ ಹೇಳಲಿಚ್ಛಿಸುತ್ತೇನೆ. ಇನ್ನು ಕುಡಿಯುವ ನೀರಿಗೆ ಸಂಬಂಧಪಟ್ಟಂತೆ ಹೇಳುವುದಾದರೆ, ಈ ಕಡೆಯ ಪ್ರದೇಶದ ಜನರಿಗೆ ಅಥವಾ ಉತ್ತರ ಕರ್ನಾಟಕದ ಕಡೆಯ ಜನರಿಗೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಏನೂ ಸಮಸ್ಯೆಯಿಲ್ಲ, ಒಂದು ಕಡೆ ಸಮುದ್ರವಿದೆ, ಇನ್ನೊಂದು ಕಡೆ ಮಳೆ ಬರುತ್ತದೆ ಎಂದು ಅನಿಸಿರಬಹುದು. ಇವತ್ತೂ ಕೂಡ ನನ್ನ ಕ್ಷೇತ್ರದಲ್ಲಿ ಹಲವರು ಕಡೆಗಳಲ್ಲಿ ಕುಡಿಯಲಿಕ್ಕೆ ನೀರಿಲ್ಲ. ಯಾವುದೇ ಒಂದು ಅನುದಾನವನ್ನೂ ಕೂಡ ನಮಗೆ ಕೊಡುವಂತಹ ಪರಿಸ್ಥಿತಿ ಇಲ್ಲ. ಇದೇ ವಿಧಾನಸಭೆಯಲ್ಲಿ ಹಿಂದಿನ ಮುಖ್ಯಮಂತ್ರಿಗಳು ಒಂದು ಮಾತನ್ನು ಹೇಳಿದ್ದರು. ಎಲ್ಲಾ ಕ್ಷೇತ್ರಗಳಿಗೂ ನಾನು 30 ಲಕ್ಷ ರೂ.ಗಳ ಅನುದಾನವನ್ನು ಕೊಡುತ್ತೇನೆ ಎನ್ನುವ ಮಾತನ್ನು ಅವರು ಹೇಳಿದ್ದರು. ನಮ್ಮ ಜಿಲ್ಲೆಗೆ ಒಂದೇ ಒಂದು ರೂಪಾಯಿಯಾದರೂ ಇವತ್ತಿನ ದಿವಸ ನೀರಿನ ವ್ಯವಸ್ಥೆಗಾಗಿ ಬರಲಿಲ್ಲ. ಹೀಗಾದರೆ

ಹೇಗೆ? ನಮಗೆ ಏಕೆ ಹಣ ಕೊಟ್ಟಿಲ್ಲ ಎಂದು ಕೇಳಿದರೆ, ಎಲ್ಲಿ ಬರಗಾಲ ಬಂದಿದೆಯೋ, ಅಲ್ಲಿಗೆ ಮಾತ್ರ 30 ಲಕ್ಷ ರೂ.ಗಳನ್ನು ಕೊಡುವಂತಹ ವ್ಯವಸ್ಥೆ ಮಾಡಲಾಗಿದೆ ಎಂದು ಹೇಳುತ್ತಾರೆ. ನಮಗೆ ಯಾವುದೇ ಅನುದಾನ ಬರುವುದಿಲ್ಲ ಎನ್ನುವುದಾದರೆ, ನಾವು ಏನು ಮಾಡಬೇಕು ಎನ್ನುವುದನ್ನು ನೀವು ಆಲೋಚನೆ ಮಾಡಬೇಕಾಗುತ್ತದೆ. ಬರಗಾಲ ಪೀಡಿತ ಪ್ರದೇಶಕ್ಕೆ ನಮ್ಮ ಜಿಲ್ಲೆಯನ್ನು ಸಹ ಸೇರಿಸಬೇಕು. ಕುಡಿಯುವ ನೀರಿಗಾಗಿ Task Forceಗಳಿಗೆ 2 ಕೋಟಿ ರೂ.ಗಳನ್ನು ಪ್ರತಿ ಕ್ಷೇತ್ರಕ್ಕೆ ಕೊಡಿ ಎಂದು ಮಾನ್ಯ ಸದಸ್ಯರು ಮಾತನಾಡಿ ಸಲಹೆ ನೀಡಿದ್ದಾರೆ. ನಾನು 2 ಕೋಟಿ ರೂ.ಗಳನ್ನು ಕೊಡಿ ಎಂದು ಮಾತ್ರ ಹೇಳುವುದಕ್ಕೆ ಹೋಗುವುದಿಲ್ಲ. ಸರ್ಕಾರಕ್ಕೆ ಎಷ್ಟು ಆಗುತ್ತದೋ ಅಷ್ಟನ್ನು ಕೊಡಿ. ಕನಿಷ್ಠ ಒಂದು ಗ್ಲಾಸ್ ಕುಡಿಯುವ ನೀರನ್ನು ಕೊಡಲಿಕ್ಕಾದರೂ ವ್ಯವಸ್ಥೆ ಮಾಡುವುದಕ್ಕೆ ಆಗುವಷ್ಟು ಹಣವನ್ನು ನಮಗೆ ಬಿಡುಗಡೆ ಮಾಡಬೇಕೆಂದು ಈ ಸರ್ಕಾರವನ್ನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಈ ಬಗ್ಗೆ ಬಹಳಷ್ಟು ಆಲೋಚನೆ ಮಾಡಬೇಕಾಗಿದೆ. ಅಲ್ಲಿ ಮಳೆ ಬರುತ್ತಿದೆ ಎಂದುಕೊಂಡು ನಾವು ಸುಮ್ಮನೆ ಕುಳಿತುಕೊಂಡರೆ ಆಗುವುದಿಲ್ಲ. ಕುಡಿಯುವ ನೀರಿನ ಸರಬರಾಜಿಗಾಗಿ ಏನಾದರೊಂದು ಯೋಜನೆಯನ್ನು ಸರ್ಕಾರ ರೂಪಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇನ್ನು ರಸ್ತೆ ಬಗ್ಗೆ ಹೇಳುವುದಾದರೆ, ಹಿಂದಿನ ಮುಖ್ಯಮಂತ್ರಿಗಳು ಅಧಿಕಾರಕ್ಕೆ ಬಂದಂತಹ ಸಂದರ್ಭದಲ್ಲಿ ಗುಂಡಿರಹಿತ ರಸ್ತೆಯುಳ್ಳ ರಾಜ್ಯವನ್ನು ನಿರ್ಮಾಣ ಮಾಡುತ್ತೇವೆಂದು ಹೇಳಿದ್ದರು. ಆದರೆ ಈಗ ಇದ್ದ ಗುಂಡಿಗಳೂ ಹೆಚ್ಚಾಗಿ ರಸ್ತೆಯಲ್ಲಿ ಓಡಾಡದಂತಹ ಪರಿಸ್ಥಿತಿ ಉಂಟಾಗಿದೆ. ರಸ್ತೆಯಲ್ಲಿರುವ ಒಂದೇ ಒಂದು ಗುಂಡಿಯನ್ನಾಗಲಿ ಮುಚ್ಚುವಂತಹ ವ್ಯವಸ್ಥೆಯನ್ನು ಈ ಸರ್ಕಾರ ಮಾಡಲಿಲ್ಲ. ನಮಗೆ ಯಾವುದೇ ಅನುದಾನ ಬರುವುದಿಲ್ಲ. ಶಾಸಕರ ನಿಧಿಯ ಅನುದಾನ ಸಹಿತ ಮೊನ್ನೆತನಕ ನಮಗೆ ಬಂದಿರಲಿಲ್ಲ. ಇಲ್ಲಿ ಅಸೆಂಬ್ಲಿ ಪ್ರಾರಂಭವಾಗುತ್ತದೆ ಎಂದು ಗೊತ್ತಾದ ತಕ್ಷಣ ಬಹುಶಃ ಶಾಸಕರ ನಿಧಿಯ ಮೊದಲನೇ ಕಂತು sanction ಆಗಿದೆ. ಈ ರೀತಿಯಾದರೆ ಹೇಗೆ? ಇಲ್ಲಿ ಕುಡಿಯಲಿಕ್ಕೆ ನಿರಿಲ್ಲ. ನಿಲ್ಲಲಿಕ್ಕೆ ಮನೆ ಇಲ್ಲ, ಓಡಾಡಲಿಕ್ಕೆ ಸರಿಯಾದ ರಸ್ತೆಗಳಿಲ್ಲ ಎನ್ನುವುದಾದರೆ ನಮ್ಮ ಪರಿಸ್ಥಿತಿ ಹೇಗಿದೆ ಎನ್ನುವುದನ್ನು ತಾವು ಅರ್ಥ ಮಾಡಿಕೊಳ್ಳಿ. ಇನ್ನು ಕೊಟ್ಟಂತಹ ಅನುದಾನ ಸರಿಯಾಗಿ implement ಆಗುತ್ತಿದೆಯೋ, ಇಲ್ಲವೋ ಎನ್ನುವುದನ್ನು ಕೂಡ ಸರ್ಕಾರದವರು ನೋಡಬೇಕಾಗುತ್ತದೆ. ನನ್ನ ಕ್ಷೇತ್ರದಲ್ಲಿ 8 ಗ್ರಾಮ ಪಂಚಾಯಿತಿಗಳಿಗೂ ಒಬ್ಬನೇ ಇಂಜಿನಿಯರ್ ಇದ್ದಾನೆ. ಅ ಒಬ್ಬ ಇಂಜಿನಿಯರ್ ಎಂ.ಎಲ್.ಎ ನಿಧಿಯ ಅನುದಾನದ ಕೆಲಸವನ್ನೂ ಕೂಡ ನೋಡಿಕೊಳ್ಳಬೇಕು. ಎಂ.ಪಿ.ನಿಧಿ ಅನುದಾನದ ಕೆಲಸಗಳನ್ನೂ ಸಹ

ನೋಡಿಕೊಳ್ಳಬೇಕು, ಜಿಲ್ಲಾ ಪಂಚಾಯಿತಿಯ ಅನುದಾನ ಕೆಲಸವನ್ನೂ ನೋಡಿಕೊಳ್ಳಬೇಕು. ತಾಲ್ಲೂಕು ಪಂಚಾಯಿತಿಯ ಅನುದಾನದ ಕೆಲಸಗಳನ್ನೂ ಸಹ ನೋಡಿಕೊಳ್ಳಬೇಕು, ಗ್ರಾಮ ಪಂಚಾಯಿತಿ ಅನುದಾನ ಕೆಲಸಗಳನ್ನೂ ಸಹ ಅವನೇ ನೋಡಿಕೊಳ್ಳಬೇಕು. NREGA ಹಾಗೂ ಇನ್ನಿತರ ಎಲ್ಲಾ ಯೋಜನೆಗಳ ಕೆಲಸಗಳನ್ನೂ ಸಹ ಒಬ್ಬನೇ ಇಂಜಿನಿಯರ್ ನೋಡಿಕೊಳ್ಳಬೇಕಾಗಿದೆ. ಬಹುಶಃ ಒಬ್ಬನೇ ಎಲ್ಲಾ ಕಡೆಗೂ ಹೋಗಿ ನೋಡಲಿಕ್ಕೆ ಆಗುತ್ತದೆಯೇ? ಇಲ್ಲವೇ? ಎನ್ನುವುದನ್ನಾದರೂ ಸರ್ಕಾರ ಯೋಚಿಸಬೇಕು. ನಮಗೆ ಅತ್ಯಗತ್ಯವಾಗಿ ಇಂಜಿನಿಯರ್‌ಗಳ ಅವಶ್ಯಕತೆ ಇದೆ. ಬಹುಶಃ ಸೇತುವೆಗೆಂದು ಇಂಜಿನಿರ್ ಕೊಡುವಂತಹ ಅವಶ್ಯಕತೆ ಇದೆ. RDPR ನವರು ಈ ಬಗ್ಗೆ ಆಲೋಚಿಸಿ, ಸೂಕ್ತವಾದಂತಹ ಕಾರ್ಯಕ್ರಮವೊಂದನ್ನು ಹಮ್ಮಿಕೊಳ್ಳಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ. ಇನ್ನು PWD ಬಗ್ಗೆ ಹೇಳುವುದಾದರೆ, ಇದರ ಬಗ್ಗೆ ನಾವು ಬಹಳಷ್ಟು ಹೇಳುವುದಿದೆ. ನಮ್ಮ ಜಿಲ್ಲೆಯಲ್ಲಿ ಇವತ್ತು PWD ಗುತ್ತಿಗೆದಾರರು Strike ಮಾಡುತ್ತಿದ್ದಾರೆ. ಒಂದೇ ಒಂದು ಗುಂಡಿಯನ್ನಾಗಲಿ, ಹೊಂಡವನ್ನಾಗಲಿ ಮುಚ್ಚಲಿಕ್ಕೆ ಅವರು ಮೂಂದೆ ಬರುತ್ತಿಲ್ಲ. ಇದಕ್ಕೆ ಕಾರಣವೇನೆಂದು ಕೇಳಿದರೆ, ಹಿಂದೆ ಕೆಲಸ ಮಾಡಿರುವುದಕ್ಕೆ ಸಂಬಂಧಿಸಿದಂತೆ 40 ಕೋಟಿ ರೂ.ಗಳ ಬಾಕಿ ಹಣ ನಮಗೆ ಬರುವುದಿದೆ. ನಾವೇ ಇಂದು ಆತ್ಮಹತ್ಯೆ ಮಾಡಿಕೊಳುವಂತಹ ಪರಿಸ್ಥಿತಿಯಲ್ಲಿದ್ದೇವೆ, ಆದ್ದರಿಂದ Strike ಮಾಡುತ್ತಿದ್ದೇವೆ ಎಂದು ಇಂಜಿನಿಯರ್‌ಗಳು ಹೇಳುತ್ತಾರೆ. ಬಹುಶಃ ಅವರು ಇನ್ನು ಕೆಲಸ ಪ್ರಾರಂಭ ಮಾಡುವಂತಾಗಲಿಲ್ಲ. ಕಳೆದ ವರ್ಷ ಮಂಜೂರಾದ ನಬಾರ್ಡ್ ಯೋಜನೆಗೆ ಇನ್ನೂ ಕೂಡ ಯಾರೂ ಟೆಂಡರ್ ಹಾಕುವುದಕ್ಕೆ ಬರುತ್ತಿಲ್ಲ. ಏಕೆ ನೀವು ಮುಂದೆ ಬರುವುದಿಲ್ಲವೆಂದು ನಾವು ಗುತ್ತಿಗೆದಾರರನ್ನು ಕೇಳಿದರೆ, ಹಿಂದೆ ಮಾಡಿದ ನಬಾರ್ಡ್ ಕೆಲಸದ ದುಡ್ಡನ್ನೇ ಇನ್ನೂ ಕೊಡಲಿಲ್ಲವಂತೆ. ಬಹುಶಃ ನಬಾರ್ಡ್‌ನಿಂದ ಬರುವ ಹಣವನ್ನು ಡೈವರ್ಟ್ ಮಾಡಿ ಬೇರೆ ಕಡೆಗೆ ಕೊಟ್ಟರೆ, ಯಾವ ರೀತಿ ಇವತ್ತು ಗುತ್ತಿಗೆದಾರರಿಗೆ ವಿಶ್ವಾಸ ಬರುವಂಥ ಕೆಲಸವಾಗುತ್ತದೆ. 8 ತಿಂಗಳಾಯಿತು ಇನ್ನೂ ಟೆಂಡರ್ ಹಾಕುವುದಕ್ಕೆ ಬರಲಿಲ್ಲ. ಡಿಸೆಂಬರ್ ನಲ್ಲಿ P.W.D. ಅಪೆಂಡಿಕ್ಸ್–ಸಿ ಬಂತು, ಎಸ್ಟಿಮೇಟ್ ಆಗಿ ಇನ್ನೂ ಟೆಂಡರ್ ಆಗಲಿಲ್ಲ. ಬಹುಶಃ ಈ ರೀತಿಯಾದರೆ ಪರಿಸ್ಥಿತಿ ಯಾವ ರೀತಿ ಇರಬಹುದೆಂದು ತಾವು ಇವತ್ತು ಆಲೊಚನೆ ಮಾಡಬೇಕು. ಮೊನ್ನೆ ನಾನು ಹೇಳಿದ್ದೇನೆ, ದಯವಿಟ್ಟು ನಮಗೆ ಇನ್ನು ಅನುದಾನ ಬೇಡ, ತಾವು ಕಳೆದ ವರ್ಷ ಕೊಟ್ಟಿದ್ದೀರಿ, ಕೊಟ್ಟಿರುವ ಅನುದಾನವನ್ನು ಖರ್ಚು ಮಾಡುವುದಕ್ಕೆ ಒಂದು ವ್ಯವಸ್ಥೆ ಮಾಡಿ. ಹಿಂದಿನ ಗುತ್ತಿಗೆದಾರರ ಸಮಸ್ಯೆ

ಏನೆಂದು ಕೇಳಿ ಅದನ್ನು ಬಗೆಹರಿಸಿ, ಅದನ್ನು ಮುಂದೆ ತೆಗೆದುಕೊಳ್ಳುವಂಥ ಅವಕಾಶವನ್ನು ಮಾಡಿಕೊಡಿ. ಇವತ್ತು ಪ್ರತಿಯೊಂದು ಇಲಾಖೆಗಳ ಇಂಜಿನಿಯರ್ಸ್ ಸಮಸ್ಯೆಯಿಂದ ನಮಗೆ ಇಲ್ಲಿ ಕಿರಿಕಿರಿ. ಬಹುಶಃ ಎಲ್ಲಿ ಇಂಜಿನಿಯರ್ಸ್ ಸರಿಯಾಗಿ ಮುಂದೆ ಹೋಗುವುದಿಲ್ಲವೋ ಅದನ್ನು ನೋಡಿಕೊಂಡು ಸರಿಪಡಿಸುವುದಕ್ಕೆ, ಮುಂದೆ ತೆಗೆದುಕೊಂಡು ಹೋಗುವಂಥ ರೀತಿ ಅವಕಾಶ ಇವತ್ತು ಆಡಳಿತ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ. ಇಲ್ಲಿ ಲೋಕೋಪಯೋಗಿ ಸಚಿವರಿದ್ದಾರೆ, ಮೊನ್ನೆ ತಾನೆ ಅವರೊಡನೆ ನಾನು ಮಾತನಾಡಿದ್ದೇನೆ. ನಮ್ಮ ಜಿಲ್ಲೆಯ 40 ಕೋಟಿ ರೂಪಾಯಿಗಳ ಕೆಲಸ ಮಾಡಿರುವ ಬಾಕಿ ಕೊಡಬೇಕು, ಅವರೂ ಕೂಡ ಬದುಕಬೇಕು, ಅವರ ಮಕ್ಕಳು ಹೆಂಡತಿ ಕುಟುಂಬವನ್ನು ಸಾಕಬೇಕು. ಬಹುಶಃ ಅವರು ಬ್ಯಾಂಕ್‌ನಿಂದ ಸಾಲ ತೆಗೆದುಕೊಂಡು ಕೆಲಸ ಮಾಡಿ, ಅವರಿಗೆ ಇವತ್ತು ದುಡ್ಡು ಕೊಡದಿದ್ದರೆ, ಮುಂದೆ ಅವರು ಹೇಗೆ ಕೆಲಸ ಮಾಡಲಾಗುತ್ತದೆನ್ನುವುದನ್ನು ಹಿರಿಯರಾದ ತಾವು ಆಲೋಚನೆ ಮಾಡಿ. ಅದನ್ನು ಏತಕ್ಕೆ ತಡೆಹಿಡಿಯಲಾಗಿದೆ ಎಂದು ಗೊತ್ತಾಗುತ್ತಿಲ್ಲ. ಅವರು ಕೆಲಸ ಮಾಡಿದ್ದಾರೆ. ಕೆಲಸ ಮಾಡದಿರುವ ಯಾರಿಗೂ ತಾವು ದುಡ್ಡು ಕೊಡಬೇಡಿ. ಕೆಲಸ ಮಾಡಿದವರಿಗಾದರೂ ತಾವು ದುಡ್ಡು ಕೊಡಬೇಕಲ್ಲಾ? ಅದನ್ನು ಕೊಟ್ಟರೆ ಮಾತ್ರ ಮುಂದಿನ ಕೆಲಸವನ್ನು ಅವರು ಪ್ರಾರಂಭಿಸುತ್ತಾರೆ. ಅದಕ್ಕಾಗಿ ನಾನು ತಮ್ಮನ್ನು ವೈಯಕ್ತಿಕವಾಗಿ ಭೇಟಿ ಮಾಡಿ ಚರ್ಚೆ ಮಾಡಿದ್ದೇನೆ. ತಮ್ಮಲ್ಲಿ ಇನ್ನೊಮ್ಮೆ ಕಳಕಳಿಯ ವಿನಂತಿ, ಅದಷ್ಟು ಬೇಗನೆ ನಮ್ಮ ಜಿಲ್ಲೆಯ PWDಯ ಆರ್ಥಿಕ ವ್ಯವಸ್ಥೆಯ ಯಾವ್ಯಾವುದು ಬಾಕಿ ಇದೆ, ಅದನ್ನು ಸರಿಪಡಿಸಬೇಕು.

ಇನ್ನು ಶಿಕ್ಷಣ ಇಲಾಖೆ, ಈ ದೇಶ ಅಭಿವೃದ್ಧಿಯಾಗಬೇಕಾದರೆ, ಸಮಾಜದಲ್ಲಿ ಶಾಸಕರು ವಿಧಾನಸೌಧದಲ್ಲಿ ಬಲಿಷ್ಠರಾದರೆ ಸಾಕಾಗುವುದಿಲ್ಲ. ಪಾರ್ಲಿಮೆಂಟ್‌ನಲ್ಲಿ ಕುಳಿತುಕೊಳ್ಳುವಂಥ ಸಂಸತ್ ಸದಸ್ಯರು ಬಲಿಷ್ಠರಾದರೆ ಸಾಕಾಗುವುದಿಲ್ಲ, ಎ.ಸಿ. ರೂಂ.ನಲ್ಲಿ ಕುಳಿತುಕೊಳ್ಳುವಂಥ ಐಎಎಸ್ ಅಧಿಕಾರಿಗಳು ಅಥವಾ ವ್ಯಾಪಾರಸ್ಥರು ಬಲಿಷ್ಠರಾದರೆ ಸಾಕಾಗುವುದಿಲ್ಲ. ಈ ದೇಶ ಬಲಿಷ್ಠವಾಗಬೇಕಾದರೆ, ಕ್ಲಾಸ್ ರೂಂ. ಮತ್ತು ಪ್ಲೇ ಗ್ರೌಂಡ್ ನಲ್ಲಿ ಆಡುವಂಥ ವಿದ್ಯಾರ್ಥಿಗಳು ಬಲಿಷ್ಠಾರಾದಾಗ ಮಾತ್ರ ಈ ದೇಶ ಬಲಿಷ್ಠವಾಗುತ್ತದೆಂದು ನಾವು ಅರ್ಥ ಮಾಡಿಕೊಳ್ಳಬೇಕು. ಅದಕ್ಕೆ ಬೇಕಾದ ಪೂರಕ ಯೋಜನೆಯನ್ನು ರೂಪಿಸುವಂಥ ಜವಾಬ್ದಾರಿ ಇವತ್ತು ಸರ್ಕಾರದ ಮೇಲಿದೆ. ಇವತ್ತು ಶಿಕ್ಷಣ ಇಲಾಖೆಯಲ್ಲಿ ಯಾವ ರೀತಿ ಕೆಲಸವಾಗುತ್ತಿದೆ? ಇವತ್ತು ಸರಿಯಾದ ಶಿಕ್ಷಕರ ವ್ಯವಸ್ಥೆ ಇಲ್ಲ. ನಿನ್ನೆ ಈ ಬಗ್ಗೆ ಚರ್ಚೆಯಾಗಿದೆ.

ನನ್ನ ಕ್ಷೇತ್ರ ಸೇರಿದಂತೆ ಯಾವುದಾದರೂ ಒಂದು ಕ್ಷೇತ್ರದಲ್ಲಿ ಇವತ್ತು ಶಿಕ್ಷಕರ ವ್ಯವಸ್ಥೆ ಸರಿಯಾಗಿದೆ ಎಂದು ಹೇಳುವವರಿದ್ದಾರೆಯೇ? ಎಲ್ಲಿಯೂ ಕೂಡ ಇಲ್ಲದಿರುವ ಪರಿಸ್ಥಿತಿ ಇವತ್ತಿದೆ. ಮುಂದಿನ ಹಂತದಲ್ಲಿ ನಾವು ನೇಮಕ ಮಾಡುತ್ತೇವೆಂದು ಮಾನ್ಯ ಸಚಿವರು ಹೇಳಿದ್ದಾರೆ. ಇಲ್ಲಿಯವರೆಗೆ ಅತಿಥಿ ಉಪನ್ಯಾಸಕರು ಮಾಡಲಿ. ಈಗ ನಿವೃತ್ತ ಶಿಕ್ಷಕರನ್ನು ನೇಮಕ ಮಾಡುವುದೆಂದು ಮಾಡಿದ್ದಾರೆ, ನಿವೃತ್ತರಾದವರು ಅಷ್ಟು ದೂರದಿಂದ ಬರುವವರು ಯಾರಿದ್ದಾರೆ? ಬಹುಶಃ ನಿವೃತ್ತರಾದವರು ಮಾಡಲು ಬಂದರೆ ಕೊಡಬಹುದು. ಅದರ ಜೊತೆಗೆ ಇವತ್ತು ಬಿಎಡ್ ಮಾಡಿ ಯಾರು ಕೆಲಸವಿಲ್ಲದೆ ಇದ್ದಾರೆ, ಅವರಿಗೂ ಕೂಡ ನಾವು ಇವತ್ತು ಅವಕಾಶ ಕೊಟ್ಟರೆ, ಅವರಿಗೂ ಒಂದು ಉದ್ಯೋಗ ಸಿಕ್ಕಿದಂತಾಗುತ್ತದೆ, ಶಾಲೆಯ ಸುತ್ತಮುತ್ತಲಿರುವ ಟೀಚರ್ಸ್ ಬಂದು ಕಲಿಸುವಂಥ ಒಂದು ವ್ಯವಸ್ಥೆಯಾಗುತ್ತದೆಂದು ನಾನು ಹೇಳುತ್ತೇನೆ. ಆದ ಕಾರಣ ಒಂದು ಯೋಜನೆ ತರುವಾಗ ಈ ರೀತಿಯ ಒಂದು ಗೈಡ್ ಲೈನ್ಸ್ ಅಳವಡಿಸಿಕೊಂಡು ತರಬೇಕು. ನಮಗೆ ಒಂದೇ ಒಂದು ಹೈಸ್ಕೂಲ್ ಇಲ್ಲ. ಇವತ್ತು ಕೇಂದ್ರ ಸರ್ಕಾರವನ್ನು ಅಭಿನಂದಿಸಬೇಕಾಗುತ್ತದೆ. ಕೇಂದ್ರ ಸರ್ಕಾರ ಬೇರೆ ಬೇರೆ ಯೋಜನೆಗಳ ಮೂಲಕ, ಬಹುಶಃ ಸರ್ವಶಿಕ್ಷಣ ಇಲಾಖೆ ಯೋಜನೆಯಡಿಯಲ್ಲಿ, ಇವತ್ತು ಎಲ್ಲಿ ಪ್ರೈಮರಿ ಸ್ಕೂಲಿಗೆ ಕಟ್ಟಡವಿಲ್ಲ, ಅಲ್ಲಿಗೆ ಅತ್ಯುತ್ತಮವಾದ ಶಾಶ್ವತ ಕಟ್ಟಡವನ್ನು ಕೊಡುವಂಥ ವ್ಯವಸ್ಥೆಯನ್ನು ಇವತ್ತು ಕೇಂದ್ರ ಸರ್ಕಾರ ಮಾಡುತ್ತಿದೆ. ರಾಷ್ಟ್ರೀಯ ಮಾಧ್ಯಮ ಶಿಕ್ಷಣದ ಮೂಲಕ ಹೈಸ್ಕೂಲಿಗೆ ಇವತ್ತು ಕಟ್ಟಡ ನಿರ್ಮಾಣ ಮಾಡಿ ಕೊಡುತ್ತದೆ. ಹಿಂದೆ ಕಟ್ಟಡಕ್ಕೆ ಅನುದಾನ ಕೊಡಬೇಕೆನ್ನುವ ಇದ್ದ ಸಮಸ್ಯೆ ಬಹುಶಃ ಇವತ್ತಿಲ್ಲ. ಆದುದರಿಂದ ಇವತ್ತು ಇರುವುದನ್ನು ಆಲೋಚನೆ ಮಾಡಿಕೊಂಡು ಬಹುಶಃ ಉತ್ತಮ ಶಿಕ್ಷಕರನ್ನು ನೇಮಕ ಮಾಡುವ ಜೊತೆಯಲ್ಲಿ ಇಂಗ್ಲೀಷ್ ವಿಷಯವನ್ನು ಆರಂಭದಿಂದಲೇ ಕಲಿಸುವಂಥ ಒಂದು ಅವಕಾಶವನ್ನು ಕಲ್ಪಿಸಬೇಕು. ಇವತ್ತು ಕನ್ನಡದಲ್ಲಿ ಎಷ್ಟೇ ಉತ್ತಮವಾಗಿ ಮಾಡಿದರೂ ಕೂಡ ಬಹುಶಃ ಮುಂದೆ ಇಂಗ್ಲೀಷ್ ಪ್ರತಿಯೊಬ್ಬರಿಗೂ ಬೇಕೇ ಬೇಕು. ಕನ್ನಡ ನಮ್ಮ ರೀಜನಲ್ ಭಾಷೆ, ಹಿಂದಿ ನಮ್ಮ ನ್ಯಾಷನಲ್ ಭಾಷೆ, ಇಂಗ್ಲೀಷ್ ನಮ್ಮ ಇಂಟರ್ ನ್ಯಾಷನಲ್ ಭಾಷೆ. ಮುಂದಿನ ದಿವಸಗಳಲ್ಲಿ ಭಾರತ ದೇಶದ ಯುವಕರು ವಿದ್ಯಾರ್ಥಿಗಳು ಇಂಟರ್ ನ್ಯಾಷನಲ್ ಮಟ್ಟದಲ್ಲಿ ತಮ್ಮದೇ ಆದ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳಬೇಕಾದರೆ ಅವರು ಇಂಗ್ಲೀಷ್ ಅನ್ನು ಕಲಿಯಲೇಬೇಕಲ್ಲಾ? ಇವತ್ತು ಆರ್.ಟಿ.ಇ. ಮುಖಾಂತರ ಕಡ್ಡಾಯ ಶಿಕ್ಷಣ ಮುಖಾಂತರ ನಾವು ಕಡ್ಡಾಯ ಶಿಕ್ಷಣವೆಂದು ಮಾಡುತ್ತಿದ್ದೇವೆ. ಸೆಂಟ್ರಲ್ ಸಿಲಬಸ್ ಎಂದು ಮಾಡಿದ್ದೇವೆ. ಬಹುಶಃ ನಾವು ಸೆಂಟ್ರಲ್ ಸಿಲಬಸ್ ಅನ್ನು ಅಳವಡಿಸುವಾಗ

ಸರ್ಕಾರಿ ಶಾಲೆಗಳಲ್ಲಿ ಆಗುವಂಥ ಪರಿಸ್ಥಿತಿಯನ್ನು ನಾವು ಚರ್ಚೆ ಮಾಡುವಂಥ ಅವಕಾಶ ಈ ಶಿಕ್ಷಣ ಇಲಾಖೆಯಿಂದ ಆಗಿದೆಯೇ? ಇವತ್ತು ಬೇರೆ ಖಾಸಗಿ ಶಾಲೆಗಳಲ್ಲಿ ಸೆಂಟ್ರಲ್ ಸಿಲಬಸ್ ಆರಂಭದಿಂದ ಬರುತ್ತದೆ, ನಮ್ಮವರಿಗೆ ಇದು ಸಡನ್ ಆಗಿ ಬಂದಾಗ ನಾಳೆ ದಿವಸ ಇವರು ಸಿಇಟಿ ಪರೀಕ್ಷೆಗೆ ಕುಳಿತುಕೊಂಡಾಗ ಖಾಸಗಿ ಶಾಲೆಯ ಮಕ್ಕಳ ಜೊತೆಯಲ್ಲಿ ಸರ್ಕಾರಿ ಶಾಲೆಯ ಮಕ್ಕಳು ಸ್ಪರ್ಧೆ ನಡೆಸುವುದಕ್ಕೆ ಸಾಧ್ಯವಿದೆಯಾ ಎಂದು ನಾವು ಇವತ್ತು ಆಲೋಚನೆ ಮಾಡಬೇಕು. ಅವರು ಇವತ್ತು ಯಾವ ರೀತಿ ಸ್ಪರ್ಧೆ ಕೊಡುವುದಕ್ಕೆ ಸಾಧ್ಯವಾಗುತ್ತದೆ? ನಮ್ಮಲ್ಲಿ ಸರಿಯಾದ ಸಿಬ್ಬಂದಿ ಇಲ್ಲ. ಅವರಿಗೆ ಸರಿಯಾದ ತರಬೇತಿ ಇಲ್ಲ, ಬಹುಶಃ ಈ ಸೆಂಟ್ರಲ್ ಸಿಲಬಸ್ ಅಳವಡಿಸುವಲ್ಲಿಯೂ ಕೂಡ, ಶಿಕ್ಷಕರಿಗೆ ಸೆಂಟ್ರಲ್ ಸಿಲಬಸ್ ಬಗ್ಗೆ ತರಬೇತಿ ಕೊಡುವಂಥ ಅವಕಾಶ ಇವತ್ತು ಆಗಬೇಕೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಬಹುಶಃ ಈ ರೀತಿಯ ಒಂದು ಅವಕಾಶ ಮಾಡಿಕೊಡುವ ಜೊತೆಯಲ್ಲಿ, ಬಹುಶಃ ಇದು ಸಾಧ್ಯವಿದೆಯೋ ಇಲ್ಲವೋ, ಯಾವ ಕಾನೂನು ಇದೆ ಎನ್ನುವುದು ನನಗೆ ಗೊತ್ತಿಲ್ಲ. ಸರ್ಕಾರಿ ಹೈಸ್ಕೂಲಿನಲ್ಲಿ 8 ನೇ ತರಗತಿಯಲ್ಲಿ ಹುಡುಗರಿಗೆ ರೂ. 230 ಫೀ ಚಾರ್ಜ್ ಮಾಡುತ್ತೇವೆ. ಫೀ ಚಾರ್ಜ್ ಮಾಡಿದ ನಂತರ, ಬಹುಶಃ private ಕ್ಷೇತ್ರದಲ್ಲಿ ಶಿಕ್ಷಕರ ಕೊರತೆಯಾಗುತ್ತದೆ, ಬೆಟರ್‌ಮೆಂಟ್ ಕಮಿಟಿಯಲ್ಲಿ ಒಂದೇ ಒಂದು ಪೈಸೆ ದುಡ್ಡಿರುವುದಿಲ್ಲ. ತಾವು ಇವತ್ತು develoment fee ಎಂದು ಕಮಿಟಿಯವರು ರೂ.200, ರೂ. 300 ತೆಗೆದುಕೊಳ್ಳುವಂಥ ಅವಕಾಶವನ್ನು ಕೊಟ್ಟರೆ ಇಂದರಿಂದಲಾದರೂ ಕೆಲವೊಂದು ವ್ಯವಸ್ಥೆ ಮಾಡುವಂಥ ಅವಕಾಶವಾಗುತ್ತದೆ. ಕಾನೂನು ಮಾಡಿದರೆ, ಎಂಥವರೂ ಕೂಡ ಕೊಡಲು ಇವತ್ತು ತಯಾರಿದ್ದಾರೆ. ಒಂದು ಸರ್ಕಾರಿ ಶಾಲೆಗೆ ಮಗು ಬಂದು 8,9,10ನೇ ತರಗತಿಯಲ್ಲಿ ಕಲಿತು, ಶಾಲೆಯಿಂದ ಹೋಗುವಾಗ ಅವರು ಖಾಸಗಿ ಕಾಲೇಜಿಗೆ ಹೋಗುತ್ತಾರೆ, ಅಲ್ಲಿ ಅವರು ರೂ.10,000 ಕೊಡುತ್ತಾರೆ. ಬಹುಶಃ ಇಲ್ಲಿಯೂ ಕೂಡ ಯಾರಿಗೆ ಇಷ್ಟವಿದೆ, ಅವರಿಗೆ development fee ಕೊಡಿ ಎಂದು ನೀವು ಫಿಕ್ಸ್ ಮಾಡಿ ಇಂಥ ಒಂದು ಅವಕಾಶವನ್ನು ಶಾಲೆಗೆ ಕೊಟ್ಟರೆ ಖಂಡಿತವಾಗಿಯೂ ಅವರು ಕೊಡುವ ಸ್ವಲ್ಪಮಟ್ಟಿನ ಅನುದಾನದಿಂದ ಬೇರೆ ಸವಲತ್ತುಗಳನ್ನು ಆ ಶಾಲೆಯ ವಿದ್ಯಾರ್ಥಿಗಳಿಗೆ ಕೊಡುವಂಥ ಅವಕಾಶವಾಗುತ್ತದೆಂದು ಮಾನ್ಯ ಸಚಿವರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಸಮಗ್ರವಾಗಿ ಶಿಕ್ಷಣದ ಬಗ್ಗೆ ಆಲೋಚನೆ ಮಾಡಿಕೊಂಡು ಭವಿಷ್ಯ ರಾಜ್ಯದ ಮತ್ತು ದೇಶದ ಹಿತವನ್ನು ಗಮನದಲ್ಲಿಟ್ಟುಕೊಂಡು ವಿಶೇಷವಾದ ಒಂದು ಕಾರ್ಯಕ್ರಮ ಹಮ್ಮಿಕೊಳ್ಳಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಇವತ್ತು ವಸತಿ ಯೋಜನೆಯ ಮೂಲಕ 60,000 ವಸತಿಗಳನ್ನು

ಕೊಡುವಂಥ ಅವಕಾಶವಿತ್ತು ಅದು ಆಗುತ್ತಿಲ್ಲ. ಒಂದನೇ ಕಂತು ಬಂದವರು ಫೌಂಡೇಷನ್ ಹಾಕಿದ್ದಾರೆ, ಎರಡನೇ ಕಂತು ಇನ್ನೂ ಕೂಡ ಬರದಿರುವ ಪರಿಸ್ಥಿತಿ ಇದೆ, ಅವನು ಅರ್ಧಕ್ಕೆ ಕಟ್ಟಿ ನಿಲ್ಲಿಸುವಂಥ ಪರಿಸ್ಥಿತಿ ಇದೆ. ಬಹುಶಃ ಬಡ ಜನಸಾಮಾನ್ಯರಿಗೆ ಕೊಡುವ ಈ ಯೋಜನೆಗೆ ಇಷ್ಟು ಸಮಸ್ಯೆ ಏಕೆ ಎಂದು ನಮಗೆ ಇವತ್ತು ಅರ್ಥವಾಗುವುದಿಲ್ಲ. ಯವುದೇ ಬಡ ಜನಸಾಮಾನ್ಯರ ಯೊಜನೆಯನ್ನು ಅನುಷ್ಠಾನಗೊಳಿಸಬೇಕಾದರೆ, ಅದಕ್ಕೆ ಜಾಸ್ತಿ ಖರ್ಚು ಮಾಡಬೇಕೆಂದಿಲ್ಲ, ಅದಕ್ಕೆ ಪುರುಸೊತ್ತು ಮಾಡಿಕೊಳ್ಳಬೇಕು. ಜನಸಾಮಾನ್ಯರ ಬೇರೆ ಬೇರೆ ಕಾರ್ಯಕ್ರಮವನ್ನು ಇವತ್ತು ಹಮ್ಮಿಕೊಳ್ಳುವುದಕ್ಕೆ ಸರ್ಕಾರ ಪುರುಸೊತ್ತು ಮಾಡಿಕೊಂಡು ಮುಂದೆ ಹೋಗುವಂಥ ವ್ಯವಸ್ಥೆ ಇವತ್ತು ಆಗಬೇಕು. ಇಲ್ಲದಿದ್ದರೆ, ನಮ್ಮ ಡೆಮಾಕ್ರಸಿಗೆ ಮತ್ತು ಬ್ರಿಟಿಷರಿಗೆ ಇರುವಂಥ ವ್ಯತ್ಯಾಸವೇನೆಂದು ಅರ್ಥ ಮಾಡಿಕೊಳ್ಳಬೇಕು. ನಮಗೂ ಅವರಿಗಿರುವ ವ್ಯತ್ಯಾಸವೇನು? ಬಹುಶಃ ಇಲ್ಲಿಗೆ ಬ್ರಿಟಿಷರು ವ್ಯಾಪಾರ ಮಾಡಲೆಂದು ಬಂದು ಇಲ್ಲಿ ರಾಜಕೀಯ ಮಾಡುವುದಕ್ಕೆ ಪ್ರಾರಂಭ ಮಾಡಿದರು. ಈಗಿನ ಪರಿಸ್ಥಿತಿ, ರಾಜಕೀಯವನ್ನು ಮೊದಲು ಮಾಡುವುದು ನಂತರ ವ್ಯಾಪಾರ ಮಾಡುವುದು, ವ್ಯತ್ಯಾಸ ಅಷ್ಟೇ ಬರುವಂಥ ಪರಿಸ್ಥಿತಿ ಇವತ್ತಾಗಿದೆ. ಸರ್ಕಾರವೆಂದರೆ, ಬಹುಶಃ ಹೇಗಿರಬೇಕು? ಒಂದು ಕಡೆ ಕುಳಿತುಕೊಂಡು ರಾಜ್ಯದ ಉದ್ದಗಲಕ್ಕೂ ಜನಸಾಮಾನ್ಯರ ಬಗ್ಗೆ ಆಲೋಚನೆ ಮಾಡಿಕೊಂಡು ಒಂದು ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕು. ಒಂದು ಕಡೆ ಕುಳಿತುಕೊಂಡು ಜನಸಾಮಾನ್ಯರ ಬಗ್ಗೆ ಸರ್ಕಾರ ಆಲೋಚನೆ ಮಾಡಬೇಕು. ಇವತ್ತು ಪರಿಸ್ಥಿತಿ ಏನಾಗಿದೆ? ಇವತ್ತು ಸರ್ಕಾರ ಜನಸಾಮಾನ್ಯರ ಬಗ್ಗೆ ಆಲೋಚನೆ ಮಾಡುವುದಲ್ಲ, ಜನಸಾಮಾನ್ಯರು ಬೆಳಿಗ್ಗೆ 6 ಗಂಟೆ ಸರ್ಕಾರವಿದೆಯೋ ಬಿದ್ದಿದೆಯೋ ಎಂದು ಪತ್ರಿಕೆ ನೋಡುತಿದ್ದಾರೆ. ಇವತ್ತು ಜನಸಾಮಾನ್ಯರು ಸರ್ಕಾರದ ಬಗ್ಗೆ ತಲೆಕೆಡಿಸಿಕೊಳ್ಳುವಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಸರ್ಕಾರ ಇವತ್ತು ಜನಸಾಮಾನ್ಯರ ಬಗ್ಗೆ ಆಲೋಚನೆ ಮಾಡುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕೆಂದು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನು ಆರೋಗ್ಯಕ್ಕೆ ಸಂಬಂಧಿಸಿದಂತೆ, ಕಳೆದ 4 ವರ್ಷದಲ್ಲಿ ಒಂದೇ ಒಂದು Primary Health Centre ನಮ್ಮ ಕಡೆಯಾಗಲಿಲ್ಲ. ಇವತ್ತು ಕೇಂದ್ರ ಸರ್ಕಾರ ಮೇಲ್ದರ್ಜೆಗೇರಿಸಲು ಅವಕಾಶ ಮಾಡಿಕೊಡಿ ಎಂದು ಹೇಳಿ ಅನುದಾನ ಕೊಟ್ಟರೂ ಇಲ್ಲೊಂದು ಗೈಡ್‌ಲೈನ್ ಮಾಡಿ, ನಾವು ಇಂಥದ್ದಕ್ಕೆ ಮೂಲಭೂತ ಸೌಕರ್ಯ ಕೊಡುತ್ತೇವೆ. ನಾವು ಮೇಲ್ದರ್ಜೆಗೆ ಏರಿಸುವುದಿಲ್ಲವೆನ್ನುವ ಪರಿಸ್ಥಿತಿಯಾಗಿದೆ. ಇದ್ದಕಡೆ ಇವತ್ತು ಡಾಕ್ಟರ್

ಗಳಿಲ್ಲ. ನನ್ನ ಕ್ಷೇತ್ರದ ಉಲ್ಲಾಳದ PHC ನಲ್ಲಿ 50,000 ಜನಸಂಖ್ಯೆ ಇದೆ, ಪಕ್ಕದಲ್ಲಿರುವ ಸೋಮೇಶ್ವರದಲ್ಲಿ 20,000 ಜನಸಂಖ್ಯೆ ಇದೆ, ಇದನ್ನು ಕ್ಲಬ್ ಮಾಡಿ 70,000 ಜನಸಂಖ್ಯೆಗೆ ಒಂದು PHC ಇದೆ. ಆ PHC ಮೊನ್ನೆತನಕ ಚೆನ್ನಾಗಿತ್ತು, ಡಾಕ್ಟರುಗಳಿಗೆ ಚೆನ್ನಾಗಿರುವ ಎಲ್ಲಾ ವ್ಯವಸ್ಥೆ ಇತ್ತು. ಇವತ್ತು ಅವರನ್ನು ವರ್ಗಾವಣೆ ಮಾಡಿ ಡಾಕ್ಟರಿಲ್ಲದಿರುವ ಪರಿಸ್ಥಿತಿ ಇದೆ. 70,000 ಜನಸಂಖ್ಯೆ ಇರುವ PHC ಜಾಗದಲ್ಲಿ ಒಬ್ಬ ಡಾಕ್ಟರೂ ಇಲ್ಲದಿದ್ದರೆ ಅಲ್ಲಿಯ ಪರಿಸ್ಥಿತಿ ಏನಾಗಬೇಕೆಂದು ನಾನು ಸರ್ಕಾರವನ್ನು ಕೇಳುತ್ತಿದ್ದೇನೆ, ಸ್ವಲ್ಪವಾದರೂ ಕಾಳಜಿ ವಹಿಸಬೇಲ್ಲವೇ? ಬಹುಶಃ ನನ್ನ ಪುಣ್ಯವೇನೆಂದ್ರೆ, 4–5 ಮೆಡಿಕಲ್ ಕಾಲೇಜಿನವರು ಇದ್ದ ಕಾರಣ ರೋಗಿಗಳ ಸಮಸ್ಯೆ ನಿಭಾಯಿಸುವುದಕ್ಕೆ ಸಾಧ್ಯವಾಗಿರುವುದು ನನ್ನ ಅದೃಷ್ಟವೆಂದು ನಾನು ಹೇಳುತ್ತೇನೆ. ಇಲ್ಲದಿದ್ದರೆ ಇವತ್ತು ರೋಗಿಗಳ ಪರಿಸ್ಥಿತಿ ಹೇಗೆ ಆಗಬೇಕೆಂದು ಆಲೋಚನೆ ಮಾಡಬೇಕು. ಅಲ್ಲಿ ನಮ್ಮದು ಸಮುದ್ರದ ಪ್ರದೇಶ, ಟೂರಿಸಂಗೆ ಬರುವವರು ಬೀಚ್ ನೋಡಿ ಬಹಳ ಸಂತೋಷವಾಗಿ ಹೋಗುವ ಪರಿಸ್ಥಿತಿ ಒಂದೆಡೆ ಆದರೆ, ಮತ್ತೊಂದೆಡೆ ಅಲೆಗಳಲ್ಲಿ ತೇಲಿ ಹೋಗಿ ಸಾವಿಗೀಡಾಗುವುದನ್ನು ಇವತ್ತು ಬಹಳಷ್ಟು ಕಡೆ ನೋಡುತ್ತಿದ್ದೇವೆ. ಸರಿಯದ ಒಂದು ಪೋಸ್ಟ್ ಮಾರ್ಟ್‌ಂ ಮಾಡುವ ಒಂದು ಕೊಠಡಿ ಇಲ್ಲವೆಂದು ನಾನು ಹಲವಾರು ಸಾರಿ ಬೇಡಿಕೆ ಇಟ್ಟಿದ್ದೇನೆ. ಇದುವರೆವಿಗೂ ಪೋಸ್ಟ್ ಮಾರ್ಟ್‌ಂ ಕೊಠಡಿ ಕಾರ್ಯರೂಪಕ್ಕೆ ಬರುವ ಅವಕಾಶವಾಗಲಿಲ್ಲ. ಇಂತಹ ಪ್ರದೇಶಗಳಲ್ಲಿ ಉತ್ತಮವಾದ post mortem ವ್ಯವಸ್ಥೆ ಹಾಗೂ ಕೊಠಡಿಗಳನ್ನು ಕೊಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. Employment generation ಬಗ್ಗೆ ಹೇಳಬೇಕೆಂದರೆ, ಉದ್ಯೋಗಗಳನ್ನು ಜಾಸ್ತಿ ಮಾಡುವುದಕ್ಕೆ ಸರ್ಕಾರ ಏನು ಮಾಡುತ್ತಿದೆ ಎಂದು ಕುಳಿತು ಆಲೋಚನೆ ಮಾಡಬೇಕು. ಬೇರೆ ಬೇರೆ ಯೋಜನೆಗಳು ಅಲ್ಲಿ industrial park, ಇಲ್ಲಿ industrial area, ಅದರಲ್ಲಿ ಇಷ್ಟು ಉದ್ಯೋಗಗಳು ಸೃಷ್ಟಿಯಾಗುತ್ತವೆ ಎಂದು ನಾವು ಮಾತನಾಡಿಕೊಳ್ಳುತ್ತೇವೆ. ಇದು ಸರಿಯಾದ ರೀತಿಯಲ್ಲಿ ಕಾರ್ಯರೂಪಕ್ಕೆ ಬರುತ್ತಿದೆಯೇ ಇಲ್ಲವೆಂದು ನಾವು ನೊಡಬೇಕಾಗಿದೆ. ನನ್ನ ಕ್ಷೇತ್ರದಲ್ಲಿ ಒಂದು IT park ಇದೆ. ಈ IT park ನಲ್ಲಿ ಕೇವಲ Infosys ನವರು ಪ್ರಾರಂಭ ಮಾಡಿರುವುದು ಬಿಟ್ಟರೆ ಬೇರೆ ಯಾವುದೇ ಕೈಗಾರಿಕೆಗಳು ಅಲ್ಲಿ ಪ್ರಾರಂಭವಾಗಿಲ್ಲ. ಏಳು ವರ್ಷಗಳಾದವು. ಖಾಸಗಿ ಸಂಸ್ಥೆಯವರಿಗೆ ಏಳು ವರ್ಷಗಳಿಂದ ಅವರಿಗೆ ಜಾಗವನ್ನು ಕೊಟ್ಟು ಅವರು ಇನ್ನೂ ಕೂಡ ಅಲ್ಲಿ ಯಾವುದೇ ಸಂಸ್ಥೆಗಳನ್ನು ಪ್ರಾರಂಭ ಮಾಡದೇ ಇದ್ದರೆ ಉದ್ಯೋಗ ಹೇಗೆ ಸೃಷ್ಟಿಯಾಗುತ್ತದೆ ಎಂದು ನಾನು ಕೇಳುವುದಕ್ಕೆ ಇಚ್ಛೆ ಪಡುತ್ತೇನೆ.

ಎರಡು–ಮೂರು ವರ್ಷಗಳಲ್ಲಿ ಅವರು ಪ್ರಾರಂಭ ಮಾಡಲಿಲ್ಲವೆಂದರೆ ಅದನ್ನು ರದ್ದುಪಡಿಸುವುದಕ್ಕೆ ಸರ್ಕಾರಕ್ಕೆ ಕಾನೂನಿನಲ್ಲಿ ಅವಕಾಶವಿದೆ. ಸರ್ಕಾರದವರು ಅವರನ್ನು ಕರೆದು ನೀವು ಏಕೆ ಪ್ರಾರಂಭ ಮಾಡಿಲ್ಲ ಎಂದು ಹೇಳಿ ಕೆಲಸ ಪ್ರಾರಂಭಿಸುವ ಹಾಗೆ ಕ್ರಮ ಕೈಗೊಳ್ಳಬೇಕು. ಈ ವ್ಯವಸ್ಥೆಯಲ್ಲಿ ಉದ್ಯೋಗ ಹೇಗೆ ಸೃಷ್ಟಿಯಾಗುತ್ತದೆ ಎಂದು ನಾನು ಕೇಳುವುದಕ್ಕೆ ಬಯಸುತ್ತೇನೆ. ಈರೋಡ್‌ನಲ್ಲಿ Industrial area ಎಂದು compound wall ಒಂದು ಕಟ್ಟುತ್ತಾರೆ. KIADB ಯವರಿಗೆ ಇದು ಬಿಟ್ಟರೆ ಏನೂ ಕೆಲಸ ಇಲ್ಲ. ಸಿಕ್ಕಿದಂತಹ ದುಡ್ಡಿನಲ್ಲಿ ಜಾಗವನ್ನು ಖರೀದಿ ಮಾಡಿ ಕಾಂಪೌಂಡ್ ವಾಲ್ ದೊಡ್ಡ ಇಂಡಿಯಾ ಚೈನಾ ಬಾರ್ಡ್‌ರ್ ಅಥವಾ ಪಾಕಿಸ್ಥಾನ ಇಂಡಿಯಾ ಬಾರ್ಡರ್ ತರಹ ದೊಡ್ಡ ವಾಲ್ ಬಾರ್ಡ್‌ರ್ ಕಟ್ಟುತ್ತಾರೆ. ಅಷ್ಟು ದೊಡ್ಡ ಕಾಂಪೌಂಡ್ ವಾಲ್ ಕಟ್ಟುವ ಅಗತ್ಯವಿಲ್ಲ. IT park ನಲ್ಲಿ ಯಾರೂ ಯುದ್ಧಕ್ಕೆ ಹೋಗುವುದಿಲ್ಲ. ಅಷ್ಟು ಕೋಟಿಗಟ್ಟಲೆ ಹಣ ಖರ್ಚು ಮಾಡಿ compound wall ಮಾಡುತ್ತಾರೆ. ಅದು ಬೇಕು ಬೇಡವೆಂದೂ ಆಲೋಚನೆ ಮಾಡುವುದಿಲ್ಲ. ನಮ್ಮ ಹೈವೇಯಲ್ಲಿ ಇದ್ದಂತಹ ರಸ್ತೆ ಬಹುಶಃ ಅಲ್ಲಿ ಇಂಡಸ್ಟ್ರೀಗಳು ಬರಲಿ ಎಂದು ದುಡ್ಡು ಖರ್ಚು ಮಾಡುತ್ತಾರೆ, ಅಲ್ಲಿ ಯಾರೂ ಒಬ್ಬರು ಬರುವ ವ್ಯವಸ್ಥೆಯಾಗಿಲ್ಲ. ಮಂಗಳೂರಿನ ಗಂಧಿ ಮಠದಲ್ಲಿ Export oriented park ಇದೆ ಒಬ್ಬರೂ ಕೂಡ ಇವತ್ತು ಪ್ರಾರಂಭ ಮಾಡಲಿಲ್ಲ. ಕಾಂಪೌಂಡ್ ವಾಲ್ ಹಾಕಿದ್ದಾರೆ. 10 ವರ್ಷಗಳಾದರೂ ಒಬ್ಬರೂ ಪ್ರಾರಂಭ ಮಾಡಲಿಲ್ಲ. ಹಾಗಾದರೆ ನಾವು ಯುವಕರಿಗೆ ಉದ್ಯೋಗ ಸೃಷ್ಟಿಸುತ್ತೇವೆಂದು ಹೇಗೆ ಹೇಳುವುದು? ಈ ರೀತಿಯ ಬೇರೆ ಬೇರೆ ಸಮಸ್ಯೆಗಳನ್ನು ಸರ್ಕಾರ ಅರ್ಥ ಮಾಡಿಕೊಂಡು ಮುಂದೆ ಹೋಗುವ ಅವಶ್ಯಕತೆ ಇದೆ ಎಂದು ಹೇಳುತ್ತಾ, ಸಮಾಜದ ಅಭಿವೃದ್ಧಿಗೆ ಬೇರೆ ಬೇರೆ ರೀತಿಯಲ್ಲಿ ಸರ್ಕಾರಿ ನೌಕರರು ಅವರು ಶಿಕ್ಷಕರಿರಲಿ, ಆಫೀಸಿನಲ್ಲಿರಲಿ, ತಾಲ್ಲೂಕು ಆಫೀಸ್‌ನವರು ಇರಲಿ, ಕಾಲೇಜ್ ಲೆಕ್ಚರರ್ಸ್ ಇರಲಿ ಅವರೂ ಕೂಡ ವಿಶೇಷವಾದ ಕೊಡುಗೆಯನ್ನು ಕೊಟ್ಟಿದ್ದಾರೆಂದು ಮನಗಾಣಬೇಕು. ಅವರು ಸ್ವಾಭಿಮಾನದ ಬದುಕು ಮಾಡುವುದಕ್ಕೆ

(ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಅವರಿಗೆ ಬೇಕಾದಂತಹ ವ್ಯವಸ್ಥೆಯನ್ನು ಕೊಡುವ ಜವಾಬ್ದಾರಿ ಇದೆ. ಸರ್ಕಾರಿ ನೌಕರರು ಅಂದ ತಕ್ಷಣ ಅವರಿಗೆ ಬೇಕಾದ ಸರಿಯಾದ ಸವಲತ್ತುಗಳನ್ನು ಕೊಟ್ಟಾಗ ಸಮಸ್ಯೆಯಲ್ಲಿರುವ ಶೇಕಡ 50 ರಷ್ಟು ಸಮಸ್ಯೆಗಳು ಬಗೆಹರಿಯುತ್ತವೆ ಎಂದು ನಾನು

ಹೇಳಬಯಸುತ್ತೇನೆ. ಒಬ್ಬ ಸರ್ಕಾರಿ ನೌಕರನ ಮಕ್ಕಳಿಗೆ ಉತ್ತಮವಾದ ಶಿಕ್ಷಣ ಕೊಡುವ ವ್ಯವಸ್ಥೆಯಾಗಬೇಕು. ಒಬ್ಬ ಸರ್ಕಾರಿ ನೌಕರ ಅವನ ಮಗನಿಗೆ ಇಂಜಿನಿಯರ್ ಮಾಡಬೇಕಾದರೆ ಅವರಿಗೆ ವರ್ಷಕ್ಕೆ ಎರಡು ಲಕ್ಷ ಖರ್ಚು ಬರುತ್ತದೆ. ಅವನಿಗೆ ತಿಂಗಳಿಗೆ ಸಂಬಳ 20,000 ಸಿಗುವ ಪರಿಸ್ಥಿತಿ ಇದೆ. ಅವನ ಮನೆಯಲ್ಲಿ ಅವರ ವ್ಯವಸ್ಥೆಯನ್ನು ನೋಡಬೇಕು. ಅವರ ಆರೋಗ್ಯ ಇವನ್ನೆಲ್ಲಾ ನೋಡಿದರೆ ಯಾವ ರೀತಿ ಅವನು ಸ್ವಾವಲಂಬಿ ಬದುಕು ಬದುಕುವುದಕ್ಕೆ ಸಾಧ್ಯವಿದೆ? ಪ್ರತಿಯೊಬ್ಬ ಸರ್ಕಾರಿ ನೌಕರನ ಕನಸು ಒಂದು ಸಣ್ಣ ಮನೆ ಕಟ್ಟಿಕೊಳ್ಳಬೇಕೆಂದು ಇರುತ್ತದೆ. ಅವರಿಗೆ ಮನೆ ಕಟ್ಟುವುದಕ್ಕೆ ಸಾಧ್ಯವಿದೆಯೇ? ಆದಕಾರಣ ಸರ್ಕಾರ ಯಾವ ರೀತಿ ನಮ್ಮ ಸಮಾಜಕ್ಕೆ, ರಾಜ್ಯಕ್ಕೆ ಹಾಗೂ ದೇಶಕ್ಕೆ, ರೈತರು ವಿಶೇಷವಾದ ಸೇವೆಯನ್ನು ಕೊಟ್ಟಿದ್ದಾರೆ, ಸರ್ಕಾರಿ ನೌಕರರೂ ಕೂಡ ಅಷ್ಟೇ ಸೇವೆಯನ್ನು ಕೊಟ್ಟಿರುವುದನ್ನು ನಾವು ಮನಗಾಣಬೇಕು. ನಮ್ಮ ರೈತರಿಗೆ 0% ನಲ್ಲಿ ಲೋನ್ ಕೊಡುತ್ತಿದ್ದೇವೆ. ಸರ್ಕಾರಿ ನೌಕರರಿಗೆ 0% ಕೊಡುವುದು ಬೇಡ. ಒಂದು 3% ನಲ್ಲಿ ಕೆಳಮಟ್ಟದ ಸರ್ಕಾರಿ ನೌಕರರು ಯಾರಿದ್ದಾರೆ ಪೊಲೀಸ್‌ನವರು, ಶಿಕ್ಷಕರು, 20,000 ದ ಒಳಗೆ ಸಂಬಳ ತೆಗೆದುಕೊಳ್ಳುವ ಸರ್ಕಾರಿ ನೌಕರರಿಗೆ 3% ನಲ್ಲಿ ಗೃಹ ಸಾಲ ಕೊಡುವ ವ್ಯವಸ್ಥೆ ಮಾಡಿ ಇವತ್ತು ಸ್ವಾಭಿಮಾನದ ಬದುಕು ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಸರ್ಕಾರದಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಅದೇ ರೀತಿಯಲ್ಲಿ ನಮ್ಮ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಮತ್ತು back ward community ಹಾಸ್ಟೆಲ್‌ಗಳನ್ನು ಎಷ್ಟು ಸಾಧ್ಯವೋ ಅಷ್ಟು ತೆಗೆಯುವುದಕ್ಕೆ ಅವಕಾಶವಾಗಬೇಕು. ಇಡೀ ನಮ್ಮ ದಕ್ಷಿಣ ಕನ್ನಡ ಜಿಲ್ಲೆಗೆ ಮಂಗಳೂರು ವಿಶ್ವವಿದ್ಯಾಲಯ ಒಂದೇ ಇದೆ. ಇದರಲ್ಲಿ ಕೊಡಗು ಕೂಡ ಸೇರಿದೆ. ಅದು ನನ್ನ ಮತ ಕ್ಷೇತ್ರದಲ್ಲಿದೆ. ಅಲ್ಲಿಗೆ ದೂರ ದೂರದ ಪ್ರದೇಶಗಳಿಂದ ಕುಂದಾಪುರ, ಬೈಂದೂರು, ಹಾಗೂ ಮಡಿಕೇರಿಯಿಂದ ಬಂದಂತಹ ಮಹಿಳೆಯರಿಗೆ ಹಾಸ್ಟೆಲ್ ಸೌಲಭ್ಯವನ್ನು ಮಾಡದೇ ಇದ್ದರೆ ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತ ವರ್ಗದ ಮಹಿಳೆಯರು ಹೇಗೆ ವಿದ್ಯೆ ಕಲಿಯುವುದಕ್ಕೆ ಸಾಧ್ಯವಾಗುತ್ತದೆ? ಆದ ಕಾರಣ ಹಾಸ್ಟೆಲ್‌ಗಳ ಸಂಖ್ಯೆಯನ್ನು ಹೆಚ್ಚು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ನಮಗೆ ರಾಜ್ಯ ಮಟ್ಟದಲ್ಲಿ ಇವತ್ತು ಎರಡು ಖಾತೆಗಳು ಇವೆ. ಸಮಾಜ ಕಲ್ಯಾಣ ಸಚಿವರು ಬೇರೆ ಇದ್ದಾರೆ. ಮತ್ತು ಅಲ್ಪ ಸಂಖ್ಯಾತ ಸಚಿವರು ಇದ್ದಾರೆ. ಆದರೆ ಇಲಾಖೆಯಲ್ಲಿ ಅಧಿಕಾರಿ ಒಬ್ಬರೇ. ಅಲ್ಲಿ ಸರಿಯಾದ ಅಧಿಕಾರಿ ವರ್ಗ ಇಲ್ಲ. ಸಚಿವರು ಬೇರೆ ಬೇರೆ ಇರುವಾಗ ನಿಮಗೆ ಕಛೇರಿಗಳನ್ನು ಬೇರೆ ಬೇರೆ ಮಾಡುವುದಕ್ಕೆ ಏನು ಸಮಸ್ಯೆ ಎಂದು ಕೇಳುವುದಕ್ಕೆ ಇಚ್ಛೆ ಪಡುತ್ತೇನೆ. ಇವತ್ತು ಆಡಳಿತವನ್ನು ಸುಸಜ್ಜಿತಾಗಿ

ಮಾಡಲಿಕ್ಕೆ ಸರ್ಕಾರದಿಂದ ಸಿಕ್ಕುವ ಸವಲತ್ತುಗಳು ಆದಷ್ಟು ಬೇಗ ಜನಸಾಮಾನ್ಯರಿಗೆ ಮುಟ್ಟುವುದಕ್ಕೆ ಪ್ರತ್ಯೇಕವಾದ ಕಛೇರಿಗಳನ್ನು ಮಾಡಿ. ಎಲ್ಲಾ ಜಿಲ್ಲೆಗಳಲ್ಲಿ ಪ್ರತ್ಯೇಕವಾದ ಕಛೇರಿಗಳನ್ನು ಪ್ರಾರಂಭ ಮಾಡಿ ಅದಕ್ಕೆ ಬೇಕಾದ ಅಧಿಕಾರಿಗಳನ್ನು ನೇಮಿಸಬೇಕೆಂದು ಹೇಳಬಯಸುತ್ತೇನೆ. ನನಗೆ ಮಾತನಾಡುವುದು ಬಹಳಷ್ಟು ಇದೆ, ಬೇರೆ ಬೇರೆ ಸದ್ಯರುಗಳು ಮಾತನಾಡುವವರು ಇರುವುದರಿಂದ ನಾನು ಹೆಚ್ಚಿಗೆ ಸಮಯ ತೆಗೆದುಕೊಳ್ಳುವುದಿಲ್ಲ. ನಾವು ಶಾಸಕರಾಗಿ ಕೆಲಸ ಮಾಡಬೇಕೆಂದರೆ ಶಾಸಕರ ನಿಧಿಗೆ ಸರಿಯಾಗಿ ದುಡ್ಡು ಬರುತ್ತಿಲ್ಲ. ಹಲವಾರು ವರ್ಷಗಳಿಂದ ನಾವು ಒಂದು ಕೋಟಿಯಲ್ಲಿಯೇ ಇದ್ದೇವೆ. ಅದರಲ್ಲಿ 27% ನಾವು ಇದಕ್ಕೆ ಕೊಡಬೇಕಾಗುತ್ತದೆ. 60 ಲಕ್ಷ ದಲ್ಲಿ ನವು ಎಷ್ಟು ಕಿ.ಮೀ. ರಸ್ತೆ ಮಾಡಬಹುದು ಎಷ್ಟು ತೋಡು ಕಟ್ಟಬಹುದು, ಎಷ್ಟು ಬೋರ್ ಹೊಡೆಸಬಹುದು, ಏನು ಮಾಡುವುದು ಎಂದು ನಾವು ಆಲೋಚನೆ ಮಾಡಬೇಕಾಗುತ್ತದೆ. ಇದನ್ನು ಸ್ವಲ್ಪ ಜಾಸ್ತಿ ಮಾಡಬೇಕು. ಇದನ್ನು ನಾವು ಹಲವಾರು ಸಾರಿ ಬೇಡಿಕೆ ಇಟ್ಟಿದ್ದೇವೆ. ಮುಂದಿನ ಸಲ ಮಾಡುತ್ತೇವೆಂದು ಹೇಳಿದ್ದೀರಿ. ಕೇಂದ್ರ ಸರ್ಕಾರದವರು ಒಬ್ಬ MP ಗೆ 5 ಕೋಟಿ ರೂ. ಕೊಡುವ ಅವಕಾಶ ಇದೆ. ನಮ್ಮ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಎಲ್ಲಾ ಮಂತ್ರಿಗಳಲ್ಲಿ ನನ್ನ ಕಳಕಳಿಯ ವಿನಂತಿ ನಮ್ಮ ಶಾಸಕರ ನಿಧಿಯನ್ನು ಕನಿಷ್ಠ 3 ಕೋಟಿಗಾದರೂ ಜಾಸ್ತಿ ಮಾಡಿಕೊಡಬೇಕೆಂದು ನಾನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಅದರ ಜೊತೆಯಲ್ಲಿ ಇದನ್ನು implement ಮಾಡುವುದಕ್ಕೆ ಸರಿಯದ ವ್ಯವಸ್ಥೆಯಾಗಬೇಕು. ವಿಧಾನಸಭೆಯಲ್ಲಿ ಏನು ಹೇಳುತ್ತಾರೆ. ನೀವು ಒಂದು ಕೋಟಿ ಎಸ್ಟಿಮೇಟ್ ಮಾಡಿ ಕೆಲಸ ಮಾಡಿ ಆ ದುಡ್ಡು ಮಾರ್ಚ್‌ವರೆಗೆ ಬರುತ್ತದೆ ಎಂದು ಹೇಳುತ್ತಾರೆ. ಅಲ್ಲಿ ಡಿಸಿ ಬಳಿ ಹೊದಾಗ ನಮಗೆ ದುಡ್ಡು ಬರದೆ ನಾವು ರಿಲೀಸ್ ಮಾಡುವುದಿಲ್ಲ. ನಾಳೆ ಸರ್ಕಾರ ಬಿದ್ದರೆ ನಮಗೆ ದುಡ್ಡು ಕೊಡುವವರು ಯಾರು ಎಂದು ಕೇಳುವ ಪರಿಸ್ಥಿತಿಗೆ ಅವರು ಬಂದು ನಿಂತಿದ್ದಾರೆ. ಅವರು ದುಡ್ಡಿಗೆ ಅಪ್ರೂವಲ್ ಕೊಡುವುದಿಲ್ಲ. ಇಂಜಿನಿಯರ್ ಎಸ್ಟಿಮೇಟ್ ಮಾಡುವುದಿಲ್ಲ. ಇಂಜಿನಿಯರ್ ಎಸ್ಟಿಮೇಟ್ ಮಾಡಿದರೆ contractor ಕೆಲಸ ಮಾಡುವುದಿಲ್ಲ. ಅಭಿವೃದ್ಧಿ ಕಾರ್ಯ ಕೈಗೊಳ್ಳುವುದಕ್ಕೆ ಸೂಕ್ತವಾದ ಕ್ರಮವನ್ನು ಕೈಗೊಳ್ಳಬೇಕು. ಜಿಲ್ಲಾಧಿಕಾರಿಗಳಿಗೆ ಸ್ಪಷ್ಟವಾದ ನಿರ್ದೇಶನ ಕೊಡಬೇಕು. ನಾನು ಬಹಳಷ್ಟು ಬೇಸರದಿಂದ ಹೇಳುವುದು ಎಲ್ಲಾ IAS ಅಧಿಕಾರಿಗಳು ಒಂದೆ ಕಡೆ ಕಾಲ ಕಳೆಯುತ್ತಿದ್ದಾರೆ. ಬೇರೆ ಬೇರೆ ಜಿಲ್ಲೆಗೆ ಹೋದಾಗ ಒಂದೊಂದು ಐಡಿಯಾ. ಒಬ್ಬ ಡಿಸಿ ಬಂದು ಒಂದು ಐಡಿಯ ಮಾಡಿ ರೂಲ್ ಮಾಡುತ್ತಾರೆ. ಒಂದು ವರ್ಷಕ್ಕೆ ಅವರು ಇರುವುದಿಲ್ಲ. ಅದು ಬಿಟ್ಟು ಇನ್ನೊಂದು ಗ್ರಾಮಕ್ಕೆ ಹೊಗುತ್ತಾರೆ. ಜನರು ಇಲ್ಲಿ

ಹೊಂದಿಕೊಳ್ಳಬೇಕೋ ಅಥವಾ ಅಲ್ಲಿ ಬಂದಂತಹ ಡಿಸಿಗೆ ಹೊಂದಿಕೊಳ್ಳಬೇಕೋ ಎಂದು ಆಲೋಚನೆ ಮಾಡಬೇಕಾಗುತ್ತದೆ. ಅದ ಕಾರಣ ನಮ್ಮ ಶಾಸಕರ ನಿಧಿಗೆ ಆದಷ್ಟು ಬೇಗ ಅನುಮೋದನೆ ಕೊಟ್ಟರೆ ಜಿಲ್ಲಾಧಿಕಾರಿಗಳಿಗೆ ದುಡ್ಡು ಬರುತ್ತದೆ. ಅನುಮೋದನೆ ಕೊಡುವ ಆದೇಶವನ್ನು ಸರ್ಕಾರ ಹೊರಡಿಸಬೇಕೆಂದು ಕೇಳಿಕೊಂಡು, ಮಲೆನಾಡಿನ ಬಗ್ಗೆ ಬಜೆಟ್‌ನಲ್ಲಿ ದುಡ್ಡು ಇಟ್ಟಿದ್ದಾರೆ. ಇದುವರೆಗೂ ಮೀಟಿಂಗ್ ಕರೆದಿಲ್ಲ. ಡಿಸೆಂಬರ್‌ನಲ್ಲಿ ಚುನಾವಣೆ ಇರಬಹುದು, ಚುನಾವಣೆ ಎಷ್ಟು ಮುಂದೆ ಹೋದರೂ ಮಾರ್ಚ್ ನಂತರ ಏನೂ ಮಾಡುವುದಕ್ಕೆ ಸಾಧ್ಯವಿಲ್ಲ. ಅದಕ್ಕಿಂತ ಮುಂಚೆ ಕೆಲಸ ಮಾಡಿ ಮುಗಿಸಬೇಕಾಗುತ್ತದೆ. ಮಲೆನಾಡಿನ ದುಡ್ಡು ಇನ್ನೂ ಬರಬೇಕು. ಮೀಟಿಂಗ್‌ಗೆ ಕಾಲ ನಿಗಧಿ ಮಾಡುವ ಕೆಲಸ ಇನ್ನೂ ಆಗಲಿಲ್ಲ. ಮೊನ್ನೆತನಕ ನಾವು ಕೇಳಿದರೆ ಸಚಿವರು ಇಲ್ಲವೆಂದು ಹೇಳಿದರು. ಈಗ ಕಾನೂನು ಸಚಿವರು ಅದಕ್ಕೆ ಸಚಿವರಾಗಿದ್ದಾರೆ. ಆದಷ್ಟು ಬೇಗ ಮಲೆನಾಡು ಮತ್ತಿತರೆ ಬೋರ್ಡುಗಳ ಮೀಟಿಂಗ್ ನಡೆಸಿ ಅನುದಾನ ಬಿಡುಗಡೆ ಮಾಡುವುದಕ್ಕೆ ನಮಗೆ ಅವಕಾಶ ಕಲ್ಪಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಅದೇ ರೀತಿಯಲ್ಲಿ ಶಾಸಕರ ನಿಧಿಯನ್ನು ಕಂತು ಕಂತಿನಲ್ಲಿ ಬಿಡುಗಡೆ ಮಾಡುವುದು ಬಿಟ್ಟು ಒಂದೇ ಸಾರಿ ಬಿಡುಗಡೆ ಮಾಡುವ ಹಾಗೆ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತಾ, ಈ ಎಲ್ಲಾ ಮಾತುಗಳನ್ನು ನಾವು ಬರೆದು ಇಟ್ಟುಕೊಂಡು ಚರ್ಚೆ ಮಾಡುವಂಥದ್ದಲ್ಲ. ನಾವು ನಮ್ಮ ಕ್ಷೇತ್ರಕ್ಕೆ ಹೋದಂತಹ ಸಂದರ್ಭದಲ್ಲಿ ಆದಂತಹ ಅನುಭವವನ್ನು ನಾವು ಇಲ್ಲಿ ಹೇಳುತ್ತಿದ್ದೇವೆ. ಜನರ ಸಮಸ್ಯೆಗಳನ್ನು ನಾವು ನಿಮ್ಮ ಮುಂದೆ ಬಂದು ಹೇಳುವಂತಹ ಅವಕಾಶವಾಗಿದೆ. ಸರ್ಕಾರ ಇದನ್ನು ಬಹಳ ಗಂಭೀರವಾಗಿ ಪರಿಗಣಿಸಬೇಕು. ನಾನು ಹೇಳಿದ್ದು ಆಗುತ್ತದೆ ಎಂದು ಅಲ್ಲ, ಅಥವಾ ಇನ್ನೊಬ್ಬರು ಹೇಳಿದ್ದು ಆಗುತ್ತದೆ ಎಂದು ಅಲ್ಲ. ಎಲ್ಲವನ್ನು ಮಾಡುವುದಕ್ಕೆ ಯಾರಿಗೂ ಕೂಡ ಮಾಡುವುದಕ್ಕೆ ಸಾಧ್ಯವಿಲ್ಲ. ಕನಿಷ್ಠ ಮಟ್ಟದ ರೂಪುರೇಷೆಯನ್ನು ಮಾಡಿ ಡಿಸೆಂಬರ್ ತಿಂಗಳೊಳಗೆ ಎಲ್ಲಾ ಯೋಜನೆಗಳು ಕಾರ್ಯಗತ ಆಗುವ ಒಂದು ಕಾರ್ಯಕ್ರಮ ಹಮ್ಮಿಕೊಳ್ಳಬೇಕೆಂದು ಆಶಿಸಿ, ಸರ್ಕಾರ ಪೂರ್ಣ ಅವಧಿಯನ್ನು ಪೂರೈಸಲಿ ಎಂದು ನಾನು ಶುಭ ಹಾರೈಸುತ್ತಾ ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಶ್ರೀಕಾಂತ್ ಕುಲಕರ್ಣಿ (ಜಮಖಂಡಿ):– ಮಾನ್ಯ ಉಪಾಧ್ಯಕ್ಷರೆ, ಅನುದಾನ ಬೇಡಿಕೆಗಳ ಮೇಲಿನ ಚರ್ಚೆಯಲ್ಲಿ ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ

ವಂದಿಸುತ್ತೇನೆ. ಬಹುಶಃ ನಮ್ಮದು ಆ ಭಾಗದ ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಸಾಕಷ್ಟು ಗ್ರಾಮಾಂತರ ಭಾಗದ ಮತ್ತು ಇತರ ಜನಗಳ ಸಮಸ್ಯೆಗಳಿದ್ದು, ಆ ಸಮಸ್ಯೆಗಳಿಗೆ ಸರ್ಕಾರ ಸ್ಪಂದಿಸುತ್ತದೆ ಎನ್ನುವ ಇಚ್ಛೆಯನ್ನಿಟ್ಟುಕೊಂಡು ವಿವಿಧ ಇಲಾಖೆಗಳಿಗೆ ಸೇರಿದಂಥ ಕೆಲವು ವಿಚಾರಗಳನ್ನು ಈ ಸದನದ ಮುಂದೆ ನಾನು ಪ್ರಸ್ತಾವಿಸುವುದಕ್ಕೆ ಬಯಸುತ್ತೇನೆ. ಬಹುಶಃ ಅನೇಕ ನಮ್ಮ ಶಾಸಕ ಸ್ನೇಹಿತರುಗಳು ಅಭಿಪ್ರಾಯ ಪಟ್ಟಂತೆ ಶಿಕ್ಷಣದ ಬಗ್ಗೆ ಸಾಕಷ್ಟು ಸುಧಾರಣೆಗಳು ಇನ್ನೂ ನಮ್ಮ ಭಾಗದಲ್ಲಿ ಆಗಬೇಕಾಗಿದೆ, ನಮ್ಮ ಸರ್ಕಾರ ಬಹಳ ದೊಡ್ಡ ಸಂಖ್ಯೆಯಲ್ಲಿ ಶಿಕ್ಷಕರುಗಳನ್ನು ನೇಮಿಸಿಕೊಂಡು ಶಾಲೆಗಳನ್ನು ಪ್ರಾರಂಭ ಮಾಡುತ್ತಾ ಹೈಸ್ಕೂಲ್‌ಗಳನ್ನೂ ಕೂಡ ಕೊಟ್ಟಿದೆ. ಆದರೆ ಸಾರ್ವಜನಿಕರ ಬೇಡಿಕೆಗಳಿಗನುಗುಣವಾಗಿ ಶೇಕಡ ನೂರಕ್ಕೆ ನೂರರಷ್ಟು ಆಗಿಲ್ಲವೆಂದು ನನಗನ್ನಿಸುತ್ತಿದೆ. ಬಹುಶಃ ನಮ್ಮ ಭಾಗದಲ್ಲಿ ಶಿಕ್ಷಕರುಗಳು ಮತ್ತು ಹೈಸ್ಕೂಲ್‌ಗಳು ಇನ್ನೂ ಬೇಕಾಗಿದೆ. ನನ್ನ ಕ್ಷೇತ್ರವಾದ ಜಮಖಂಡಿಯ ಸಾವಳಗಿ ರೆವಿನ್ಯೂ ಸೆಂಟರ್ ಆಗಿದ್ದು ಆ ಭಾಗದ ಸುತ್ತಮುತ್ತಲು ಸುಮಾರು 22 ಹಳ್ಳಿಗಳಿದ್ದು ಸಾವಳಗಿಯಲ್ಲಿ ಕಾಲೇಜ್ ಇದೆ, ಹೈಸ್ಕೂಲ್ ಕೂಡ ಇದೆ. ಆದರೆ ಅಲ್ಲಿ ಜೂನಿಯರ್ ಕಾಲೇಜ್ ಇಲ್ಲ. ನಮ್ಮ ಸರ್ಕಾರ, ಹಿಂದಿನ ಸರ್ಕಾರ, ನಮ್ಮ ಹಿಂದಿನ ಶಾಸಕರ ಪ್ರಯತ್ನಗಳಿಂದಾಗಿ ಅಲ್ಲಿ ಜೂನಿಯರ್ ಕಾಲೇಜ್‌ಗೆ ಕಟ್ಟಡವನ್ನು ಕಟ್ಟಲಾಗಿದೆ. ಒಂದು ವಿಶೇಷತೆ ಏನೆಂದರೆ ಅಲ್ಲಿ ಕಟ್ಟಡ ಕಟ್ಟಲಾಗಿದೆಯಾದರೂ ಅಲ್ಲಿಗೆ ಜೂನಿಯರ್ ಕಾಲೇಜ್ ಮಂಜೂರಾಗಿಲ್ಲ. ನಾನು ಇದರ ಬಗ್ಗೆ ಮಾನ್ಯ ಶಿಕ್ಷಣ ಸಚಿವರ ಗಮನವನ್ನೂ ಸೆಳೆದ. ಅದಷ್ಟು ಬೇಗನೇ ಅಲ್ಲಿಗೆ ಜೂನಿಯರ್ ಕಾಲೇಜ್ ಕೊಟ್ಟು ಸಾವಳಗಿ ಮತ್ತು ಸುತ್ತಮುತ್ತಲೂ ಬರತಕ್ಕಂಥ 22 ಹಳ್ಳಿಗಳ ಸಾಮಾನ್ಯ ಬಡವರ ಮಕ್ಕಳಿಗೆ ಪದವಿ ಪೂರ್ವ ಕಾಲೇಜನ್ನು ಕೊಡತಕ್ಕಂಥ ವ್ಯವಸ್ಥೆಯನ್ನು ಆದಷ್ಟು ಬೇಗನೇ ಮಾಡಬೇಕೆನ್ನುವ ವಿನಂತಿಯನ್ನು ನಾನು ಈ ಸಂದರ್ಭದಲ್ಲಿ ಮಾಡಬಯಸುತ್ತೇನೆ. ಇದರ ಜೊತೆಗೆ ನನ್ನ ಕ್ಷೇತ್ರದ ನನ್ನ ತಾಲ್ಲೂಕಿನಲ್ಲಿ ಶಿಕ್ಷಣದ ಬಗ್ಗೆ ಇರತಕ್ಕಂಥ ಒಂದು ಸಮಸ್ಯೆಯೇನೆಂದರೆ ಜಮಖಂಡಿ ತಾಲ್ಲೂಕಿನ ಮಧ್ಯದಲ್ಲಿ ಕೃಷ್ಣಾ ನದಿ ಹರಿದುಹೋಗಿದೆ. ಬಹುಶಃ ಸರ್ಕಾರ 519.6 ಮೀ ಹಿನ್ನೀರು ಅಲ್ಲಿಗೆ ಬಂದು ಸುಮಾರು ನನ್ನ ಕ್ಷೇತ್ರದ 13 ಹಳ್ಳಿಗಳು ಮುಳುಗಡೆಯಾಗುತ್ತವೆಂದು ಸುಮಾರು ಹದಿನೈದು ಇಪ್ಪತ್ತು ವರ್ಷಗಳ ಹಿಂದೆಯೇ ಪರಿಗಣಿಸಿ ಆ ಮುಳುಗಡೆ ಗ್ರಾಮಗಳಿಗೆ ಒಂದು ಪುನರ್‌ವಸತಿ ಯೋಜನೆಗೆ ಸ್ಥಳವನ್ನು ತೋರಿಸಿದ್ದಾರೆ. ಆ ಒಂದು ಹಿನ್ನೀರಿನಲ್ಲಿ ಮುಳುಗಡೆಯಾಗುವ ಗ್ರಾಮಗಳಿಗೆ ಕೊಡಬೇಕಾದಂಥ ಪರಿಹಾರವನ್ನು ಕೂಡ ಕೊಟ್ಟಿದ್ದಾರೆ. ಆದರೆ ನೂರಕ್ಕೆ

ತೊಂಭತ್ತೊಂಭತ್ತರಷ್ಟು ಜನರು ಕೃಷಿಯನ್ನೇ ಮಾಡುವಂಥವರು ಆ ಗ್ರಾಮಾಂತರ ಭಾಗದಲ್ಲಿರುವುದರಿಂದ ಅಲ್ಲಿ ಉಳಿದಿರುವಂಥ ಜಮೀನು, ಪಂಪ್‌ಸೆಟ್ ಹಾಗೂ ಇತ್ಯಾದಿಗಳನ್ನು ಬಿಟ್ಟು ಪುರ್ನವಸತಿ ಕೇಂದ್ರಕ್ಕೆ ಇನ್ನೂ ಯಾರೂ ಹೋಗಿಲ್ಲ. ಹೀಗಾಗಿ ಅಲ್ಲಿರುವಂಥ ಜನರು ಆ ಗ್ರಾಮಗಳಿಂದ ಹೊರ ಬರುವುದಕ್ಕೆ ಸಿದ್ಧರಿಲ್ಲ. ಬಹುಶಃ ನನಗನ್ನಿಸುತ್ತಿದೆ 524 ಮೀಟರ್ ಎತ್ತರವಾಗುವವರೆಗೆ, ಎಲ್ಲಿಯವರೆಗೆ ಆ ಗ್ರಾಮದಲ್ಲಿ ಪ್ರತ್ಯಕ್ಷ ನೀರು ಬರುವುದಿಲ್ಲವೋ ಅಲ್ಲಿಯವರೆಗೆ ಜನರು ತಮ್ಮ ಹಳೆಯ ಸ್ಥಳವನ್ನು ಬಿಟ್ಟು ಹೊಸ ಗ್ರಾಮಕ್ಕೆ ಹೋಗುವುದಕ್ಕೆ ರೆಡಿಯಿಲ್ಲ. ಸಾಕಷ್ಟು ಅಭಿವೃದ್ಧಿ ಕೆಲಸಗಳ ಹಿನ್ನೆಲೆಯಲ್ಲಿ ಆ ಗ್ರಾಮಗಳಿಗೆ ಉಳಿದೆಲ್ಲಾ ಮೂಲಭೂತ ಸೌಕರ್ಯಗಳನ್ನು ಒದಗಿಸಿದರೂ ಕೂಡ ಶಿಕ್ಷಣದ ಬಗ್ಗೆ ಸ್ವಲ್ಪ ಸರ್ಕಾರ ಗಮನವನ್ನು ಕೊಟ್ಟಿಲ್ಲವೆಂದು ನಾನು ಬಹಳ ವಿಷಾದದಿಂದ ಹೇಳಬೇಕಾಗುತ್ತದೆ. ಏಕೆಂದರೆ ಇವತ್ತು ಶಿಕ್ಷಣ ಇಲಾಖೆಯಿಂದ ಬರತಕ್ಕಂಥ ಹಣ, ಈ ಒಂದು 13 ಹಳ್ಳಿಗಳಲ್ಲಿ, ನಾನೊಂದು ಪಟ್ಟಿಯನ್ನು ಮಾನ್ಯ ಶಿಕ್ಷಣ ಸಚಿವರಿಗೆ ಕೊಟ್ಟಿದ್ದೇನೆ, 13 ಹಳ್ಳಿಗಳಲ್ಲಿ ಮಕ್ಕಳ ಸಂಖ್ಯೆ ಜಾಸ್ತಿಯಾಗಿದೆ, ಹಳೆಯ ಶಾಲೆಗಳಲ್ಲಿರುವ ಕೋಣೆಗಳು ಸಂಪೂರ್ಣ ರಿಪೇರಿಗೆ ಬಂದಿವೆ. ಇವತ್ತು ಶಾಲಾ ಮಕ್ಕಳ ಸಂಖ್ಯೆ ಜಾಸ್ತಿಯಾಗುತ್ತಿರುವುದರಿಂದ ಹೊಸ ಕಟ್ಟಡದ ಅವಶ್ಯಕತೆ ಇದೆಯಾದ ಕಾರಣ ಅಲ್ಲಿ ಶಾಲಾ ಕಟ್ಟಡವಾಗಬೇಕೆಂದಾಗ ಅಲ್ಲಿರುವಂಥ ಅಧಿಕಾರಿಗಳು ಈ ಗ್ರಾಮಗಳು ಮುಳುಗಡೆ ಗ್ರಾಮಗಳಾಗಿರುವುದರಿಂದ ಹೊಸ ಕಟ್ಟಡಗಳನ್ನು ಕಟ್ಟುವುದಕ್ಕೆ ಅವಕಾಶವಿಲ್ಲವೆನ್ನುವಂಥ ಮಾತನ್ನು ಹೇಳುತ್ತಾರೆ. ಜಿಲ್ಲಾ ಮಟ್ಟದಲ್ಲಿ ನಡೆಯುವ ಸಭೆಯಲ್ಲಿಯೂ ಕೂಡ ಈ ಬಗ್ಗೆ ಸಾಕಷ್ಟು ಬಿಸಿ ಬಿಸಿಯಾದ ಚರ್ಚೆಗಳಾದರೂ ಕೂಡ ಆ ಅಧಿಕಾರಿಗಳು ಒಪ್ಪದೇ ಇರುವುದರಿಂದ ಆ 13 ಹಳ್ಳಿಗಳ ಶಾಲಾ ಕಟ್ಟಡಗಳ ಪರಿಸ್ಥಿತಿ ಹೇಗಿದೆಯೆಂದರೆ ಇವತ್ತೇನಾದರೂ ಮಳೆ ಬಂದುಬಿಟ್ಟರೆ ಶಾಲೆಗಳಲ್ಲಿರುವ ಮಕ್ಕಳುಗಳು ಶಾಲೆ ಬಿಟ್ಟು ಮನೆಗೆ ಹೋಗುವಂಥ ಪರಿಸ್ಥಿತಿ ಇದೆ. ಹೀಗಾಗಿ ಮಾನ್ಯ ಶಿಕ್ಷಣ ಸಚಿವರಲ್ಲಿ ಮತ್ತು ಸರ್ಕಾರಕ್ಕೆ ವಿಶೇಷವಾದ ಮನವಿಯನ್ನು ನಾನು ಮಾಡುತ್ತೇನೆ, ಈ 13 ಗ್ರಾಮಗಳಲ್ಲಿರುವ ಶಾಲಾ ಕಟ್ಟಡಗಳ ರಿಪೇರಿ ಮಾಡಲು ಸುಮಾರು ಒಂದು ಕೋಟಿ ರೂ. ಗಳಷ್ಟು ಹಣದ ಅವಶ್ಯಕತೆ ಇದೆ ಮತ್ತು ಮಕ್ಕಳ ಸಂಖ್ಯೆ ಜಾಸ್ತಿಯಾಗುತ್ತಿರುವುದರಿಂದ 22 ಹೊಸ ಕೊಠಡಿಗಳು ಕೂಡ ಬೇಕಾಗಿದೆ. ಇದಕ್ಕೆ ಬೇಕಾದಂಥ ದುಡ್ಡನ್ನು ಶಿಕ್ಷಣ ಇಲಾಖೆಯಿಂದ ಅಥವಾ ಕೃಷ್ಣಾ ಮೇಲ್ದಂಡೆಯ ಪುನರ್ವಸತಿ ಯೋಜನೆಯ ಬಜೆಟ್‌ನಿಂದಲಾದರೂ ಹಣವನ್ನು ಮಂಜೂರು ಮಾಡಿ ತಕ್ಷಣ ಶಾಲಾ ಕೊಠಡಿಗಳ ರಿಪೇರಿ ಮತ್ತು ಹೊಸ ಕಟ್ಟಡಕ್ಕೆ ಅವಕಾಶ ಮಾಡಿಕೊಡಬೇಕೆನ್ನುವ ವಿನಂತಿಯನ್ನು

ಈ ಸಂದರ್ಭದಲ್ಲಿ ಮಾಡುತ್ತೇನೆ. ಇನ್ನು ನಮ್ಮ ಭಾಗದಲ್ಲಿ ಬಹಳ ದೊಡ್ಡ ಸಂಖ್ಯೆಯಲ್ಲಿ ಕಾರ್ಮಿಕರಿದ್ದಾರೆ. ಜಮಖಂಡಿ ಮತ್ತು ಬೀಳಗಿ ಭಾಗವೆಂದರೆ, ಅದರಲ್ಲಿಯೂ ವಿಶೇಷವಾಗಿ ಕೃಷ್ಣಾ, ಘಟಪ್ರಭ ಮತ್ತು ಮಲಪ್ರಭ ನದಿ ಹರಿದಿರುವಂಥ ಜಿಲ್ಲೆಯಲ್ಲಿ ದೊಡ್ಡ ಪ್ರಮಾಣದಲ್ಲಿ ಕಬ್ಬನ್ನು ರೈತರು ಬೆಳೆದಿದ್ದಾರೆ. ಆ ಕಬ್ಬನ್ನು ನುರಿಸುವಂಥ ಕಾರ್ಖಾನೆಗಳೂ ಕೂಡ ಸಾಕಷ್ಟು ಹುಟ್ಟಿಕೊಂಡಿವೆ. ಹೀಗಾಗಿ ಜಮಖಂಡಿ ಸುತ್ತಮುತ್ತಲೂ ಕಾರ್ಮಿಕರ ಸಂಖ್ಯೆ ಬಹಳ ದೊಡ್ಡ ಪ್ರಮಾಣದಲ್ಲಿ ಬೆಳೆದಿದೆ. ಬೆಳಿಗ್ಗೆಯಿಂದ ಆಸ್ಪತ್ರೆಗಳ ಬಗ್ಗೆ ಸದನದಲ್ಲಿ ಸಾಕಷ್ಟು ಚರ್ಚೆಯಾಗಿದೆ. ಆ ಭಾಗದಲ್ಲಿರುವಂಥ ತೇರದಾಳ ಇರಬಹುದು, ಮಹಾಲಿಂಗಪುರ ಇರಬಹುದು, ಜಮಖಂಡಿ ಇರಬಹುದು, ಮುಧೋಳ ಇರಬಹುದು, ಇಲ್ಲಿರುವ ಎಲ್ಲಾ ಆಸ್ಪತ್ರೆಗಳಿಗೆ ಬೇಕಾಗಿರುವಷ್ಟು ವೈದ್ಯರುಗಳ ಸಂಖ್ಯೆಯಿಲ್ಲ. ಈ ಆಸ್ಪತ್ರೆಗಳಲ್ಲಿ ಅವಶ್ಯಕತೆಯಿರುವಷ್ಟು ವೈದ್ಯರುಗಳಿಲ್ಲದೇ ಸಾರ್ವಜನಿಕರಿಗೆ ಸಾಕಷ್ಟು ತೊಂದರೆಗಳಾಗಿವೆ. ಹೀಗಾಗಿ ಈ ಸಂದರ್ಭದಲ್ಲಿ ಕಾರ್ಮಿಕ ಇಲಾಖೆಯ ಸಚಿವರಿಗೆ ನಾನು ವಿನಂತಿ ಮಾಡಿಕೊಳ್ಳುತ್ತೇನೆ, ಅಲ್ಲೊಂದು ಕಾರ್ಮಿಕ ಇಲಾಖೆಗೆ ಸೇರಿದಂತೆ ಒಂದು ಆಸ್ಪತ್ರೆಯನ್ನು ಮಾಡುವುದಕ್ಕೆ ತಾವೇನಾದರೂ ಮಂಜೂರಾತಿ ಕೊಟ್ಟರೆ ಸುಮಾರು ಎರಡೂ ಮೂರು ತಾಲ್ಲೂಕುಗಳಿಗೆ ಅನುಕೂಲವಾಗುತ್ತದೆ. ಅಲ್ಲಿ ಎರಡು–ಮೂರು ತಾಲ್ಲೂಕುಗಳಿಗೆ ಅನುಕೂಲವಾಗುವಂಥ ಇ.ಎಸ್.ಐ. ಆಸ್ಪತ್ರೆಯನ್ನು ಮಾಡುವುದಕ್ಕೆ ಸಾಧ್ಯತೆ ಇದೆ. ಅದಕ್ಕೆ ಮಂಜೂರಾತಿಯನ್ನು ಸರ್ಕಾರ ಕೊಡಬೇಕೆಂದು ಈ ಸಂದರ್ಭದಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಇನ್ನು ಜಮಖಂಡಿ ತಾಲ್ಲೂಕಿನ ಭಾಗದಲ್ಲಿ ಐ.ಟಿ.ಐ ಕಾಲೇಜ್ ಬೇಕೆಂದು ಈ ಹಿಂದೆ ಸರ್ಕಾರದ ಗಮನವನ್ನು ಸೆಳೆದಿದ್ದೆ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು):– ಮಾನ್ಯ ಉಪಾಧ್ಯಕ್ಷರೆ, ಬೇಡಿಕೆಗಳ ಮೇಲೆ ಚರ್ಚೆ ನಡೆಯುತ್ತಿದೆ. ಕೇವಲ ನಾಲ್ಕು ಜನ ಮಂತ್ರಿಗಳು ಮಾತ್ರ ಸದನದಲ್ಲಿದ್ದಾರೆ. ಈ ಬಗ್ಗೆ ನೀವು ಸರ್ಕಾರಕ್ಕೆ ಏಕೆ ಎಚ್ಚರಿಕೆಯನ್ನು ಕೊಡುತ್ತಿಲ್ಲ? ಇಬ್ಬರು ಉಪ ಮುಖ್ಯಮಂತ್ರಿಗಳಿರುವಾಗ ಅವರಿಬ್ಬರೂ ಮೇಲ್ಮನೆಯಲ್ಲಿರುತ್ತಾರೆಯೇ? ಒಬ್ಬ ಉಪ ಮುಖ್ಯಮಂತ್ರಿಯಾದರೂ ಈ ಸದನದಲ್ಲಿ ಇರಬೇಡವೇ? ಹೋಗಲಿ ಇನ್ನೂ ಇಬ್ಬರನ್ನೂ ಉಪ ಮುಖ್ಯಮಂತ್ರಿಗಳನ್ನಾಗಿ ಮಾಡಿಬಿಡಲಿ, ಈಗ ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ಇಲ್ಲ. ಹೇಗಿದ್ದರೂ ಪರಿಶಿಷ್ಟ ಜಾತಿಯವರಿಗೆ ಅನ್ಯಾಯವಾಗಿದೆಯೆಂದು ಹೇಳಲಾಗಿದೆ.

ಶ್ರೀ ಉಮೇಶ್ ವಿ. ಕತ್ತಿ:– Deputy Chief Minister ಎಂದು ಮಾಡಬೇಕೇ?

ಶ್ರೀ ಸಿದ್ದರಾಮಯ್ಯ:– Deputy Chief Minister ಎನ್ನುವ ಪದ Constitutionನಲ್ಲಿ ಇಲ್ಲ. ರಾಜಕೀಯಕ್ಕೋಸ್ಕರ ಇದನ್ನು ಮಾಡಿಕೊಂಡಿರುವುದು. ನೀವು ರಾಜಕೀಯಕ್ಕಾಗಿ ಅವರನ್ನೂ ಡಿ.ಸಿ.ಎಂ. ಆಗಿ ಮಾಡಿಕೊಳ್ಳಿ. There is no provision as such in the Constitution. Constitution ನಲ್ಲಿ Deputy Chief Minister ಎಂದು ಇಲ್ಲ. Only Chief Minister and Ministers ಎಂದು ಇರುವುದು.

ಶ್ರೀ ಉಮೇಶ್ ವಿ. ಕತ್ತಿ:– ನೀವೂ ಕೂಡ Deputy Chief Minister ಆಗಿದ್ದಿರಲ್ಲ.

ಶ್ರೀ ಸಿದ್ದರಾಮಯ್ಯ:– ನನಗೂ ಕೂಡ ಹಾಗೇ ಕರೆಯುತ್ತಿದ್ದದ್ದು. Constitutionನಲ್ಲಿ Deputy Chief Minister ಎಂದು ಹೇಳಿಲ್ಲದಿದ್ದರೂ ಕೂಡ ನನ್ನನ್ನೂ Deputy Chief Minister ಆಗಿ ಮಾಡಲಾಗಿತ್ತು. ನನಗೂ ಕೂಡ ಇದೇ ರೀತಿಯಲ್ಲಿಯೇ ಡಿ.ಸಿ.ಎಂ. ಎಂದು ಮಾಡಿದ್ದು. ಅರ್ಥವಾಯಿತೆ, ನಾನೇ ಈ ಬಗ್ಗೆ ಹೇಳಿದ್ದೇನೆ, Constitution ನಲ್ಲಿ Deputy Chief Minister ಎಂದು ಇಲ್ಲ, ನಮ್ಮನ್ನು ಖುಷಿ ಪಡಿಸುವುದಕ್ಕೆ ಈ ರೀತಿ ಮಾಡಿದ್ದಾರೆಂದು ನಾನು ಹಿಂದೆಯೇ ಹೇಳಿದೆ. ನಮ್ಮನ್ನು ಸಮಾಧಾನ ಮಾಡುವುದಕ್ಕೆ ಮಾಡಿದ್ದಾರೆಂದು ಹೇಳಿದ್ದೆ. ಅದೇ ರೀತಿ ನೀವೂ ಕೂಡ ಖುಷಿ ಪಡಿಸುವುದಕ್ಕೆ ಇಬ್ಬರನ್ನು Deputy Chief Minister ಆಗಿ ಮಾಡಿದ್ದೀರಿ. ಇನ್ನೂ ಇಬ್ಬರನ್ನು ಮಾಡಿ. ಅಲ್ಲೊಂದಿಬ್ಬರು, ಇಲ್ಲೊಂದಿಬ್ಬರು ಇರಲಿ. Deputy Chief Minister ಎಂದು ಹೇಳಿದ ತಕ್ಷಣ ಅದಕ್ಕೊಂದು ತೂಕ ಬರುತ್ತದೆ. ಈ ಯಡಿಯೂರಪ್ಪನವರು ಇದರ ಬಗ್ಗೆ ಸರಿಯಾಗಿ ಅಡ್ವೈಸ್ ಮಾಡುವುದಿಲ್ಲ. ಯಡಿಯೂರಪ್ಪನವರೆ, ನಿಮ್ಮದೇ ಸರ್ಕಾರವಿದೆ. You are the De facto Chief Minister, You are the Boss. ನೋಡಿ ನೀವು ಹೇಳಿದ ತಕ್ಷಣ ಸಾಲ ಮನ್ನಾ ಮಾಡಿಬಿಟ್ಟರು. ನಾವು ಎಷ್ಟು ಶಂಖಹೊಡೆದುಕೊಂಡರೂ ಮಾಡಲಿಲ್ಲ. ಆದರೆ ನೀವು ಅರ್ಧ ಗಂಟೆಯಲ್ಲಿ ಮಾತನಾಡಿ ಸಾಲ ಮನ್ನಾ ಮಾಡಿಸಿಬಿಟ್ಟಿರಿ. ಈ ಸರ್ಕಾರದಲ್ಲಿ ಇನ್ನೇನಾದರೂ ಆಗಬೇಕಾಗಿದ್ದರೆ ನಾವು ನಿಮಗೇ ಹೇಳಿಕೊಳ್ಳಬೇಕೆಂದು ತೀರ್ಮಾನ ಮಾಡಿಬಿಟ್ಟಿದ್ದೇವೆ.

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು):– ಮಾನ್ಯ ಸಿದ್ದರಾಮಯ್ಯನವರೆ, 2005ರಲ್ಲಿ ನಿಮ್ಮನ್ನು ಉಪ ಮುಖ್ಯಮಂತ್ರಿಗಳು ಎಂದೇ ಮಾಡಿದ್ದರು. ನಡಾವಳಿಯಲ್ಲಿಯೂ ಅದೇ ರೀತಿ ಇದೆ.

ಶ್ರೀ ಸಿದ್ದರಾಮಯ್ಯ:- ಉದಾಸಿಯವರೆ, ನಾನೇ ಹೇಳಿದ್ದೇನಲ್ಲ. ನಾನೇ ಒಂದು ಸಾರಿ ಇಲ್ಲಿ ಹೇಳಿದ್ದೇನೆ, ಇದೇ ರೀತಿಯಲ್ಲಿ ಒಂದು ಬಾರಿ ಈ ವಿಷಯ ಚರ್ಚೆಗೆ ಬಂದಾಗ Constitution ನಲ್ಲಿ Deputy Chief Minister ಎನ್ನುವ ಪದವಿಲ್ಲ. ನನಗೆ ರಾಜಕೀಯವಾಗಿ ಸಮಾಧಾನ ಮಾಡುವುದಕ್ಕೋಸ್ಕರವಾಗಿ ನನಗೆ ಆ ಹುದ್ದೆಯನ್ನು ಕೊಟ್ಟಿದ್ದಾರೆಂದು ಹೇಳಿದ್ದೇನೆ. ನೀವು ಮಾಡಿರುವುದು ಅದೇ ಕೆಲಸ. ಇದು Constituition ನಲ್ಲಿ ಇದೆಯೇ? Chief Minister & Council of Ministers ಎಂದು ಇರುವುದು ಬಿಟ್ಟರೆ ಆ ಪದ ಎಲ್ಲಿದೆ? ನಾವು Deputy Chief Minister ಎಂದು ಪ್ರಮಾಣ ವಚನ ಸ್ವೀಕಾರ ಮಾಡುವ ಹಾಗೆ ಇಲ್ಲ. ನಾನು ಉಪ ಮುಖ್ಯಮಂತ್ರಿಯಾಗಿ ಎಂದು ಹೇಳುವುದಕ್ಕೆ ಬರುವುದಿಲ್ಲ. ಮಂತ್ರಿಯಾಗಿ ಎಂದು ಹೇಳಬೇಕು. ಆ ರೀತಿ ಹೇಳಿದರೆ it is againist the Constitution.ಅದು ಏನೇ ಇರಲಿ, ಇಲ್ಲಿ demands ಮೇಲೆ ಚರ್ಚೆ ಮಾಡುವಾಗ ಸದನದಲ್ಲಿ ಮಂತ್ರಿಗಳು ಇಲ್ಲದೆ ಖಾಲಿ ಇದೆ. ನಮಗೆ Council ನಲ್ಲಿ ಮಂತ್ರಿಗಳು ಯಾರಿದ್ದಾರೆ, ಅಲ್ಲಿಗೆ ಯಾರನ್ನು ಅಲಾಟ್ ಮಾಡಿದ್ದೀರಿ, ಇಲ್ಲಿ ಯಾರಿದ್ದಾರೆ ಎಂದು ಒಂದು ಪಟ್ಟಿಯನ್ನು ಕೊಡಿ. ಅವರು ಅಲ್ಲಿಗೂ ಹೋಗಬೇಕು, ಇಲ್ಲಿಗೂ ಬರಬೇಕು. ಯಾರ್‍ಯಾರನ್ನು ಎಲ್ಲಿಗೆ ಮಾಡಿದ್ದೀರಿ ಎಂದು ಒಂದು ಪಟ್ಟಿಯನ್ನು ಕೊಡಿ. ಇಲ್ಲಿ ಮಂತ್ರಿಗಳೇ ಇಲ್ಲದೆ ಹೋದರೆ ಎಂ.ಎಲ್.ಎ. ಗಳು ಏಕೆ ಇರುತ್ತಾರೆ? ಅವರು ಕೇಳಿದ ಪ್ರಶ್ನೆಗೆ ಉತ್ತರ ಹೇಳುವವರು ಇಲ್ಲದೆ ಹೋದರೆ ಯಾರೂ ಬರುವುದಿಲ್ಲ. ದಯಮಾಡಿ ನೀವು ಅವರಿಗೆ ಹೇಳಬೇಕು. ಮಂತ್ರಿಗಳು ಬರದೇ ಹೋದರೆ ಅಧಿಕಾರಿಗಳು ಬರುವುದಿಲ್ಲ, ಈ ಕಡೆ ತಲೆ ಹಾಕುವುದಿಲ್ಲ. ಅವರು ಮಂತ್ರಿಗಳು ಬಂದರೆ ಮಾತ್ರ ಈ ಕಡೆ ಬರುತ್ತಾರೆ. ಸೆಕ್ರೆಟರಿಗಳು ಬರುವುದಿಲ್ಲ. ಅವರು ಡೆಪ್ಯುಟಿ ಸೆಕ್ರೆಟರಿಯನ್ನು ಕಳುಹಿಸಿಬಿಟ್ಟು ಆಫೀಸ್‌ನಲ್ಲಿ ಕುಳಿತುಕೊಂಡು ಬಿಡುತ್ತಾರೆ. ಇವರು ಆಫೀಸ್‌ನಲ್ಲಿ ಕೆಲಸ ಮಾಡುವುದಿಲ್ಲ. ಆಫೀಸಿಗೆ ಫೋನ್ ಮಾಡಿದರೆ ಅಸೆಂಬ್ಲಿಗೆ ಹೋಗಿದ್ದಾರೆಂದು ಹೇಳುತ್ತಾರೆ. ಇಲ್ಲಿ ನೋಡಿದರೆ ಒಬ್ಬರೂ ಇರುವುದಿಲ್ಲ. ಅದಕ್ಕೆ ಸರ್ಕಾರದ ಬಿಗಿ ತಪ್ಪಿದರೆ, ಹಳಿ ತಪ್ಪಿದರೆ ಈ ರೀತಿಯಾಗುತ್ತದೆ. ಆದುದರಿಂದ Parlimentary Affairs Minister ಗೆ ನಾನು ಹೇಳುವುದೇನೆಂದರೆ ಎಲ್ಲರಿಗೂ ಇಲ್ಲಿ ಇರುವುದಕ್ಕೆ ಹೇಳಿ.

ಶ್ರೀ ಶ್ರೀಕಾಂತ್ ಸುಬ್ಬರಾವ್ ಕುಲಕರ್ಣಿ:- ಮಾನ್ಯ ಉಪಾಧ್ಯಕ್ಷರೆ, ನಮ್ಮ ಭಾಗದಲ್ಲಿ ಬಹಳ ದೊಡ್ಡ ಸಂಖ್ಯೆಯಲ್ಲಿ ರೈತರು, ಕೃಷಿ ಕಾರ್ಮಿಕರು, ಬಡವರು ಮತ್ತು ಹಿಂದುಳಿದ

ವರ್ಗದ ಜನರು ಇರುವುದರಿಂದ ಅವರ ಮಕ್ಕಳಿಗೆ ಸರಿಯಾಗಿ ಶಿಕ್ಷಣ ಕೊಡಿಸುವಂತಹ ವ್ಯವಸ್ಥೆಯಾಗಬೇಕಾಗುತ್ತದೆ. ಸಮಾಜ ಕಲ್ಯಾಣ ಇಲಾಖೆ ಮೂಲಕ ಅಲ್ಲಲ್ಲಿ ಮೊರಾರ್ಜಿ ವಸತಿ ಶಾಲೆಗಳನ್ನು ತೆರೆಯವುದರ ಮೂಲಕ ಬಡವರಿಗೆ ವ್ಯವಸ್ಥೆಗಳನ್ನು ಮಾಡಿದ್ದಾರೆ. ಆದರೆ ಒಂದು ದುರ್ದೈವ ಎಂದರೆ ನನ್ನ ಜಮಖಂಡಿ ಕ್ಷೇತ್ರದಲ್ಲಿ ಇಲ್ಲಿಯವರೆಗೆ ಒಂದೂ ಕೂಡ ಮೊರಾರ್ಜಿ ಶಾಲೆಯಿಲ್ಲ. ಹೀಗಾಗಿ ಈ ಸಂದರ್ಭದಲ್ಲಿ ಸಮಾಜ ಕಲ್ಯಾಣ ಮಂತ್ರಿಗಳಿಗೆ ನಾನು ಒಂದು ಮನವಿಯನ್ನು ಮಾಡುತ್ತೇನೆ. ಈ ಜಮಖಂಡಿ ಕ್ಷೇತ್ರಕ್ಕೆ ಪ್ರಥಮ ಆದ್ಯತೆ ಕೊಟ್ಟು ಒಂದು ಮೊರಾರ್ಜಿ ಶಾಲೆಯನ್ನು ಮಂಜೂರು ಮಾಡಬೇಕು. ಅದರ ಜೊತೆಗೆ ಸನ್ಮಾನ್ಯ ಅಟಲ್ ಬಿಹಾರಿ ವಾಜಪೇಯಿ ಹೆಸರಿನಲ್ಲಿ ವಸತಿ ಶಾಲೆಯನ್ನು ಮಾಡಬೇಕೆನ್ನುವ ತೀರ್ಮಾನವನ್ನು ಸರ್ಕಾರ ತೆಗೆದುಕೊಂಡಿದೆ. ಅದು ವಿಭಾಗ ಮಟ್ಟಕ್ಕೆ ಒಂದು ಶಾಲೆ ಆಗಬೇಕೆಂದು ಇದೆ. ನಮ್ಮ ಭಾಗದಲ್ಲಿ ಇದಕ್ಕೆ ಬೇಕಾದಂತಹ ಸ್ಥಳಾವಕಾಶ, ಆ ಭಾಗದ ಬಡವರ ಮಕ್ಕಳಿಗೆ ಅನುಕೂಲವಾಗುವಂತಹ ಒಂದು ವ್ಯವಸ್ಥೆ ಮಾಡುವುದಕ್ಕೆ ಸರ್ವ ರೀತಿಯಿಂದಲೂ ಸಹಕಾರ ಮಾಡುವುದಕ್ಕೆ ನಾವು ತಯಾರಿದ್ದೇವೆ. ಜಮಖಂಡಿ ತಾಲ್ಲೂಕಿನಲ್ಲಿ ಅಟಲ್ ಬಿಹಾರಿ ವಾಜಪೇಯಿ ಹೆಸರಿನಲ್ಲಿ ಒಂದು ವಸತಿ ಶಾಲೆಯನ್ನು ಸರ್ಕಾರ ಮಂಜೂರು ಮಾಡಬೇಕೆಂದು ಈ ಸಂದರ್ಭದಲ್ಲಿ ವಿನಂತಿಯನ್ನು ಮಾಡುತ್ತೇನೆ.

ಬೆಳಿಗ್ಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಸಂಬಂಧಪಟ್ಟಂತೆ ವೈದ್ಯರುಗಳು ಬೇಕು ಎಂದು ಸಾಕಷ್ಟು ಚರ್ಚೆಯಾಗಿದೆ. ಗ್ರಾಮಾಂತರ ಭಾಗದಲ್ಲಿ ಕೂಡ ಇವತ್ತು ವೈದ್ಯರುಗಳ ಸಂಖ್ಯೆ ಬಹಳಷ್ಟು ಕಡಿಮೆ ಇದೆ. ಕೆಲವು ಕಡೆ ವೈದ್ಯರುಗಳು ಇಲ್ಲ. ವೈದ್ಯರು ಸಕಾಲಕ್ಕೆ ಆಸ್ಪತ್ರೆಗಳಿಗೆ ಬರುವುದಿಲ್ಲ, ಅಲ್ಲಿ ಬರುವಂತಹ ಬಡವರಿಗೆ ಚಿಕಿತ್ಸೆಯನ್ನು ಕೊಡುವುದಿಲ್ಲ. ಅದರ ಬಗ್ಗೆ ನಾವೇನಾದರೂ ಜೋರಾಗಿ ಕೇಳಿದರೆ, ಗದರಿಸಿದರೆ ಬಹಳ ಜನ ರಜೆ ಹಾಕಿ ಹೋಗುತ್ತಾರೆ. ಇಲ್ಲದಿದ್ದರೆ ರಾಜೀನಾಮೆ ಕೊಟ್ಟು ವಾಪಸ್ಸು ಹೋಗಿ ಬಿಡುತ್ತಾರೆ. ಇವತ್ತು ಏನು ಒಂದು ಮೆಂಟಾಲಿಟಿ ವೈದ್ಯರುಗಳಲ್ಲಿ ಬೆಳೆದಿದೆ ಎಂದರೆ ಸರ್ಕಾರಿ ಸೇವೆ ಮಾಡುವುದಕ್ಕೆ ಯಾರೂ ಸಿದ್ಧರಿಲ್ಲ. ಡಾಕ್ಟರ್ ಹುದ್ದೆಗೆ ಕಾಲ್‌ಫಾರ್ ಮಾಡಿದರೆ ಅರ್ಜಿ ಹಾಕುವುದಿಲ್ಲ, ಸೆಲೆಕ್ಷನ್ ಆದರೂ ಕೂಡ ಸಿಟಿ ಬಿಟ್ಟು ಗ್ರಾಮಾಂತರ ಪ್ರದೇಶಕ್ಕೆ ಬರುವುದಕ್ಕೆ ತಯಾರಿಲ್ಲ. ಈ ಎಲ್ಲಾ ಹಿನ್ನೆಲೆಯಲ್ಲಿ ಬಡವರ ಆರೋಗ್ಯ ಕಾಪಾಡುವಂತಹ ಒಂದು ಜವಾಬ್ದಾರಿ ಸರ್ಕಾರದ ಮೇಲಿದೆ. ಅದರ ಬಗ್ಗೆ ವಿಶೇಷ ಚಿಂತನೆಯನ್ನು ಮಾಡಬೇಕು ಮತ್ತು ಇನ್ನು ಖಾಲಿಯಿರುವಂತಹ ವೈದ್ಯರ ಹುದ್ದೆಗಳನ್ನು

ತುಂಬಬೇಕು ಮತ್ತು ಇನ್ನೂ ಕೆಲವು ಗ್ರಾಮಾಂತರ ಭಾಗದಲ್ಲಿ ಆರೋಗ್ಯ ಕಾಪಾಡುವಂತಹ ಆಸ್ಪತ್ರೆಗಳನ್ನು ಪ್ರಾರಂಭ ಮಾಡಬೇಕೆಂದು ವಿನಂತಿ ಮಾಡುತ್ತೇನೆ.

ನಗರಾಭಿವೃದ್ಧಿ ಇಲಾಖೆಯ ಬಗ್ಗೆ ಹೇಳುವುದಾದರೆ, ನಮ್ಮ ಸರ್ಕಾರ ಸಾಕಷ್ಟು UGD ಕೆಲಸಗಳನ್ನು ಮಾಡುತ್ತಾ ಬಂದಿದೆ. ಜಮಖಂಡಿಗೆ ಸುಮಾರು 32 ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿ, UGD ಯೋಜನೆಯಲ್ಲಿ ಒಳಚರಂಡಿ ವ್ಯವಸ್ಥೆಯಿಂದ ವಂಚಿತರಾದ ಸಾರ್ವಜನಿಕರಿಗೆ ವ್ಯವಸ್ಥೆ ಮಾಡಿಕೊಡಬೇಕೆಂದು ಕಾರ್ಯ ಪ್ರಾರಂಭ ಮಾಡಿದೆ. ಅದಕ್ಕೆ ಎಸ್ಟಿಮೇಟ್ ಮಾಡುವ ಸಂದರ್ಭದಲ್ಲಿ ಆ ಪಟ್ಟಣದ ಹೊಸ ಹೊಸ ಬಡಾವಣೆಗಳಲ್ಲಿ ಕೆಲವು ಕಡೆ ಇನ್ನೂ ಮನೆಗಳನ್ನು ಕಟ್ಟಿರಲಿಲ್ಲ. ಹೀಗಾಗಿ ಆ ಏರಿಯಾದಲ್ಲಿ ಇವತ್ತು ಆ ಮನೆಗಳು ಯೋಜನೆಯಲ್ಲಿ ಸೇರಿಲ್ಲ. ಆದುದರಿಂದ ನಗರಾಭಿವೃದ್ಧಿ ಮಂತ್ರಿಯವರಿಗೆ ನನ್ನ ವಿಶೇಷ ಮನವಿ ಏನೆಂದರೆ ಯಾವ ಏರಿಯಾ ಈ ರೀತಿ ಉಳಿದಿದೆ, ಉದಾಹರಣೆಗೆ ಟೀಚರ್ಸ್ ಕಾಲೋನಿ ಉಳಿದುಹೋಗಿದ್ದು, ಈ ಕಾಲೋನಿಗಳನ್ನು ಸೇರಿಸಿಕೊಂಡು ಅದಕ್ಕೆ ಬೇಕಾಗುವಂತಹ ಹಣಕಾಸಿನ ವ್ಯವಸ್ಥೆಯನ್ನೂ ಕೂಡ ಮಂಜೂರು ಮಾಡಿ UGD ಕೆಲಸ ಆಗಬೇಕು. ಅದರ ಜೊತೆಗೆ ಆ ಭಾಗದಲ್ಲಿ Solid waste management ಏನಿದೆ, ಅದರ ವ್ಯವಸ್ಥೆ ಸ್ವಲ್ಪಮಟ್ಟಿಗೆ ಆಗಿದೆ. ಅದನ್ನು ಇನ್ನೂ ಸರಿಯಾಗಿ ಮಾಡಬೇಕಿರುವ ಹಿನ್ನೆಲೆಯಲ್ಲಿ ಹಣಕಾಸಿನ ವ್ಯವಸ್ಥೆ ಮಾಡಬೇಕಾಗುತ್ತದೆ. ಜಮಖಂಡಿ ಪಟ್ಟಣ ಎಂದರೆ ಹಳೇ ನಗರದಲ್ಲಿ UGD ಸುಮಾರು 40 ವರ್ಷಗಳ ಹಿಂದೆ ಮಾಡಿದೆ. ಇವತ್ತು ಅದರ ಸ್ಥಿತಿ ಸಂಪೂರ್ಣ ಕೆಟ್ಟುಹೋಗಿ UGD pipes break ಆಗಿ ದುರ್ವಾಸನೆ ಬರುವುದು ಪ್ರಾರಂಭವಾಗಿದೆ. ಹೀಗಾಗಿ ಆ ಹಳೇ ಜಮಖಂಡಿ ನಗರದಲ್ಲಿ ಕೂಡ ಹೊಸ UGD ಮಾಡುವ ದೃಷ್ಟಿಯಿಂದ ಒಂದು ಎಸ್ಟಿಮೇಟ್ ಮಾಡಿಸಿ ಈ ಸರ್ಕಾರಕ್ಕೆ ಮಂಜೂರು ಮಾಡುವುದಕ್ಕೆ ಕೊಟ್ಟು, ಅದನ್ನು ಕೂಡ ಸೇರಿಸಿ ಮಂಜೂರು ಮಾಡಬೇಕೆಂದು ಈ ಸಂದರ್ಭದಲ್ಲಿ ವಿನಂತಿ ಮಾಡುತ್ತೇನೆ.

ಜಮಖಂಡಿಯಲ್ಲಿರುವಂತಹ ಕೆ.ಎಸ್.ಆರ್.ಟಿ.ಸಿ ಡಿಪೋ ಹತ್ತಾರು ವರ್ಷಗಳ ಹಿಂದೆ ಬಹಳಷ್ಟು ಆದಾಯವನ್ನು ತರುವಂತಹ ಡಿಪೋ ಆಗಿತ್ತು. ಸನ್ಮಾನ್ಯ ಎಸ್.ಎಂ. ಕೃಷ್ಣ ರವರು ಈ ರಾಜ್ಯದ ಮುಖ್ಯಮಂತ್ರಿಯಗಿದ್ದಂತಹ, ತಾಳೀಕೋಟೆ ಜೊತೆಗೆ ಜಮಖಂಡಿಯಲ್ಲಿರುವ ಡಿಪೋವನ್ನೂ ಕೂಡ ಮೇಲ್ದರ್ಜೆಗೇರಿಸಬೇಕೆನ್ನುವ ಚಿಂತನೆಯಾಗಿತ್ತು. ಆದರೆ ಅದು ಯಾವುದೋ ಕಾರಣದಿಂದ ಬಿಟ್ಟು ಹೋಗಿತ್ತು. ಇವರತ್ತು ಅಲ್ಲಿರುವಂತಹ

ಓಬೀರಾಯನ ಕಾಲದ ಬಸ್‌ಸ್ಟಾಂಡ್‌ಗೆ ಹತ್ತಾರು ಕಡೆಯಿಂದ ನೂರಾರು ವಾಹನಗಳು ಮಹಾರಾಷ್ಟ್ರ ಮತ್ತು ಬೇರೆ ಬೇರೆ ಕಡೆಯಿಂದ ಬಂದು ಹೋಗುವಂತಹ ಒಂದು ಕೇಂದ್ರೀಯ ನಗರವಾದಂತಹ ಜಮಖಂಡಿಗೆ ಒಂದು ಹೊಸ ಡಿಪೋ ಆಗಬೇಕು ಮತ್ತು ಅದನ್ನು ಮೇಲ್ದರ್ಜೆಗೇರಿಸಬೇಕು. ಅಲ್ಲಿ ವಾಹನಗಳು ಹತ್ತಾರು ಸಾವಿರ ಕಿಲೋಮೀಟರ್ ಓಡಿ, ಈಗ ಓಡುವುದಕ್ಕೆ ಅಶಕ್ತವಾದಂತಹ ಬಸ್ಸುಗಳನ್ನು ಬದಲಾವಣೆ ಮಾಡಿ, ಅಲ್ಲಿಗೆ ಹೊಸ ಹೊಸ ವಾಹನಗಳನ್ನು ಕೊಟ್ಟು ಅಲ್ಲಿರುವಂತಹ ಸಾರ್ವಜನಿಕರಿಗೆ ಅನುಕೂಲ ಮಾಡುವಂತಹ ಹಿನ್ನೆಲೆಯಲ್ಲಿ ಮಾನ್ಯ ಸಾರಿಗೆ ಮಂತ್ರಿಗಳು ಇದರ ಬಗ್ಗೆ ಯೋಜನೆ ಮಾಡಿ ಸರಿಯಾದಂತಹ ಕ್ರಮಗಳನ್ನು ತೆಗೆದುಕೊಳ್ಳುವುದರ ಮೂಲಕ ಜಮಖಂಡಿಯ ಕೆ.ಎಸ್.ಆರ್.ಟಿ.ಸಿ ಡಿಪೋವನ್ನು ಮೇಲ್ದರ್ಜೆಗೇರಿಸುವುದರ ಜೊತೆಗೆ ಹೊಸ ಒಂದು ವರ್ಕ್‌ಶಾಪ್ ಅನ್ನು ಹೊರಗಡೆ ಮಂಜೂರು ಮಾಡಿಕೊಡಬೇಕೆನ್ನುವ ವಿನಂತಿಯನ್ನು ಈ ಸಂದರ್ಭದಲ್ಲಿ ಮಾಡಿಕೊಳ್ಳುತ್ತೇನೆ. ನಮ್ಮಲ್ಲಿ ಸಾಕಷ್ಟು ಕಬ್ಬು ಬೆಳೆಯುವಂತಹ ಪ್ರದೇಶವಿರುವುದರಿಂದ, ಬಹಳ ದೊಡ್ಡ ಪ್ರಮಾಣದಲ್ಲಿ ಲೋಡ್ ಮಾಡಿಕೊಂಡು ವಾಹನಗಳು ಓಡಾಡುವುದರಿಂದ ಲೋಕೋಪಯೋಗಿ ಮತ್ತು ಜಿಲ್ಲಾ ಪಂಚಾಯತ್ ರಸ್ತೆಗಳು ಆಗಾಗ ಕೆಟ್ಟು ಹೋಗುತ್ತವೆ. ಲೋಕೋಪಯೋಗಿ ರಸ್ತೆಗಳನ್ನು ಸರಿ ಮಾಡಬೇಕೆಂದು ಸರ್ಕಾರ ಸಾಕಷ್ಟು ಪ್ರಯತ್ನ ಮಾಡಿದೆ. ಆದರೆ ಇನ್ನೂ ಕೆಲವು ಲೋಕೋಪಯೋಗಿ ಇಲಾಖೆಗೆ ಸೇರಿದಂತಹ ರಸ್ತೆಗಳು, ನನ್ನ ಕ್ಷೇತ್ರದಲ್ಲಿ 141 ಕಿಲೋಮೀಟರ್ ರಸ್ತೆ ಜಿಲ್ಲಾ ಪಂಚಾಯತಿಯಿಂದ ಲೋಕೋಪಯೋಗಿ ಇಲಾಖೆಗೆ ಮೇಲ್ದರ್ಜೆಗೇರಿಸಲ್ಪಟ್ಟಿದ್ದು, ಅದಕ್ಕೆ ಎಷ್ಟು ಧನಸಹಾಯ ಬೇಕಾಗಿತ್ತು ಅಷ್ಟು ಸಿಕ್ಕಿಲ್ಲ. ಅದಕ್ಕೋಸ್ಕರ ತಕ್ಷಣ ಒಂದು ವಿಶೇಷ ಅನುದಾನ ಬಿಡುಗಡೆ ಮಾಡಿ ಆ ರಸ್ತೆಗಳನ್ನು ರಿಪೇರಿ ಮಾಡಬೇಕೆಂದು ಮಾನ್ಯ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ನಾನು ಒಂದು ವಿಚಾರ ಬಹಳ ಸಂತೋಷದಿಂದ ಮತ್ತು ಅಭಿಮಾನದಿಂದ ಹೇಳುವುದೇನೆಂದರೆ ನಮ್ಮ ಭಾಗದಲ್ಲಿ ಕೃಷ್ಣಾ ನದಿಗೆ ಜಮಖಂಡಿಯಿಂದ ನೇರವಾಗಿ ಪಂಡರಾಪುರಕ್ಕೆ, ಜಮಖಂಡಿಯಿಂದ ನೇರವಾಗಿ ಸಾಂಗ್ಲಿ, ಪೂನಾ ಮತ್ತು ಉತ್ತರ ಭಾರತಕ್ಕೆ ಹೋಗುವುದಕ್ಕೆ ಒಂದು ಸಂಚಾರಕ್ಕೊಂದು ಸೇತುವೆ ಬೇಕಾಗಿತ್ತು. ಜಮಖಂಡಿ ಮಹಾರಾಜರು ಈ ಹಿಂದೆ ಇಡೀ ದೇಶದಲ್ಲಿ ಸಂಸ್ಥಾನ ವಿಲಿನೀಕರಣವಾಗುವಾಗ ಮೊಟ್ಟಮೊದಲ ಸಂಸ್ಥೆ ಯಾವುದಾದರೂ ವಿಲಿನೀಕರಣಕ್ಕೆ ಒಪ್ಪಿದರು ಎಂದರೆ ಅದು ಜಮಖಂಡಿ ಸಂಸ್ಥಾನ ಎಂದು ಹೇಳುತ್ತೇನೆ. ಆ ಸಂದರ್ಭದಲ್ಲಿ ಜಮಖಂಡಿ ಮಹಾರಾಜರು

ಮತ್ತು ಸರ್ದಾರ್ ವಲ್ಲಭಬಾಯಿ ಪಟೇಲ್‌ರವರ ನಡುವೆ ಪಂಡರಾಪುರದಲ್ಲಿ ಒಂದು ಒಪ್ಪಂದವಾಗಿತ್ತು. ಈ ಜಮಖಂಡಿ ಸಂಸ್ಥಾನವನ್ನು disolve ಮಾಡಿದರೆ ನಮ್ಮ ಮೂರು ಬೇಡಿಕೆಗಳನ್ನು ಈಡೇರಿಸಬೇಕೆಂದು ಎಂದು ಹೇಳಿದ್ದರು. ಅದರಲ್ಲಿ ಮೊದಲ ಬೇಡಿಕೆ ಯಾವುದೆಂದರೆ ಕೃಷ್ಣ ನದಿಗೆ ಜಂಬಗಿ ಹತ್ತಿರ ಸೇತುವೆ ಆಗಬೇಕು. ಅದರಿಂದ ಜಮಖಂಡಿಯಿಂದ ಮಹಾರಾಷ್ಟ್ರ ಮತ್ತು ಉತ್ತರ ಭಾರತದ ಅನೇಕ ಭಾಗಗಳಿಗೆ ಸಮರ್ಪಕಕ್ಕೆ ಉತ್ತಮವಾದಂತಹ ರಸ್ತೆಯಾಗುತ್ತದೆ ಎನ್ನುವಂತಹ ಬೇಡಿಕೆ ಇತ್ತು. ನನು ಬಹಳ ಸಂತೋಷದಿಂದ ಹೇಳುವುದೇನೆಂದರೆ ಮಾನ್ಯ ಯಡಿಯೂರಪ್ಪನವರು ಈ ರಾಜ್ಯದ ಮುಖ್ಯಮಂತ್ರಿಯಾಗಿದ್ದಾಗ ನಮ್ಮ ಸರ್ಕಾರಕ್ಕೆ ಆ ಒಂದು ಸೇತುವೆ ಬೇಡಿಕೆಯನ್ನು ಇಟ್ಟಾಗ 40 ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿದ್ದು, ಇವತ್ತಿನ ದಿವಸ ಆ ಸೇತುವೆ ಕಾರ್ಯ ಪ್ರಗತಿಯಲ್ಲಿದೆ. ಬಹುಶಃ ಬರುವಂತಹ ಜನವರಿ ಫೆಬ್ರವರಿ ತಿಂಗಳಿನಲ್ಲಿ ಆ ಸೇತುವೆ ಕಾರ್ಯ ಸಂಪೂರ್ಣವಾಗಿ ಮುಗಿದು ಸಾರ್ವಜನಿಕರ ಸಂಚಾರಕ್ಕೆ ಉಪಯೋಗವಾಗುವಂತಹ ವ್ಯವಸ್ಥೆಗೆ ಬಂದಿದೆ. ಈ ಸಂದರ್ಭದಲ್ಲಿ ಸರ್ಕಾರಕ್ಕೆ ಇನ್ನೊಂದು ವಿನಂತಿ ಏನೆಂದರೆ 40 ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿ ಸಮೀಪದ ರಸ್ತೆ ಮಾಡಿದ್ದು, ಬಳ್ಳಾರಿಯವರು ಪೂನಾಗೆ ಹೋಗಬೇಕಾದರೆ ಜಮಖಂಡಿಗೆ ಬಂದು ಈ ಸೇತುವೆ ಮೇಲೆ ಹೋದರೆ ಸುಮಾರು 40 ರಿಂದ 50 ಕಿಲೋಮೀಟರ್ ಅಂತರ ಉಳಿಯುತ್ತದೆ ಎಂದರೆ ಒಂದು ದಿವಸಕ್ಕೆ ಎಷ್ಟು ವಾಹನಗಳು ಅಲ್ಲಿ ಓಡಾಡುತ್ತವೆ, ಅದರಿಂದ ಎಷ್ಟು ಇಂಧನ ಉಳಿಯುತ್ತದೆ, ಎಂಬುದನ್ನು ಲೆಕ್ಕ ಹಾಕಬೇಕು. ಒಂದು ದಿವಸಕ್ಕೆ ಎಷ್ಟು ವಾಹನಗಳು ಓಡಾಡುತ್ತವೆ ಮತ್ತು ಒಂದು ವಾಹನಕ್ಕೆ 40–50 ಕಿ.ಮೀ. ಉಳಿದರೆ ಎಷ್ಟು ಇಂಧನ ಉಳಿಯುತ್ತದೆ, ಒಂದುವಾರಕ್ಕೆ ಎಷ್ಟು, ಒಂದು ತಿಂಗಳಿಗೆ ಎಷ್ಟು ಒಂದು ವರ್ಷಕ್ಕೆ ಎಷ್ಟೆಂಬುದನ್ನು ಲೆಕ್ಕ ಹಾಕಿದರೆ, ನೂರಾರು ಕೋಟಿ ರೂ.ಗಳಲ್ಲ, ಸಾವಿರಾರು ಕೊಟಿ ರೂ.ಗಳು ಉಳಿತಾಯವಾಗಬಹುದು. ಇದಕ್ಕೆ ಅಭಿವೃದ್ಧಿ ಎನ್ನುತ್ತಾರೆ, ಇದು ನೂರಾರು ವರ್ಷದ ಬೇಡಿಕೆಯಾಗಿದ್ದು, ಇದನ್ನು ಹಿಂದೆ ಯಾವ ಸರ್ಕಾರವೂ ಮಂಜೂರು ಮಾಡಲಿಲ್ಲ, ಇವತ್ತು ನಮ್ಮ ಸರ್ಕಾರದಲ್ಲಿ ಮಾನ್ಯ ಯಡಿಯೂರಪ್ಪನವರು ಮುಖ್ಯಮಂತ್ರಿಗಳಾಗಿದ್ದಾಗ ಇದಕ್ಕೆ ಮಂಜೂರು ಕೊಟ್ಟು ಇವತ್ತು ಈ ಸೇತುವೆ ಕೆಲಸ ಮುಕ್ತಾಯದ ಹಂತಕ್ಕೆ ಬಂದಿದೆ. ಈ ಸಂದರ್ಭದಲ್ಲಿ ಸರ್ಕಾರಕ್ಕೆ ಮತ್ತು ಕ.ಘ.ಆ. ಇಲಾಖೆಗೆ ಇನ್ನೊಂದು ವಿನಂತಿ ಏನೆಂದರೆ, ಈ ರಸ್ತೆಗೆ ಕಾಮಗಾರಿ ಮುಗಿಯುವುದರೊಳಗಾಗಿ ಜಮಖಂಡಿಯಿಂದ ಜಂಬಗಿಗೆ, ಜಂಬಗಿಯಿಂದ ಸಾವಳಗಿ,

ಸಾವಳಗಿಯಿಂದ ಅಥಣಿ, ಬಿಜಾಪುರದ state highway ಮುಟ್ಟುವಂಥ ಸುಮಾರು 31 ಕಿ.ಮೀ. ರಸ್ತೆಯನ್ನು ಆ ಕಡೆ ಒಂದು tate highway ಮತ್ತು ಈ ಕಡೆಗೆ ಒಂದು state highway ರಸ್ತೆ ಇದ್ದು, ಈ ಎರಡು ರಸ್ತೆಗಳು ಜಂಬಗಿ ಸೇತುವೆಗೆ ಮುಟ್ಟುವಂಥ 31 ಕಿ.ಮೀ. ರಸ್ತೆಯನ್ನು ಮಾಡಿದರೆ, ಈ ಭಾಗದ ಜನರಿಗೆ ಸಾಕಷ್ಟು ಅನುಕೂಲವಾಗುತ್ತದೆ. ಅದಕ್ಕಾಗಿ 31 ಕಿ.ಮೀ. ರಸ್ತೆಯನ್ನು ಮಂಜೂರು ಮಾಡಬೇಕೆಂದು ಬರಗಾಲದ ವೀಕ್ಷಣೆಗೆ ನಮ್ಮ ಹಿಂದಿನ ಮುಖ್ಯಮಂತ್ರಿಗಳಾಗಿದ್ದ ಮಾನ್ಯ ಸದಾನಂದ ಗೌಡರು ಬಂದಾಗ ಸಾರ್ವಜನಿಕವಾಗಿ ವಿನಂತಿ ಮಾಡಿದೆವು. ಅವರೂ ಸಹ ಸಾರ್ವಜನಿಕವಾಗಿ ಒಪ್ಪಿಗೆಯನ್ನು ಕೊಟ್ಟಿದ್ದಾರೆ. ಹಾಗಾಗಿ ಇದನ್ನು ತಕ್ಷಣ ಜಾರಿಗೆ ತರವಂಥ ವ್ಯವಸ್ಥೆಯನ್ನು ಈ ಸರ್ಕಾರ ಮಾಡಬೇಕೆಂದು ಆ ಭಾಗದ ಸಾರ್ವಜನಿಕರ ಪರವಾಗಿ ವಿನಂತಿ ಮಾಡಿಕೊಳ್ಳುತ್ತೇನೆ.

ಅದೇ ರೀತಿಯಲ್ಲಿ ಇವತ್ತು ನೀರಾವರಿಗಳ ಮೂಲಕ ಆ ಭಾಗದ ಒಣ–ಪ್ರದೇಶಕ್ಕೆ ಕುಡಿಯುವ ನೀರಿನ ಸಮಸ್ಯೆ ಏನು ಇದೆ. ಆ ಭಾಗದ ಜನರಿಗೆ ನೀರು ಕೊಡಬೇಕು, ನೀರಾವರಿ ಕೊಡಬೇಕು, ಕುಡಿಯುವ ನೀರನ್ನು ಕೊಡಬೇಕೆಂಬ ಹಿನ್ನೆಲೆಯಲ್ಲಿ ನಮ್ಮ ಸರ್ಕಾರ ನೀರಾವರಿ ದಶಕವೆಂದು ಘೋಷಣೆ ಮಾಡಿ ಅನೇಕ ಯೋಜನೆಗಳನ್ನು ಮಂಜೂರು ಮಾಡಿದ್ದಾರೆ. ನಮಗೆ ಗೊತ್ತಿರುವಂಥ ಅಖಂಡ ಬಿಜಾಪುರ ಜಿಲ್ಲೆಯಲ್ಲಿ 5 ನದಿಗಳು ಹರಿದರೂ ಕೂಡ ನೀರಾವರಿ ಇಲ್ಲ UKP dam ಕಟ್ಟಿದ ನಂತರ ನೀರು ಸಿಗಲಿಲ್ಲ. ಇದರ ಬಗ್ಗೆ ನಮ್ಮ ಸರ್ಕಾರ ಸಾಕಷ್ಟು ಚಿಂತನೆ ಮಾಡಿ ನಮ್ಮದು ಬಹಳ ವರ್ಷದಿಂದ ಒಂದು ಬೇಡಿಕೆ ಇತ್ತು. ಅದು ಚಿಕ್ಕಲಗಿ ಹತ್ತಿರ ಎಲ್ಲಿ ಕುಡಿಯುವ ನೀರು ಇಲ್ಲ, ಬರಗಾಲ ಪ್ರದೇಶ ಇದೆ, ಆ ಭಾಗದಲ್ಲಿ ನೀರಾವರಿ ಆಗಬೇಕೆಂದು ಹೇಳಿದಾಗ minor irrigation ಮೂಲಕ ಸುಮಾರು 45 ಕೋಟಿ ರೂ.ಗಳು ಮಂಜೂರು ಆಗಿ, ಇದು ಟೆಂಡರ್ ಹಂತದಲ್ಲಿದೆ. ಇದರಲ್ಲಿ ಸುಮಾರು ಐದು ಸಾವಿರ ಎಕರೆಗೆ ನೀರು ಕೊಡುವಂಥ ಯೋಜನೆಯನ್ನು ಜಾರಿಗೆ ತಂದಿದ್ದಾರೆ. ಹಾಗಾಗಿ ಈ ಸಂದರ್ಭದಲ್ಲಿ ಆ ಭಾಗದ ರೈತರ ಪರವಾಗಿ ಸರ್ಕಾರಕ್ಕೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಇದರ ಜೊತೆಗೆ ನಮಗೆಲ್ಲಾ ಗೊತ್ತಿರುವ ಹಾಗೆ ಕೊಯಿನಾ ಡ್ಯಾಮ್‌ನಿಂದ ನೀರು ಬರಬೇಕಾಗಿತ್ತೋ ಅದು ಸಾವಳಗಿ ಮತ್ತು ಬಬಲೇಶ್ವರ ಭಾಗಗಳಿಗೆ ಕೃಷ್ಣ ನದಿಯಿಂದ ನೀರು ಬೇಕೆಂದು ವಿಧಾನ ಸಭೆಯಲ್ಲಿ ನಾವು ಆಗಾಗ ಪ್ರಶ್ನೆಗಳ ಮೂಲಕ ಸರ್ಕಾರದ ಗಮನವನ್ನು ಸೆಳೆದಾಗ ನಮ್ಮ ಸರ್ಕಾರ ಅತ್ಯಂತ ಕ್ರಿಯಾಶೀಲವಾಗಿ ನಮ್ಮ ಮಾನ್ಯ ಮುಖ್ಯಮಂತ್ರಿಯವರು ಮತ್ತು ಮಾನ್ಯ ನೀರಾವರಿ ಮಂತ್ರಿಯವರು ಸಾಕಷ್ಟು ಸ್ಪಂದನೆ ನೀಡಿ, ಗೋದಾವರಿ diversion ನಿಂದ ಸಿಕ್ಕಿರುವಂಥ

21 ಟಿ.ಎಂ.ಸಿ. ನೀರಲ್ಲಿ 2.8 ಟಿ.ಎಂ.ಸಿ. ನೀರನ್ನು ಈ ಅವಕಾಶ ವಂಚಿತ ಪ್ರದೇಶಕ್ಕೆ allocation ಮಾಡಿದ್ದಾರೆ. ಇದಕ್ಕೆ ಸುಮಾರು 460 ಕೋಟಿ ರೂ.ಗಳಷ್ಟು estimate ಅನ್ನು ಸಿದ್ಧಪಡಿಸಿ ಇದನ್ನು ತಕ್ಷಣ ಪ್ರಾರಂಭ ಮಾಡಬೇಕಾಗಿದೆ. ಈ ಹಿನ್ನೆಲೆಯಲ್ಲಿ ಸರ್ಕಾರ ಇನ್ನಷ್ಟು speed ಅನ್ನು ಕೊಟ್ಟು, ಚಾಲನೆ ಕೊಟ್ಟು, ಒಂದೆರಡು ತಿಂಗಳಲ್ಲಿ ಕೆಲಸ ಕಾರ್ಯಾರಂಭ ಮಡುವ ಪ್ರಯತ್ನವನ್ನು ಮಾಡಬೇಕು. ಇದು ನೂರಾರು ವರ್ಷಗಳ ಬೇಡಿಕೆಯಾಗಿದ್ದು, ಹಿಂದಿನ ಯಾವುದೇ ಸರ್ಕಾರಗಳು, ಮುಖ್ಯಮಂತ್ರಿಗಳು ಸ್ಪಂದನೆ ಮಾಡದೇ ಇದ್ದರೂ, ಹಿಂದಿನ ಮುಖ್ಯಮಂತ್ರಿಯವರು ಅದೇ ಭಾಗದವರಿದ್ದರೂ ಕೊಯಿನಾ ಡ್ಯಾಮ್ ಅನ್ನು ಕಟ್ಟುವಂಥ ಸಂದರ್ಭದಲ್ಲಿ ನಮಗೆ ಬರಬೇಕಾದಂಥ 25 ಟಿ.ಎಂ.ಸಿ. ನೀರಿಗೆ ನಮ್ಮ ಪಾಲಿನ ಹಣವನ್ನು ಕಟ್ಟಿದರೆ ನಮಗೆ ನೀರು ಬರುತ್ತಿತ್ತು. ಆದರೆ ಈ ಕೆಲಸವಾಗಲಿಲ್ಲ, ಇದು ಒಂದು ದೊಡ್ಡ ದುರಂತವಾಗಿದೆ. ಈ ಒಂದು ಸಂದರ್ಭದಲ್ಲಿ ನಮ್ಮ ಸರ್ಕಾರ ಈ ಯೋಜನೆಯನ್ನು ಜಾರಿಗೆ ತಂದು ಬಿಜಾಪುರ ಮತ್ತು ಬಾಗಲಕೋಟೆಯ ಭಾಗದ ಜನರಿಗೆ ನೀರಾವರಿ ಮಾಡಬೇಕೆಂದು ತೀರ್ಮಾನವನ್ನು ತೆಗೆದುಕೊಂಡು ಇದರಲ್ಲಿ ಅತ್ಯಂತ ಯಶಸ್ವಿಯಾಗಿದೆ. ಈ ಸಂದರ್ಭದಲ್ಲಿ ಹೇಳಬಯಸುವುದೇನೆಂದರೆ, ಮಾನ್ಯ ಯಡಿಯೂರಪ್ಪನವರು ಮುಖ್ಯಮಂತ್ರಿಗಳಾಗಿದ್ದಾಗ ಬಿಜಾಪುರ ಅಖಂಡ ಜಿಲ್ಲೆಯ ಕೆರೆಗಳನ್ನು ತುಂಬಬೇಕೆಂಬ ಮನವಿಯನ್ನು ಇಟ್ಟಾಗ ಮೊದಲನೇ ಹಂತದಲ್ಲಿ ನನ್ನ ಕ್ಷೇತ್ರದ ಹಿರೇಪಡಸಲಗಿ ಹತ್ತಿರ ಕೃಷ್ಣಾ ನದಿ ನೀರನ್ನು ಎತ್ತಿ ಜಮಖಂಡಿಯ ತಾಲ್ಲೂಕಿನ 7 ಕೆರೆಗಳು ಮತ್ತು ಬಿಜಾಪುರ ಜಿಲ್ಲೆಯ 15 ಕೆರೆಗಳು ಮತ್ತು ಐದು ಬಾಂದರ್ ಗಳನ್ನು ತುಂಬುವಂಥ ಯೋಜನೆ ಸುಮಾರು 109 ಕೋಟಿ ರೂ. ಯೋಜನೆಯ ಕಾರ್ಯ ಪ್ರಾರಂಭವಾಗಿ ಇನ್ನೂ ಒಂದು–ಒಂದೂವರೆ ತಿಂಗಳಲ್ಲಿ ಇಲ್ಲಿ pump set button ಅನ್ನು ಒತ್ತಿ ಬಿಟ್ಟರೆ ಮಳೆ ಆಗದಿದ್ದರೂ, ಬರ ಬಿದ್ದರೂ ಅಲ್ಲಿ ಕೆರೆಗಳನ್ನು ತುಂಬಿದರೆ ನೀರಿನ ಮಟ್ಟ ಹೆಚ್ಚುತ್ತದೆ. ಬಹುಶಃ ಇನ್ನು ಒಂದು–ಒಂದೂವರೆ ತಿಂಗಳಲ್ಲಿ ನೀರೆತ್ತುವ ಕಾರ್ಯ ಪ್ರಾರಂಭವಾಗಿ ಕೆರೆಗಳನ್ನು ತುಂಬುವಂಥ ವ್ಯವಸ್ಥೆಯಾಗುತ್ತದೆ. ಇಂಥ ದೊಡ್ಡ ದೊಡ್ಡ ಯೋಜನೆಗಳನ್ನು ಸರ್ಕಾರ ಅಲ್ಲಿ ಜಾರಿಗೆ ತಂದಿದೆ. ಆ ಭಾಗದ ಬರಗಾಲದ ಪರಿಸ್ಥಿತಿಗೆ ಸರಿಯಾದಂಥ, ಶಾಶ್ವತವಾದಂಥ ಪರಿಹಾರವನ್ನು ಕೊಡಬೇಕೆಂಬ ಹಿನ್ನೆಲೆಯಲ್ಲಿ ಸರ್ಕಾರ ಸಾಕಷ್ಟು ಚರ್ಚೆಯನ್ನು ಮಾಡಿ, ಕೇವಲ ಚರ್ಚೆ ಮಾಡದೇ, ಕೇವಲ ಮಾತುಗಳಲ್ಲಿ ಹೇಳದೆ, ಅವುಗಳನ್ನು ಸಂಪೂರ್ಣ ಅನುಷ್ಠಾನಕ್ಕೆ ತಂದಿರುವಂಥದ್ದು ನಮ್ಮ ಭಾಗದ ಸುದೈವವೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇವತ್ತು ಯುವಜನ ಸೇವಾ ವಿಭಾಗದಲ್ಲೂ ಕೂಡ ಜಮಖಂಡಿ ಭಾಗದಲ್ಲಿ ಸಾಕಷ್ಟು ಕ್ರೀಡಾ ಪಟುಗಳು ಅವರು ಸೈಕಲಿಸ್ಟ್ ಇರಬಹುದು, ಕಬಡ್ಡಿ ಆಡುವಂಥ ಯುವಕರು ಇರಬಹುದು, ಕಲ್ಲು ಎತ್ತುವವರು ಇರಬಹುದು ಅಥವಾ ಕುಸ್ತಿ ಪೈಲ್ವಾನ್ ಗಳಿರಬಹುದು. ಯಾವತ್ತೂ ಕ್ರೀಡೆಯಲ್ಲಿ ಭಾಗವಹಿಸುವಂಥವರಲ್ಲಿ ಮಂಚೂಣಿಯಲ್ಲಿ ಯಾರು ಇರುತ್ತಾರೆಂದರೆ, ಉತ್ತರ ಕರ್ನಾಟಕದ ಜಮಖಂಡಿ ಭಾಗದವರು ಇರುತ್ತಾರೆ. ಈ ಸಂದರ್ಭದಲ್ಲಿ ಜಮಖಂಡಿಯಲ್ಲಿ Indoor Stadium ಅನ್ನು ಕಟ್ಟಬೇಕೆಂದು ಸುಮಾರು 8–9 ವರ್ಷಗಳ ಹಿಂದೆ ಇದ್ದ ಸರ್ಕಾರ 10 ಲಕ್ಷ ರೂ.ಗಳನ್ನು ಖರ್ಚು ಮಾಡಿ, ಅದನ್ನು ಅಷ್ಟಕ್ಕೆ ಬಿಟ್ಟಿತ್ತು. ನಾನು ನಮ್ಮ ಸರ್ಕಾರ ಬಂದಮೇಲೆ ಮಾನ್ಯ ಮುಖ್ಯಮಂತ್ರಿಯವರ ಮತ್ತು ಮಾನ್ಯ ಮಂತ್ರಿಯವರ ಗಮನಕ್ಕೆ ತಂದಾಗ ಇದಕ್ಕೆ ಹಣ ಮಂಜೂರಾಗಿ ಕೆಲಸ ಪುನಃ ಪ್ರಾರಂಭವಾಗಿದೆ. ಇದಕ್ಕೆ ಬೇಕಾಗುವಷ್ಟು ಹಣವನ್ನು ಮಂಜೂರು ಮಾಡಿ, ಆ ಭಾಗದಲ್ಲಿ ಇವತ್ತು ಯಾರು ಅಂತರರಾಷ್ಟ್ರೀಯ ಮಟ್ಟದಲ್ಲಿ cyclist ಎಂದು championship ಅನ್ನು ಪಡೆಯುತ್ತಾರೋ, ಅಂಥವರಿಗೆ ಹೊಸ ಹೊಸ ಆಧುನಿಕ ಸೈಕಲ್‌ಗಳನ್ನು ಕೊಡಬೇಕಾಗುತ್ತದೆ. ತಾವು ಈ ಬಗ್ಗೆ ಪಟ್ಟಿಯನ್ನು ಮಾಡಿದ್ದೀರಿ, ಅವರಿಗೆಲ್ಲಾ ಸೈಕಲ್‌ಗಳನ್ನು ಕೊಡುವ ವ್ಯವಸ್ಥೆ ಸರ್ಕಾರ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಒತ್ತಾಯಿಸುತ್ತೇನೆ.

ಇದರ ಜೊತೆಗೆ ನಮ್ಮ ಭಾಗದಲ್ಲಿ ದೊಡ್ಡ ಪ್ರಮಾಣದಲ್ಲಿ ಕಬ್ಬು ಬೆಳೆಗಾರರು ಯಾರಾದರೂ ಇದ್ದರೆ ಅವರು ಸಾಕಷ್ಟು ಗುಣಮಟ್ಟದ ಕಬ್ಬನ್ನು ಹೆಚ್ಚು ಸಕ್ಕರೆಗೆ ಪೂರೈಸುವಂಥ ಕಬ್ಬು ಬೆಳಗಾಂ ಭಾಗದಲ್ಲಿ ಯಾವುದೆಂದರೆ ಅದು ನಮ್ಮ ಜಮಖಂಡಿ ಭಾಗದಲ್ಲಿ ಎಂದು ಅಭಿಮಾನದಿಂದ ಹೇಳುತ್ತೇನೆ. ಇವತ್ತು ಈ ಕಬ್ಬು ಬೆಳೆಗಾರರಿಗೆ ಅಷ್ಟೇ ಸಂಕಷ್ಟ ಬಂದಿದೆ. ಕೃಷ್ಣಾ ನದಿ ಒಣಗಿ ಹೋಗಿ ಇದರಲ್ಲಿ ಒಂದು ಹನಿ ನೀರು ಇಲ್ಲದೇ ಇರುವಂಥ ಸಂದರ್ಭದಲ್ಲಿ ಕಬ್ಬು ಬೆಳೆ ಬಚಾವು ಆಗದೇ ಸಂಪೂರ್ಣವಾಗಿ ಒಣಗಿ ಹೋಗಿದೆ. ನಮ್ಮ ಸರ್ಕಾರ ರೈತರು 25,000 ರೂ.ಗಳವರೆಗೆ ಬೆಳೆ ಸಾಲವನ್ನು ಮನ್ನಾ ಮಾಡುವಂಥ ಒಂದು ನಿರ್ಣಯವನ್ನು ತೆಗೆದುಕೊಂಡು ಇಡೀ ಕರ್ನಾಟಕದಲ್ಲಿ ಇವತ್ತು ಒಂದು ಸಂತೋಷದ ವಾತವರಣವನ್ನು ತಂದಿದೆ. ಆದರೆ ಕಬ್ಬು ಬೆಳೆಗಾರರಿಗೆ ಇದರಿಂದ ಸಾಕಷ್ಟು ಪ್ರಯೋಜನವಾಗಲಿಲ್ಲವೆಂದು ನನ್ನ ಅನಿಸಿಕೆ. ಈಗ ಇರುವಂಥ standing crop ಸಂಪೂರ್ಣ ಒಣಗಿದ್ದರಿಂದ ಅವರಿಗೆ ಬರೀ 25,000 ರೂ. ಸಾಲವನ್ನು ಮನ್ನಾ ಮಾಡಿದರೆ ಸರಿಯಾದಂಥ ಪರಿಹಾರವಾಗುವುದಿಲ್ಲ. ಇವತ್ತು ಯಾವ ಕಬ್ಬು ಒಣಗಿ ಹೋಗಿದೆ, ಅದು ಒಂದು ಎಕರೆಗೆ ಎಷ್ಟು yield ಬರಬೇಕಾಗಿತ್ತೋ ಅಷ್ಟು ಬರುತ್ತಿಲ್ಲ. ಇವತ್ತು ಒಣಗಿ ಹೋಗಿರುವ ಕಬ್ಬನ್ನು

ಕಟಾವ್ ಮಾಡಿ ಮತ್ತೊಮ್ಮೆ cultivation ಮಾಡಿ, re-plantation ಮಾಡಬೇಕೆಂದರೆ, ಆ ರೈತನಿಗೆ ಬರುವ ಖರ್ಚು ಎಷ್ಟೆಂಬುದನ್ನು ಯೋಚನೆ ಮಾಡಿದರೆ, ರೈತನ ಕಬ್ಬು ಏನು ಒಣಗಿ ಹೋಗಿದೆ, ಅದಕ್ಕೆ ಸರಿಯಾದಂಥ ಪರಿಹಾರವನ್ನು ಕೊಡಬೇಕು, ಹೊಸ ಕಬ್ಬನ್ನು ನಾಟಿ ಮಾಡಬೇಕಾದರೆ ಆ ರೈತನಿಗೆ ಹೊಸದಾಗಿ ಸಾಲ ಬೇಕಾಗುತ್ತದೆ. ಹಾಗಾಗಿ ಸರ್ಕಾರ ಒಂದು ವಿಶೇಷ ಆಜ್ಞೆಯನ್ನು ಮಾಡಿ ಜಮಖಂಡಿ ಮಾತ್ರವಲ್ಲ, ಬೀಳಗಿ, ಮುಧೋಳ ಭಾಗದ ಕಬ್ಬು ಬೆಳೆಗಾರರಿಗೆ ಹೊಸ ಕಬ್ಬು ನಾಟಿ ಮಾಡುವುದಕ್ಕೆ ಹೊಸ ಬೆಳೆ ಸಾಲವನ್ನು ಮಂಜೂರು ಮಾಡಬೇಕು, additional loan ಮಂಜೂರು ಮಾಡಬೇಕು. ಆ ರೈತನಿಗೆ ಆದಂಥ ಹಾನಿಗೆ, ಒಣಗಿ ಹೋಗಿರುವಂಥ ಕಬ್ಬಿಗೆ ಸರಿಯಾದಂಥ ಪರಿಹಾರವನ್ನು ಕೊಡಬೇಕೆಂದು ಈ ಸಂದರ್ಭದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಯವರು, ಸನ್ಮಾನ್ಯ ಕೃಷಿ ಮಂತ್ರಿಯವರು ಚಿಂತನೆ ಮಾಡಿ, ಈ ಇಲಾಖೆಯ ಹಿರಿಯ ಅಧಿಕಾರಿಗಳೊಡನೆ ಚರ್ಚೆ ಮಾಡಿ, ಆ ಜನರಿಗೆ ಪರಿಹಾರ ಕೊಡುವಂಥ ವ್ಯವಸ್ಥೆಯನ್ನು ಮಾಡುತ್ತಾರೆಂಬ ನಂಬಿಕೆ ನನಗಿದೆ. ಈ ಸಂದರ್ಭದಲ್ಲಿ ಅಲ್ಲಿ ಕಬ್ಬಿನ ಜೊತೆಗೆ ಅರಿಶಿನ ಬೆಳೆ ಬಗ್ಗೆ ಬೆಳಗಾಂ ಡಿವಿಜನ್‌ನಲ್ಲಿರಬಹುದು, ಚಾಮರಾಜನಗರ ಈ ಜಿಲ್ಲೆಗಳಲ್ಲಿ ಅರಿಶಿನ ಬೆಳೆಗಾರರು ಸಾಕಷ್ಟು ಅರಿಶಿನ ಬೆಳೆಯನ್ನು ಬೆಳೆಯುತ್ತಾರೆ. ಕಳೆದ ವರ್ಷ ಬಹಳ ದೊಡ್ಡ ಪ್ರಮಾಣದಲ್ಲಿ ಅರಿಶಿನದ rate ಏರಿಕೆಯಾಗಿದ್ದರಿಂದ ರೈತರು ಬಹಳ ಖುಷಿಯಿಂದ ಓಡಾಡಿದರು ಮತ್ತು ಬಹಳ ಹೆಚ್ಚಿನ ಪ್ರಮಾಣದಲ್ಲಿ ಅರಿಶಿನ ಬೆಳೆಯನ್ನು ಬೆಳೆದರು. ಆದರೆ ಈ ವರ್ಷದಲ್ಲಿ ಅರಿಶಿನ ಬೆಲೆ ಸಂಪೂರ್ಣ ಕುಸಿದು ಬಿದ್ದು, ಮಾರುಕಟ್ಟೆಯಲ್ಲಿ ಅರಿಶಿನವನ್ನು ಯಾರೂ ಕೇಳದೇ ಇರುವಂಥ ಸ್ಥಿತಿ ಬಂದಾಗ, ಈ ಬಗ್ಗೆ ಕಳೆದ ಅಧಿವೇಶನದಲ್ಲಿ ಚರ್ಚೆ ಆಯಿತು. ಕೇಂದ್ರ ಸರ್ಕಾರ ಘೋಷಣೆ ಮಾಡಿದಂಥ ಬೆಲೆಯ ಜೊತೆಗೆ ಒಂದು ಕ್ವಿಂಟಾಲ್ 3,000 ರೂ.ಗಳಿಗೆ ಖರೀದಿ ಮಾಡಬೇಕೆಂದು ನಿರ್ಣಯವಾಗುವುದರ ಜೊತೆಗೆ ನಮ್ಮ ಸರ್ಕಾರವು ಸುಮಾರು 800 ಕ್ಕಿಂತ ಜಾಸ್ತಿ 1,000 ರೂ.ಗಳನ್ನು ಇದಕ್ಕೆ ಸೇರಿಸಿ ಒಂದು ಕ್ವಿಂಟಾಲ್‌ಗೆ 4,000 ರೂ.ಗಳಿಗೆ ಅರಿಶಿನವನ್ನು ಖರೀದಿ ಮಾಡಬೇಕೆಂದು ಖರೀದಿ ಕೇಂದ್ರಗಳನ್ನು ತೆಗೆದಿದ್ದೇವೆ. ಆ ಬಾಗದಲ್ಲಿ ರೈತರು ಬೆಳೆದಂಥ ಅರಿಶಿನವನ್ನು ಸರ್ಕಾರ ಖರೀದಿ ಮಾಡಿ store ಮಾಡಿದೆ, ಸುದೈವವೆಂದರೆ 4,000 ರೂ.ಗಳು ಇದ್ದಂತೆ ಬೆಲೆ ಇವತ್ತು 8,000 ರೂ.ಗಳಾಗಿದೆ. ಈ ಸಂದರ್ಭದಲ್ಲಿ ಸರ್ಕಾರದಲ್ಲಿ ನನ್ನ ವಿನಂತಿ ಏನೆಂದರೆ, ರೈತನಿಂದ ಅಗ್ಗದ ದರದಲ್ಲಿ ಅರಿಶಿನವನ್ನೂ ಖರೀದಿ ಮಾಡಿ ಹೆಚ್ಚಿನ ಬೆಲೆಗೆ ಹೊರಗೆ ಮಾರಾಟ ಮಾಡಿ ಲಾಭ ಮಾಡುವಂಥ ಅವಶ್ಯಕತೆ ಇಲ್ಲ. ಯಾವ ರೈತ ಪರಿಶ್ರಮ ಪಟ್ಟಿದ್ದಾನೆ, ಇವತ್ತು

ಕಷ್ಟ–ಸುಖದಲ್ಲಿ ಅರಿಶಿಣ ಬೆಳೆದು ಕೊಟ್ಟಿದ್ದಾನೆ, ಯಾರು ಬೆವರು ಹರಿಸಿದ್ದಾರೆ, ಅವರಿಗೆ ಸರಿಯಾದಂಥ ಬೆಲೆಯನ್ನು ಕೊಡಬೇಕೆಂಬ ಹಿನ್ನೆಲೆಯಲ್ಲಿ ಏನು ಲಾಭವಾಗುತ್ತದೆ. ಇವತ್ತು ಯಾವ ಮಾರುಕಟ್ಟೆಯಲ್ಲಿ ಅರಿಶಿಣ ಮಾರಾಟವಾಗುತ್ತದೆ, ಅದರಿಂದ ಬರುವ ಲಾಭಾಂಶವನ್ನು ಸರ್ಕಾರ ವೆಚ್ಚವನ್ನು ಮಾತ್ರ ತೆಗೆದು, ಆ ಹಣವನ್ನು ವಾಪಸ್ಸು ರೈತನ ಮನೆಗೆ ಕೊಡಬೇಕೆಂದು ಈ ಸಂದರ್ಭದಲ್ಲಿ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಇನ್ನು ಶುದ್ಧವಾದ ನೀರನ್ನು ಕೊಡುವಂಥದ್ದು ಬಹಳ ಅಗತ್ಯವಿದೆ. ನನಗೆ ಬಹಳ ಅಭಿಮಾನವೆನಿಸುತ್ತದೆ, ನಮ್ಮ ಭಾಗದಲ್ಲಿ ಇವತ್ತು ಬೋರ್ ವೆಲ್ ನೀರನ್ನು ಅನಿವಾರ್ಯ ಬಂದಾಗ, ಬರ ಬಿದ್ದಾಗ 500–600–1000 ಅಡಿವರೆಗೆ ಬೋರ್‌ವೆಲ್ ಕೊರೆದು ಜನರಿಗೆ ನೀರನ್ನು ಕೊಡತ್ತೇವೆ.

ವೈದ್ಯಕೀಯ ವಿಬಾಗದಲ್ಲಿ ಕೆಲಸ ಮಾಡುವ ಕೆಲವು ಹಿರಿಯ ಅಧಿಕಾರಿಗಳು ಮತ್ತು ಕೆಲವು ಎಕ್ಸ್‌ಪರ್ಟ್‌ಗಳು ಹೇಳುತ್ತಾರೆ, 200 ಅಡಿಗಿಂತ ಆಳವಿರುವ ಬೋರ್‌ವೆಲ್‌ನ ನೀರು ಫ್ಲೋರೈಡ್ ಯುಕ್ತ ನೀರಾಗಿರುತ್ತದೆ, ಆ ನೀರನ್ನು ಕುಡಿದರೆ ಮನುಷ್ಯನ ಆರೋಗ್ಯ ಸಂಪೂರ್ಣ ಕೆಟ್ಟುಹೋಗುತ್ತದೆ ಎಂದು ಅಭಿಪ್ರಾಯ ಪಡುತ್ತಾರೆ. ಫ್ಲೋರೈಡ್‌ಯುಕ್ತ ನೀರನ್ನು ಜನರಿಗೆ ಕೊಡಬಾರದು ಎನ್ನುವ ಹಿನ್ನೆಲೆಯಲ್ಲಿ ನಮ್ಮ ಸರ್ಕಾರ ಸಾಕಷ್ಟು ಚರ್ಚೆಯನ್ನು ಮಾಡಿ Multi-Village Scheme ಗಳನ್ನು ಮಾಡುವುದರ ಮೂಲಕ ಕೆರೆ, ನದಿ, ಹಳ್ಳ ಹೀಗೆ ಭೂಮಿಯ ಮೇಲೆ ಇರುವಂಥ ನೀರನ್ನು ಮಾತ್ರ ಮೇಲಕ್ಕೆತ್ತಿ ಅದನ್ನು ಶುದ್ಧೀಕರಿಸಿ ಕೊಡುವಂಥ ಒಂದು ಪ್ರಯತ್ನವನ್ನು ಮಾಡಿದ್ದಾರೆ. ಬಹಳ ದೊಡ್ಡ ಸಂಖ್ಯೆಯಲ್ಲಿ ನೂರಾರು ಹಳ್ಳಿಗಳಿಗೆ ಶುದ್ಧವಾದ ನೀರನ್ನು ಕೊಡುವಂಥ ಕೆಲಸವನ್ನು ಸರ್ಕಾರ ಮಾಡಿದೆ. ಅದಕ್ಕಾಗಿ ಸರ್ಕಾರಕ್ಕೆ ಅಭಿನಂದನೆಗಳು. ಈ ಸಂದರ್ಭದಲ್ಲಿ ನನ್ನದೊಂದು ಸಲಹೆ ಎಂದರೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ಇಲಾಖೆಯ ಮೂಲಕ ಒಂದು ಕ್ರಾಂತಿಕಾರಿ ನಿರ್ಣಯವನ್ನು ನಮ್ಮ ಸರ್ಕಾರ ಮಾಡಿದರೆ, ಶುದ್ಧ ಕುಡಿಯುವ ನೀರನ್ನು ಕೊಡುವಂಥ ಘಟಕಗಳನ್ನು ಮಾಡಲು ಸಾಧ್ಯವಿದೆ. ಬಹುಶಃ ತಾವು ಕೇಳಿರಬಹುದು ಅಥವಾ ಪತ್ರಿಕೆಗಳಲ್ಲಿ ಓದಿರಬಹುದು, ಗದಗ್ ಜಿಲ್ಲೆಯಲ್ಲಿ ಅಲ್ಲಿನ ಅನೇಕ ಸಹಕಾರಿ ಸಂಘಗಳ ಧುರೀಣರು ಪ್ರತಿಯೊಂದು ಹಳ್ಳಿಗೆ ಒಂದೊಂದು ಕುಡಿಯುವ ನೀರಿನ ಶುದ್ಧೀಕರಣ ಘಟಕ ಮಾಡುವಂಥ ವ್ಯವಸ್ಥೆಯನ್ನು ಮಾಡಿದ್ದಾರೆ. ಸುಮಾರು ಐದಾರು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಒಂದು ಘಟಕವನ್ನು ಮಾಡಿದರೆ, ಎರಡು ರೂಪಾಯಿ ನಾಣ್ಯವನ್ನು ಹಾಕಿದರೆ 20 ಲೀಟರ್ ಶುದ್ಧವಾದಂಥ ನೀರು ಸಿಗುತ್ತದೆ. ಬೋರ್ ವೆಲ್ ನೀರು ಇರಬಹುದು, ಹೊಳೆ

ನೀರು ಇರಬಹುದು, ಯಾವುದೇ ನೀರು ಇರಬಹುದು, ಯಾವುದೇ ನೀರನ್ನು ಆ ಘಟಕಕ್ಕೆ ಕನೆಕ್ಷನ್ ಕೊಟ್ಟರೂ ಕೂಡ, ಬಡವರ ಕುಟುಂಬಗಳಿಗೆ ಎರಡು ರೂಪಾಯಿಗಳಲ್ಲಿ ಇಪ್ಪತ್ತು ಲೀಟರ್ ಶುದ್ಧವಾದಂಥ ನೀರು ಕೊಟ್ಟರೆ ಆ ಕುಟುಂಬ ನೆಮ್ಮದಿಯಿಂದ ಜೀವನ ಮಾಡುತ್ತದೆ. ಆಗ ಯಾವುದೇ ಸಣ್ಣಪುಟ್ಟ ರೋಗಗಳು ಬರುವುದಿಲ್ಲ. ಇವತ್ತು ಮನುಷ್ಯನಿಗೆ ಬರುವಂಥ ರೋಗಗಳಲ್ಲಿ ಹೆಚ್ಚಿನ ರೋಗಗಳು ಅಶುದ್ಧವಾದ ನೀರನ್ನು ಕುಡಿಯುವುದರಿಂದ ಬರುತ್ತವೆ. ಅದನ್ನು ತಪ್ಪಿಸಬೇಕೆಂದರೆ, ಪ್ರತಿ ಗ್ರಾಮಕ್ಕೂ ಐದೈದು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಈ ರೀತಿಯ ಶುದ್ಧೀಕರಣ ಘಟಕಗಳನ್ನು ಪ್ರಾರಂಭ ಮಾಡಿದರೆ, ಬಹಳ ದೊಡ್ಡ ಪ್ರಮಾಣದಲ್ಲಿ ನಾವು ಕ್ರಾಂತಿಯನ್ನು ಮಾಡಿದ ಹಾಗಾಗುತ್ತದೆ. ಆಗ ದವಾಖಾನೆಗಳ ಅಗತ್ಯತೆ ಬೀಳುವುದಿಲ್ಲ, ಔಷಧಗಳು ಅಗತ್ಯತೆ ಬೀಳುವುದಿಲ್ಲ, ವೈದರ ಅಗತ್ಯತೆ ಬೀಳುವುದಿಲ್ಲ. ಆದ್ದರಿಂದ ಶುದ್ಧವಾದ ನೀರನ್ನು ಕೊಡಬೇಕೆನ್ನುವ ಹಿನ್ನೆಲೆಯಲ್ಲಿ ಸರ್ಕಾರ ಒಂದು ತೀರ್ಮಾನವನ್ನು ತೆಗೆದುಕೊಂಡು ಗ್ರಾಮ ಪಂಚಾಯಿತಿಗಳಿಗೆ ಕೊಡುವ ಅನುದಾನದ ಜೊತೆಗೆ ಯವುದಾದರೂ ಇಲಾಖೆಗಳಲ್ಲಿ ಬೇರೆ ಬೇರೆ ಅನಾವಶ್ಯಕ ಖರ್ಚುಗಳಾಗುತ್ತಿದ್ದರೆ, ಅದನ್ನು ತಡೆದು ಆ ದುಡ್ಡನ್ನು ಇದಕ್ಕೆ ಡೈವರ್ಟ್ ಮಾಡಿ ಒಂದೊಂದು ಹಳ್ಳಿಗೂ ಒಂದು ಶುದ್ಧ ಕುಡಿಯುವ ನೀರಿನ ಘಟಕವನ್ನು ಮತ್ತು ನಗರ ಮಟ್ಟದಲ್ಲೂ ಸಹ ವಾರ್ಡ್‌ಗೊಂದೊಂದು ಇಂಥ ಘಟಕಗಳನ್ನು ಮಾಡಿಬಿಟ್ಟರೆ ಬಹುಶಃ ಕುಡಿಯುವ ನೀರಿನ ಸಮಸ್ಯೆಯಾಗುವುದಿಲ್ಲ. ಬಳಕೆಗೆ ಬೇಕಾಗುವಂಥ ನೀರು, ಬಟ್ಟೆ ತೊಳೆಯಲು ಬೇಕಾಗುವಂಥ ನೀರು, ಜಾನುವಾರುಗಳಿಗೆ ಬೇಕಾಗುವಂತ ನೀರನ್ನು ಬೇರೆ ಮೂಲಗಳಿಂದ ಕೊಡಬಹುದು. ಆದ್ದರಿಂದ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಮಾಡುವಂಥ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ಸರ್ಕಾರಕ್ಕೆ ಒತ್ತಾಯವನ್ನು ಮಾಡುತ್ತೇನೆ.

ಇನ್ನು, ರಾಜ್ಯದ ಎಲ್ಲ ಕಡೆಯೂ ವಿದ್ಯುತ್ ಬಹಳ ಅಗತ್ಯವಿದೆ. ಮಳೆಯಾಗದಿದ್ದರೂ, ಡ್ಯಾಂನಲ್ಲಿ ನೀರಿಲ್ಲದಿದ್ದರೂ, ಕೇಂದ್ರದಿಂದ ಸಕಾಲಕ್ಕೆ ಸಾಕಷ್ಟು ಕಲ್ಲಿದ್ದಲು ಬರದಿದ್ದರೂ ಕೂಡ ವಿದ್ಯುತ್ ವಿಷಯದಲ್ಲಿ ಎಲ್ಲಿಯೂ ಕೂಡ ಜನರಿಗೆ ದೊಡ್ಡ ಪ್ರಮಾಣದಲಿ ತೊಂದರೆಯಾಗಿಲ್ಲ. ವಿದ್ಯುತ್ತನ್ನು ಖರೀದಿ ಮಾಡಿ, ಸಾಕಷ್ಟು ಹೊಸಹೊಸ ಯೋಜನೆಗಳನ್ನು ಜಾರಿಗೆ ತಂದು ಸರ್ಕಾರ ಕ್ರಾಂತಿಕಾರಿ ನಿರ್ಣಯಗಳನ್ನು ತೆಗೆದುಕೊಂಡು ಜನರಿಗೆ ಸಾಕಷ್ಟು ವಿದ್ಯುತ್ತನ್ನು ಕೊಡುವಂಥ ವ್ಯವಸ್ಥೆಯನ್ನು ಮಾಡಿದ್ದಾರೆ. ಅಷ್ಟೇ ಅಲ್ಲ, ಗುಜರಾತ್‌ನಲ್ಲಿ ನಿರಂತರ ಜ್ಯೋತಿ ತರಬೇಕೆಂದು ಅಲ್ಲಿನ ಮುಖ್ಯಮಂತ್ರಿಗಳು ಯಾವ ರೀತಿಯ ಕಾರ್ಯಕ್ರಮವನ್ನು ಮಾಡಿದರೋ ಅದನ್ನೇ ಕರ್ನಾಟಕದಲ್ಲಿ ಇವತ್ತು ನಮ್ಮ ಸರ್ಕಾರ ಕೂಡ ಮಾಡಿದೆ. ಸುದೈವದಿಂದ ಮೊದಲನೇ ಕಂತಿನಲ್ಲಿ ನಮ್ಮ ತಾಲ್ಲೂಕು ಕೂಡ ಇದೆ.

ಜಮಖಂಡಿ ತಾಲ್ಲೂಕಿಗೆ 10 ಕೋಟಿ ರೂಪಾಯಿ ಮಂಜೂರಾಗಿದ್ದು, ಅಲ್ಲಿ ಕೆಲಸ ಮುಕ್ತಾಯದ ಹಂತಕ್ಕೆ ಬಂದಿದೆ, ಇನ್ನೊಂದು 15–20 ದಿವಸಗಳಲ್ಲಿ ಆ ಕೆಲಸ ಮುಗಿದರೆ, ಗ್ರಾಮಾಂತರ ಭಾಗದಲ್ಲಿ ವಾಸಿಸುವ ಜನರಿಗೆ ತಡೆರಹಿತವಾಗಿ 24 ಘಂಟೆಯೂ ವಿದ್ಯುತ್ತನ್ನು ಕೊಡುವಂಥ ಒಂದು ಕ್ರಾಂತಿಕಾರಿ ಕಾರ್ಯಕ್ರಮ ಜಾರಿಗೆ ಬರುತ್ತದೆ ಎಂದು ಬಹಳ ಅಭಿಮಾನದಿಂದ ಮತ್ತು ಸಂತೋಷದಿಂದ ಹೇಳಲು ಬಯಸುತ್ತೇನೆ. ಈ ಸಂದರ್ಭದಲ್ಲಿ ಇನ್ನೊಂದು ವಿನಂತಿಯೇನೆಂದರೆ, ಇಂಧನ ಇಲಾಖೆಯ ಮಂತ್ರಿಗಳಿಗೆ ಮತ್ತು ಅಧಿಕಾರಿಗಳ ಗಮನಕ್ಕೆ ತರುವುದೇನೆಂದರೆ, ಜಮಖಂಡಿ ತಾಲ್ಲೂಕಿನ ಕೃಷ್ಣಾ ನದಿ ಎಡಭಾಗಕ್ಕೆ ಬಹಳ ದೂರದಿಂದ ವಿದ್ಯುತ್ ಬರುತ್ತದೆ. ಅಲ್ಲಿಗೆ ಅಥಣಿಯ 220 ಕೆ.ವಿ. ಸ್ಟೇಷನ್‌ನಿಂದ ಬರಬೇಕು. ವಿದ್ಯುತ್ ಬರಬೇಕು ಅಥವಾ ಬಸವನಬಾಗೇವಾಡಿಯು 220 ಕೆ.ವಿ. ಸ್ಟೇಷನ್‌ನಿಂದ ಬರಬೇಕು. ದೂರದಿಂದ ಬರುವಂತ ವಿದ್ಯುತ್ 110 ಕೆ.ವಿ. ನಂತರ 33 ಕೆ.ವಿ. ಸ್ಟೇಷನ್‌ಗೆ ಬಂದರೆ ಗುಣಮಟ್ಟದ ವಿದ್ಯುತ್ ಕೊಡಲು ಸಾಧ್ಯವಾಗುವುದಿಲ್ಲ. ಮುಂದೆ, ನಮ್ಮಲ್ಲಿ ಕೆರೆ ತುಂಬುವ ಯೋಜನೆ ಸಾವಳಗಿ ಭಾಗದಲ್ಲಿದೆ, ಪ್ರತಿಹಳ್ಳಿಗೂ Multi-Village Scheme ನಲ್ಲಿ ಕೃಷ್ಣಾ ನದಿಯ ನೀರನ್ನು ಎತ್ತಿ ಕೊಡಬೇಕಾಗುತ್ತದೆ. ಬಬಲೇಶ್ವರ ಮತ್ತು ಸಾವಳಗಿ ಲಿಫ್ಟ್ ಇರಿಗೇಷನ್ ಆದರೆ ಅದಕ್ಕೆ ಸುಮಾರು 460 ಕೋಟಿ ರೂಪಾಯಿ ಖರ್ಚು ಮಾಡಿ ಈ ಲಿಫ್ಟ್ ಇರಿಗೇಷನ್ ಅನ್ನು ಮಾಡಿ ರೈತರ ಜಮೀನಿಗೆ ಕೊಡಬೇಕಾಗುತ್ತದೆ. ಚಿಕ್ಕಲಗಿಯ 45 ಕೋಟಿ ರೂಪಾಯಿಗಳ ಲಿಫ್ಟ್ ಇರಿಗೇಷನ್‌ಗೆ ಕೂಡ ವಿದ್ಯುತ್ ಬೇಕಾಗುತ್ತದೆ. ಹೀಗಾಗಿ ಮುಂಬರುವಂಥ ದಿವಸಗಳಲ್ಲಿ ಬಹಳಷ್ಟು ವಿದ್ಯುತ್ತಿನ ಬೇಡಿಕೆ ಜಮಖಂಡಿ ತಾಲ್ಲೂಕಿನ ಸಾವಳಗಿ ಭಾಗದಲ್ಲಿರುವುದರಿಂದ ಅಲ್ಲಿ 220 ಕೆ.ವಿ. ಸ್ಟೇಷನ್ ಮಾಡಬೇಕೆನ್ನುವುದು ನನ್ನ ವಿನಂತಿ. ಈ ಬಗ್ಗೆ 351ರ ಕೆಳಗೆ ನಾನು ಒಂದು ಪ್ರಶ್ನೆಯನ್ನು ಕೂಡ ಸರ್ಕಾರಕ್ಕೆ ಕೇಳಿದ್ದೆ, ಅದೇನೆಂದರೆ, ಸಾವಳಗಿ ಭಾಗದಲ್ಲಿ 220 ಕೆ.ವಿ. ಸ್ಟೇಷನ್ ಮಾಡಿ, ಬಸವನಬಾಗೇವಾಡಿ ಮೂಲಕ ತಂದು ಅಲ್ಲಿ ಕೊಟ್ಟರೆ ಮುಂದೆ ಅಲ್ಲಿ ಯಾವುದೇ ರೀತಿಯಲ್ಲಿ ವಿದ್ಯುತ್ತಿನ ಕೊರತೆಯಾಗುವುದಿಲ್ಲ. ಆದ್ದರಿಂದ ಜಮಖಂಡಿಯಲ್ಲಿ 220 ಕೆ.ವಿ. ಸ್ಟೇಷನ್ ಮಂಜೂರು ಮಾಡುವಂಥ ಕಾರ್ಯಕ್ರಮಕ್ಕೆ ಸರ್ಕಾರ ಚಾಲನೆಯನ್ನು ಕೊಡಬೇಕು ಎನ್ನುವ ವಿಶೇಷವಾದ ವಿನಂತಿಯನ್ನು ಮಾಡುತ್ತೇನೆ. ಅದರ ಜೊತೆಗೆ, ಈ ಭಾಗದಲ್ಲಿ ಮುಂದೆ ಅಗತಕ್ಕಂಥ ನೀರಾವರಿ ಯೋಜನೆಗಳು, ಅಥಣಿ ತಾಲ್ಲೂಕಿನ ಮೂಲಕ ತುಂಗಳ್–ಸಾವಳಗಿ ಲಿಫ್ಟ್ ಇರಿಗೇಷನ್ ಸಂಪೂರ್ಣ ಸಜ್ಜಾಗಿದೆ. 1000 ಹೆಚ್.ಪಿ.ಯ ನಾಲ್ಕು ಮೋಟಾರ್ ಗಳಿವೆ. ಅದರಲ್ಲಿ 1000 ಹೆಚ್.ಪಿ.ಯ ಮೂರು ಮೋಟರ್ ಗಳನ್ನು

ಡಿಸೆಂಬರ್ 27 ರಂದು ರನ್ ಮಾಡುವುದರ ಮೂಲಕ ಸನ್ಮಾನ್ಯ ಲಕ್ಷ್ಮಣ ಸವದಿಯವರು ಮತ್ತು ನಾವು ಕೂಡಿ ಸಾಂಕೇತಿಕವಾಗಿ ಚಾಲೂ ಮಾಡಿದೆವು. ಸಣ್ಣಪುಟ್ಟ ಕೆಲಸಗಳು ಬಾಕಿಯಿದ್ದವು. ಅದು ಮುಕ್ತಾಯವಾಗುತ್ತದೆ. 29ನೇ ತಾರೀಖಿನ ದಿವಸ ಪಂಪ್ ರನ್ ಆಗಿಬಿಟ್ಟರೆ, ನನ್ನ ಕ್ಷೇತ್ರದಲ್ಲಿ 18 ಸಾವಿರ ಎಕರೆ ಬರಪೀಡಿತ ಪ್ರದೇಶಕ್ಕೆ ನೀರು ಬರುತ್ತದೆ ಮತ್ತು ಅದರಿಂದ ರೈತರು ನೀರಾವರಿ ಬೆಳೆಯನ್ನು ಮಾಡಲು ಸಾಧ್ಯವಾಗುತ್ತದೆ. ಇವತ್ತು ನಮ್ಮ ಭಾಗದಲ್ಲಿ ಕೆರೆ ತುಂಬುವ ಯೋಜನೆ ಬಂತು, ತುಂಗಳ್-ಸಾವಳಗಿ ಲಿಫ್ಟ್ ಇರಿಗೇಷನ್ ಬಂತು. ಮುಂದೆ ಚಿಕ್ಕಲಗಿ ಲಿಫ್ಟ್ ಇರಿಗೇಷನ್ ಬರುತ್ತದೆ. ನೀರಾವರಿ ಇಲಾಖೆ ಇವುಗಳನ್ನೆಲ್ಲ maintain ಮಾಡಬೇಕಾದರೆ ಸಾವಳಗಿಯಲ್ಲೊಂದು Assistant Executive Engineer Post ಅನ್ನು ಮಂಜೂರು ಮಾಡಿ ಒಂದು ಉಪ ವಿಭಾಗವನ್ನು ಪ್ರಾರಂಭ ಮಾಡಿದರೆ ಅಲ್ಲಿಯ ನೀರಾವರಿ ಯೋಜನೆಗಳೆಲ್ಲವನ್ನೂ manage ಮಾಡಲು ಸಾಧ್ಯವಾಗುತ್ತದೆ. ಈ ಹಿನ್ನೆಲೆಯಲ್ಲಿ ಅಲ್ಲಿಗೆ ಒಂದು A.E.E. Post ಅನ್ನು ಮಂಜೂರು ಮಾಡಬೇಕೆಂದು ಸರ್ಕಾರಕ್ಕೆ ವಿನಂತಿ ಮಾಡುತ್ತೇನೆ.

ಇನ್ನು ಆ ಭಾಗದ ಹತ್ತಾರು ಸಮಸ್ಯೆಗಳನ್ನು ಬೇರೆಬೇರೆ ಸಂದರ್ಭಗಳಲ್ಲಿ ನಾವೇನು ಪ್ರಸ್ತಾಪ ಮಾಡಿರುತ್ತೇವೆ, ಅವುಗಳ ಬಗ್ಗೆ ಹೆಚ್ಚು ಒತ್ತು ಕೊಟ್ಟು ಸರ್ಕಾರ ಅದನ್ನು ಜಾರಿಗೆ ತರಬೇಕು ಎನ್ನುವ ವಿನಂತಿಯನ್ನು ಮಾಡುತ್ತೇನೆ. ಕೊನೆಯದಾಗಿ, ಒಂದು ವಿಷಯವನ್ನು ಈ ಸದನದ ಗಮನಕ್ಕೆ ತರಲು ಬಯಸುತ್ತೇನೆ. ತಮಗೆ ಗೊತ್ತಿದೆ, ಸ್ವಾತಂತ್ರ್ಯ ಸಿಕ್ಕ ನಂತರ ರಾಜ್ಯಗಳ ವಿಲಿನೀಕರಣ ಆಗುವಂಥ ಸಂದರ್ಭದಲ್ಲಿ ಮೊಟ್ಟಮೊದಲು ಯಾರಾದರೂ ಮುಂದೆ ಬಂದಿದ್ದರೆ ಅದು ಜಮಖಂಡಿ ಸಂಸ್ಥಾನದ ಪಟವರ್ಧನ ಮಹಾರಾಜರು. ಅವರು ಸರದಾರ್ ವಲ್ಲಭಬಾಯಿಯವರ ಜೊತೆ ಮೂರು ಕಂಡೀಷನ್ ಗಳನ್ನು ಹಾಕಿದ್ದರು. ಕಂಡೀಷನ್ ನಂಬರ್ 1, ಜಂಬಗಿ ಬ್ರಿಡ್ಜ್ ಆಗಬೇಕು ಎನ್ನುವುದು. ನಮ್ಮ ಸರ್ಕಾರ ಅದನ್ನು ಈಡೇರಿಸಿದೆ. ಕಂಡೀಷನ್ ನಂಬರ್ 2 ಕುಡಚಿಯಿಂದ ಬಾಗಲಕೋಟೆಯವರೆಗೆ ರೈಲ್ವೆ ಲೈನ್ ಜಮಖಂಡಿ ಮೂಲಕ ಹೋಗಬೇಕು ಎನ್ನುವುದಾಗಿತ್ತು. ಅದು ವಿಳಂಬವಾದರೂ ಈಗ ಕೇಂದ್ರ ಸರ್ಕಾರ ಅದಕ್ಕೆ ಹಣವನ್ನು ಕೊಟ್ಟಿದೆ. ಹಿಂದಿನ ಅಧಿವೇಶನದಲ್ಲಿ ನಮ್ಮ ಮುಖ್ಯಮಂತ್ರಿಗಳು 860 ಕೋಟಿ ರೂಪಾಯಿಗಳ ಹಣವನ್ನು ಕರ್ನಾಟಕ ಸರ್ಕಾರದಿಂದ ಕೊಡುತ್ತೇವೆ ಎನ್ನುವ ಘೋಷಣೆಯನ್ನು ಮಾಡಿದ್ದಾರೆ. ಅದಕ್ಕೆ ಇನ್ನಷ್ಟು ಚಾಲನೆಯನ್ನು ಕೊಟ್ಟು ಕುಡಚಿಯಿಂದ ಬಾಗಲಕೋಟೆಯವರೆಗೆ ಜಮಖಂಡಿ ಮೂಲಕ ರೈಲ್ವೆ ಲೈನ್ ಹೋದರೆ ಆ ಮಹಾರಾಜರು ಹಾಕಿದ ಎರಡನೇ ಕಂಡೀಷನ್ ಅನ್ನೂ ಕೂಡ ನಾವು

ಈಡೇರಿಸಿದ ಹಾಗಾಗುತ್ತದೆ. ಮೂರನೇ ಕಂಡೀಷನ್ ಏನೆಂದರೆ, ಆವತ್ತು ಜಮಖಂಡಿಯಲ್ಲಿ ದಿವಾನ್ ಎನ್ನುವ ಹುದ್ದೆಯಿತ್ತು. ಆ ಹುದ್ದೆ ಖಾಯಂ ಆಗಿ ಉಳಿಯಬೇಕೆಂದು ಅವರು ಹೇಳಿದ್ದರು. ದಿವಾನ್ ಹುದ್ದೆ ಎಂದರೆ ಜಿಲ್ಲಾಧಿಕಾರಿ ಹುದ್ದೆ. ಜಮಖಂಡಿ ಜಿಲ್ಲಾ ಕೇಂದ್ರವಾಗಲಿಕ್ಕೆ ಬಹಳ ಯೋಗ್ಯವಾಗಿದೆ. ಆದರೆ ಅಲ್ಲಿ ಹಿಂದಿನ ಜನಪ್ರತಿನಿಧಿಗಳು ಯಾವ ಒಂದು ಆಯೋಗವನ್ನು ನೇಮಿಸಿದ್ದರು, ಯಾವ ಒಂದು ಕಮಿಟಿ ಬಂದಿತ್ತು, ಅದರ ಮುಂದೆ ಹೇಳಬೇಕಾದುದನ್ನು ಹೇಳಲಿಲ್ಲವಾದ್ದರಿಂದ ಜಮಖಂಡಿಯ ಬದಲು ಬಾಗಲಕೋಟೆ ಜಿಲ್ಲಾ ಕೇಂದ್ರವಾಗಿಬಿಟ್ಟಿತು. ಆದರೆ ನಿಜವಾಗಿ ಜಿಲ್ಲಾ ಕೆಂದ್ರವಾಗಬೇಕಾಗಿದ್ದದು ಜಮಖಂಡಿಯಾಗಿತ್ತು. ಜಮಖಂಡಿಯಲ್ಲಿ ಜನಸಾಂದ್ರತೆ ಹೆಚ್ಚಿದೆ. ಜಮಖಂಡಿಯ ಸುತ್ತಮುತ್ತ ಬರುವಂಥ ಅಥಣಿ, ರಾಯಭಾಗ, ಬೀಳಗಿ ಮತ್ತು ಮುಧೋಳಗಳನ್ನು ತಾಲ್ಲೂಕುಗಳ ಜೊತೆಗೆ ತೇರದಾಳವನ್ನು ಹೊಸ ತಾಲ್ಲೂಕೆಂದು ಘೋಷಣೆ ಮಾಡಿ, ನೀರಾವರಿ ಭೂ ಪ್ರದೇಶವಿರುವಂಥ ನಾಲ್ಕೈದು ತಾಲ್ಲೂಕುಗಳನ್ನು ಸೇರಿಸಿ ಮಾಡಬೇಕು. ಇಡೀ ಬಾಗಲಕೋಟೆಯಲ್ಲಿ ಒಂದು ದಿವಸಕ್ಕೆ ಎಷ್ಟು mutations ಆಗುತ್ತದೋ, ಜಮಖಂಡಿಯಲ್ಲಿ ಒಂದು ದಿವಸಕ್ಕೆ ಅಷ್ಟು ಆಗುತ್ತದೆ. ಹೀಗಾಗಿ ಜಮಖಂಡಿಯನ್ನು ಜಿಲ್ಲಾ ಕೇಂದ್ರವನ್ನಾಗಿ ಮಾಡಿದರೆ, ಮುಂದಿನ ದಿನಗಳಲ್ಲಿ ಸರ್ಕಾರದ ಆಡಳಿತವನ್ನು ಸರಿಯಾಗಿ ಅಧಿಕಾರ ವಿಕೇಂದ್ರೀಕರಣ ಮಾಡುತ್ತಾ ಜನರ ಕಷ್ಟಸುಖಗಳನ್ನು ಅರ್ಥ ಮಾಡಿಕೊಂಡು ಸರ್ಕಾರ ಕ್ರಿಯಾಶೀಲವಾಗಿ ಕೆಲಸ ಮಾಡಲು ಸಾಧ್ಯವಾಗುತ್ತದೆ. ಈ ಹಿನ್ನೆಲೆಯಲ್ಲಿ ಜಮಖಂಡಿಯನ್ನು ಜಿಲ್ಲಾ ಕೇಂದ್ರವನ್ನಾಗಿ ಮಾಡಬೇಕು ಎನ್ನುವ ಯೋಚನೆಯನ್ನು ಸರ್ಕಾರ ಮಾಡಬೇಕು. ಅದಕ್ಕೆ ಬೇಕಾಗುವಂಥ ಎಲ್ಲಾ ಚರ್ಚೆಯನ್ನು ಮಾಡಿ, ಬೇಕಾದರೆ ಒಂದು ಸಮಿತಿಯನ್ನು ನೇಮಿಸಿ, ಅದು ಅಲ್ಲಿಗೆ ಹೋಗಿ ಅಧ್ಯಯನ ಮಾಡಿ, ಅದನ್ನು ಜಿಲ್ಲಾ ಕೇಂದ್ರವನ್ನಾಗಿ ಮಾಡಿದರೆ ಆ ಭಾಗದ ಜನರ ಕನಸು ನನಸಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳುತ್ತಾ, ಈ ಸಂದರ್ಭದಲ್ಲಿ ಮಾತನಾಡಲು ಅವಕಾಶ ಕೊಟ್ಟಂಥ ತಮಗೆ ಅಭಿನಂದನೆಯನ್ನು ಸಲ್ಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು: ಈಗ ಗೂಳಿಹಟ್ಟಿ ಡಿ. ಶೇಖರ್ ರವರು

(ಮಾನ್ಯ ಸದಸ್ಯರು ಸದನದಲ್ಲಿ ಹಾಜರಿರಲಿಲ್ಲ)

ಡಾ॥ ಶರಣಪ್ರಕಾಶ ರುದ್ರಪ್ಪ ಪಾಟೀಲ್ (ಸೇಡಂ): ಮಾನ್ಯ ಉಪಾಧ್ಯಕ್ಷರೆ, ಬಜೆಟ್ ಬಗ್ಗೆ ಮಾತನಾಡಲು ನನಗೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳು. 27ನೇ

ತಾರೀಖು ಮಾನ್ಯ ಮುಖ್ಯಮಂತ್ರಿಯವರು ಉತ್ತರ ಕೊಡುತ್ತಾರೆ ಮತ್ತು Finance bill pass ಆಗಬೇಕೆಂದು BAC ಯಲ್ಲಿ ಎಲ್ಲರೂ ಸೇರಿ ಮಾತನಾಡಿದ್ದೀರಿ ಎಂದು ನನಗನನ್ನಿಸುತ್ತದೆ. ಆದರೆ, ಇವತ್ತು 25ನೇ ತಾರೀಖು, ನಾಳೆ ಒಂದು ದಿವಸ ಮಾತ್ರ ಚರ್ಚೆಗೆ ಅವಕಾಶವಿದೆ. ಆದ್ದರಿಂದ, ನನ್ನ ಒಂದು ಮನವಿ ಇದೆ. ಸದನವನ್ನು ಮೊಟಕು ಮಾಡುವಂಥದ್ದು ಮುಂದೆ ಈ ರೀತಿ ಆಗಬಾರದು. ಏಕೆಂದರೆ, ಈ Subject Committees ಅನ್ನು ಸಹ abolish ಮಾಡಿದ್ದೀರಿ. ಯಾವ್ಯಾವ ಇಲಾಖೆಯ Subject Committees ಇದ್ದಿದ್ದರೆ atleast ನಾವು ಬೇರೆ ಬೇರೆ MLAs ಒಂದೊಂದು ಇಲಾಖೆ ಮೇಲೆ ಚರ್ಚೆ ಮಾಡುತ್ತಿದ್ದು, ಸಲಹೆಗಳನ್ನು ಕೊಡುತ್ತಿದ್ದೆವು ಮತ್ತು ಎಲ್ಲಿ ಅವ್ಯವಹಾರವಾಗುತ್ತಿದೆ ಅದನ್ನು ಕಡಿವಾಣ ಹಾಕಲಿಕ್ಕೆ ಏನು ಸಲಹೆ ಬೇಕೋ ಅದನ್ನೂ ಕೊಡುತ್ತಿದ್ದೆವು ಮತ್ತು wasteful expenditure ಎಲ್ಲಿ ಆಗುತ್ತಿದೆ ಕ್ರಿಯಾಶೀಲವಾಗಿ ಯುವ ರೀತಿ ಹಣ ಬಳಕೆ ಮಾಡಬಹುದೆಂದು advise ಮಾಡಬಹುದಾಗಿತ್ತು. ಅದಕ್ಕೂ ಅವಕಾಶವಿಲ್ಲ. ಈ ಸದನದಲ್ಲಿ ನಾವು ಈ ಬೇಡಿಕೆ ಮೇಲೆ ಚರ್ಚೆ ಮಾಡಬೇಕೆಂದು ಇಲ್ಲಿ ಪ್ರಯತ್ನ ಮಾಡಿದರೆ, ಇಲ್ಲಿ ನಮಗೆ ಈ ಅವಕಾಶಗಳ ಕಾಲಮಿತಿಯ ಒಂದು ಚೌಕಟ್ಟನ್ನು ಹಾಕುತ್ತೀರಿ. ಇನ್ನು ಎರಡೇ ದಿವಸಗಳಲ್ಲಿ ಎಲ್ಲಾ ಇಲಾಖೆಗಳ ಬಗ್ಗೆ ನಾವು ಚರ್ಚೆಯನ್ನೂ ಮಾಡುವ ಹಾಗಿಲ್ಲ. ಚರ್ಚೆ ಮಾಡಬೇಕೆನ್ನುವ ಉತ್ಸಾಹದಿಂದ ಬೆಳಿಗ್ಗೆಯಿಂದ ಸಾಯಂಕಾಲದವರೆಗೆ Assembly ಯಲ್ಲಿ ಕುಳಿತರೂ ಸಹ ಸರ್ಕಾರದ ವತಿಯಿಂದ ನಮಗೆ ಸಿಗಬೇಕಾಗಿರತಕ್ಕಂಥ ಮಾಹಿತಿಗಳು ಸಿಗುತ್ತಿಲ್ಲ. You are witness to this House. ಇನ್ನೂ ವಾರ್ಷಿಕ ವರದಿ ಕೊಡುತ್ತಿಲ್ಲ. ಇಲಾಖೆಯ ಮೇಲೆ ನಿಮ್ಮ Performance Report on budget ಕೊಡುತ್ತಿಲ್ಲವೆಂದು ನಾನು 4–5 ದಿವಸಗಳ ಹಿಂದೆಯೇ ಹೇಳಿದ್ದೆ ಇಲ್ಲಿಯವರೆಗೂ ಕೊಟ್ಟಿಲ್ಲ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು): ಮಾನ್ಯ ಉಪಾಧ್ಯಕ್ಷರೇ, ಎಲ್ಲಾ ಇಲಾಖೆಗಳ demands ಒಟ್ಟಿಗೇ ಇಟ್ಟಿದ್ದೀರಿ. ಕೆಲವು ವಿಷಯಗಳಿಗೆ ಸಂಬಂಧಪಟ್ಟಂತೆ Performance Report ಬಂದಿದೆ. ಇನ್ನೂ ಕೂಡ ಅನೇಕ ಇಲಾಖೆಗಳ Performance Report ಬಂದಿಲ್ಲ. How can MLAs participate in the discussion? ಸರ್ಕಾರ ಇದೆಯೇ? ಹಾಗಾದರೆ, demands ಗೆ subject ಗಳನ್ನು ಏಕೆ ಇಟ್ಟಿದ್ದೀರಿ? If you don't furnish the Performance Report ಹೇಗೆ ಚರ್ಚೆ ಮಾಡುವುದು? Without knowing how that Department is functioning ಮಾಹಿತಿ ಇಲ್ಲದೆ ಹೇಗೆ ಮಾತನಾಡುತ್ತಾರೆ?

Is it not mandatory when the Demand is moved on the floor of the House? Along with the Demand, Performance Report should also be furnished. ಎಲ್ಲಿದೆ? ಇವರಿಗೆ ಏನು ಬಂದಿದೆ? ಇವರಿಗೆ ಎಷ್ಟು ಸಾರಿ ಹೇಳುವುದು?

ಉಪಾಧ್ಯಕ್ಷರು: ಸುರೇಶ್ ಕುಮಾರ್ ರವರೆ, ಇದರ ಬಗ್ಗೆ ಗಮನಹರಿಸಿ.

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಕೆಲವು ಇಲಾಖೆಗಳ ವಾರ್ಷಿಕ ವರದಿ ಮತ್ತು ನಿರ್ವಹಣಾ ವರದಿ ಬಂದಿದೆ. ಇನ್ನೂ ಕೆಲವು ಇಲಾಖೆಗಳ ವರದಿ ಬರಬೇಕು. ನಾನು ಸೂಚನೆ ಕೊಟ್ಟು ಬರುವ ಹಾಗೆ ಮಾಡುತ್ತೇನೆ.

ಶ್ರೀ ಸಿದ್ದರಾಮಯ್ಯ: ನೀವು Parliamentary Minister. ನಿಮಗೆ ಹೇಳಬೇಕೆನ್ನುವ ಕಾರಣಕ್ಕೋಸ್ಕರ ಅಲ್ಲ.

Sri S. Suresh Kumar: You are right. I fully agree with you

ಶ್ರೀ ಸಿದ್ದರಾಮಯ್ಯ: ಇವತ್ತು ಮತ್ತು ನಾಳೆಯೊಳಗೆ ಬಜೆಟ್ ಮೇಲೆ ಮಾತನಾಡಿ ಮುಗಿಸಬೇಕೆಂದಿದ್ದೀರಿ. ಹಾಗಾದರೆ, how to participate? How can we participate

Sri S. Suresh Kumar: Actually, I agree with you

ಶ್ರೀ ಸಿದ್ದರಾಮಯ್ಯ: ನೀವು ಆ ವರದಿಯನ್ನು ಇವತ್ತು ಕೊಡದಿದ್ದರೆ ನಾಳೆ nobody can participate.

ಶ್ರೀ ಎಸ್. ಸುರೇಶ್ ಕುಮಾರ್: ತರಿಸಲು ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಸಿದ್ದರಾಮಯ್ಯ: ಇವತ್ತೇ ತರಿಸಲು ಕ್ರಮ ತೆಗೆದುಕೊಳ್ಳಿ, ಯಾವ್ಯಾವ ಇಲಾಖೆಯವರು ವರದಿ ಕೊಟ್ಟಿದ್ದಾರೆ, ಆ ಇಲಾಖೆಗಳ ಬಗ್ಗೆ ಮಾತ್ರ ಸದಸ್ಯರು ಮಾತನಾಡುತ್ತಾರೆ. ಬೇರೆ ಇಲಾಖೆಗಳ ಬಗ್ಗೆ ಮಾತನಾಡುವುದಕ್ಕಾಗುವುದಿಲ್ಲ. ನಿಮ್ಮ Legislature Secretariat ಗೆ ಯಾವ್ಯಾವ ಇಲಾಖೆಗಳಿಂದ ಬಂದಿದೆ, ಯಾವ್ಯಾವ ಇಲಾಖೆಗಳಿಂದ ಬಂದಿಲ್ಲ ಎನ್ನುವ ಬಗ್ಗೆ ಕೂಡಲೇ ಅವರಿಗೆ ತಿಳಿಸಿ, ಅದನ್ನು ಕೂಡಲೇ ಕೊಡಬೇಕು. ಅದನ್ನು ಕೊಡದೇ ಹೋದರೆ we cannot participate, thereby you are preventing the Members from participating in the debate. It amounts to breach of privilege of the

Members. It is our right. ಈ ತರಹವಾದರೆ, this is not the way. ಈ ತರಹ ಸರ್ಕಾರ ನಡೆದುಕೊಂಡರೆ ಏನು ಮಾಡಬೇಕು ಹೇಳಿ? ಮಾನ್ಯ ಉಪಾಧ್ಯಕ್ಷರೆ, ನಿಮಗೆ ನಾವು ಮನವಿ ಮಾಡಿಕೊಳ್ಳುತ್ತಿದ್ದೇವೆ. ನೀವು ಆ ಕೆಲಸ ಮಾಡಿಸಲಿಲ್ಲವೆಂದರೆ, ಸದನವನ್ನು ಮುಂದಕ್ಕೆ ಹಾಕಿಬಿಡಿ, ಚರ್ಚೆ ಮಾಡುವುದು ಬೇಡ. ಆಮೇಲೆ ನಾವು ಬಿಲ್ ಅನ್ನು approve ಮಾಡಿಕೊಡುವುದಿಲ್ಲ.

ಉಪಾಧ್ಯಕ್ಷರು: ನಾಳೆಯೊಳಗೆ ತಲುಪಿಸುವ ನಿಟ್ಟಿನಲ್ಲಿ ಸೂಚನೆ ಕೊಡಲಾಗಿದೆ

ಶ್ರೀ ಸಿದ್ದರಾಮಯ್ಯ: ಹಾಗಾದರೆ, ನಾವು ಒಂದೂ ಬಿಲ್ ಅನ್ನು approve ಮಾಡಿಕೊಡುವುದಿಲ್ಲ. ಚಚೆ ಮಾಡದೆ ಸುಮ್ಮನೆ approve ಮಾಡಿಕೊಡುವುದಕ್ಕೆ ನಾವೇನು ಇಲ್ಲಿ ಕಡಲೆಪುರಿ ತಿನ್ನುವುದಕ್ಕೆ ಬಂದಿದ್ದೇವೆಯೇ? ಒಂದೋಂದು ಇಲಾಖೆಗೆ 5 ಸಾವಿರ ಕೊಟಿ, 6 ಸಾವಿರ ಕೋಟಿ, 4 ಸಾವಿರ ಕೋಟಿ ಹೀಗೆ ಹಣ ಮೀಸಲಿಟ್ಟಿರುತ್ತಾರೆ. ಅದನ್ನು ಇಲ್ಲಿ approve ಮಾಡಬೇಕು. ತೆಗೆದುಕೊಂಡು ಹೋಗಿ ಖರ್ಚು ಮಾಡಿ, ಯಾರಾದರೂ ತಿಂದುಕೊಂಡು ಹೋಗಿ ಎಂದು ಕೊಟ್ಟು ಬಿಡುವುದಕ್ಕಾಗುತ್ತದೆಯೇ? ಜವಾಬ್ದಾರಿ ಇರಬೇಕಲ್ಲವೇ? Demands ಎಂದರೇನು? ಸರ್ಕಾರ ಇದರ ಬಗ್ಗೆ ಹೆಚ್ಚು ಜವಾಬ್ದಾರಿಯಿಂದ ಇರಬೇಕಾಗುತ್ತದೆ. See, Finance Bill, Demands, ಇದು pass ಆಗಬೇಕು. then only they can spend. We should all not only opposition, entire Legislature has to pass, approve it, other wise they cannot spend. ಕೋಟ್ಯಾಂತರ ರೂಪಾಯಿ ನಿಗದಿಯಾಗಿರುತ್ತದೆ. ಚರ್ಚೆ ಮಾಡದೆ approve ಮಾಡಿದರೆ ಜನ ಏನು ಅನ್ನುತ್ತಾರೆ? ಕಣ್ಣುಮುಚ್ಚಿಕೊಂಡು ಒಪ್ಪಿಗೆ ಕೊಡುವುದಕ್ಕಾಗುತ್ತದೆಯೇ? ಅದು ಜನರು ಕೊಡುವ ತೆರಿಗೆ ಹಣ. ಸಾರ್ವಜನಿಕರ ಹಣವನ್ನು ನಾವು ಹಾಗೆಲ್ಲಾ ಮನಸ್ಸೋ ಇಚ್ಛೆ ಖರ್ಚು ಮಾಡುವುದಕ್ಕೆ ಬಿಡುವುದಕ್ಕಾಗುವುದಿಲ್ಲ. ದಯಮಾಡಿ, you pull the Government. ನೀವು ಅವರಿಗೆ ಹೇಳಿ, ಅವರ ಕಿವಿ ಹಿಂಡಿ. ಅವರಿಗೆ ಎಷ್ಟು ಸಾರಿ ಹೇಳುವುದು? ಅವರಿಗೆ ಎಚ್ಚರಿಕೆ ಕೊಡಿ. ಇವತ್ತು ಆ ವರದಿ ಬರದೇ ಹೋದರೆ ನಾಳೆ ನಾವು ಯಾರೂ demands ಮೇಲೆ participate ಮಾಡುವುದಿಲ್ಲ.

ಉಪಾಧ್ಯಕ್ಷರು: ಮಾನ್ಯ ವಿರೋಧ ಪಕ್ಷದ ನಾಯಕರೆ, Secretariat ಕಡೆಯಿಂದ ಯಾವುದು ಈಗಾಗಲೇ ಬಂದಿದೆ, ಯಾವುದು ಬರಲಿಕ್ಕೆ ಬಾಕಿ ಇದೆ ಎನ್ನುವ ಮಾಹಿತಿಯನ್ನು ತಕ್ಷಣ ಸರ್ಕಾರಕ್ಕೆ ತಲುಪಿಡುವ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಸಿದ್ದರಾಮಯ್ಯ: ಯಾವ ಇಲಾಖೆಯ ವರದಿ ಬಂದಿಲ್ಲ ಎನ್ನುವುದು Secretariat ಗೆ ಗೊತ್ತಿದೆ.

ಉಪಾಧ್ಯಕ್ಷರು: ಅವರು ತಕ್ಷಣ ಇದಕ್ಕೆ ಸ್ಪಂದಿಸುತ್ತಾರೆನ್ನುವ ವಿಶ್ವಾಸವಿಟ್ಟು ಕೊಂಡಿದ್ದೇನೆ. ಯಾವುದು ಬಾಕಿ ಇದೆ, ಯಾವ ವರದಿಯನ್ನು ಕೊಡುವುದು ಬಾಕಿ ಇದೆ, ಯಾವ ಇಲಾಖೆಯದ್ದು ಕೊಟ್ಟಿದ್ದಾರೆ ಎಲ್ಲಾ ವಿವರಗಳನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಸಿದ್ದರಾಮಯ್ಯ: ಅದನ್ನು ಕೊಡದೇ ಇರುವ ಇಲಾಖೆಗಳ ಬಗ್ಗೆ Demands ಮೇಲೆ ಚರ್ಚೆ ಮಾಡಿ ಒಪ್ಪಿಗೆ ಕೊಡುವುದಕ್ಕೆ ತಯಾರಿಲ್ಲ. Participate ಮಾಡುವುದಕ್ಕೂ ತಯಾರಿಲ್ಲ.

ಉಪಾಧ್ಯಕ್ಷರು: ಇದಕ್ಕೆ ಅವರು serious ಅಗಿ ಸ್ಪಂದಿಸುತ್ತಾರೆನ್ನುವ ವಿಶ್ವಾಸವಿದೆ.

ಶ್ರೀ ಸಿದ್ದರಾಮಯ್ಯ: ಇದೇ ತಿಂಗಳ 30ನೇ ತಾರೀಖಿನೊಳಗೆ Finance Bill pass ಆಗಬೇಕಲ್ಲವೇ?

ಡಾ॥ ಶರಣ ಪ್ರಕಾಶ ರುದ್ರಪ್ಪ ಪಾಟೀಲ್: ಮಾನ್ಯ ಉಪಾಧ್ಯಕ್ಷರೆ, ಸ್ವತಃ ನಾನೇ Question Branch ಗೆ ಹೋಗಿ ಯಾವ್ಯಾವ ಇಲಾಖೆಯದ್ದು ಬಂದಿದೆ ಎಂದು ಹುಡುಕಾಡಿ ನೋಡಿದರೂ ಕೇವಲ ಎರಡೇ ಎರಡು ಇಲಾಖೆಗಳ ವರದಿಗಳು ಬಂದಿದೆ. PWD and Health Department, ಈ ಎರಡು ಇಲಾಖೆಗಳ ವರದಿಗಳು ಬಂದಿವೆ. ಬೇರೆ ಯಾವ ಇಲಾಖೆಯ ವರದಿ ಬಂದಿಲ್ಲ. ಕೆಲವು ಇಲಾಖೆಗಳ ವಾರ್ಷಿಕ ವರದಿ ಬಂದಿದೆ. it is a handicap for me. ನಾನು ಅಂಕಿ ಅಂಶಗಳನ್ನಿಟ್ಟುಕೊಂಡು ಮಾತನಾಡುವ ಹಾಗಿಲ್ಲ. Ihave to tell in general, I hav e to speak generally as to what is happening in the State. ನಮ್ಮ constituency ಯಲ್ಲಿ ಏನಾಗುತ್ತದೆ? ಯಾವ ಜಿಲ್ಲೆಯಲ್ಲಿ ಏನಾಗುತ್ತದೆ? ಸಾರ್ವಜನಿಕರ ಹಿತಾಸಕ್ತಿಯಿಂದ ಮಾತನಾಡಬೇಕು. I have to speak generally now. I cannot quote facts and figures. ಈ ರೀತಿ ನಾವು ಪದೇ ಪದೇ ಹೇಳುತ್ತಾ ಬಂದಿದ್ದೇವೆ. ಇದು ಮೊದಲನೇ ಸಾರಿ ಅಲ್ಲ. I have been stating this in the last 5 days. Five days back, I have reinded the Government. But still the Government is not responding. What to say? ಈಗೇನಾಗಿದೆ ಎಂದರೆ, opposition ನಲ್ಲಿ, we have resign to our fate. ಸರ್ಕಾರ ಅಂತೂ they are not

going to respond to whatever suggestions we give. We give only constructive suggestions.

ಶ್ರೀ ಕೆ. ಬಿ. ಚಂದ್ರಶೇಖರ್: ಸರ್ಕಾರ ಏನು ತಿಳಿದುಕೊಂಡಿದೆ ಎಂದರೆ, "ಯಾರದೋ ದುಡ್ಡು ಎಲ್ಲಮ್ಮನ ಜಾತ್ರೆ" ಎನ್ನುವ ರೀತಿಯ ಭಾವನೆಯಿಂದ ಈ ಸರ್ಕಾರ ನಡೆಸುವುದಾದರೆ, ಇದನ್ನು 6 ಕೋಟಿ ಜನ ಯಾರೂ ಒಪ್ಪುವುದಿಲ್ಲ. ದಯಮಾಡಿ, ಸರಿಯಾದ ಮಾಹಿತಿಯನ್ನು ಕೊಡುವ ವ್ಯವಸ್ಥೆ ಮಾಡುವುದಕ್ಕೆ ಹೇಳಿ.

ಡಾ॥ ಶರಣ ಪ್ರಕಾಶ ರುದ್ರಪ್ಪ ಪಾಟೀಲ್: ನಾನು ಕಳೆದ ಸದನದಲ್ಲಿ ಒಂದು ಪ್ರಶ್ನೆ ಕೇಳಿದ್ದೆ. ಆ ಪ್ರಶ್ನೆ ಬಹಳ Simple ಆಗಿತ್ತು. ಏನೆಂದರೆ, ನೀವು ಯಾವ್ಯಾವ ಇಲಾಖೆಗಳಲ್ಲಿ Plan Outlay ನಲ್ಲಿ ಎಷ್ಟೆಷ್ಟು ಹಣ allocate ಮಾಡಿದ್ದೀರಿ? ಎಷ್ಟೆಷ್ಟು ಬಿಡುಗಡೆಯಾಗಿದೆ? ಎಷ್ಟೆಷ್ಟು expenditure ಆಗಿದೆ ಎಂಬ ಬಗ್ಗೆ ಸ್ವಲ್ಪ ಮಾಹಿತಿ ಕೊಟ್ಟರೆ ಒಳ್ಳೆಯದೆಂದು ಕೇಳಿದ್ದೆ. My intention was good. ನಾನೇನು Government ಗೆ criticize ಮಾಡಬೇಕು, ನಿಮ್ಮ ಮೇಲೆ ಗೂಬೆ ಕೂರಿಸಬೇಕೆನ್ನುವ ಉದ್ದೇಶದಿಂದ ನಾನು ಹೇಳುತ್ತಿಲ್ಲ. ಈ ರಾಜ್ಯದ ಜನರ ಅಭಿವೃದ್ಧಿಯಾಗಬೇಕು, ಈ ರಾಜ್ಯದಲ್ಲಿ ಯಾವ ಹಣವನ್ನು plan expenditure ಗೆಂದು set aside ಮಾಡುತ್ತೇವೆ, ಅದು ಜನರಿಗೆ ತಲುಪಬೇಕು, ನಮ್ಮ ರಾಜ್ಯ ಅಭಿವೃದ್ಧಿಯಾಗಬೇಕೆನ್ನುವ ಸದುದ್ದೇಶದಿಂದ ನಾನು ಪ್ರಶ್ನೆ ಕೇಳಿದ್ದೆ, ಕಳೆದ ಸಾರಿಯೂ ಸಹ ಅದಕ್ಕೆ ಉತ್ತರ ಕೊಡಲಿಲ್ಲ. ಏನೆಂದರೆ, ನೀವು ಲೆಕ್ಕ ಆಗಿಲ್ಲ, up to end of January, up to end of February ಎಂದು ನನಗೆ ಏನೋ ಮಾಹಿತಿ ಕೊಟ್ಟರಿ. ಆದರೆ, ಈ ಸಾರಿ ನಾನು ಮಾತನಾಡಬೇಕಾದರೆ, what is your expenditure for the year 2011-12 ಎಂದು ಖಚಿತವಾಗಿ ಹೇಳಬೇಕಲ್ಲವೇ/ ಆ ಮಾಹಿತಿ ನನಗೆ ಲಭ್ಯವಿಲ್ಲ. ನಾನು Opposition Leader ಕಡೆಯಿಂದ requestಮಾಡಿ ಯಾವ್ಯಾವ ಇಲಾಖೆಯಲ್ಲಿ ಎಷ್ಟೆಷ್ಟು ಹಣ ಬಿಡುಗಡೆ ಮಾಡಿದ್ದೀರಿ, ಎಷ್ಟೆಷ್ಟು ಹಣ ಖರ್ಚಾಗಿದೆ ಎನ್ನುವ ಬಗ್ಗೆ ನಿಮ್ಮ ಇಲಾಖೆಗೆ ಪತ್ರ ಬರೆದರೂ ಕೂಡ ಮಾಹಿತಿ ಕೊಟ್ಟಿಲ್ಲ. ಅದಕ್ಕೋಸ್ಕರ ಈ ಸಾರಿ ಕೂಡ question ಕೇಳಿದ್ದೆ. ನಿನ್ನೆ ಒಂದು question ನಲ್ಲಿ, you have given me the information which is very alarming. Question Hour ನಲ್ಲಿ ಈ ಬಗ್ಗೆ ಪ್ರಸ್ತಾಪ ಮಾಡಿದ್ದಾಗ ಸದನದಲ್ಲಿ ನಾನು ನಿನ್ನೆ ಹೇಳಿದ್ದೇನೆ. ಏನೆಂದರೆ, 15 ಸಾವಿರ ಕೋಟಿ ರೂಪಾಯಿಗಳನ್ನು ನೀವು ಎರಡೇ ತಿಂಗಳಲ್ಲಿ ಹೇಗೆ ಖರ್ಚು ಮಾಡಿದಿರಿ?

ಶ್ರೀ ಸಿದ್ಧರಾಮಯ್ಯ: I will tell you, ನಿನ್ನೆ furnish ಮಾಡಿರತಕ್ಕಂಥದ್ದು, they are not the correct figures. ಏಕೆಂದರೆ, 34 ಸಾವಿರ ಕೊಟಿ ರೂಪಾಯಿಗಳ ಪ್ಲಾನ್ ಎಂದರೆ 35 ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆಂದು ಮಾಹಿತಿ ಕೊಟ್ಟಿದ್ದಾರೆ. Totally it is not correct. ಅಂದರೆ, plan expenditure is more than 100% in the last year. Every year Audit Report ನಲ್ಲಿ 8 ಸಾವಿರ, 12 ಸಾವಿರ, 13 ಸಾವಿರ, 15 ಸಾವಿರ ಕೋಟಿ ರೂಪಾಯಿ unspent ಎಂದು ಬರುತ್ತದೆ? What is that amount? If they assured the plan size then why they are furnishing figures like that? is it true? That is misleading the Members. 2009-10 ರ AG's report ನೋಡಿ. 2010-11 ರ AG's report ತೆಗೆದು ನೋಡಿ. Rs. 13,000 crores, Rs. 12,000 crores unspent ಎಂದು ತೋರಿಸಿದ್ದೀರಿ? What is this unspent money? The unspent money is, it is not released, it has not been spent. That is the meaning of unspent money.

ಈ ವರ್ಷವೂ more than 100% release ಆಗಿದೆಯೇ? Totally not correct. ಏಕೆ ಈ ರೀತಿ ಅವರಿಗೆ ಕೊಡುತ್ತೀರಿ? ಈ ತರಹ ಕೊಟ್ಟರೆ ಅವರು ಯಾವುದರ ಮೇಲೆ ಮಾತನಾಡಬೇಕು? See, this is not the way. ಸರ್ಕಾರ ನಡೆಸುವುದಕ್ಕಾಗದಿದ್ದರೆ ನೀವು ಬಿಟ್ಟು ಹೋಗಿ ಎಂದರೆ ನೀವು ಅದೂ ಮಾಡುವುದಿಲ್ಲ.

ಡಾ|| ಶರಣ ಪ್ರಕಾಶ ರುದ್ರಪಪ್ ಪಾಟೀಲ್: ಈ ರೀತಿಯ facts, figures ಗಳನ್ನು ನೋಡಿದರೆ, ಏಕೆ ನನಗೆ ಇದರಲ್ಲಿ ನಂಬಿಕೆ ಬರುತ್ತಿಲ್ಲವೆಂದರೆ ಕೆಲವು ಇಲಾಖೆಗಳಲ್ಲಿ allocation ಗಿಂತ ಜಾಸ್ತಿ ಖರ್ಚು ಮಾಡಿದ್ದೀರಿ. For example I will cite you, RDPR ಇಲಾಖೆಯಲ್ಲಿ 3,045 ಕೋಟಿ ರೂಪಾಯಿ ಪ್ಲಾನ್ allocation ಇತ್ತು. ಆದರೆ, ಖರ್ಚಾಗಿದ್ದು 4,081 ಕೋಟಿ ರೂಪಾಯಿಗಳು. 1 ಸಾವಿರ ಕೋಟಿ ರೂಪಾಯಿಗಳನ್ನು ನೀವು ಪ್ಲಾನ್‌ನಲ್ಲಿ ಹೆಚ್ಚಿಗೆ ಖರ್ಚು ಮಾಡಿದ್ದರೆ, I am happy for it. ನಿಜವಾಗಿಯೂ ಸಾರ್ವಜನಿಕ ಹಿತಾಸಕ್ತಿಯಿಂದ ಖರ್ಚಾಗಿರುತ್ತದೆ. ಸಾರ್ವಜನಿಕ ಹಿತಾಸಕ್ತಿಯಿಂದ ಖರ್ಚಾಗಿದ್ದರೆ, I will definitely welcome it. ಏಕೆಂದರೆ ನಾವು non-plan expenditure ಕಡಿಮೆ ಮಾಡಬೇಕು, plan expenditure ಜಾಸ್ತಿ ಮಾಡಬೇಕೆನ್ನುವ ಉದ್ದೇಶವಿದೆ. ಏಕೆಂದರೆ, any prudent state ಆರ್ಥಿಕ ವ್ಯವಸ್ಥೆ ಸದೃಢವಾಗಿ ಬೆಳೆಯಬೇಕೆಂದರೆ, ideally what we feel is plan and non-plan should be 50% each. 505 ಪ್ಲಾನ್

ಇದ್ದರೆ 50% non-plan ಇದ್ದರೆ it is acceptable. ಆದರೆ, ಆ ರೀತಿ ನಮ್ಮ ದೇಶದ ಯಾವ ರಾಜ್ಯದಲ್ಲೂ ಇಲ್ಲ. At least, 60-40 ಆದರೂ ಇರಬೇಕೆಂಬುದು ನಮ್ಮ ಉದ್ದೇಶ. ಆದರೆ, ರಾಜ್ಯದಲ್ಲಿ ಇವತ್ತು it has come down to 25-75%, plan outlay is only 25% of our expenditure. ರಾಜ್ಯ ಸರ್ಕಾರ ರಾಜಕೀಯ ಉದ್ದೇಶದಿಂದ ಮಾಡಿದೆಯೋ ಅಥವಾ ಜನರನ್ನು ತಪ್ಪು ದಾರಿಗೆ ಎಳೆಯಬೇಕೆಂದು, ಜನರಿಗೆ ಮರೆಮಾಚಬೇಕೆಂಬ ಉದ್ದೇಶದಿಂದ ಮಾಡಿದೆಯೋ ನನಗೆ ಗೊತ್ತಿಲ್ಲ. 1 ಲಕ್ಷ ಕೋಟಿ ರೂಪಾಯಿಗಳ ಬಜೆಟ್ ಮಂಡನೆ ಮಾಡುವ ಅವಶ್ಯಕತೆ ಇರಲಿಲ್ಲವೆಂದು ನಾನು ಆವತ್ತೂ ಕೂಡ ಪ್ರಸ್ತಾಪ ಮಾಡಿದ್ದೆ. ಇವತ್ತೂ ಕೂಡ ಅದೇ ಮಾತನ್ನು ಹೇಳುತ್ತಿದ್ದೇನೆ. What are the resources? ಒಂದು ವೇಳೆ ಇವತ್ತು ನೀವು Finance Department ಮೇಲೆ ಒಂದು ವೇಳೆ Performance Budget Book ಕೊಟ್ಟಿದ್ದರೆ, I would have thrown more light on the situation of the financial condition in the State. ಆದರೆ, ನನಗೆ ಅದನ್ನು ಕೊಟ್ಟಿಲ್ಲ. This is the handicaped with which I am speaking. ಇವತ್ತಿಗೂ ಕೂಡ ಕೇಂದ್ರ ಸರ್ಕಾರದಿಂದ Centrally Sponsored Scheme, Central by Aided Schemes ಮತ್ತು ಬೇರೆ ಬೇರೆ ಆದಾಯಗಳಿಂದ ಬರುವಹಣ ಸೇರಿಸಿದರೆ ನಾವು ಒಂದು ಲಕ್ಷ ಕೋಟಿ ರೂಪಾಯಿಗಳಿಗೂ ತಲುಪುವುದಿಲ್ಲ. ಸಾಲ ಮಾಡಿ ಜನರಿಗೆ ತೋರಿಸುವುದಕ್ಕೆ we are growing this side ಎಂದು ಹೇಳಿ, ಜನರಿಗೆ ಮರೆಮಾಚಲಿಕ್ಕೆ ಮಾತ್ರ ನೀವು ಒಂದು ಲಕ್ಷ ಕೋಟಿ ರೂಪಾಯಿಗಳೆಂದು ಬಜೆಟ್ ಮಂಡಿಸಿದ್ದೀರಿ ವಿನಃ ಅದರಿಂದ ನಮ್ಮ ರಾಜ್ಯಕ್ಕೆ ಯಾವುದೂ ಲಾಭವಾಗುವುದಿಲ್ಲ and it is not good for the health of our State. I think it would have taken another 2-3 years for us to reach that level. ಪರವಾಗಿಲ್ಲ ಏನೋ ಉದ್ದೇಶದಿಂದ ಏನೋ ಒಂದು ನೀವು ಮಾಡಿದ್ದೀರಿ. ಸರಿಯಾಗಿ ಅದನ್ನು ನಿಭಾಯಿಸುತ್ತಿರಿ ಎಂದು ಅಪೇಕ್ಷೆಪಡುತ್ತೇನೆ. ಏಕೆಂದರೆ, Finance Department ಮೇಲೆ ಇವತ್ತು ನಾನು ಜಾಸ್ತಿ ಏಕೆ ಮಾತನಾಡುವುದಕ್ಕೆ ಹೋಗುವುದಿಲ್ಲವೆಂದರೆ, ಮಾನ್ಯ ಪ್ರತಿಪಕ್ಷದ ನಾಯಕರಿಗೆ ನಾವು ಇದರ ಬಗ್ಗೆ sum up ಮಾಡಿದಾಗ ತಾವು ಇದರ ಬಗ್ಗೆ ಸುದೀರ್ಘವಾಗಿ ಮಾತನಾಡುತ್ತೇನೆಂದು ನನಗೆ ಹೇಳಿದ್ದಾರೆ. ಅದಕ್ಕೋಸ್ಕರ ನಾನು ಕೆಲವು ಇಲಾಖೆಗಳಲ್ಲಿ ನಡೆಯತಕ್ಕಂಥದ್ದರ ಬಗ್ಗೆ ಮತ್ತು ಆ ಇಲಾಖೆಗಳಿಗೆ ನನ್ನ ಸಲಹೆ ಇದೆ. ಏಕೆಂದರೆ, I always believe ಏನೆಂದರೆ ಸುಮ್ಮನೆ ಟೀಕೆ ಮಾಡುವುದು, ಏನೂ ಆಗದಿರುವುದನ್ನು ಹೇಳಿ, ಇವತ್ತು ನಾವು Opposition ನಲ್ಲಿದ್ದೇವೆಂದು ಬೇಜವಾಬ್ದಾರಿತನದಿಂದ ನಾನೆಂದೂ

ಮಾತನಾಡಿಲ್ಲ. Whatever I speak here today, has to be in the interest of the public and it should be based on facts ಮತ್ತು ಅದಕ್ಕೆ ನನ್ನ ಸಲಹೆ ಮತ್ತು ಅದಕ್ಕೆ ಏನು ಪರಿಹಾರವಿದೆ ಎನ್ನುವ ಆಧಾರದ ಮೇಲೆಯೇ ನಾನು ಯಾವತ್ತೂ ಮಾತನಾಡುತ್ತೇನೆ. If I state something is wrong, I always suggest a way out for it and what is the solution for it. ಅದು ಗೊತ್ತಿದ್ದರೆ ಮಾತ್ರ ನಾನು ಹೇಳುತ್ತೇನೆ. ಇಲ್ಲದಿದ್ದರೆ ಅದು ನನಗೆ ಗೊತ್ತಿಲ್ಲ, ದಯವಿಟ್ಟು ಇಲ್ಲಿರುವ seniors ನನಗೆ guide ಮಾಡಬೇಕೆಂದು ಹೇಳುತ್ತೇನೆ. 2011-12ನೇ ಸಾಲಿನಲ್ಲಿ Agriculture department ಬಗ್ಗೆ ಇವತ್ತು ನಾವು ಮೊದಲು ಮಾತನಾಡಬೇಕಾಗುತ್ತದೆ. ಏಕೆಂದರೆ, ಈ ರಾಜ್ಯ ಭೀಕರವಾದ ಬರಗಾಲವನ್ನು ಎದುರಿಸುತ್ತಿದೆ. ಬರಗಾಲ ಬರುತ್ತಿರುವುದು ಸತತವಾಗಿ ಇದು ಎರಡನೇ ವರ್ಷ, ಕಳೆದ ಸಾರಿ ನಮ್ಮ ರಾಜ್ಯದಲ್ಲಿ ಹೊಸ ಕೃಷಿ ಬಜೆಟ್ ಅನ್ನು ಮಂಡಿಸುತ್ತೇವೆಂದು ಮಾನ್ಯ ಯಡಿಯೂರಪ್ಪನವರು ಘೋಷಣೆ ಮಾಡಿದ್ದರು. ಅದನ್ನು ಘೋಷಣೆ ಮಾಡಿದ ಮೇಲೆ ಹೊಸ ಕಾರ್ಯಕ್ರಮವನ್ನೂ ಕೂಡ ಅಂದರೆ ಸುವರ್ಣ ಭೂಮಿ ಎನ್ನುವ ಕಾರ್ಯಕ್ರಮವನ್ನು ಜಾರಿಗೆ ತಂದರು. ಅದರಲ್ಲಿ 10 ಸಾವಿರ ರೂಪಾಯಿಗಳನ್ನು ಕೊಡುವುದು, ಮೊದಲನೇ ಕಂತಿನಲ್ಲಿ 5 ಸಾವಿರ ರೂಪಾಯಿಗಳೆಂದು ಎಲ್ಲಾ ರೈತರಿಗೆ ಕೊಡುತ್ತೇವೆಂದು ಹೇಳಿದ್ದರು. ಅದನ್ನು implement ಮಾಡುವ ಪ್ರಯತ್ನ ಮಾಡಿದ್ದರು, ಆದರೂ ಅದು complete ಆಗಿ implement ಆಗಲಿಲ್ಲ. ಈ ವರ್ಷ ಕೂಡ ಆ ಕೆಲಸ ನಡೆಯುತ್ತಿದೆ. ಅದಕ್ಕೆ ನಾನೇನೂ ಟೀಕೆ ಮಾಡುವುದಿಲ್ಲ. ಏಕೆಂದರೆ, ನಾವು ರೈತರಿಗೆ ಏನೂ ಕೊಟ್ಟರೂ ಕಡಿಮೆಯೇ. ರಾಜ್ಯದಲ್ಲಿ ಎಲ್ಲರಿಗಿಂತ unprivileged class ಯಾವುದೆಂದರೆ, ಅದು ಯಾವುದೂ caste, creed ಅಲ್ಲ, it is farmer class. ಅವರು ಬೆಳೆದಿರುವ ಬೆಳೆಗೆ ನಾವು ವೈಜ್ಞಾನಿಕ ಬೆಲೆ ಕೊಡುವುದಕ್ಕಾಗುವುದಿಲ್ಲ. ಸಕಾಲದಲ್ಲಿ ಗುಣಮಟ್ಟದ ಬೀಜವನ್ನು ಅವರಿಗೆ ಕೊಡುವುದಕ್ಕಾಗುವುದಿಲ್ಲ. ಅವರು ಸಂಪೂರ್ಣವಾಗಿ ಪರಿಸರದ ಮೇಲೆ ಅವಲಂಬನೆಯಾಗಿದ್ದಾರೆ. ಏಕೆಂದರೆ, ಮಳೆ ಸಮಯಕ್ಕೆ ಸರಿಯಾಗಿ ಬರಲಿಲ್ಲವೆಂದರೆ, ಅದಕ್ಕೆ ಮೊದಲು ರೈತ ತುತ್ತಾಗುತ್ತಾನೆ. ಅದಕ್ಕಾಗಿ ನಾವು ರೈತರಿಗೆ ಎಷ್ಟು ಸಹಾಯ ಮಾಡಿದರೂ ಅದು ಕಡಿಮೆಯೇ. ನಾವು ಕೃಷಿ ಬಜೆಟ್ ಮಂಡಿಸಿ, ಕೃಷಿಕರಿಗೆ ದೊಡ್ಡ ಪ್ರಮಾಣದಲ್ಲಿ ಸಹಾಯ ಮಾಡುತ್ತೇವೆಂದು ಸರ್ಕಾರ ಮುಂದೆ ಬಂದಿರುವುದನ್ನು ನಾನು ಸ್ವಾಗತಿಸುತ್ತೇನೆ. ಆದರೆ, ಅದು ಕಾರ್ಯರೂಪಕ್ಕೆ ಬರದಿರುವುದು ಬಹಳ ನೋವಾಗುತ್ತದೆ. ಏಕೆಂದರೆ, 2011-12ನೇ ಸಾಲಿಗೆ ಬಜೆಟ್‌ನ Plan outlay ಯಲ್ಲಿ 2,627 ಕೋಟಿ

ರುಪಾಯಿಗಳನ್ನು ನೀವು ನಿಗದಿಪಡಿಸಿದ್ದೀರಿ. This was your outlay. ಆದರೆ, ನೀವು 2011-12ನೇ ಸಾಲಿನಲ್ಲಿ ಕೊಟ್ಟಿರುವ ಅಂಕಿಅಂಶಗಳ ಪ್ರಕಾರ ನೀವು ಖರ್ಚು ಮಾಡಿರುವುದು 1829 ಕೋಟಿ ರೂಪಾಯಿಗಳು ಅಂದರೆ 800 ಕೋಟಿ ರೂಪಾಯಿಗಳನ್ನು ಕಳೆದ ವರ್ಷ Agriculture department ನಲ್ಲಿ spend ಮಾಡಲಿಲ್ಲ. That to when, ಯಾವಾಗ? ಈ ರಾಜ್ಯ ಭೀಕರ ಬರಗಾಲದಲ್ಲಿದ್ದಾಗ Agriculture Department ಗೆ allocate ಆಗಿರುವಂಥ 800 ಕೋಟಿ ರೂಪಾಯಿಗಳನ್ನು ನೀವು ಖರ್ಚು ಮಾಡದಿದ್ದರೆ, then what is the committment? is this is the way you are committed to the cause of the agriculture in the State? We have to question the intention of the Government. ಏಕೆಂದರೆ, I am talking on the basis of the facts given to me by the Government itself. ಅದಕ್ಕೆ ಸರ್ಕಾರದ ಬದ್ಧತೆ ಏನಿದೆ ಎಂಬುದನ್ನು ತೋರಿಸುತ್ತದೆ. ಅದಕ್ಕಾಗಿ ಬರಗಾಲ ಎದುರಿಸುತ್ತಿರುವ ಸಂದರ್ಭದಲ್ಲಿ ಕಳೆದ ವರ್ಷ ಸರ್ಕಾರ 800 ಕೋಟಿ ರೂಪಾಯಿಗಳನ್ನು Agriculture Department ನಲ್ಲಿ ಖರ್ಚು ಮಾಡದೇ ಇರುವುದು ಖಂಡಿತವಾಗಿ ವಿಷಾದನೀಯ. ಏಕೆ ಈ ಹಣ ಖರ್ಚು ಮಾಡಲಿಲ್ಲವೆಂದು ಸರ್ಕಾರ ಉತ್ತರ ಕೊಡಬೇಕಾಗುತ್ತದೆ, ಸಂಬಂಧಪಟ್ಟ ಸಚಿವರೂ ಉತ್ತರ ಕೊಡಬೇಕಾಗುತ್ತದೆ. ಬೇರೆ ಇಲಾಖೆಯವರು ಸಾವಿರ ಕೋಟಿ ರೂಪಾಯಿಗಳನ್ನು ಹೆಚ್ಚು ಖರ್ಚು ಮಾಡುತ್ತಾರೆ. ಆದರೆ, ನಿಮಗೆ ಕೊಟ್ಟಿರುವ ಹಣವನ್ನು ನೀವು ಖರ್ಚು ಮಾಡುವುದಿಲ್ಲ. ಹೀಗಾದರೆ ಹೇಗೆ ಇವತ್ತು ರಾಜ್ಯ ಬರಗಾಲವನ್ನು ಎದುರಿಸುತ್ತಿರುವ ಸಂದರ್ಭದಲ್ಲಿ ನಾನು ಬರದ ಬಗ್ಗೆ ಮಾತನಾಡುವಾಗ ಒಂದು ಸಲಹೆ ಕೊಟ್ಟಿದ್ದೆ. ಏನೆಂದರೆ, ನಮ್ಮ ರಾಜ್ಯದ 70% ರೈತರು rain-fed area ಏನಿದೆ, 190 ಲಕ್ಷ ಭೌಗೋಳಿಕ ವಿಸ್ತರಣೆ ಏನಿದೆ, ಅದರಲ್ಲಿ 70% agriculturists are dependant on rain ಅಂದರೆ, ಒಣ ಬೇಸಾಯದ ಮೇಲೆ 70% ರೈತರು depend ಆಗಿದ್ದಾಗ, ಪದೇ ಪದೇ ಈ ಭಾಗದಲ್ಲಿ ಸ್ವಾತಂತ್ರ್ಯ ಪೂರ್ವದಿಂದಲೂ ಕೂಡ ಉತ್ತರ ಕರ್ನಾಟಕದ ಕೆಲವು ಭಾಗಗಳಲ್ಲಿ ಸತತವಾಗಿ ನಾವು ಬರಗಾಲವನ್ನು ಎದುರಿಸುತ್ತಿದ್ದೇವೆ. ಕ್ರಮೇಣವಾಗಿ ಈ ಸರ್ಕಾರ ಮಾಡಬೇಕೆಂದು ನಾನು ಹೇಳುತ್ತಿಲ್ಲ. ಯಾವುದೇ ಸರ್ಕಾರವಿದ್ದಾಗ ನಾವು Long Term Plan ಮಾಡಬೇಕು ಎಂದು ಈ ಸದನದಲ್ಲಿ ನಾನು 2004ರಿಂದಲೂ ಹೇಳುತ್ತಾ ಬಂದಿದ್ದೇನೆ. What is the Long Term Plan? You should do some drought proofing it is possible. ನೀವು ಮಾಡಿರುವ ನಿದರ್ಶನಗಳಿದ್ದರೆ, ಅಲ್ಲಿ experiment ಮಾಡಿರುವುದು ಇದೆ, ಅದನ್ನು ನೀವು ಅನುಸರಿಸಿ,

ಅದನ್ನು ರಾಜ್ಯಕ್ಕೆ ವಿಸ್ತರಣೆ ಮಾಡಿ. ದೊಡ್ಡ ಪ್ರಮಾಣದಲ್ಲಿ ಹಣದ ಅವಶ್ಯಕತೆ ಅದಕ್ಕಿಲ್ಲ. ಎಲ್ಲೆಲ್ಲಿ ನಮಗೆ ನೀರಾವರಿ ದೊಡ್ಡ ಪ್ರಮಾಣದಲ್ಲಿ ಮಾಡಲಿಕ್ಕೆ ಸಾಧ್ಯವಿದೆ ಅದನ್ನು ಮಾಡಬೇಕು. ಎರಡನೆಯದಾಗಿ, ಸಣ್ಣ ಪುಟ್ಟ ಟ್ಯಾಂಕ್ ಮೂಲಕ ನೀರಾವರಿ ಮಾಡಲಿಕ್ಕೆ ಸಾಧ್ಯವಿದೆ ಎಂದರೆ ಅದನ್ನು ಮಾಡಬೇಕು. ಅದಾದ ಮೇಲೆ, ಸಂಪೂರ್ಣವಾಗಿ ಮಳೆ ಮೇಲೆ ಅವಲಂಬಿತವಾಗಿರುವ ಪ್ರದೇಶದಲ್ಲಿ ಪದೇ ಪದೇ ಬರಗಾಲ ಬರುತ್ತಿರುವ ಪ್ರದೇಶದಲ್ಲಿ, we have to do drought proofing and it is being done. ನಾನು ಮೊನ್ನೆ ಹೇಳಿದ್ದೆ ಏನೆಂದರೆ ಗದಗ್‌ನಲ್ಲಿ ಕೃಷಿ ವಿಜ್ಞಾನ ಕೇಂದ್ರದವರು 7 ವರ್ಷಗಳಿಂದ experiment ಮಾಡುತ್ತಿದ್ದಾರೆ. ನಾನು ಅದನ್ನು ನೋಡಲಿಕ್ಕೆ ಹೋಗಿದ್ದೆ. ಅಲ್ಲಿ ಏನು ಮಾಡುತ್ತಿದ್ದಾರೆಂದರೆ, alternative land use ಅಂದರೆ agriculture ನಲ್ಲಿ ನಾವು ಸಂಪೂರ್ಣವಾಗಿ cereals or pulses or oilseed ಮೇಲೆಯೇ depend ಆಗುವುದಕ್ಕಾಗುವುದಿಲ್ಲ. We have to mix it with the horticulture ಅವರು ದೊಡ್ಡ ಪ್ರಮಾಣದಲ್ಲಿ ಮೂರು ಸಾವಿರ ಎಕರೆಯಲ್ಲಿ experiment ಮಾಡಿದ್ದಾರೆ ಅಲ್ಲಿ Alphonso ಎನ್ನುವ ಮಾವು ಅನ್ನು ಹಾಕಿದ್ದಾರೆ. ಆಮೇಲೆ ಹುಣಿಸೆ ಹಾಕಿದ್ದಾರೆ. ಇದು alternate cropping ಒಂದೊಂದು ಎಕರೆಯಲ್ಲಿ ಕನಿಷ್ಠವಾಗಿ ಮಳೆ ಬರಲಿ ಬರದೇ ಹೋಗಲಿ 3 ರಿಂದ 5 ಸಾವಿರ ರೂಪಾಯಿ ಆದಾಯ ಬರುವ ರೀತಿಯಲ್ಲಿ ಅವರು ಅದನ್ನು ಮಾಡಿದ್ದಾರೆ, ಇದನ್ನು ಇಡೀ ರಾಜ್ಯಕ್ಕೆ ನಾವು ಮಾಡಬಹುದು. ನಾವು concentrate ಆಗಿ ಒಂದು ಪ್ಲಾನ್ ಮಾಡಿ ಸರಿಯಾಗಿ ಮಾಡಿದರೆ ಇಡೀ ರಾಜ್ಯದಲ್ಲಿ ಮಾಡಬಹುದು. ಇದರ ಜವಾಬ್ದಾರಿ ಕೃಷಿ ಇಲಾಖೆ ಮತ್ತು ತೋಟಗಾರಿಕೆ ಇಲಾಖೆ ತೆಗೆದುಕೊಳ್ಳಬೇಕಾಗುತ್ತದೆ. ಏಕೆಂದರೆ, ಇದು Long Term Plan ಇರಬೇಕು. ಒಂದೇ ವರ್ಷದಲ್ಲಿ ನಾವು ಇದೆಲ್ಲಾ ಮಾಡುವುದಕ್ಕಾಗಲ್ಲ. It should be 10 year plan. ಹತ್ತು ವರ್ಷದಲ್ಲಿ ನಾವು ಇಷ್ಟು ಏರಿಯಾವನ್ನು drought proofing ಮಾಡುತ್ತೇವೆ ಎನ್ನುವ ಒಂದು ಪ್ಲಾನ್ ಸರ್ಕಾರಕ್ಕೆ ಇದೆಯೇ/ ಆ ಬದ್ಧತೆ ಸರ್ಕಾರಕ್ಕೆ ಇದೆಯೇ? ಆ ಚಿಂತನೆ ಸರ್ಕಾರಕ್ಕೆ ಇದೆಯೇ ಎನ್ನುವುದು ನನ್ನ ಪ್ರಶ್ನೆ. ಏಕೆಂದರೆ,ಇವತ್ತು ಮಳೆ ಹವಾಮಾನದ ವೈಪರೀತ್ಯದಿಂದ ಯಾವ ತಿಂಗಳಲ್ಲಿ ಬರುತ್ತದೆ ಎಂದು predict ಮಾಡುವುದಕ್ಕಾಗಲ್ಲ. ನಾವು ನಿರ್ದಿಷ್ಟವಾದ ಬೆಳೆಗಳನ್ನು ಬೆಳೆಯಬೇಕಾದರೆ ಕೆಲವೊಮ್ಮೆ ಉದ್ದು ಮತ್ತು ಹೆಸರು ಬೆಳೆಯಬೇಕಾದರೆ ಜೂನ್ ನಲ್ಲಿ ಮಳೆ ಬಂದರೆ ಮಾತ್ರ ಇವುಗಳನ್ನು ಬೆಳಯುವುದಕ್ಕೆ ಸಾಧ್ಯವಾಗುತ್ತದೆ. ತೊಗರಿಯಾಗಲಿ, ಜೋಳವಾಗಲಿ, ಬೇರೆ ಬೇರೆ ಬೆಳೆ ಬೆಳೆಯಬೇಕಾದರೆ ಸಮಯಕ್ಕೆ ಸರಿಯಾಗಿ ಮಳೆ ಬಂದರೆ ಮಾತ್ರ ಸಾಧ್ಯ. ಆದರೆ, ನಾವು ಈ drought

proofing ಮಾಡಿದರೆ ಒಂದು ವರ್ಷದಲ್ಲಿ ನಮಗೆ ಯಾವಾಗಲಾದರೂ ಮಳೆ ಬಂದರೆ ರೈತರಿಗೆ ರಕ್ಷಣೆ ಕೊಡಲಿಕ್ಕೆ ಸಾಧ್ಯವಾಗುತ್ತದೆ ಎನ್ನುವ ಉದ್ದೇಶದಿಂದ ನಾನು ಈ ಮಾತು ಹೇಳುತ್ತಿದ್ದೇನೆ. ನನ್ನ ಮಾತನ್ನು ಯಾರು ಎಷ್ಟರ ಮಟ್ಟಿಗೆ ಕೃಷಿ ಮಂತ್ರಿಗಳು ನೋಟ್ ಮಾಡಿಕೊಳ್ಳುತ್ತಾರೋ ನನಗೆ ಗೊತ್ತಿಲ್ಲ. ಆದರೆ, ಹೇಳುವುದು ನನ್ನ ಕರ್ತವ್ಯ ನಾನು ಅದನ್ನು ಮಾಡುತ್ತಿದ್ದೇನೆ. ಕೃಷಿ ಮಂತ್ರಿಗಳು ಇಲ್ಲೆಯೇ ಇದ್ದರೆ, ಆದರೆ ಅವರು ತಮ್ಮ ಸ್ಥಾನದಲ್ಲಿ ಇಲ್ಲ ಅವರೇನೂ ಬೇರೆ ಚಟುವಟಿಕೆಯಲ್ಲಿ ಸ್ವಲ್ಪ ಬಿಸಿಯಾಗಿದ್ದಾರೆ. ಅವರು ಕೇಳಲಿ ಬಿಡಲಿ ನಾನು ಅವರಿಗೆ ಏನು ಹೇಳುವುದಕ್ಕೆ ಸಾಧ್ಯವಿದೆ?

ಉಪಾಧ್ಯಕ್ಷರು: ಕೃಷಿ ಮಂತ್ರಿಗಳು ತಮ್ಮ ಸ್ಥಾನಕ್ಕೆ ಬರಬೇಕು

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: ಇಲ್ಲಿ ಏನಾಗಿದೆ ಎಂದರೆ, ಎಲ್ಲಾ Senior Ministers ಇದ್ದಾರೆ, ನಾವೆಲ್ಲ ಸಣ್ಣ ಹುಡುಗರು ಇದ್ದೇವೆ ನಾವು ಹೇಳಿದರೆ, ಇವರಿಗೆ ಏನು ಐಡಿಯಾ ಇರುತ್ತದೆ ಎಂದು ಅವರು ತಿಳಿದುಕೊಂಡು ಹೇಳುತ್ತಿರಬಹುದು. ಆದರೆ, we are doing our job. ನಾವು ನಮ್ಮ ಕರ್ತವ್ಯವನ್ನು ಮಾಡುತ್ತಿದ್ದೇವೆ. ಈ ರಾಜ್ಯದಲ್ಲಿ ರೈತನಿಗೆ ಇನ್ನೊಂಡು ಮುಖ್ಯವಾಗಿ ಬಹಳ ದೊಡ್ಡ ಪ್ರಮಾಣದಲ್ಲಿ ಆಗಬೇಕಾದ ಕೆಲಸ ಎಂದರೆ, ಯಾವ ಪ್ರದೇಶದಲ್ಲಿ ನೀರಾವರಿಗೆ ಅವಕಾಶವಿಲ್ಲ. ಎಲ್ಲಿ ಸಂಪೂರ್ಣವಾಗಿ ಮಳೆ ಅವಲಂಬಿತವಾದ ಒಣ ಬೇಸಾಯ ಇದೆ, ಅಲ್ಲಿ ನಾವು ಏನು ಮಾಡಬೇಕು, ಅಲ್ಲಿ watershed activity ಯನ್ನು ಸಂಪೂರ್ಣವಾಗಿ ನಾವು ಮಾಡಬೇಕು. ನೀವು ಕೊಟ್ಟಿರುವ ಅಂಕಿ-ಅಂಶದ ಪ್ರಕಾರ ಈ ರಾಜ್ಯದಲ್ಲಿ ಸುಮಾರು 50 ಲಕ್ಷ ಹೆಕ್ಟೇರ್‌ಗೆ ಇನ್ನು ನಾವು treatment ಮಾಬೇಕಾಗಿದೆ. 50 ಲಕ್ಷ ಹೆಕ್ಟೇರ್ ಮಾಡಬೇಕೆಂದು ಒಂದು ಕಡೆ ಹೇಳಿದ್ದಾರೆ. ಅಂದರೆ, watershed coverage ಆಗಬೇಕಾದರೆ ಇನ್ನು 50 ಲಕ್ಷ ಹೆಕ್ಟೇರ್ ಆಗಬೇಕಾಗಿದೆ. 55 lakhs hectare, he is correcting me.

ಶ್ರೀ ಉಮೇಶ್ ವಿ. ಕತ್ತಿ: 75 ಲಕ್ಷ ಹೆಕ್ಟೇರ್. ಈ ಪಂಚವಾರ್ಷಿಕ ಯೋಜನೆಯಲ್ಲಿ 32½ ಲಕ್ಷ ತೆಗೆದುಕೊಂಡಿದ್ದೇವೆ. ಒಟ್ಟಾಗಿ 75 ಲಕ್ಷ ಹೆಕ್ಟೇರ್ treatment ಮಾಡಬೇಕಾಗಿದೆ.

ಡಾ॥ ಶರಣ ಪ್ರಕಾಶ ರುದ್ರಪ್ಪ ಪಾಟೀಲ್: ಎಲ್ಲಿ ನಮಗೆ ನೀರಾವರಿಗೆ ಅವಕಾಶ ಇಲ್ಲ, ಎಲ್ಲಿನಮ್ಮ ರೈತರಿಗೆ ನಮಗೆ ಬಿದ್ದಿರತಕ್ಕಂಥ ಮಳೆಯನ್ನು ಸಂಪೂರ್ಣವಾಗಿ utilize ಮಾಡಿ, ಅಂದರೆ, it is only possible through watershed activity ಸರಿಯಾಗಿ land levelling ಆಗಲಿ, check-bunds ಆಗಲಿ ಅಥವಾ ಕೃಷಿ ಹೊಂಡ ಆಗಲಿ ಅಥವಾ

bunding ಆಗಲಿ ಅಥವಾ counter bunding ಆಗಲಿ ಇದೆಲ್ಲಾ ಮಾಡಿದರೆ ಮಾತ್ರ ನಮಗೆ ಬಿದ್ದಿರತಕ್ಕಂಥ ಮಳೆಯಲ್ಲಿಯೇ ನಾವು ಉತ್ತಮವಾದ ಬೆಳೆ ಬೆಳೆಯಲಿಕ್ಕೆ ಸಾಧ್ಯವಿದೆ ಮತ್ತು ನಮ್ಮ ground water recharge ಮಾಡಲಿಕ್ಕೆ ಸಾಧ್ಯವಿದೆ. ಅದನ್ನಾದರೂ ನಾವು Warfooting ನಲ್ಲಿ ಮಾಡುತ್ತಿದ್ದೇವೆಯೆ ಎನ್ನುವುದು ನನ್ನ ಪ್ರಶ್ನೆ. Watershed Department is giving around Rs. 5,000/- per acre for the watershed activities. If I am wrong, you have to correct me because you have not given me the correct figures and I am telling whatever is based on facts given in this ವಾರ್ಷಿಕ ವರದಿಯಲ್ಲಿ ಏನು ಹೇಳಿದ್ದಾರೆ ಅದನ್ನು ನಾನು ಹೇಳುತ್ತಿದ್ದೇನೆ ಮತ್ತು ನಾನು ಕೆಲವು ಜನಗಳಿಂದ ತಿಳಿದುಕೊಂಡು ಹೇಳುತ್ತಿದ್ದೇನೆ.

ಶ್ರೀ ಉಮೇಶ್ ವಿ. ಕತ್ತಿ: ರೂ. 15,000/– per hectare maximum, minimum Rs. 12,000/- per hectare. ಅದು area-wise vary ಆಗುತ್ತದೆ.

ಡಾ॥ ಶರಣ ಪ್ರಕಾಶ ರುದ್ರಪ್ಪ ಪಾಟೀಲ್: ನಾನೂ ಕೂಡ ರೂ. 5,000/– per acre ಎಂದು ಹೇಳಿದೆ. It amounts to same. ನೀವು ಹೆಕ್ಟೇರಿನಲ್ಲಿ ಹೇಳುತ್ತಿದ್ದೀರಿ ನಾನು ಎಕರೆಯಲ್ಲಿ ಹೇಳುತ್ತಿದ್ದೇನೆ.

ಶ್ರೀ ಉಮೇಶ್ ವಿ. ಕತ್ತಿ: ರೂ. 15,000/– ತೆಗೆದುಕೊಂಡು ಲೆಕ್ಕ ಮಾಡಿ

ಡಾ॥ ಶರಣ ಪ್ರಕಾಶ ರುದ್ರಪ್ಪ ಪಾಟೀಲ್: But, now as per the advice of the experts ಪ್ರತಿ ಎಕರೆಗೆ, not hectare at least Rs. 25,000/- spend ಮಾಡಿದರೆ ಮಾತ್ರ ನೀವು ಸಮರ್ಪಕವಾಗಿ ಮಾಡಲಿಕ್ಕೆ ಸಾಧ್ಯವಿದೆ ಎಂದು ನನಗೆ experts ಹೇಳಿದ್ದು. ಕೇಂದ್ರ ಸರ್ಕಾರ ಕೊಡುತ್ತದೆಯೋ ರಾಜ್ಯ ಸರ್ಕಾರ ಕೊಡುತ್ತದೆಯೋ ಅದನ್ನು ನೀವು ಡಿಸೈಡ್ ಮಾಡಬೇಕು. ಏಕೆಂದರೆ, ನೀವು ಕೃಷಿ ಇಲಾಖೆಯ ಜವಾಬ್ದಾರಿಯನ್ನು ಹೊತ್ತು ಕೊಂಡಿದ್ದೀರಿ. ನಾನು ಇವತ್ತೇ ಮಾಡಿ ಎಂದು ಹೇಳುತ್ತಿಲ್ಲ. I am not telling we should do it in one year. You make a plan. ನನಗೆ surprising ಏನು ಎಂದರೆ, ಈ ನಮ್ಮ ಕೃಷಿ ಇಲಾಖೆಯ ವಾರ್ಷಿಕ ವರದಿಯನ್ನು ನಾನು ಓದಿದೆ. They have only told ಏನೆಂದರೆ ನಮಗೆ 75 ಲಕ್ಷ ಹೆಕ್ಟೇರ್‌ಗೆ water treatment ಮಾಡಬೇಕು ಅದರೆ, 25–30 ಸಾವಿರ ಎಕರೆ ಮಾತ್ರ ಮಾಡಿದ್ದೇವೆ, ಇನ್ನು ಮಾಡುವುದಿದೆ. ಆದರೆ ನಾವು ಯಾವ ರೀತಿ ಮಾಡಬೇಕು? ಎಷ್ಟು ವರ್ಷದಲ್ಲಿ ಮಾಡಬೇಕು? ಅದಕ್ಕೆ ಎಷ್ಟು ಹಣ

ಬೇಕಾಗುತ್ತದೆ? ಅದಕ್ಕೆ ನಮ್ಮ ಏನು ಪ್ಲಾನ್ ಏನಿದೆ? There is no plan. ಈಗ ನಾವು ಯಾವುದೇ ಒಂದು ಇಲಾಖೆಯಲ್ಲಿ ಯಾವುದೇ ಒಂದು ಕೆಲಸವನ್ನು ಇಷ್ಟು ದಿನದಲ್ಲಿ ಮಾಡಬೇಕೆಂದರೆ, we should have a time-bound plan for that. ಈಗಲ್ಲ ನಿಮಗೆ ಐದು ವರ್ಷದಲ್ಲಿ ಮಾಡುವುದಕ್ಕೆ ಆಗುವುದಿಲ್ಲ ತಾನೆ, O.K. accepted, ನೀವು 20 years programme ಮಾಡಿ. 20 ವರ್ಷದಲ್ಲಿ ನಾನು ಸಂಪೂರ್ಣವಾಗಿ ಈ ರಾಜ್ಯದಲ್ಲಿ ಎಲ್ಲಾ ಕಡೆ watershed activities 100% cover ಮಾಡುವ ಹಾಗೆ ನಾನು ಪ್ರಯತ್ನ ಮಾಡುತ್ತೇನೆ. ಯಾಕೆಂದರೆ this is the need of the hour. Every year the rain fall is decreasing. ನಾನು ಇಸ್ರೇಲ್ ಗೆ ಹೋಗಿದ್ದೆ. ಅಲ್ಲಿ ಎಷ್ಟು ಕಡಿಮೆ ಮಳೆಯಾಗುತ್ತಿದೆ ಮತ್ತೆ ಅವರು ಯಾವ ರೀತಿ ಕೃಷಿ ಮಾಡುತ್ತಿದ್ದಾರೆಂದರೆ. . .

ಶ್ರೀ ಉಮೇಶ್ ವಿ. ಕತ್ತಿ: ಮಾನ್ಯ ಸದಸ್ಯರು ಹೇಳಿದ ಹಾಗೆ ಇದನ್ನು ಮಾಡಬೇಕಾದುದು ಸರ್ಕಾರದ ಜವಾಬ್ದಾರಿ. ಕೇಂದ್ರ ಸರ್ಕಾರ 90% ಅನುದಾನ ಕೊಡುತ್ತಿದೆ, ರಾಜ್ಯ ಸರ್ಕಾರ 10% ಕೊಡಲೇಬೇಕೆಂದು mandate ಇರುವುದರಿಂದ ನಾವು ಕೊಡುತ್ತಿದ್ದೇವೆ. ಬರುವ ಪಂಚವಾರ್ಷಿಕ ಯೋಜನೆಯಲ್ಲಿ 32½ ಸಾವಿರ ಹೆಕ್ಟೇರ್‌ಗೆ ಈಗಾಗಲೇ ನಾವು sanction ಕೊಟ್ಟು ಕೆಲಸ ಪ್ರಾರಂಭ ಮಾಡಿದ್ದೇವೆ. ಈ ವರ್ಷದಿಂದ ಪ್ರಾರಂಭವಾಗಿದೆ. ಬರುವ ಐದು ವರ್ಷಗಳಲ್ಲಿ 32½ ಸಾವಿರ ಹೆಕ್ಟೇರ್‌ಗೆ treatment ಅನ್ನು ಮಾಡುತ್ತೇವೆ. ಇದಲ್ಲದೆ ಕಳೆದ ಒಂದು ತಿಂಗಳ ಹಿಂದೆ ಮಾನ್ಯ ಜಯರಾಂ ರಮೇಶ್ ರವರು ಮಾನ್ಯ ಪಂಚಾಯತ್ ರಾಜ್ ಮಂತ್ರಿಗಳು ದೆಹಲಿಯಲ್ಲಿ ಒಂದು ಸಭೆಯನ್ನು ಕರೆದು ಬರುವ ಪಂಚವಾರ್ಷಿಕ ಯೋಜನೆಯಲ್ಲಿ ಪೂರ್ಣ ಪ್ರಮಾಣದ ರಾಜ್ಯದ ಎಲ್ಲಾ ಜಿಲ್ಲೆಯಲ್ಲಿ treatment ಮಾಡಬೇಕೆಂದು ಹೇಳಿದ್ದಾರೆ. ಅದಕ್ಕೂ ಸಹ ಅನುಗುಣವಾಗಿ ಪ್ಲಾನ್ ಮಾಡಿ ಅದನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದೇವೆ. ಅದಕ್ಕೆ ಮಂಜೂರಾತಿ ಕೊಟ್ಟರೆ 100% within these 5 years we will treat all 75 lakhs hectares. ಈ ಪಮಚವಾರ್ಷಿಕ ಯೋಜನೆಯಲ್ಲಿ ಮಂಜೂರಾತಿ ಕೊಟ್ಟಿರುವುದು 32½ ಸಾವಿರ ಹೆಕ್ಟೇರ್, ಆದರೆ, ಕಳೆದ ಒಂದು ತಿಂಗಳ ಹಿಂದೆ ಏನು ಸಭೆ ನಡೆಯಿತು, ಆ ಸಭೆಯಲ್ಲಿ ಹೇಳಿದ್ದು ಇದೇ ಪಂಚವಾರ್ಷಿಕ ಯೋಜನೆಯಲ್ಲಿ 75 ಲಕ್ಷ ಹೆಕ್ಟೇರ್ ಗಳಿಗೆ treatment ಕೊಡಬೇಕೆಂದು ಹೇಳಿದಾಗ ನಾವು ಪ್ಲಾನ್ ಅನ್ನು ಮತ್ತು ನಮ್ಮ ಎಲ್ಲಾ ಬಜೆಟ್‌ನ್ನು ಈಗಾಗಲೇ ಕೇಂದ್ರ ಸರ್ಕಾರಕ್ಕೆ submit ಮಾಡಿದ್ದೇವೆ. ಅದಕ್ಕೆ ಮಂಜೂರಾತಿ ಸಿಕ್ಕರೆ ಬರುವ ಐದು ವರ್ಷಗಳಲ್ಲಿ ಇದು ಮಾಡುವುದಕ್ಕೆ ಸಾಧ್ಯವಿದೆ. ದುಡ್ಡಿಗೆ sanction ಕೊಟ್ಟರೆ ಮಾಡುವುದಕ್ಕೆ ಸಾಧ್ಯವಿದೆ,

ನಾವು ಮಾಡುತ್ತೇವೆ. ಅದರಲ್ಲೇನೂ ತೊಂದರೆಯಿಲ್ಲ.

ಡಾ: ಶರಣ ಪ್ರಕಾಶ ರುದ್ರಪ್ಪ ಪಾಟೀಲ್: ಮಾಡುತ್ತೇವೆಂದರೆ ಅದಕ್ಕೆ ನಮ್ಮ ದನ್ಯವಾದಗಳು. ಕೇಂದ್ರ ಸರ್ಕಾರದಲ್ಲಿ ಯಾವುದಾದರೂ clearance ಸಿಕ್ಕಿಲ್ಲವೆಂದರೆ ಖಂಡಿತವಾಗಿ ನಾವು ನಮ್ಮ ನಾಯಕರಿಗೆ ಹೇಳಿ ನಮ್ಮ ಪ್ರಯತ್ನ ಮಾಡುತ್ತೇವೆ.

(ಈ ಹಂತದಲ್ಲಿ ಸನ್ಮಾನ್ಯ ಸಭಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಅದು ಬೇರೆ ವಿಷಯ ನಿಮ್ಮ ಪ್ರಯತ್ನ ನೀವು ಮಾಡಲೇಬೇಕು time bound ಆಗಿ ಅದನ್ನು ನೀವು ಮಾಡಬೇಕು. ರಾಜ್ಯದ ಹಾಗೂ ರೈತರ ಹಿತದೃಷ್ಟಿಯಿಂದ ನೀವು ಇದನ್ನು ಮಾಡಬೇಕು.

ಶ್ರೀ ಉಮೇಶ್ ವಿ. ಕತ್ತಿ: ವಿಶೇಷವಾಗಿ ಹೈದರಾಬಾದ್ ಕರ್ನಾಟಕದ ಹಿತ ದೃಷ್ಟಿಯಿಂದ ಮಾಡಬೇಕು.

ಡಾ: ಶರಣಪ್ರಕಾಶ ರುದ್ರಪ್ಪ ಪಾಟೀಲ್: ಹೌದು, ಏಕೆಂದರೆ, ಹೈದರಾಬಾದ್ – ಕರ್ನಾಟಕಕ್ಕೆ ವಿಶೇಷವಾದ ಸ್ಥಾನಮಾನ ಕೂಡ ಸಿಗುವುದಿದೆ. because of the backwardness of that area. ಒಂದು ವೇಳೆ ಈ ಕಳಕಳಿ ನಮ್ಮ ಕೃಷಿ ಸಚಿವರು ಹಿಂದೆ ತೋರಿಸಿದ್ದರೆ ನನಗೆ ಬಹಳ ಖುಷಿಯಾಗುತ್ತಿತ್ತು. ಏಕೆಂದರೆ, ಕೇಂದ್ರ ಸರ್ಕಾರ 90% ಹಣವನ್ನು watershed activity ಕೊಡುವುದಕ್ಕೆ ಸಿದ್ಧವಿದೆ. ರಾಜ್ಯ ಸರ್ಕಾರ ಅದನ್ನು ತೆಗೆದುಕೊಳ್ಳುವುದಕ್ಕೆ ಸಿದ್ಧವಿದೆ ಎಂದರೆ ನಾವು, we will play our part, we will definitely empower it. ನಮ್ಮ ರಾಜ್ಯದ ಹಿತದೃಷ್ಟಿಯಿಂದ ಏನೇನು ಮಾಡಬೇಕೋ ಅದನ್ನೆಲ್ಲಾ ನಾವು ಮಾಡುವುದಕ್ಕೆ ಸಿದ್ಧರಿದ್ದೇವೆ. ಆದರೆ, ಮಾನ್ಯ ಕೃಷಿ ಸಚಿವರಿಗೆ ನನ್ನದೊಂದು ಪ್ರಶ್ನೆ ಏನೆಂದರೆ, ಕೃಷಿ ಇಲಾಖೆಯಲ್ಲಿ ಎಷ್ಟು percent ಹುದ್ದೆಗಳು ಖಾಲಿ ಇವೆ ಎಂದು ನೋಡಿದೆ. ನನ್ನ ಹತ್ತಿರ ಇರುವ ವಾರ್ಷಿಕ ವರದಿಯಲ್ಲಿ ಈ ಮಾಹಿತಿ ತೋರಿಸುತ್ತೇನೆ. 45% of the posts are vacant ನಾನು ಯಾವ ಕ್ಯಾಟಗರಿ ಎಂದು ನೋಡಿದೆ. ಎಂದು A,B,C,D category ಎಂದು ಮಾಡಿದ್ದಾರೆ. 'B' category ಯಲ್ಲಿ Highest vacancies ಇವೆ and they are the most important people in the ground reality, ಈಗ ಅಲ್ಲಿ field ನಲ್ಲಿ ಹೋಗಬೇಕು. ಕೆಲಸ ಮಾಡಬೇಕಾದ Extension Officers 'B' category ಯವರು, ಆದರೆ, ಸುಮಾರು 45 ರಿಂದ 50% ಹುದ್ದೆಗಳು ಖಾಲಿ ಇದ್ದರೆ ಯಾವ ರೀತಿ ಕೆಲಸ ಮಾಡುವುದಕ್ಕೆ ಸಾಧ್ಯವಿದೆ? That is same in

watershed department also. ನಮ್ಮ ಸಚಿವರು ಅದರಲ್ಲಿ ಒಂದು ಗೊಂದಲ ಸೃಷ್ಟಿ ಮಾಡಿದ್ದಾರೆ. ಏನೆಂದರೆ, Agriculture ಮತ್ತು Watershed Department ಅನ್ನು merge ಮಾಡುತ್ತೇನೆಂದು ಹೇಳಿಕೆ ಕೊಟ್ಟರು. ಅವರು ಮಾಡಿದರೋ ಬಿಟ್ಟರೋ ನನಗಂತೂ ಗೊತ್ತಾಗಲಿಲ್ಲ. ಅವರು ಏಕೆ ಮಾಡಲಿಲ್ಲವೆಂತಲೂ ಗೊತ್ತಾಗಲಿಲ್ಲ. ಏಕೆ ಹೇಳಿಕೆ ಕೊಟ್ಟಿರಿ, ಏಕೆ ಮಾಡಲಿಲ್ಲ ಎಂದು ನಾನು ನಿಮ್ಮನ್ನು ಕೇಳುತ್ತಿಲ್ಲ. ಅದರಿಂದ ನಮಗಂತೂ ಏನೂ ಉಪಯೋಗವಾಗಲಿಲ್ಲ. ಸಚಿವರು ಏನೊಂದು ಕ್ರಾಂತಿಕಾರಿ ಬದಲಾವಣೆ ತರುತ್ತಿದ್ದಾರೆ ಇದರಿಂದ ನಮಗಂತೂ ಏನಾದರೂ ಉಪಯೋಗವಾಗಲೆಂದು ನಾವು ತಿಳಿದುಕೊಂಡೆವು. ಆದರೆ, ಇವತ್ತಿನ ದಿವಸ ನಾವು ನೋಡುತ್ತಿರುವ ಹಾಗೆ ಕೃಷಿ ಇಲಾಖೆಯಲ್ಲಿ ಯಾರೂ ಸಹ ಕೆಲಸ ಮಾಡುವುದಕ್ಕೆ ರೆಡಿ ಇಲ್ಲ. Everybody wants to run to the watershed Department ಅಲ್ಲಿ ಏಕೆ ಈ ರೀತಿಯಾಗುತ್ತಿದೆ ಎಂಬ ಬಗ್ಗೆ ಮಾನ್ಯ ಸಚಿವರು ಉತ್ತರ ಕೊಡಬೇಕು. ಆದರೆ, ಇವತ್ತಿನ ದಿವಸ ಏನಾಗಿದೆ ಎಂದರೆ, ಆ ಇಲಾಖೆಯಲ್ಲಿ ಮತ್ತು ಈ ಇಲಾಖೆಯಲ್ಲಿಯೂ ಸಹ ಕೋರಿಕೆ ಇದೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ: ಮಾನ್ಯ ಅಧ್ಯಕ್ಷರೆ, ವಾಟರ್ ಟ್ರೀಟ್‌ಮೆಂಟ್ ಬಗ್ಗೆ ಬಹಳ ಸವಿಸ್ತಾರವಾಗಿ ಚರ್ಚೆಯಾಗುತ್ತಿದೆ. ಮಾನ್ಯ ಕೃಷಿ ಸಚಿವರಲ್ಲಿ ಕೇಳುವುದೇನೆಂದರೆ ವಾಟರ್ ಟ್ರೀಟ್‌ಮೆಂಟ್ ಯಾವ ರೀತಿಯಾಗಿ ಮಾಡುತ್ತಿದ್ದಾರೆಂದು ತಾವು ಸ್ಪಾಟ್‌ಗೆ ಹೋಗಿ ನೋಡಿದ್ದೀರಾ? ವಾಟರ್ ಟ್ರೀಟ್‌ಮೆಂಟ್ ಮಾಡುವುದಕ್ಕೆ ಅಲ್ಲಿ ಟೆಕ್ನಿಕಲ್ ಹ್ಯಾಂಡ್ಸ್ ಯಾರಾದರೂ ಅಲ್ಲಿರುತ್ತಾರೆಯೇ? ಇವತ್ತಿನ ದಿವಸ ಏನಾಗಿದೆ ಎಂದರೆ, ಜೆಸಿಬಿ ಯಲ್ಲಿ ಒಂದು ಕಡೆಯಿಂದ ಮಣ್ಣನ್ನು ತೆಗೆದುಕೊಂಡು ಹೋಗುತ್ತಿದ್ದರೆ ಮತ್ತೆ ಹಿಂದಿನಿಂದ ಆತ ಮಣ್ಣು ಮುಚ್ಚಿಕೊಂಡು ಬರುತ್ತಾನೆ. ಈ ರೀತಿಯಾಗಿ ದೇಶದ ದುಡ್ಡು ಸುಮ್ಮನೆ ಹಾಳಾಗುತ್ತಿದೆ. ನೀರಿನ ಸಮಸ್ಯೆಯನ್ನು ಅರಿತು ವಾಟರ್ ಟ್ರೀಟ್‌ಮೆಂಟ್ ಮೂಲಕ ನೀರನ್ನು ಇಂಗಿಸುವ ಒಂದು ಪ್ರಾಮಾಣಿಕವಾದಂಥ ಪ್ರಯತ್ನ ಇದುವರೆಗೂ ಸಹ ನಡೆದಿಲ್ಲವೆಂದು ಘಂಟಾಘೋಷವಾಗಿ ನಾನು ಹೇಳುವುದಕ್ಕೆ ಬಯಸುತ್ತೇನೆ. ತಾವು ಬಂದರೆ ಅದನ್ನು ತೋರಿಸುತ್ತೇನೆ. ನಾವೆಲ್ಲಾ ಇಲ್ಲಿ ಕುಳಿತುಕೊಂಡು ಸುಮ್ಮನೆ ಭಾಷಣ ಮಾಡಿ ಮನೆಗೆ ಹೋಗುತ್ತೇವೆ. ಅಷ್ಟು ಮಾಡಿದೆವು. ಇಷ್ಟು ಮಾಡಿದೆವು ಎಂಬುದು ಕೇವಲ ಪುಸ್ತಕದಲ್ಲಿ ಮಾತ್ರ ಇರುತ್ತದೆ. ತಾವು ಬಂದರೆ ನೀರು ಎಲ್ಲಿ ನಿಂತಿದೆ ಎಂದು ತೋರಿಸುತ್ತೇವೆ. ವಾಟರ್ ಟ್ರೀಟ್‌ಮೆಂಟ್ ಅನ್ನು ನಿಜವಾಗಿ ಯಾವ ರೀತಿಯಾಗಿ ಮಾಡಬೇಕೆಂಬ ಬಗ್ಗೆ ಸದನದಲ್ಲಿ ಚರ್ಚೆ ಇಡಿ ಪ್ರಾಕ್ಟಿಕಲ್ ಆಗಿ ಗ್ರಾಸ್‌ರೂಟ್

ಲೆವೆಲ್‌ನಲ್ಲಿ ಏನು ಮಾಡಬೇಕೆಂಬುದರ ಬಗ್ಗೆ ನಮ್ಮ ಅನುಭವದ ಕೆಲವು ಸಲಹೆಗಳನ್ನು ಕೊಡುತ್ತೇವೆ. ವಾಟರ್ ಟ್ರೀಟ್‌ಮೆಂಟ್ ಮಾಡಿದರೆ ಮಾತ್ರ ಅಂತರ್ಜಲ ಹೆಚ್ಚಾಗುತ್ತದೆ. ಇವತ್ತಿನದಿವಸ ಅಂತರ್ಜಲ ಬತ್ತಿ ಹೋಗಿದೆ. ಅಂತರ್ಜಲ ಬತ್ತಿ ಹೋದಂಥ ಕಾಲದಲ್ಲಿ ನೀರನ್ನು ತಡೆದಿಡುವುದಕ್ಕೆ ಏನೇನು ಮಾಡಬೇಕೆಂದು ಮತ್ತು ಯಾವ್ಯಾವ ರೀತಿಯಲ್ಲಿ ಕಾರ್ಯಕ್ರಮಗಳನ್ನು ಯೋಜನೆ ಮಾಡಬೇಕೆಂಬುದರ ಬಗ್ಗೆ ಆಲೋಚನೆ ಮಾಡಬೇಕು.

ಶ್ರೀ ಉಮೇಶ್ ವಿ.ಕತ್ತಿ: ಮಾನ್ಯ ಅಧ್ಯಕರೆ, ಈ ಜಲಾನಯನ ಯೋಜನೆಯ ಬಗ್ಗೆ ಹೇಳುವುದಾದರೆ. ಆ ಭಾಗದಲ್ಲಿ ಬರುವಂಥ ಎಲ್ಲಾ ರೈತರನ್ನು ಒಟ್ಟುಗೂಡಿಸಿ ಈ ಜಮೀನನ್ನು ಸಮಾಂತರ ಮಾಡುವುದಾಗಲಿ, ಬಂಡ್ ಹಾಕುವುದರಲ್ಲಿ, ಚೆಕ್‌ಡ್ಯಾಂ ಕಟ್ಟುವುದಕ್ಕಾಗಲಿ ಆ ಭಾಗದ ರೈತರು ಸಭೆ ಮಾಡಿ ಇದರ ಬಗ್ಗೆ ಅಲ್ಲಿನ ರೈತರೆ ತೀರ್ಮಾನ ಮಾಡುತ್ತಾರೆ. ಆದ್ದರಿಂದ ಇದಕ್ಕೆ ಯಾವ ಟೆಕ್ನಿಕಲ್ ಪರ್ಸನ್ ಬೇಕಾಗಿಲ್ಲ. ಏಕೆಂದರೆ, ಆ ಭಾಗದಲ್ಲಿ ಅಲ್ಲಿನ ರೈತರು ಮೊದಲಿನಿಂದ ಇದ್ದು, ಎಲ್ಲೆಲ್ಲಿ ಟ್ರೀಟ್‌ಮೆಂಟ್ ಮಾಡಬೇಕೆಂದು ಮತ್ತು ಯಾವ ರೀತಿಯಾಗಿ ಬಂಡ್ ಹಾಕಬೇಕೆಂದು ಮತ್ತು ಯಾವ ರೀತಿಯಾಗಿ ಕೆರೆಕಟ್ಟೆಗಳನ್ನು ಕಟ್ಟಬೇಕೆಂದು ಹಾಗೂ ಇದರ ಜೊತೆಗೆ ಯಾವ್ಯಾವ ಗಿಡಗಳನ್ನು ನೆಡಬೇಕೆಂಬುದನ್ನು ಅವರು ತೀರ್ಮಾನ ಮಾಡುತ್ತಾರೆ.

(ಗೊಂದಲ)

ಶ್ರೀ ಕೆ.ಎಂ. ಶಿವಲಿಂಗೇಗೌಡ: ಯಾವ್ಯಾವ ಗ್ರಾಮಗಳಲ್ಲಿ ಏನಾಗುತ್ತಿದೆ ಎಂದು ಗೊತ್ತಿದೆ. ಆದ್ದರಿಂದ, ಇದರ ಬಗ್ಗೆ ಒಂದು ದಿವಸ ಚರ್ಚೆಗೆ ಅವಕಾಶ ಮಾಡಿಕೊಡಿ.

ಅಧ್ಯಕ್ಷರು: ಮಾನ್ಯ ಶರಣಪ್ರಕಾಶ್ ರುದ್ರಪ್ಪ ಪಾಟೀಲ್‌ರವರು ಮಾತನಾಡಲಿ, ದಯವಿಟ್ಟು ಕುಳಿತುಕೊಳ್ಳಿ.

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್: ಮಾನ್ಯ ಅಧ್ಯಕ್ಷರೆ, ನಮ್ಮ ಸಚಿವರು ಕಲ್ಪನಾ ಲೋಕದಲ್ಲಿದ್ದಾರೆ. ನನ್ನದೊಂದು ಸಲಹೆ ಏನೆಂದರೆ, ನೀವು ನಮ್ಮ ಜಿಲ್ಲೆಗಳಿಗೆ ಬಂದು ಅಲ್ಲಿ ಯಾವ ರೀತಿಯಾಗಿ ನಡೆಯುತ್ತಿದೆ ಎಂಬುದನ್ನು ನೋಡಿ. ಲ್ಯಾಂಡ್ ಲೆವೆಲ್ ಬಗ್ಗೆ ತಾವು ಹೇಳಿದ್ದೀರಿ. ಆದರೆ, ಲ್ಯಾಂಡ್ ಲೆವೆಲ್ ಆಗುತ್ತಿಲ್ಲ.

ಶ್ರೀ ಉಮೇಶ್ ವಿ. ಕತ್ತಿ: ಮಾನ್ಯ ಅಧ್ಯಕ್ಷರೆ, ಇದು World Bank ಯೋಜನೆಯಾಗಿದೆ. ಮತ್ತೆ ಕೇಂದ್ರ ಸರ್ಕಾರದ ಗೈಡ್‌ಲೈನ್ಸ್ ಪ್ರಕಾರ ನಾವು

ಮಾಡಲೇಬೇಕಾಗುತ್ತದೆ. 15 ಸಾವಿರದ ಹೆಕ್ಟೇರ್ ಪ್ರದೇಶ ಕೊಟ್ಟಾಗ ನಾವು ಲ್ಯಾಂಡ್ ಲೆವೆಲ್ ಮತ್ತು ಮತ್ತೊಂದನ್ನು ಮಾಡುತ್ತೇವೆಂದು ಮಾಡುವುದಕ್ಕೆ ಅಗುವುದಿಲ್ಲ. ಇರುವ ಜಮೀನಿನಲ್ಲಿ ಬಂಡ್ ಹಾಕಿ ಮಳೆ ಬಂದಂಥ ಸಂದರ್ಭದಲ್ಲಿ ಲೆವೆಲ್ ಆಗುತ್ತದೆಂಬ ಒಂದು ಚಿಂತನೆ ಆಗಿದೆ. ಆ ಭಾಗದ ರೈತರೆಲ್ಲರೂ ಕುಳಿತು ಸಭೆ ಮಾಡಲಿ ಅವರು ಮಾಡುವಂಥ ಕಾರ್ಯಕ್ರಮಗಳಿಗೆ ಸರ್ಕಾರ ಅನುದಾನ ಕೊಡುತ್ತದೆ. ಮತ್ತೆ ಸರ್ಕಾರದ ಅಧಿಕಾರಿಗಳು ಅದಕ್ಕೆ ರೂಪುರೇಷೆಗಳನ್ನು ತಯಾರು ಮಾಡಿಕೊಡುತ್ತಾರೆ. ಇದು ಅಲ್ಲದೆ Google ನಿಂದ ಪೂರ್ಣ ಚಿತ್ರ ತೆಗೆದುಕೊಂಡು ಹಿಂದೆ ಹೇಗಿತ್ತು, ಟ್ರೀಟ್‌ಮೆಂಟ್ ಆದ ಮೇಲೆ ಏನಾಯಿತ್ತೆಂಬ ಎರಡು ಚಿತ್ರಗಳು ಇವೆ. ತಮಗೆ ಬೇಕಾದರೆ ಈ ಚಿತ್ರಗಳನ್ನು ಒದಗಿಸುತ್ತೇನೆ.

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್: ಮಾನ್ಯ ಅಧ್ಯಕ್ಷರೆ, ನಮ್ಮ ಏರಿಯಾದ ಚಿತ್ರದ ನಕಾಷೆಯನ್ನು ನಾನು ತರಿಸಿ ನೋಡಿದ್ದೇನೆ. ಆದರೆ, ಉದ್ಯೋಗಖಾತ್ರಿ ಯೋಜನೆ ಮತ್ತು ನಿಮ್ಮ ಯೋಜನೆಯನ್ನು ಕ್ಲಬ್ ಮಾಡಿ ಮಾಡಿದರೆ ಸಾಕಷ್ಟು ಕೆಲಸವನ್ನು ಮಾಡಬಹುದು.

ಶ್ರೀ ಉಮೇಶ್ ವಿ. ಕತ್ತಿ: ಮಾನ್ಯ ಅಧ್ಯಕ್ಷರೆ, ಉದ್ಯೋಗಖಾತ್ರಿ ಯೋಜನೆ ಪಂಚಾಯಿತಿ ವ್ಯಾಪ್ತಿಗೆ ಮಾತ್ರ ಸೀಮಿತವಾಗಿದೆ. ಅದು ಒಬ್ಬನಿಗೆ 100 ದಿವಸ ಕೂಲಿ ಕೊಡುವ ಕೆಲಸ ಆಗಿದೆ. ಆ 100 ದಿವಸದಲ್ಲಿ ಊರಿನಲ್ಲಿ ಚರಂಡಿ, ರಸ್ತೆ ಮಾಡುವುದಕ್ಕೆ ಆ ಹಣ ಖರ್ಚು ಮಾಡುತ್ತಾರೆ. ಆದ್ದರಿಂದ, ಅದನ್ನು ಇದಕ್ಕೆ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಇದರ ಬಗ್ಗೆ ನಾವು ಸಾಕಷ್ಟು ಪ್ರಯತ್ನ ಮಾಡಿದ್ದೇವೆ.

(ಗೊಂದಲ)

ಶ್ರೀ ವೈ.ಎನ್. ರುದ್ರೇಶ್ ಗೌಡ: ಮಾನ್ಯ ಅಧ್ಯಕ್ಷರೆ, ಉದ್ಯೋಗಖಾತ್ರಿ ಯೋಜನೆಯ ಹಣ 100% ಜಮೀನಿಗೆ ಖರ್ಚಾಗುತ್ತದೆ.

ಅಧ್ಯಕ್ಷರು: ಮಾನ್ಯ ರುದ್ರೇಶ್ ಗೌಡರೆ, ತಾವು ದಯವಿಟ್ಟು ಕುಳಿತುಕೊಳ್ಳಿ.

ಡಾ: ಹೆಚ್.ಸಿ. ಮಹದೇವಪ್ಪ: ಮಾನ್ಯ ಅಧ್ಯಕ್ಷರೆ, ಉದ್ಯೋಗಖಾತ್ರಿ ಯೋಜನೆಯಲ್ಲಿ small and maginal farmers ಜಮೀನುಗಳನ್ನು ಹದಮಾಡಿ ಬದು ಹಾಕುವುದಕ್ಕೆ ಅವಕಾಶ ಇದೆ. ಉದ್ಯೋಗಖಾತ್ರಿ ಯೋಜನೆ ಕೇವಲ ಉದ್ಯೋಗ

ಕೊಡುವುದಲ್ಲದೆ. See, Agriculture is also a sector which comes under Panchayath Raj Institution. The State sector should hand it over to District Sector ಈ ರೀತಿಯಾದ ಮೇಲೆ ನಿಮ್ಮದು ಸಹ ಅಲ್ಲಿಗೆ ಬರುತ್ತದೆಯಲ್ಲವೆ?

ಶ್ರೀ ಉಮೇಶ್ ವಿ. ಕತ್ತಿ: ಮಾನ್ಯ ಡಾಕ್ಟರ್‌ರವರೆ, ನಿಮ್ಮ ತಾಲ್ಲೂಕಿಗೆ ಹೋಗೋಣ ಪಂಚಾಯತಿಯಲ್ಲಿ ಠರಾವು ಮಾಡಿಸಿ ಮಾಡಿ ನಾವು ನಿಮ್ಮ ಜೊತೆ ಬರುತ್ತೇವೆ.

(ಗೊಂದಲ)

ಅಧ್ಯಕ್ಷರು: ವಿಷಯಾಂತರ ಬೇಡ. ದಯಮಾಡಿ ತಾವು ಕುಳಿತುಕೊಳ್ಳಿ, ಈ ರೀತಿಯಾದರೆ ಅವರು ಹೇಗೆ ಮಾತನಾಡುವುದಕ್ಕೆ ಆಗುತ್ತದೆ?

(ಗೊಂದಲ)

ಶ್ರೀ ವೈ.ಎನ್. ರುದ್ರೇಶ್ ಗೌಡ: ಆ ರೀತಿಯಾಗಿ ಮಾಡಬೇಕೆಂದು ಕೇಂದ್ರದ ಗೈಡ್‌ಲೈನ್ಸ್ ಬಹಳ ಕ್ಲಿಯರ್ ಆಗಿದೆ.

ಡಾ: ಹೆಚ್.ಸಿ. ಮಹದೇವಪ್ರಸಾದ್: ಮಾನ್ಯ ಅಧ್ಯಕ್ಷರೆ, ಶಾಸಕರು, ಜಿಲ್ಲಾಪಂಚಾಯತ್, ತಾಲ್ಲೂಕು ಪಂಚಾಯತ್, ಗ್ರಾಮಪಂಚಾಯತ್, ಎಲ್ಲರೂ ಮಾಡೋಣ. But the Government should know that NREGP is also a programme where you can take up the land leveling. ಆ ರೀತಿಯಾದ ಐಡಿಯಾಗಿ ಗೊತ್ತಿಲ್ಲದೆ ಇದ್ದರೆ ಯಾವ ರೀತಿಯಾಗಿ ಮಾಡುತ್ತೀರಿ? How are you going to build the nation?

ಅಧ್ಯಕ್ಷರು: ಮಾನ್ಯ ಸಚಿವರೆ, ತಾವು ರಿಪ್ಲೈ ಕೊಡುವಂಥ ಸಂದರ್ಭದಲ್ಲಿ ಉತ್ತರ ಹೇಳಿ.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ: ಮಾನ್ಯ ಅಧ್ಯಕ್ಷರೆ, ನಾನಾದರೂ ಮಾತನಾಡುವುದಕ್ಕೆ ಎದ್ದು ನಿಂತುಕೊಂಡರೆ ಮಾನ್ಯ ಉಮೇಶ್ ವಿ. ಕತ್ತಿಯವರ ಪರವಾಗಿ ಮಾತನಾಡುತ್ತಾರೆಂಬ ಭಾವನೆ ಎಲ್ಲರಿಗೂ ಬರುತ್ತಿದೆ. ಇವತ್ತಿ ದಿವಸ ಉದ್ಯೋಗಖಾತ್ರಿ ಯೋಜನೆಗೆ ಗ್ರಾಮಪಂಚಾಯತಿಯವರೆ ಕ್ರಿಯಾ ಯೋಜನೆಯನ್ನು ಮಾಡುತ್ತಾರೆ. ಅಲ್ಲಿ ಏನಾಗುತ್ತದೆಂದು ನಮಗ್ಯಾರಿಗೂ ಸಹ ಇದುವರೆಗೂ ಗೊತ್ತಿಲ್ಲ. ನಾನು ಇದನ್ನು ಪ್ರತಿ

ವರ್ಷ ನೋಡುತ್ತಿದ್ದೇನೆ. ಅವರಿಗೆ ನೀವು ಹಣ ಕೊಡುತ್ತೀರಿ. ಅವರವರ ಸಭೆ ಮಾಡಿ ಕ್ರಿಯಾಸಯೋಜನೆಯನ್ನು ತಯಾರು ಮಾಡುತ್ತಾರೆ. ಅವರ್‍ಯಾರು ನಮ್ಮನ್ನು ಮಾತನಾಡಿಸುವುದಿಲ್ಲ. ನಾವು ಮಾತನಾಡಿಸುವುದಕ್ಕೆ ಹೋದರೆ ಈ ವಿಷಯವನ್ನು ಅವರು ನಮಗೆ ಹೇಳುವುದಿಲ್ಲ.

(ಗೊಂದಲ)

ಅಧ್ಯಕ್ಷರು: ಆಯಿತು, ತಾವು ಕುಳಿತುಕೊಳ್ಳಿ.

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್: ಮಾನ್ಯ ಉಮೇಶ್ ವಿ. ಕತ್ತಿಯವರೆ, ಮಾಡುವುದಕ್ಕೆ ಅವಕಾಶ ಇಲ್ಲವೆಂದು ಇಲ್ಲ. ಆದರೆ, ಅವರ ಮನವೊಲಿಸಿದರೆ ಮಾಡುವುದಕ್ಕೆ ಅವಕಾಶ ಇದೆ. ಆದ್ದರಿಂದ ಅದನ್ನು ಮಾಡಬೇಕೆಂಬುದು ನನ್ನ ಸಲಹೆ ಆಗಿದೆ. ನನ್ನ ಸಲಹೆಯನ್ನು ಅವರು ತೆಗೆದುಕೊಳ್ಳಲಿ ಅಥವಾ ಬಿಡಲಿ ಅದನ್ನು ಅವರಿಗೆ ಬಿಡುತ್ತೇನೆ. ಮತ್ತೊಂದು ವಿಚಾರ ಏನೆಂದರೆ, ಮೊನ್ನೆದಿವಸ ಮಾನ್ಯ ಮುಖ್ಯ ಮಂತ್ರಿಗಳು ರೈತರ ಸಾಲ ಮನ್ನಾದ ಬಗ್ಗೆ ಘೋಷಣೆ ಮಾಡಿದರು. ಆದರೆ, ಘೋಷಣೆ ಮಾಡಿರುವುದರಲ್ಲಿ ಒಂದು ಸ್ಪಷ್ಟೀಕರಣ ಇಲ್ಲ. ಏನೆಂದರೆ, ನಾವು ಆಗಸ್ಟ್ ತಿಂಗಳಿಂದ ಜೂನ್ ತಿಂಗಳವರೆಗೆ ಸಾಲ ತೆಗೆದುಕೊಂಡು ಮರುಪಾವತಿ ಮಾಡದೆ ಇರುವವರಿಗೆ ಮಾತ್ರ ಮಾಡುತ್ತೇವೆಂದು ಹೇಳಿದ್ದಾರೆ. ಇದು ನನಗೆ ಅರ್ಥವಾಗುತ್ತಿಲ್ಲ. ಕಳೆದ ಜೂನ್‌ನಿಂದ ಇಲ್ಲಿಯವರೆಗೆ ನಾವು ಬರಗಾಲದಲ್ಲಿದ್ದೇವೆ. ಸಾಲ ಮನ್ನಾ ವಿಷಯ ಒಂದು ಸಾಲಿನಲ್ಲಿ ಇರಬೇಕಾಗಿತ್ತು. ರಾಜ್ಯದಲ್ಲಿ ರೈತರು ಪಡೆದಿರುವ ಸಾಲವನ್ನು ಮನ್ನಾ ಮಾಡುತ್ತೇವೆಂದು ಹೇಳಿದ್ದರೆ ಮುಗಿದು ಹೋಗುತ್ತಿತ್ತು. ಕೇಂದ್ರ ಸರ್ಕಾರ ಇಡೀ ದೇಶದಲ್ಲಿ 70 ಸಾವಿರ ಕೋಟಿ ರೂಪಾಯಿ ಸಾಲವನ್ನು ಮನ್ನಾ ಮಾಡಿತ್ತು ಮಾನ್ಯ ಉಮೇಶ್ ಕತ್ತಿಯವರಿಗೆ ಇದು ನೆನಪಿರಬೇಕೆಂದು ತಿಳಿದುಕೊಂಡಿದ್ದೇನೆ. ಆದ್ದರಿಂದ, ಇದು one line ಆಗಿರಬೇಕಿತ್ತು. ಅಂದರೆ, ಮುಖ್ಯ ಮಂತ್ರಿಗಳು ಏನು ಹೇಳಬೇಕಾಗಿತ್ತೆಂದರೆ ಒಂದು ವೇಳೆ Co operative Banks, Co-operative sector ನಲ್ಲಿ ಮಾಡಬೇಕೆಂದಿದ್ದರೆ ಯಾರ್‍ಯಾರು ರೈತರು Co-operative sector ನಲ್ಲಿ ಸಾಲ ತೆಗೆದುಕೊಂಡಿದ್ದರೆ ಅದರಲ್ಲಿ 25 ಸಾವಿರ ರೂಪಾಯಿಯವರೆಗೆ ಮನ್ನಾ ಮಾಡುತ್ತೇವೆಂದು ಹೇಳಿದ್ದರೆ We would have welcomed it. ಆದರೆ, ಇವತ್ತಿನ ದಿವಸ ಆ date ಈ date ಹಾಕಿ ಅದು ಯಾರಿಗೆ ಸಿಗುತ್ತದೆ, ಯಾರಿಗೆ ಸಿಗುವುದಿಲ್ಲ. ಸೃಷ್ಟಿ

ಮಾಡುವ ಉದ್ದೇಶದಿಂದ ಮಾಡಿದ್ದರೆ ಏಕೆಂದರೆ ನೀವು ರೈತರಿಗೆ ಸ್ಪಷ್ಟವಾಗಿ ತಿಳಿಸಬೇಕು. ಅಂದರೆ, ರೈತ copoperative sector ನಿಂದ ಸಾಲ ತೆಗೆದುಕೊಂಡಿರುವುದರಲ್ಲಿ 25 ಸಾವಿರ ರೂಪಾಯಿಯವರೆಗೆ ಮನ್ನಾ ಮಾಡುತ್ತೇವೆಂದು ಹೇಳಿದ್ದರೆ we wood have welcomed it. ಆದರೆ ಏತಕ್ಕಾಗಿ ಈ ರೀತಿಯಾದ ಗೊಂದಲವನ್ನು ಸೃಷ್ಟಿ ಮಾಡುತ್ತಿದ್ದಾರೆ ನನಗಂತೂ ಅರ್ಥವಾಗುತ್ತಿಲ್ಲ. ಇವರಿಗೆ ಯಾರು advise ಮಾಡುತ್ತಿದ್ದಾರೆಯೋ ಏತಕ್ಕೆ ಈ ರೀತಿಯಾಗಿ ಮಾಡುತ್ತಿದ್ದಾರೆಂದು ನನಗೆ ಗೊತ್ತಿಲ್ಲ. ಮಾನ್ಯ ಮುಖ್ಯಮಂತ್ರಿಗಳು ರಿಪ್ಲೈ ಕೊಡುವಂಥ ಸಂದರ್ಭದಲ್ಲಿ ದಯವಿಟ್ಟು ಇದರ ಬಗ್ಗೆ ಕ್ಲಾರಿಪೈ ಮಾಡಬೇಕು.

ಶ್ರೀ ಬಿ.ಜೆ. ಪುಟ್ಟಸ್ವಾಮಿ (ಸಹಕಾರ ಸಚಿವರು) : ಮಾನ್ಯ ಶರಣಪ್ರಕಾಶ್ ರುದ್ರಪ್ಪ ಪಾಟೇಲ್‌ರವರೆ, ಮಾನ್ಯ ಮುಖ್ಯಮಂತ್ರಿಯವರು ಹೇಳಿರುವುದು ಕ್ಲಿಯರ್ ಅಗಿದೆ. ಅದೇನೆಂದರೆ, ದಿನಾಂಕ 1-08-2011 ರಿಂದ 31-06-2012 ರ ವರೆಗೆ ಕೃಷಿ ಸಾಲ ತೆಗೆದುಕೊಂಡಿದ್ದರೆ ಅದರಲ್ಲಿ 25 ಸಾವಿರ ರೂಪಾಯಿ ಮನ್ನಾ ಮಾಡುತ್ತೇವೆಂದು ಹೇಳಿದ್ದಾರೆ.

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್: ಈ ರೀತಿಯಾಗಿದ್ದರೆ ನನ್ನದೇನೂ ಅಭ್ಯಂತರ ಇಲ್ಲ. ಏಕೆಂದರೆ, ನಿನ್ನೆದಿವಸ ನಮ್ಮ ಗುಲ್ಬರ್ಗಾ ಜಿಲ್ಲೆಯಲ್ಲಿ ನಾನು enquiry ಮಾಡಿದೆ. ಇವತ್ತು ಡಿಸಿಸಿ ಬ್ಯಾಂಕ್ ನಲ್ಲಿ, ನಮ್ಮ ಜಿಲ್ಲೆಯಲ್ಲಿ ಎಲ್ಲಕ್ಕಿಂತ ಕಡಿಮೆ ಇದೆ 125 ಕೋಟಿ ರೂಪಾಯಿ ಸಾಲ ಕೊಟ್ಟಿದ್ದಾರೆ, ಆದರೆ ಸಾಲ ಕೊಡುವ ಅವಧಿ ಯಾವುದೆಂದರೆ, 1 ಏಪ್ರಿಲ್ 31ನೇ ಮಾರ್ಚಿಗೆಲ್ಲಾ ಕ್ಲಿಯರ್ ಮಾಡಬೇಕು. 1 ಏಪ್ರಿಲ್‌ಗೆ ಸಾಲ ಕೊಟ್ಟಿದ್ದಾರೆ. ಹಾಗಾದರೆ, ನೀವು ನಮ್ಮ ಹತ್ತಿರ ಜೂನ್‌ನಲ್ಲಿ ಸಾಲವನ್ನೇ ತೆಗೆದುಕೊಳ್ಳುವುದಿಲ್ಲ. ಆಗಸ್ಟ್‌ನಲ್ಲಿ ತೆಗೆದುಕೊಳ್ಳಬೇಕಾದರೆ, ಹಿಂಗಾರಿಗೆ ತೆಗೆದುಕೊಳ್ಳುತ್ತಾರೆ.

ಶ್ರೀ ಬಿ.ಜೆ. ಪುಟ್ಟಸ್ವಾಮಿ: ಕ್ಲಿಯರ್ ಮಾಡಿರುವವರು ಪುನಃ ಸಾಲ ತೆಗೆದುಕೊಂಡಿರುತ್ತಾರಲ್ಲ. ಸಾಲ ತೆಗೆದುಕೊಂಡಿರುವವರು ಎಲಿಜಿಬಲ್ ಇರುತ್ತಾರೆ.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: ಎಲಿಜಿಬಲ್ ಇರುತ್ತಾರೆಂದರೆ ಅಭ್ಯಂಥರವಿಲ್ಲ. ಅದಕ್ಕೆ ನೀವು ಯಾರಾದರು ರೂ. 25,000 ಸಾಲವಿದೆ ಎಲ್ಲಾ ಮನ್ನ ಮಾಡುತ್ತೇವೆಂದು ಸ್ಪಷ್ಟವಾಗಿ ಹೇಳಬೇಕಾಗಿತ್ತು. ನಾನು ಇವತ್ತು ವಿರೋಧ ಪಕ್ಷದಲ್ಲಿದ್ದೇನೆಂದು ಸರ್ಕಾರದ ಮೇಲೆ ಗೂಬೆ ಕೂರಿಸಲು ಹೇಳುತ್ತಿಲ್ಲ. ಇವತ್ತು

ಸರ್ಕಾರ ಸಾಲ ಮನ್ನಾ ಮಾಡಿದೆ ಎಂದರೆ, we welcome it. It is a positive step ಎಕೆಂದರೆ, ನೀವೊಂದು ಒಳ್ಳೆಯ ನಿರ್ಧಾರವನ್ನು ತೆಗೆದುಕೊಂಡಿದ್ದೀರಿ, ಆದರೆ ಒಂದೇ ಒಂದು ಸ್ಪಷ್ಟೀಕರಣವನ್ನು ಮಾನ್ಯ ಮುಖ್ಯಮಂತ್ರಿಗಳು ಕೊಡಬೇಕು.

ಶ್ರೀ ಸಿ.ಟಿ. ರವಿ (ಉನ್ನತ ಶಿಕ್ಷಣ ಸಚಿವರು): ಡಾಕ್ಟರೇ ಬರೀ ಪ್ರಶಂಸೆ ಮಾಡಿದರೆ ಸಾಲದು. ಕೇಂದ್ರದಲ್ಲಿ ತಮ್ಮ ಪ್ರಭಾವವಿದೆ, ಕೇಂದ್ರ ಸಚಿವರಾಗಿ ತಮ್ಮ ಗುರುಗಳಿದ್ದಾರೆ ಅವರಿಗೆ ಹೇಳಿ. ಇಡೀ ದೇಶದಲ್ಲಿ ಬರಗಾಲವಿದೆ ರಾಷ್ಟ್ರೀಕೃತ ಬ್ಯಾಂಕುಗಳ ಮೂಲಕವೂ ಕೇಂದ್ರ ಸರ್ಕಾರ ಸಾಲ ಮನ್ನಾ ಮಾಡುವುದನ್ನು ಘೋಷಣೆ ಮಾಡಿಸಿದರೆ ನಿಜವಾದ ಕಳಕಳಿ ಎನಿಸುತ್ತದೆ. ಇಲ್ಲದಿದ್ದರೆ, ನೀವು ಇಲ್ಲಿ ಹೇಳುವುದಕ್ಕೆ ಮಾತ್ರ ಮಾಡುವವರಲ್ಲವೆನ್ನುವ ಭಾವನೆ ಬರುತ್ತದೆ. ಹಾಗೆ ಬರಬಾರದು ಎಂದಿದ್ದಾರೆ, ದಯಮಾಡಿ, ಅಲ್ಲಿಂದಲೇ ಸಾಲ ಮನ್ನಾ ಮಾಡಿಸುವಂಥ ಆದೇಶ ಹೊರಡಿಸಿದರೆ, ರೈತರು ಅಪ್ಪನ ಕೈಯಲ್ಲಿ ತಿಂದರೇನು ಅಮ್ಮನ ಕೈಯಲ್ಲಿ ತಿಂದರೇನು? ಎಲ್ಲಾ ಕಡೆಯಿಂದ ರೈತರಿಗೆ ಲಾಭ, ಅನುಕೂಲವಾಗಬೇಕು. ಆ ಕಾಳಜಿಗೆ ನಿಜವಾದ ಅರ್ಥವಿರುತ್ತದೆ, ದಯಮಾಡಿ ಮಾಡಿಸಿ.

ಡಾ: ಶರಣ ಪ್ರಕಾಶ ರುದ್ರಪ್ಪ ಪಾಟೀಲ್: ಮಾನ್ಯ ರವಿಯವರು ಹೇಳಿರುವುದನ್ನು ನಾವು ಅಕ್ಸೆಪ್ಟ್ ಮಾಡುತ್ತೇವೆ, ಖಂಡಿತವಾಗಿ ಪ್ರಯತ್ನ ಮಾಡೋಣ, ಹಿಂದಿನದನ್ನು ಒಂದೇ ಒಂದು ನೆನಪು ಮಾಡಿಸುತ್ತೇನೆ, ಹಿಂದೆ ಕೇಂದ್ರ ಸರ್ಕಾರ 70,000 ಕೋಟಿ ಸಾಲ ಮನ್ನಾ ಇಡೀ ದೇಶದಲ್ಲಿ ಮಾಡಿತ್ತು.

ಶ್ರೀ ಬಿ.ಜೆ. ಪುಟ್ಟಸ್ವಾಮಿ: ಕರ್ನಾಟಕ ರಾಜ್ಯಕ್ಕೆ 70,000 ಕೋಟಿ ಸಾಲ ಮನ್ನಾ ಮಾಡಿದರೆ? ಕರ್ನಾಟಕದ್ದು ಎಷ್ಟು? ಈಗ 19,000 ಕೋಟಿಯದು ಇದೆಯಲ್ಲಾ ಅದನ್ನು ಮಾಡಿಸಿ.

ಶ್ರೀ ತನ್ವೀರ್ ಸೇಠ್: ಈಗ ಬೇರೆಯದನ್ನು ಮಾತನಾಡುವುದು ಬೇಡ, ಕೇಂದ್ರ ಸರ್ಕಾರ ಮಾಡುವುದಕ್ಕೆ ಈಗ ರವಿಯವರು ಏನು ಹೇಳಿದ್ದಾರೆ. ನಮ್ಮ ಪ್ರಭಾವವೇನಿದೆಯೋ ಅದನ್ನು ಮಾಡೋಣ ಈ ರಾಜ್ಯದಲ್ಲಿ ನಮ್ಮ ಸರ್ಕಾರ ಏನು ಮಾಡಬೇಕೆನ್ನುವುದನ್ನು ತಿಳಿದುಕೊಳ್ಳೋಣ.

ಶ್ರೀ ಲಕ್ಷ್ಮಣ ಸವದಿ: 70,000 ಕೋಟಿ ಸಾಲ ಮನ್ನಾ ಮಾಡಿದ್ದರಲ್ಲಿ ಕರ್ನಾಟಕ ರಾಜ್ಯಕ್ಕೆ ಎಷ್ಟು ಬಂತು?

ಶ್ರೀ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: ಅದನ್ನು ನೀವು ಹೇಳಬೇಕು, ಏಕೆಂದರೆ, ನಮಗೆ ಅಂಕಿ ಅಂಶಗಳನ್ನು ಸರಿಯಾಗಿ ಕೊಡುತ್ತಿಲ್ಲ.

ಶ್ರೀ ಲಕ್ಷ್ಮಣ ಸವದಿ: ಕರ್ನಾಟಕಕ್ಕೆ ಆ ದುಡ್ಡೇ ಬರಲಿಲ್ಲ.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: ಏತಕ್ಕೆ ಬರಲಿಲ್ಲ?

ಶ್ರೀ ಲಕ್ಷ್ಮಣ ಸವಧಿ: ಕಾರಣ, ಜಾಯಿಂಟ್ ಸರ್ಕಾರದಲ್ಲಿ ನಾವು ಸಾಲ ಮನ್ನಾ ಮಾಡಿದ್ದು ನಮಗೂ ವಾಪಸ್ ಕೊಡಿ ಎಂದರೆ ಮಾಡಲೇ ಇಲ್ಲ.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: ನೀವು ಮೊದಲೇ ಅಡ್ವಾನ್ಸ್ ಆಗಿ ಮಾಡಿದಿರಿ, ನಿಮಗೆ ತಾಳ್ಮೆ ಇರಲಿಲ್ಲ, ನೀವು ಸುಮ್ಮನಿದ್ದರೆ ನಮ್ಮ ರಾಜ್ಯಕ್ಕೆ ಹತ್ತಾರು ಕೋಟಿ ಬರುತ್ತಿತ್ತು., ಸಹಕಾರ ಸಚಿವರು ನಮ್ಮ ವಿತ್ರರು.

ಶ್ರೀ ಸಿ.ಟಿ. ರವಿ: ಯು.ಪಿ.ಎ. ಛೇರ್ಮನ್ ಅವರು ರಾಜ್ಯಕ್ಕೆ ಭೇಟಿ ಕೊಟ್ಟಾಗ ಇಡೀ ರಾಜ್ಯದ ಬಗ್ಗೆ ಸಮೀಕ್ಷೆ ಮಾಡಿದ್ದರು> ಅಲ್ಲಿಂದ ಗುರುಗಳ ಆಶೀರ್ವಾದ ಪಡೆದು, ಬರ ಪ್ರದೇಶಕ್ಕೆ ಭೇಟಿ ಕೊಟ್ಟು, ಬರದ ಬವಣೆಯನ್ನು ಕಣ್ಣಾರೆ ಕಂಡು ಕಣ್ಣೀರು ಹಾಕಿದ ನಂತರ ಖಂಡಿತವಾಗಿ ಯು.ಪಿ.ಎ. ಛೇರ್ಮನ್ ಅವರು ಪ್ರಧಾನ ಮಂತ್ರಿಗಳಿಗೆ ಹೇಳಿ ಕರ್ನಾಟಕ ರಾಜ್ಯಕ್ಕೆ ಒಂದು special package ಕೊಡಿಸುತ್ತಾರೆಂದು ಕಾತುರದಿಂದ ಕಾಯುತ್ತಿದ್ದೇವೆ. ತಿಂಗಳು ಉರುಳಿ ಹೋದವು special package ಬರಲಿಲ್ಲ. ನಿಮ್ಮ ಎಲ್ಲರ ಗೌರವದ ಪ್ರಶ್ನೆ. ಅವರ ಕಣ್ಣೀರಿಗೆ ಬೆಲೆ ಬರಬೇಕು ಎಂದರೆ ನೀವೆಲ್ಲರೂ ಧರಣಿ ಕುಳಿತಾದರೂ ಸರಿ, ಹೆಚ್ಚು ಎಂದರೆ ನಿಮ್ಮನ್ನು ಕಾಂಗ್ರೆಸ್‌ನಿಂದ ಹೊರಗೆ ಹಾಕಬಹುದು. ಆದರೆ ರಾಜ್ಯದ ಜನರು ನಿಮ್ಮನ್ನು ಮೆಚ್ಚುತ್ತಾರೆ. ಧರಣಿ ಕುಳಿತಾದರೂ ಸರಿ ಕರ್ನಾಟಕ ರಾಜ್ಯಕ್ಕೆ special package ತನ್ನಿ ಆಗ ಖಂಡಿತಾ ಆ ಕಣ್ಣೀರಿಗೆ ಬೆಲೆ ಬರುತ್ತದೆ. ಇಲ್ಲದಿದ್ದರೆ ಕಣ್ಣೀರು ಒಂದೊಂದು ರೀತಿ ನಾಟಕದಲ್ಲಿ ಗ್ಲಿಸರಿನ್ ಹಾಕಿಕೊಂಡು ಕಣ್ಣೀರು ಹಾಕುತ್ತಾರಲ್ಲ. ಆ ರೀತಿ ಅನಿಸುತ್ತದೆ. ನಿಜವಾದ ಕಾಳಜಿ ಇರುವುದನ್ನು ನಾನು ಒಪ್ಪುತ್ತೇನೆ, ದಯಮಾಡಿ ಕಣ್ಣೀರಿಗೆ ಬೆಲೆ ಬರುವ ರೀತಿಯಲ್ಲಿ 25,000 ಕೋಟಿ ರೂಪಾಯಿಗಳ ಪ್ಯಾಕೇಜ್ ಕೊಡಿಸಿ ರಾಜ್ಯಕ್ಕೆ ಲಾಭವಾಗುತ್ತದೆ.

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದಲ್ಲಿ ಬರ ಬಂದ ಹಿನ್ನೆಲೆಯಲ್ಲಿ ಇವತ್ತು ಸಾಲ ಮನ್ನಾ ಮಾಡಿದ್ದೀರಿ. ಇವತ್ತು ನಾವು ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಸಾಲ ಮನ್ನಾ ಮಾಡಬೇಕಾದಾಗ, ಇದು ರಾಜ್ಯಕ್ಕೆ ಸೀಮಿತವಾದುದ್ದಲ್ಲ.

ದೇಶಕ್ಕೆ ಸೀಮಿತವಾದುದು. ಯಾವ ರಾಜ್ಯವೆನ್ನುವ ಪ್ರಶ್ನೆ ಅಲ್ಲ. ಇಡೀ ದೇಶಕ್ಕೆ ಮಾಡಬೇಕಾಗುತ್ತದೆ. ಯಾವ್ಯಾವ ಸಂದರ್ಭದಲ್ಲಿ ಭಾರತ ಸರ್ಕಾರ ಸಾಲ ಮನ್ನಾ ಮಾಡಿದೆ, ಅದು ಇಡೀ ದೇಶಕ್ಕೆ ಅನ್ವಯಿಸುತ್ತದೆ. ಹಾಗಾಗಿ ಈ ಸಾರಿ 8 ರಾಜ್ಯಗಳಲ್ಲಿ ಮಳೆ ಕೊರತೆಯಾಗಿ ಮುಂಗಾರು ಮಳೆ ವಿಫಲವಾದ ಹಿನ್ನೆಲೆಯಲ್ಲಿ ಕಾಲಪಕ್ವವಾಗಿದೆ ಅದನ್ನು ಅರ್ಜ್ ಮಾಡುವುದಕ್ಕೆ ಕಾಲಪಕ್ವವಾಗಿದೆ, ನಾವು ಇಲ್ಲವೆನ್ನುವ ಮಾತನ್ನು ಹೇಳುತ್ತಿಲ್ಲ. ಭಾರತ ಸರ್ಕಾರವೂ ಕೂಡ ರಾಷ್ಟ್ರೀಕೃತ ಬ್ಯಾಂಕ್‌ಗಳ ಸಾಲವನ್ನು ಇವತ್ತು ಮನ್ನಾ ಮಾಡುವುದಕ್ಕೆ ಮುಂದಾದಲ್ಲಿ ಒಳ್ಳೆಯದು ಅದಾಗಬೇಕೆನ್ನುವ ಒತ್ತಾಯಹನ್ನು ನಾವು ಮಾಡುವಂತಹವರು. ಆ ಯಾವ ವಿಚಾರದಲ್ಲಿ ನಾವು ಹಿಂದೆ ಹೇಳುವ ಪ್ರಶ್ನೆ ಇಲ್ಲ. ಈಗ ನೀವು ಒಳ್ಳೆಯ ಕೆಲಸವನ್ನು ಮಾಡಿದ್ದೀರಿ, ಈಗ ಸಾಲ ಮನ್ನಾ ಮಾಡಬೇಕಾದಾಗ, ಈಗಾಗಲೇ ಮುಖ್ಯಮಂತ್ರಿಗಳು ಉತ್ತರ ಕೊಡುವ ಸಂದರ್ಭದಲ್ಲಿ, ಇನ್ನು ಎರಡು ದಿವಸ ಸಮಯವಿದೆ, ಹಣಕಾಸು ಬಿಲ್ ಮೇಲೆ ಉತ್ತರ ಕೊಡುವ ಸಂದರ್ಭದಲ್ಲಿ ಇನ್ನೂ ಹೆಚ್ಚು ಸೇರಿಸಿ ರೈತರಿಗೆ ಕೊಡುವ ರೀತಿಯಲ್ಲಿ ನಾವು ತೆರೆದ ಮನಸ್ಸಿನಿಂದ ಮಾತನಾಡುತ್ತೇವೆನ್ನುವ ಮಾತನ್ನು ಹೇಳಿದ್ದಾರೆ, ಅದು ಒಳ್ಳೆಯದು ನಾವು ಸ್ವಾಗತ ಮಾಡುತ್ತೇವೆ. ಈ ಎಲ್ಲಾ ವಿದ್ಯಮಾನಗಳನ್ನು ಕೂಡ ನಾವು ಕೇಂದ್ರ ಸರ್ಕಾರಕ್ಕೆ ಮನವರಿಕೆ ಮಾಡುವ ಕೆಲಸವನ್ನು ಮಾಡಿದರೆ ಖಂಡಿತವಾಗಿಯೂ ಕೂಡ ಕೇಂದ್ರ ಸರ್ಕಾರ ಸಹಾಯಕ್ಕೆ ಬರುತ್ತದೆ. ಏಕೆಂದರೆ, ಇವತ್ತು 8 ರಾಜ್ಯದಲ್ಲಿ ಇವತ್ತು ಮಳೆ ವಿಫಲವಾಗಿದೆ. ಈಗಾಗಲೇ ಅದನ್ನು ಪ್ರಧಾನ ಮಂತ್ರಿಗಳಿಗೂ ಕೂಡ ರಿವ್ಯೂ ಮಾಡಿ ಸೀರಿಯಸ್ ಅಗಿ ಇದನ್ನು ತೆಗೆದುಕೊಳ್ಳಬೇಕೆನ್ನುವ ಆದೇಶವನ್ನು ಕೂಡ ಪಾರ್ಲಿಮೆಂಟರಿ ಸೆಕ್ರೆಟೇರಿಯೇಟ್‌ನಲ್ಲಿ ಕೊಟ್ಟಿದ್ದಾರೆ. ನಮ್ಮ ರಾಜ್ಯದ ಬೆಳವಣಿಗೆಯ ಬಗ್ಗೆ ನೋಡಬೇಕು. ನೀವು ಇನ್ನೊಂದು ಮಾತನ್ನು ಹೇಳಿದಿರಿ, ಸೋನಿಯಾ ಗಾಂಧಿ, ಯು.ಪಿ.ಎ. ಛೇರ್ಮನ್ ಅವರು ಬಂದು ಹೋದರು. 25,000 ಕೋಟಿ ರೂಪಾಯಿಗಳನ್ನು ಕೊಡಿಸಬೇಕೆಂದು ಹೇಳಿದಿರಿ.

ಶ್ರೀ ಸಿ.ಟಿ. ರವಿ: ನೀವು ಕೊಡಿಸೇ ಕೊಡಿಸುತ್ತೀರೆನ್ನುವ ಬಲವಾದ ನಂಬಿಕೆ ಇದೆ. ನೀವು ಮರೆತುಬಿಟ್ಟಿದ್ದೀರೆನೋ ಎಂದು ನೆನಪು ಮಾಡಿದೆ.

ಶ್ರೀ ಟಿ.ಬಿ. ಜಯಚಂದ್ರ: ತಾವು ಮಂತ್ರಿಯಾಗಿದ್ದೀರಿ, ಭಾರತ ಸರ್ಕಾರ ಯಾವುದೇ ಕೆಲಸ ಮಾಡಬೇಕಾದರೂ ಒಂದು ನಿಯಮಾವಳಿಯ ಚೌಕಟ್ಟಿನಲ್ಲಿ

ಮಾಡುವುದು. 13ನೇ ಹಣಕಾಸಿನದಿರಬಹುದು ಅಥವಾ ಈ ರೀತಿಯಾದ ಬರ ಬಂದಂಥ ಸಂದರ್ಭದಲ್ಲಿ ಸ್ಟಡಿ ಟೀಂ ಕೊಡುವ ವರದಿಯನ್ನು ಆಧರಿಸಿಯೇ ಅವರು ವರದಿಯನ್ನು ಕೊಡುವುದು. ಆ ಪ್ರಕಾರವೇ ಇವತ್ತು 292 ಕೋಟಿ ಇಲ್ಲಿಯವರೆವಿಗೂ 471 ಕೋಟಿ ಬರುವುದು ಆ ಕಾರಣಕ್ಕೋಸ್ಕರವೇ. ನಾನು ಬೆಳಿಗ್ಗೆ ಮಾತನಾಡುವಾಗ ನೀವು ಹೊಸ ಕಾಲೇಜಗಳಿಗೆ ಹೆಚ್ಚು ಹಣ ತರಬೇಕೆಂದು ಹೇಳಿದೆ. ದಯಮಾಡಿ, ಭಾರತ ಸರ್ಕಾರದ ಯೋಜನೆಗಳೇನಿವೆ, ಅವನ್ನು ಅಧ್ಯಯನ ಮಾಡಿ, ಒಂದು ನಿಯಮಾವಳಿ ಪ್ರಕಾರ ಮಾಡುತ್ತಾರೆ. ಕೇಂದ್ರದಲ್ಲಿ ಯು.ಪಿ.ಎ. ಇರಲಿ ಎನ್‌ಡಿಎ ಇರಲಿ, ಎನ್.ಡಿ.ಎ. ಇದ್ದಂಥ ಸಂದರ್ಭದಲ್ಲೂ ಕೂಡ ನಾವು ಇಲ್ಲಿ ರಾಜ್ಯಭಾರ ಮಾಡುತ್ತಿದ್ದೇವು. ಆಗಲೂ ಕೂಡ same prcedure ಪಾಲಿಸಲಾಗುತ್ತಿತ್ತು. Government of India works under a system ಆ ಸಿಸ್ಟಂಗೆ ಅನುಗುಣವಾಗಿ ನಾವು ಹೋಗಬೇಕು. ನೀವು ಏನು ತಪ್ಪು ಮಾಡಿದ್ದೀರಿ? ಕೃಷಿ ಮಂತ್ರಿಗಳು ಇಲ್ಲಿದ್ದಾರೆ, ನಾನು ಹೇಳುತ್ತೇನೆ., ಸ್ಟಡಿ ಟೀಂ ಕಳುಹಿಸಬೇಕಾದಾಗ, ಸ್ಟಡಿ ಟೀಂ ಬಗ್ಗೆ ನೀವು memorandum ಕೊಡುವಾಗ ಕೇಂದ್ರಕ್ಕೆ ಒತ್ತಾಯ ಮಾಡಲಿಲ್ಲ. ಮಳೆ ಬಂದ ಮೇಲೆ ಟೀಂ ಅನ್ನು ಕರೆದುಕೊಂಡು ಬಂದಿರಿ, ಅಲ್ಲಿ ಲೋಪವಿದೆ. ಅದು ಏಕಾಯಿತು ಎಂದರೆ, ನಿಮ್ಮ ಆಂತರಿಕ ಒಳಜಗಳ ಪ್ರಮುಖವಾಯಿತೇ ವಿನಹಾ ರಾಜ್ಯದ ಹಿತ ನಿಮಗೆ ಬೇಕಾಗಿರಲಿಲ್ಲ. ನೀವು ಮಾಡಿದ ತಪ್ಪಿನಿಂದ ನಮಗೆ ಬರಬೇಕಾದ್ದು ತಪ್ಪುತ್ತಿದೆ ಎನ್ನುವುದನ್ನು ಅರ್ಥ ಮಾಡಿಕೊಳ್ಳಿ.

ಶ್ರೀ ಉಮೇಶ್ ವಿ. ಕತ್ತಿ: ಕೇಂದ್ರ ಸರ್ಕಾರ ಕಾನೂನು ಚೌಕಟ್ಟಿನಲ್ಲಿ ಕೆಲಸ ಮಾಡುವಾಗ ರಾಜ್ಯ ಸರ್ಕಾರ ಅದನ್ನು ಬಿಟ್ಟು ಕೆಲಸ ಮಾಡುವುದಕ್ಕಾಗುತ್ತದೆಯೇ? ನಾವು ಕೂಡ ಕಾನೂನಿನ ಚೌಕಟ್ಟಿನ ಅಡಿಯಲ್ಲೇ ಮಾಡುವುದು. ಕೇಂದ್ರ ಸರ್ಕಾರದ ತಂಡವನ್ನು ನಾವು ಕರೆದ್ದದ್ದಲ್ಲ.ಅವರು ಕಳುಹಿಸಿದ ಟೀಂ ಮಳೆಗಾಲದಲ್ಲಿ ಬಂದರೆ ನಾವೇನು ಮಾಡುವುದಕ್ಕಾಗುತ್ತದೆ?

ಶ್ರೀ ಟಿ.ಬಿ. ಜಯಚಂದ್ರ: ಇವರು ಏನು memorandum ಕೊಟ್ಟಿದ್ದರೆನ್ನುವುದನ್ನು ನಾವು ಕೂಡ ನೋಡಿದ್ದೇವೆ, ಒಂದು ಬಾಂಡ್ ಪೇಪರ್‌ನಲ್ಲಿ ಕೊಟ್ಟಿದ್ದಾರೆ. ಅದರಲ್ಲಿ ಯಾವುದೇ ಅಂಕಿಅಂಶಗಳಿಲ್ಲ. ನಿಮಗೆ ರಾಜ್ಯದ ಜನರ ಬಗ್ಗೆ ಎಷ್ಟು ಕಳಕಳಿ ಇದೆಯೋ ನಮ್ಮ ಕೇಂದ್ರ ಸರ್ಕಾರವಿದ್ದಂಥ ಸಂದರ್ಭದಲ್ಲಿ ನಮ್ಮ ಮಂತ್ರಿಗಳ ಹತ್ತಿರ ಅದನ್ನು ಪ್ರಸ್ತಾಪ ಮಾಡೇ ಮಾಡುತ್ತೇವೆ. ನೀವು ಕೊಟ್ಟಿರುವ memorandum ಅನ್ನು ತರಿಸಿ

ನೋಡಿ. is it in accordance with the law, is it in accordance with the procedure of the Government of India ಎಂದು ನೋಡಿ. ಮುಖ್ಯಮಂತ್ರಿಗಳು ರಾಜ್ಯಕ್ಕೆ ಪ್ರಧಾನಮಂತ್ರಿಗಳನ್ನು ನೋಡುವುದಕ್ಕೆ ಹೋದರು, ಆಗ ಒಂದು ಅರ್ಜಿ ಕೊಟ್ಟರು, ಅದು ಮನವಿಯಾಗುವುದಿಲ್ಲ.

ಶ್ರೀ ಸಿ.ಟಿ. ರವಿ: ವಸ್ತುಸ್ಥಿತಿ ನಿಮಗೆ ಚೆನ್ನಾಗಿ ಗೊತ್ತು. ನಿಮಗೆ ಎಲ್ಲವನ್ನೂ ಮನವರಿಕೆ ಮಾಡುವಂತಹ ಸಾಮರ್ಥ್ಯವಿದೆ.

ಶ್ರೀ. ಟಿ.ಬಿ. ಜಯಚಂದ್ರ: ಸಭೆ ಕರೆಯಿರಿ ಚರ್ಚೆ ಮಾಡಿ ಈ ಎಲ್ಲಾ ವಿಚಾರಗಳು ಗೊತ್ತಾಗುತ್ತದೆ ಎನ್ನುವ ಉದ್ದೇಶಕ್ಕೆ ಹೇಳುತ್ತಿದ್ದದ್ದು ನಾವೂ ಇವತ್ತು ಕೂಡ ತಯಾರಿದ್ದೇವೆ. ನಿಮ್ಮ ಬಜೆಟ್ 90,000 ಕೋಟಿ. 1 ಲಕ್ಷ ಕೋಟಿ ಎಂದರೆ, ಭಾರತ ಸರ್ಕಾರ ಕೊಟ್ಟಿರುವುದನ್ನು ಅಕೌಂಟ್‌ಗೆ ತೆಗೆದುಕೊಂಡಿದ್ದರಿಂದ 1 ಲಕ್ಷ ಕೋಟಿ ಆಯಿತು. ನೀವು ಕೂಡ ಹಿಂದೆ ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಸದಸ್ಯರಾಗಿದ್ದಿರಿ. ನಾವು ಕೊಟ್ಟ recommendation ಮೇಲೆ ಅಕೌಂಟ್‌ಗೆ ತೆಗೆದುಕೊಂಡಿದ್ದಕ್ಕೆ 1 ಲಕ್ಷದ ಕೋಟಿ ಮೇಲೆ ಹೋಯಿತು. ಹಾಗಾಗಿ ಎಲ್ಲಾ ವಿಧದಲ್ಲೂ 90,000 ಕೋಟಿ ಮೇಲೆ ಹೋಗುವುದಿಲ್ಲ. ದಯಮಾಡಿ ಅರ್ಥ ಮಾಡಿಕೊಳ್ಳಿ. ನೀವು ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿ ಸದಸ್ಯರಾಗಿ ಪಾರ್ಟಿಸಿಪೇಟ್ ಮಾಡಿ ಆಕ್ಟಿವ್ ಆಗಿದ್ದವರು, ಹಣ ಹೇಗೆ ತರುವುದೆನ್ನುವುದರ ಬಗ್ಗೆ ಯೋಚನೆ ಮಾಡಬೇಕು.

ಶ್ರೀ ಸಿ.ಟಿ. ರವಿ (ಉನ್ನತ ಶಿಕ್ಷಣ ಸಚಿವರು) :– 66 ಸಾವಿರ ಕೋಟಿ ರೂಪಾಯಿಯ special package, ತಮ್ಮ ಪ್ರಭಾವ ಬಳಸಿ ಆ ರೀತಿ ಒಂದು special package ಕೊಡಿಸಿ.

(ಗೊಂದಲ)

ಅಧ್ಯಕ್ಷರು :– ಮಾನ್ಯ ಜಯಚಂದ್ರರವರೆ, ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ :– ಭಾರತ ಸರ್ಕಾರಕ್ಕೆ ಯಾವ ಸಂದರ್ಭದಲ್ಲಿ ಮನವಿ ಮಾಡಬೇಕು ಎನ್ನುವುದೇ ತಮಗೆ ಗೊತ್ತಿಲ್ಲ. ಬರ ಇದ್ದಾಗ ರೆಸಾರ್ಟ್‌ನಲ್ಲಿ ಕಾಲ ಕಳೆದುಬಿಟ್ಟು, ಮಳೆ ಬಂದಾಗ ಮನವಿ ಕೊಟ್ಟರೆ ಏನು ಮಾಡುತ್ತಾರೆ ? That is not the timing at all.

(ಗೊಂದಲ)

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ :– ಮಾನ್ಯ ಅಧ್ಯಕ್ಷರೆ, I am not yielding to anybody.

ಅಧ್ಯಕ್ಷರು :– ತಾವು yield ಆಗಬೇಡಿ.

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ :– ಮಾನ್ಯ ಅಧ್ಯಕ್ಷರೆ, ನಾನು yield ಆಗುವುದಿಲ್ಲ. ಆದರೆ ಅವರು ಎದ್ದುನಿಂತು ಮಾತನಾಡಿದರೆ ಏನು ಹೇಳುವುದಕ್ಕಾಗುತ್ತದೆ? ಮಾನ್ಯ ರವಿಯವರು ಯಾವ ಉದ್ದೇಶದಿಂದ ಹೇಳಿದ್ದಾರೋ ಗೊತ್ತಿಲ್ಲ. ಆದರೆ ನಿಮಗೆ ನಾನು ಸ್ವಲ್ಪ ನೆನಪಿಸುತ್ತೇನೆ. ಮೂರು ವರ್ಷಗಳ ಹಿಂದೆ ಈ ರಾಜ್ಯದಲ್ಲಿ floods ಬಂದಾಗ, ಇವತ್ತು ಕೇಂದ್ರ ಸರ್ಕಾರ ನಿಮಗೆ 1,800 ಕೋಟಿ ರೂಪಾಯಿಗಳನ್ನು ಕೊಟ್ಟಿತು. ಈ ರಾಜ್ಯದ ಜನ 300 ಕೋಟಿ ರೂಪಾಯಿಗಳನ್ನು ದಾನವಾಗಿ ಕೊಟ್ಟರು. 2,100 ಕೋಟಿ ರೂಪಾಯಿಗಳಲ್ಲಿ ಈ ರಾಜ್ಯಾದ್ಯಂತ ಸುಮಾರು 50,000–60,000 ಮನೆ ಜನ ಕಟ್ಟಿಸಿದರು. ಸರ್ಕಾರವಲ್ಲ. ರಾಜ್ಯ ಸರ್ಕಾರದಿಂದ ನೀವು ಒಂದು ನಯಾಪೈಸೆ ಖರ್ಚು ಮಾಡಲಿಲ್ಲ. ಇದರಿಂದ ನಿಮಗೆ ಎಷ್ಟು ಕಳಕಳಿ ಇದೆ ಎಂದು ತೋರಿಸುತ್ತಿದ್ದೀರಿ. Flood ಬಂದಾಗ ರಾಜ್ಯ ಸರ್ಕಾರದಿಂದ ಎಷ್ಟು ಹಣ ಖರ್ಚು ಮಾಡಿದ್ದೀರಿ ? If you prove me wrong, I will resign. ನೀವು ಒಂದು ನಯಾಪೈಸೆಯನ್ನು ಖರ್ಚು ಮಾಡಲಿಲ್ಲ. ಇವರು ಇವತ್ತು ಹೇಳುತ್ತಿದ್ದಾರೆ. I welcome this. ಏನೆಂದರೆ flood ಬಂದಾಗ ನೀವೂ ಏನೂ ಮಾಡಲಿಲ್ಲ. ಇವತ್ತು ಸಹಾಯ ಮಾಡಲಿಕ್ಕೆ ಹೊರಟಿದ್ದೀರಿ, we will welcome it. ನಾವು ಕೇಂದ್ರ ಸರ್ಕಾರದ ಮೇಲೆ ಒತ್ತಡ ತರುತ್ತೇವೆ. ಆದರೆ ಒಂದು ಮಾತನ್ನು ಮಾನ್ಯ ಕೃಷಿ ಸಚಿವರು ಒಪ್ಪಿಕೊಳ್ಳಲೇಬೇಕಾಗುತ್ತದೆ. ಇವತ್ತು ಕೃಷಿ ಇಲಾಖೆಯಲ್ಲಿ ಮತ್ತು ಆರೋಗ್ಯ ಇಲಾಖೆಯಲ್ಲಿ ಬರತಕ್ಕಂಥ 75% ಹಣ Central Government Fund. ರಾಜ್ಯ ಸರ್ಕಾರದ್ದು ಎಷ್ಟಿದೆ ಎಂದು ತೆಗೆದು ನೋಡಿ. 3ನೇ ಒಂದು ಭಾಗ ಶೇಕಡ 65ರಷ್ಟು ಹಣ ಕೇಂದ್ರ ಸರ್ಕಾರದಿಂದ ಬರತಕ್ಕಂಥ ಹಣ. ಇವತ್ತು ಆರೋಗ್ಯ ಇಲಾಖೆಯಲ್ಲಿ, NRHMನಲ್ಲಿ, ಎಲ್ಲಾ planned scheme, ಎಲ್ಲಾ activities ಕೇಂದ್ರ ಸರ್ಕಾರದ ಹಣದಿಂದ ಆಗುತ್ತದೆ. ಇವತ್ತು ರಾಜ್ಯ ಸರ್ಕಾರ ಏನು ಮಾಡುತ್ತಿದೆ ಎಂದರೆ, ಕೇವಲ ವೇತನಕ್ಕೆ ಹಣ ಕೊಡುತ್ತಿದೆ. only for salaries and maintenance and some 10% of the Planning Expenditure. ಉಳಿದಿದ್ದು ಕೇಂದ್ರ ಸರ್ಕಾರದ್ದೇ ಹಣ. ಇವೆಲ್ಲಾ ಮರೆತು ಹೋಗಬೇಡಿ

ಮಾನ್ಯ ರವಿಯವರೆ, ಇವೆಲ್ಲಾ ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರದ ಹಿತಕ್ಕಾಗಿ ಹೊರತು.

(ಗೊಂದಲ)

ಶ್ರೀ ಸಿ.ಟಿ. ರವಿ :- ಡಾಕ್ಟರೆ, ಕರ್ನಾಟಕ ಸರ್ಕಾರದಿಂದ ಒಂದೇ ಒಂದು ರೂಪಾಯಿಯೂ ತೆರಿಗೆ ಸಂಗ್ರಹ ಮಾಡುತ್ತಿಲ್ಲ. ಹಾಗೆ ಉದಾರವಾಗಿ ಕೊಡುತ್ತಿದ್ದಾರೆ.

(ಗೊಂದಲ)

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ :- ಹಕ್ಕಿದೆ, ಹಕ್ಕಿಲ್ಲ ಎಂದು ಹೇಳುವುದಿಲ್ಲ. ಹಕ್ಕಿದ್ದರೆ ನೀವು ಕೇಂದ್ರ ಸರ್ಕಾರದ ಹಣದಿಂದ deposit ಮಾಡುತ್ತಿದ್ದೀರಿ.

(ಗೊಂದಲ)

ಶ್ರೀ ಸಿ.ಟಿ. ರವಿ :- ಯಾವುದೇ tax ಇಲ್ಲ, Income tax ಇಲ್ಲ, ಯಾವ ತೆರಿಗೆಯೂ ಇಲ್ಲದೇ ಉದಾರವಾಗಿಯೇ ಕೊಡುತ್ತಿದ್ದಾರೆ. ಅಲ್ಲವೇ ಡಾಕ್ಟರೇ ?

(ಗೊಂದಲ)

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ :- ನಾನು ಯಾರಿಗೂ ಕೆರಳಿಸುವಂತೆ ಮಾಡುತ್ತಿಲ್ಲ. ಅವರು ಏನೋ ಹೇಳಿದರು ಅದಕ್ಕೆ ನಾನು ಹೇಳಿದೆ. ಇವತ್ತು ಇದು ಕೇಂದ್ರ ಸರ್ಕಾರದಿಂದ ಬರತಕ್ಕಂಥ ಹಣ, ನಿಜ. I am stating the facts.

(ಗೊಂದಲ)

ಶ್ರೀ ಉಮೇಶ್ ವಿ. ಕತ್ತಿ :- ಮಾನ್ಯ ರವಿಯವರೆ, ಉದಾಸಿಯವರೆ, ಉಮೇಶ್ ಕತ್ತಿಯವರೆ ಎಂದು ಹೇಳಿದರೆ ನಾವು ಏನು ಮಾಡಬೇಕು ?

(ಗೊಂದಲ)

ಅಧ್ಯಕ್ಷರು :- ಕುಳಿತುಕೊಳ್ಳಿ.

(ಗೊಂದಲ)

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ :-ನೀವು ಹೇಳಿದ್ದೀರಿ, ನೀವು ಇಲಾಖೆಯವರು ಇದ್ದೀರಿ ಅದಕ್ಕೆ ಹೇಳುತ್ತಿದ್ದೇನೆ.

(ಗೊಂದಲ)

ಶ್ರೀ ಉಮೇಶ್ ವಿ. ಕತ್ತಿ :- ಮಾನ್ಯ ಅಧ್ಯಕ್ಷರೆ, ದಯಮಾಡಿ ಅವರಿಗೆ ಈ ರೀತಿ

ಮಧ್ಯೆ ಮಧ್ಯೆ ನಮ್ಮ ಹೆಸರನ್ನು ಹೇಳಬೇಡಿ ಎಂದು ಹೇಳಿ.

(ಗೊಂದಲ)

ಅಧ್ಯಕ್ಷರು :– ಆನಂತರ ತಾವು note ಮಾಡಿಕೊಂಡು ಮಾತನಾಡಿ. ಈ ರೀತಿ ನೀವು ಮಧ್ಯೆ ಮಧ್ಯೆ ಎದ್ದು ನಿಂತರೆ ಹೇಗೆ ?

(ಗೊಂದಲ)

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ :– ಹೋಗಲಿ ಬಿಡಿ. ಆ ರೀತಿ ಹೆಸರು ಹೇಳುವುದಕ್ಕೆ ಹೋಗುವುದಿಲ್ಲ. ನಾನು ಏನೋ ನಮ್ಮ ಸ್ನೇಹಿತರು ಎಂದು ಹೆಸರು ಹೇಳಿದೆ. ಹೆಸರು ಹೇಳಬಾರದೆಂದರೆ ಹೇಳುವುದಿಲ್ಲ. ನನ್ನದೇನಿದೆ ?

ಅಧ್ಯಕ್ಷರು :– ಆಯಿತು, ತಾವು continue ಮಾಡಿ.

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ :– ಮಾನ್ಯ ಅಧ್ಯಕ್ಷರೆ, ಸರ್ಕಾರಕ್ಕೆ ನನ್ನ ಸಲಹೆ ಏನೆಂದರೆ, ಕೇಂದ್ರ ಸರ್ಕಾರ ಹಣ ಕೊಡಲಿ, ನೀವೂ Agriculture Departmentಗೆ ಹೆಚ್ಚು ಹಣ ಕೊಡಿ. ನಿಮಗೆ ಯಾರಾದರೂ ಕೊಡಬೇಡಿ ಎಂದು ಹೇಳಿದ್ದಾರಾ ? ಕೇಂದ್ರ ಸರ್ಕಾರದ ಹಣದಿಂದ ನೀವು ಇಲಾಖೆ ನಡೆಸಿ ಎಂದು ನಾವು ಹೇಳುತ್ತಿದ್ದೇವಾ ? ನೀವೂ ಇಲಾಖೆಗೆ ಜಾಸ್ತಿ ಹಣ ಕೊಡಿ. ರಾಜ್ಯ ಸರ್ಕಾರದಿಂದ Agriculture Departmentಗೆ, Health Department ಗೆ ಹೆಚ್ಚು ಹಣ ಕೊಡಿ. ನಾವೇನೂ ಬೇಡ ಎಂದು ಹೇಳುತ್ತಿದ್ದೇವಾ? ಬೇರೆ ಬೇರೆ ಇಲಾಖೆಯ ಬಗ್ಗೆ ಮಾತನಾಡುವುದಿದೆ. ಕೃಷಿ ಇಲಾಖೆ ಬಗ್ಗೆ ನನ್ನದು ಒಂದು ಸಲಹೆ ಇದೆ. ನಾನು 2000ನೇ ಇಸವಿಯಲ್ಲಿ ಜಿಲ್ಲಾ ಪಂಚಾಯತ್ ಸದಸ್ಯನಾಗಿದ್ದೆ, ಜಿಲ್ಲಾ ಪಂಚಾಯತ್ ಉಪಾಧ್ಯಕ್ಷನಾಗಿದ್ದೆ. ಆವತ್ತಿನಿಂದ ಪ್ರಯತ್ನ ಮಾಡುತ್ತಿದ್ದೇನೆ ಮಾನ್ಯ ಅಧ್ಯಕ್ಷರೆ, ಏನೆಂದರೆ ಕೃಷಿ ಚಟುವಟಿಕೆಗೆ ಕೃಷಿ ಪರಿಕರಗಳನ್ನು ಏನು ಉಪಯೋಗಿಸುತ್ತೇವೆ, ಅದಕ್ಕೆ ನಿಜವಾಗಿರತಕ್ಕಂಥ 50% ಸಬ್ಸಿಡಿಯನ್ನು ರೈತರಿಗೆ ಮುಟ್ಟಿಸಬೇಕೆಂದು ನಾನು ಶತ ಪ್ರಯತ್ನ ಮಾಡಿದೆ. ಆದರೆ ನನ್ನ ಕೈಯಲ್ಲಂತೂ ಆಗಲಿಲ್ಲ. ಏಕೆಂದರೆ, it is a fact. ಈ ಸದನದಲ್ಲಿರುವ ಶಾಸಕರನ್ನು ಕೇಳಿ. ಇವತ್ತು ಯಾವ ರೀತಿ rate fix ಆಗುತ್ತಿದೆ ? Agriculture implementsಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರ ಹಣ ಕೊಡುತ್ತಿದೆ. ಆದರೆ ಆ ಹಣ ರೈತರಿಗೆ ಸಬ್ಸಿಡಿ ರೂಪದಲ್ಲಿ ಹೋಗುತ್ತಿಲ್ಲ. ಆ ಹಣ ಮಧ್ಯವರ್ತಿಗಳಿಗೆ ಹೋಗುತ್ತಿದೆ. ಮಧ್ಯವರ್ತಿಗಳಿಗೆ ಹಣ ಹೋಗುತ್ತಿದೆ ಎಂದು ಬಹಳ ವಿಷಾದದಿಂದ ಹೇಳಬೇಕಾಗುತ್ತದೆ. Agriculture Minister ರವರು ಇಲ್ಲೇ ಇದ್ದಾರೆ. ಇವತ್ತು ಟೆಂಡರ್

ಮಾಡುತ್ತಾರೆ, ಮಾರ್ಕೆಟ್‌ನಲ್ಲಿ 1,000 ರೂಪಾಯಿಗೆ best quality spray ಸಿಗುತ್ತಿದ್ದರೆ, ಇವತು 1500 ರೂಪಾಯಿಗೆ ಬೆಲೆ ನಿಗದಿ ಮಾಡುತ್ತಾರೆ. 50% ಸಬ್ಸಿಡಿ ಎಂದು ಹೇಳಿ 900 ರೂಪಾಯಿ ಕೊಡುತ್ತಾರೆ. ರೈತನಿಗೆ ಸಿಗಬೇಕಾಗಿರತಕ್ಕಂಥ 50% ಸಬ್ಸಿಡಿ ಸಿಗುವುದಿಲ್ಲ. 10-20% ಸಬ್ಸಿಡಿ ಸಿಗುತ್ತಿದೆ. ಇದಕ್ಕೆ ನೀವು ಕಡಿವಾಣ ಹಾಕಲು ಆಗುವುದಿಲ್ಲವೇ ? ನಮ್ಮ ರಾಜ್ಯದಲ್ಲಿ ಬೀಜ ನಿಗಮ ಇದೆ. ಇವತ್ತು ಅವರು ಏನು ಮಾಡುತ್ತಿದ್ದಾರೆಂದರೆ, ನಮ್ಮ system ಏನಿದೆ, ಟೆಂಡರ್ ಕರೆಯುತ್ತಾರೆ, ಟೆಂಡರ್ ಕರೆದಿರತಕ್ಕಂಥ ಬೀಜ supply ಮಾಡತಕ್ಕಂಥ ಸಂದರ್ಭದಲ್ಲಿ, ನೀವು ಟೆಂಡರ್ ಕರೆದಾಗ ನೀವು ಅವರ ಜೊತೆ compete ಮಾಡಿ, competitive rate ನಲ್ಲಿ ಒಂದು ವೇಳೆ ಅದಕ್ಕೆ price fix ಆದರೆ ರೈತರಿಗೆ ನಿಜವಾದ ಕಡಿಮೆ ದರದಲ್ಲಿ ಬೀಜ ಸಿಗುತ್ತದೆ. ನೀವು ಹೇಳುವುದಕ್ಕೆ 70% ಸಬ್ಸಿಡಿ. ಆದರೆ ಅದು ಮಾರ್ಕೆಟ್ price ನಲ್ಲಿ ಸಿಗುವಷ್ಟು ರೇಟ್‌ನಲ್ಲಿಯೇ ಸಿಗುತ್ತದೆ. ಇದರಿಂದ ಯಾವುದೂ ನಮ್ಮ ರೈತನಿಗೆ ಸಹಾಯವಾಗುತ್ತಿಲ್ಲ. ಸಬ್ಸಿಡಿ ಹಣ ಮಧ್ಯವರ್ತಿಗಳ ಪಾಲಾಗುತ್ತಿದೆ. ಮಾನ್ಯ ಸಚಿವರು ಇದರ ಬಗ್ಗೆ ಗಮನಹರಿಸಿ ಸರಿ ಮಾಡಬೇಕಾಗಿತ್ತು. ಮೂರು ವರ್ಷಗಳ ಹಿಂದೆ ಈ ಮಾತನ್ನು ಸದನದಲ್ಲಿ ಹೇಳಿದ್ದೇನೆ. ಪದೇ ಪದೇ ಈ ಮಾತನ್ನು ಹೇಳುತ್ತಿದ್ದೇನೆ. You have to bring in a system, where the subsidy which is earmarked by the Government, should go to the farmers. ಅದನ್ನು ಮಾಡುವುದಕ್ಕೆ ಆಗುವುದಿಲ್ಲವೇ, ಮಾನ್ಯ ಅಧ್ಯಕ್ಷರೆ ? ಅದನ್ನು ಮಾನ್ಯ ಸಚಿವರಿಗೆ ಸಲಹೆ ಮಾಡಿ. ಏಕೆಂದರೆ, ಅವರು ನಮ್ಮ ಮಾತನ್ನಂತೂ ಕೇಳುತ್ತಿಲ್ಲ. ಇದಕ್ಕೆ ಒಳ್ಳೆಯ system ಅನ್ನು ತಂದು, ಇವತ್ತು ರೈತರಿಗೆ ಸಿಗಬೇಕಾದಂತಹ ಸಹಾಯ ಧನ ಸಿಗುವಂತಹ ಪರಿಸ್ಥಿತಿ ಆಗದೇ ಹೋದರೆ, ನಾವು ಶಾಸಕರಾಗಿ ಏನು ಸಲಹೆ ಕೊಟ್ಟರೂ, ನಾವು ಏನೇ ಹೇಳಿದರೂ ನೀವು ಹೇಳುವುದನ್ನು ಹೇಳಿ, ನಾವು ಮಾಡುವುದನ್ನು ಮಾಡುತ್ತೇವೆ ಎಂದರೆ ಅದು ನಿಮಗೆ ಬಿಟ್ಟ ವಿಚಾರ. ಏಕೆಂದರೆ ರಾಜ್ಯದ ಜನ ಇದನ್ನು ಗಮನಿಸುತ್ತಿರುತ್ತಾರೆ. ನಮ್ಮ constituencyಗೆ sprinkler ಕೊಡಬೇಕಾದರೆ ಅದು ಸಚಿವರ ಅನುಮೋದನೆಗೆ ಹೋಗಬೇಕಾಗುತ್ತದೆ. ಅದು ಹೋಗಿ 3-4 ತಿಂಗಳಿಗೆ ನೀವು ಏನು ಅನುಮೋದನೆ ಮಾಡುತ್ತೀರೋ ಗೊತ್ತಿಲ್ಲ. ಅದು ಬರತಕ್ಕಂಥ ಸಮಯದಲ್ಲಿ ರೈತನಿಗೆ ಅದರ ಅವಶ್ಯಕತೆಯೇ ಇರುವುದಿಲ್ಲ. ದಯವಿಟ್ಟು ತಮ್ಮ process ಅನ್ನು ಸ್ವಲ್ಪ speed up ಮಾಡಿ. ಬಹಳ ವಿಳಂಬವಾಗುತ್ತಿದೆ. ಬರಗಾಲದ ಸಮಯವಿರುವುದರಿಂದ Agriculture Department ನವರು Long Term Plan ಮಾಡಬೇಕು. ನಮ್ಮ ರೈತರಿಗೆ ಶಾಶ್ವತವಾಗಿರತಕ್ಕಂಥ ಬರಗಾಲವನ್ನು ನಿಭಾಯಿಸುವ

ರೀತಿಯಲ್ಲಿ drought proofingಗೆ plan ಹಾಕಿಕೊಳ್ಳಬೇಕು. ನಮ್ಮ ರಾಜ್ಯದಲ್ಲಿ ಯಾವುದು ಮಳೆ ಅವಲಂಬಿತ ಪ್ರದೇಶವಾಗಿರುತ್ತದೆ ಅದನ್ನು ಕ್ರಮೇಣವಾಗಿ 5 ಅಥವಾ 10 ವರ್ಷದಲ್ಲಿ watershed complete activities ಅನ್ನು ಮಾಡಬೇಕು. ಅವರು 5 ವರ್ಷದಲ್ಲಿ ಮಾಡುತ್ತೇವೆ ಎಂದು ಹೇಳುತ್ತಿದ್ದಾರೆ. ನೋಡೋಣ. ನಾವು ಕೇಂದ್ರ ಸರ್ಕಾರಕ್ಕು ಕೂಡ ಮನವಿ ಮಾಡುತ್ತೇವೆ. ಆದರೆ ನೀವು ಒಂದು ಸರಿಯಾದಂತಹ concrete plan ಅನ್ನು submit ಮಾಡಿದರೆ we can recommend.

ಇನ್ನೊಂದು ಕೊನೆಯದಾಗಿ ಮಾನ್ಯ ಸಚಿವರು ಗಮನವಹಿಸಬೇಕು. ನೀವು Agriculture Department ನಲ್ಲಿ Research and Developmentಗೆ ಹೆಚ್ಚು ಹಣ ಕೊಡಬೇಕು. ರೈತನಿಗೆ ನಾವು ಯಾವ ರೀತಿ ಸಹಾಯ ಮಾಡಬಹುದೆಂದರೆ ಒಳ್ಳೆಯ ಗುಣಮಟ್ಟದ, ಒಳ್ಳೆಯ ತಳಿಯಿರುವ ಬೀಜ ಕೊಡಬೇಕು. ಜಾಸ್ತಿ yield ಬರುವ ಬೀಜಗಳನ್ನು ಸಂಶೋಧನೆ ಮಾಡಬೇಕು. ನೀವು ಸಮಯಕ್ಕೆ ಸರಿಯಾಗಿ ಗೊಬ್ಬರ supply ಮಾಡಿದರೆ ಸಾಕು. ಇವತ್ತು ಗೊಬ್ಬರದ ರೇಟ್ ಜಾಸ್ತಿಯಾಗಿದೆ, ಅದಕ್ಕೆ ನೀವು ಇವತ್ತು 1,000 ರೂಪಾಯಿ ಕೊಡುವಂಥದ್ದು ಆಗಿದೆ. ನೀವು ಕೇಂದ್ರ ಸರ್ಕಾರದ ಮೇಲೆ ಹೇಳುತ್ತೀರಿ. ಆದರೆ ರಾಜ್ಯ ಸರ್ಕಾರ ಏಕೆ ಸಬ್ಸಿಡಿ ಕೊಡಬಾರದು ? ನಿಮಗೆ ಯಾರಾದರೂ ನಿಬಂಧನೆ ಹಾಕಿದ್ದಾರೆಯೇ ?

ಶ್ರೀ ಉಮೇಶ್ ಎ. ಕತ್ತಿ :– ಮಾನ್ಯ ಅಧ್ಯಕ್ಷರೆ, ಕಳೆದ ಮೂರು ವರ್ಷದಲ್ಲಿ....

(ಗೊಂದಲ)

ಅಧ್ಯಕ್ಷರು :– ದಯವಿಟ್ಟು ಕುಳಿತುಕೊಳ್ಳಿ, ಗೊಬ್ಬರದ ರೇಟ್ ಜಾಸ್ತಿಯಾಗಿದೆ ಎಂದು ಹೇಳಿದ್ದಾರೆ. ಅದಕ್ಕೆ ತಾವು ಉತ್ತರ ಕೊಡುವಾಗ ಹೇಳಿ.

(ಗೊಂದಲ)

ಶ್ರೀ ಉಮೇಶ್ ಎ. ಕತ್ತಿ :– ಮೂರು ವರ್ಷದಲ್ಲಿ 370% ಬೆಲೆ ಹೆಚ್ಚಾಗಿದೆ. ಯಾವ ರೈತನಿಗೂ ಗಿಟ್ಟುವುದಿಲ್ಲ. ಗೊಬ್ಬರ ಹಾಕುವುದಕ್ಕಾಗುವುದಿಲ್ಲ.

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ :– ನಮ್ಮ ದೇಶದಲ್ಲೇ ಅಷ್ಟೇ ಅಲ್ಲ, it is depending on international prices also, ಅದು ನಿಮಗೆ ಗೊತ್ತಿದೆ ಮಾನ್ಯ ಸಚಿವರೆ, ಮತ್ತೆ ತಾವು ನನಗೇ ಈ ರೀತಿ ಹೇಳಿದರೆ ಹೇಗೆ ? ರಾಜ್ಯ ಸರ್ಕಾರಕ್ಕೆ ಗೊಬ್ಬರಕ್ಕೆ ಸಬ್ಸಿಡಿ ಕೊಡಬೇಡಿ ಎಂದು ಯಾರು ನಿಮಗೆ ಹೇಳಲಿಲ್ಲವಲ್ಲಾ. ನೀವು ಗೊಬ್ಬರಕ್ಕೆ 25% ಸಬ್ಸಿಡಿ

ಕೊಡಿ. ಇನ್ನೊಂದು ಬಹಳ ಆಶ್ಚರ್ಯಕರವಾದ ಸಂಗತಿ ಏನೆಂದರೆ ನನ್ನ ಮತ ಕ್ಷೇತ್ರದಲ್ಲಿ, ನಮ್ಮ ಜಿಲ್ಲೆಯಲ್ಲಿ ನಡೆದಿದ್ದು, I have to fight tooth and nail for this. ಏನೆಂದರೆ ಕೆಲವು Pesticide companies ಅಂದರೆ, they are not registered companies. Bio-fertilizer ಎನ್ನುವ ಸುಳ್ಳು ಹೆಸರಿನಲ್ಲಿ, ಅದು fake name. ಅವು ಯಾವುದೇ Companies Act ನಲ್ಲಿ register ಆಗಿಲ್ಲ. ಅಂತಹ ಕಂಪನಿಗಳು ಏನು ಮಾಡುತ್ತಿವೆ ಎಂದರೆ ಕೆಲವೊಂದು chemical mix ಮಾಡಿ, ಮಾರ್ಕೆಟ್‌ನಲ್ಲಿ ಅಗ್ಗದ ದರದಲ್ಲಿ ಮಾರಿ ಇವತ್ತು ರೈತರಿಗೆ ತೊಂದರೆ ಮಾಡತಕ್ಕಂಥ ಕೆಲಸ ಮಾಡುತ್ತಿದ್ದಾರೆ. ಅದಕ್ಕೆ Agriculture Department ಅಂಕುಶ ಹಾಕಲಿಕ್ಕೆ ಆಗಲಿಲ್ಲ. ನಾವು ಅಲ್ಲಿರತಕ್ಕಂಥ AD ಮತ್ತು JDಗೆ ಬಹಳ ಸಿಟ್ಟು ಮಾಡಿ ಹೇಳಬೇಕಾಯಿತು ನನ್ನ ಮತ ಕ್ಷೇತ್ರದಲ್ಲಿ ಇದಕ್ಕೆ ಹೆಚ್ಚು ಅವಕಾಶ ಕೊಡಬೇಡಿ ಎಂದು ನಾನು ಗಟ್ಟಿ ಧ್ವನಿಯಾಗಿ ಹೇಳಿದಾಗ, ಅದನ್ನು stop ಮಾಡಿದ್ದಾರೆ. ಮಾನ್ಯ ಕೃಷಿ ಸಚಿವರು ಏನು ಕ್ರಮ ತೆಗೆದುಕೊಳ್ಳುತ್ತಿದ್ದೀರಿ ಎಂದು ಹೇಳಬೇಕು. ಇದೊಂದು ದೊಡ್ಡ ದಂಧೆ ಆಗಿ ಬಿಟ್ಟಿದೆ. ಇದರಿಂದ ಏನು ಹಾನಿ ಇದೆ ಎಂದರೆ, ಅವರು ಇವತ್ತು fertilizers mix ಮಾಡಿ long term ನಲ್ಲಿ resistance develop ಆಗುತ್ತದೆ pest ಗೆ, long term ನಲ್ಲಿ ರೈತರಿಗೆ ಬಹಳ ದೊಡ್ಡ ಹಾನಿ ಆಗುತ್ತದೆ.

ಶ್ರೀ ಉಮೇಶ್ ವಿ. ಕತ್ತಿ (ಕೃಷಿ ಸಚಿವರು) :– ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ, fake ಗೊಬ್ಬರ fake pesticides ಇದರ ಮೇಲೆ ಕ್ರಮ ಜರುಗಿಸುವುದಕ್ಕೆ ನಮ್ಮ ಇಲಾಖೆಯ ಅಧಿಕಾರಿಗಳು ಸಂಬಂಧಪಟ್ಟ ತಹಶೀಲ್ದಾರ್‌ಗಳು ಎಲ್ಲರಿಗೂ ನಿಗಾ ವಹಿಸಿ ಕ್ರಮ ಜರುಗಿಸಬೇಕೆಂದು ಹೇಳಿದ್ದೇವೆ. ತಾವು ಇವತ್ತು ಮಾಹಿತಿ ಕೊಟ್ಟರೆ special team ಕಳುಹಿಸಿ definitely we will take serious action against them. ನೀವು ಈ ರೀತಿ ವೇಗವಾಗಿ ಹೇಳಿದರೆ ಗೊತ್ತಾಗುವುದಿಲ್ಲ. Correct ಆದ ಮಾಹಿತಿ ನಿಮ್ಮ ಕಡೆ ಇದ್ದರೆ ನಮ್ಮ ತಹಶೀಲ್ದಾರ್ ಕಡೆ ಕೊಡಿ ಅಥವಾ ನಮ್ಮ JDಗೆ ಕೊಡಿ ಅಥವಾ ನಮಗಾದರೂ ನೀವು ಮಾಹಿತಿಯನ್ನು ಕೊಟ್ಟರೆ definitely we will take action. ರಾಯಚೂರಿನಲ್ಲಿ ಕಳಪೆ ಬೀಜ, ಕಳಪೆ ಗೊಬ್ಬರ ಬಂತು, ಕೂಡಲೇ ಕ್ರಮ ತೆಗೆದುಕೊಂಡಿದ್ದೇವೆ. ಎಲ್ಲೆಲ್ಲಿ ಮಾಹಿತಿ ಬರುತ್ತದೆ, ಅಲ್ಲೆಲ್ಲಾ ಕ್ರಮ ತೆಗೆದುಕೊಂಡಿರುತ್ತೇವೆ. ನಿಮ್ಮ ಹತ್ತಿರ ಬಂದಿರುವ ಬಗ್ಗೆ ಮಾಹಿತಿಯನ್ನು ಕೊಡಿ definitely I will take action. ರಾಜ್ಯದಲ್ಲಿ ಕ್ರಮ ಕೈಗೊಳ್ಳುವ ವ್ಯವಸ್ಥೆಯನ್ನು ಮುಂದುವರೆಸುತ್ತಿದ್ದೇವೆ.

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ :- ಮಾನ್ಯ ಅಧ್ಯಕ್ಷರೆ, actually ಅದನ್ನು fake company ಯಿಂದ ಮಾಡುತ್ತಿರುವುದು. ಅದನ್ನು ಅವರ ಇಲಾಖೆಯ JD ಯವರ ಗಮನಕ್ಕೆ ತಂದು ಅದನ್ನು ನಿಬಂಧನೆ ಹೇಳತಕ್ಕಂತಹ ಪ್ರಯತ್ನವನ್ನು ಮಾಡುತ್ತಿದ್ದೇನೆ. ಅದು ನಿಮ್ಮ ಗಮನಕ್ಕೆ ಬಂದಿಲ್ಲವೆ ? ಇದಕ್ಕೆ ತಾವು ಕಡಿವಾಣವನ್ನು ಹಾಕಬೇಕು. ಅವರು ದೊಡ್ಡ ಪ್ರಮಾಣದಲ್ಲಿ ಅಧಿಕಾರಿಗಳನ್ನು ಬುಕ್ ಮಾಡುತ್ತಿದ್ದಾರೆ. ಅವರಿಗೆ ದೊಡ್ಡ ಪ್ರಮಾಣದಲ್ಲಿ ಲಾಭವಿದೆ. ಅವು ಯಾವುದೂ registered company ಅಲ್ಲ. ಅವರು ಕೆಮಿಕಲ್ ಅನ್ನು ಮಿಕ್ಸ್ ಮಾಡಿ ಮಾರುತ್ತಿದ್ದಾರೆ. ಅವರು ಯಾವುದೇ ಟ್ಯಾಕ್ಸ್ ಅನ್ನು ಕಟ್ಟುವುದಿಲ್ಲ. ಅವರಿಗೆ ಯಾವುದೂ ಖರ್ಚು ಇರುವುದಿಲ್ಲ. ,ಹಾಗಾಗಿ ಅವರು ಏನು ಮಾಡುತ್ತಿದ್ದಾರೆಂದರೆ ಯಾರು ಟ್ರೇಡರ್ಸ್ ಇದ್ದಾರೆ, ಟ್ರೇಡರ್ಸ್‌ಗೆ huge margin ಕೊಡುವುದರಿಂದ ಅವರು market ನಲ್ಲಿ ಮಾರುತ್ತಿದ್ದಾರೆ. ಇದರಿಂದ ಮುಂದೆ ನಮ್ಮ ಪೆಸ್ಟ್‌ಗೆ ರೆಸಿಸ್ಟೆನ್ಸ್ ಬಂತೆಂದರೆ ನಮ್ಮ ರೈತರು ಬಹಳ ಕಷ್ಟದಲ್ಲಿ ಸಿಕ್ಕಿಹಾಕಿಕೊಳ್ಳುತ್ತಾರೆ. ಅದಕ್ಕೆ ತಾವು ಅವಕಾಶವನ್ನು ಕೊಡಬಾರದೆಂದು ನಾನು ಸದನದ ಗಮನಕ್ಕೆ ತರುತ್ತಿದ್ದೇನೆ. ಇವತ್ತು ಕೃಷಿ ಇಲಾಖೆಯ ಬಗ್ಗೆ ಹೇಳಬೇಕಾದರೆ ಬಹಳಷ್ಟು ಇದೆ. ನಾವು ಬೇರೆ ಬೇರೆ ಇಲಾಖೆಗಳ ಬಗ್ಗೆ ಹೇಳಬೇಕಾಗಿದೆ. ತಾವು ಸಮಯದ ಮಿತಿಯನ್ನು ತೋರಿಸುತ್ತೀರೆಂದು ನಾನು ಮುಂದಿನ ಇಲಾಖೆಯ ಬಗ್ಗೆ ಮಾತನಾಡುವುದಕ್ಕೆ ಹೋಗುತ್ತಿದ್ದೇನೆ. ಇವತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಬಗ್ಗೆ ನನಗೆ ಒಂದೇ ಒಂದು ಖುಷಿ ಎಂದರೆ ಇವತ್ತು 3,000 ಕೋಟಿ ರೂಪಾಯಿಗಳು ಇರುವಂತಹದ್ದನ್ನು 4,000 ಕೋಟಿ ರೂಪಾಯಿಗಳಿಗೆ ನಾವು ಖರ್ಚು ಮಾಡಿದ್ದೇವೆಂದು ಇವತ್ತು ತಾವು ನನಗೆ ಲೆಕ್ಕವನ್ನು ಕೊಟ್ಟಿದ್ದೀರಿ, ನನಗೆ ಬಹಳ ಸಂತೋಷವಾಗಿದೆ. ಆದರೆ ಅದನ್ನು ಯಾವಯಾವ ರೀತಿಯಾಗಿ ಮಾಡಿದ್ದೀರೆಂದು ನಾನು ವಿವರಣೆಯ ರೂಪದಲ್ಲಿ ಕೇಳುತ್ತೇನೆ. ಏಕೆಂದರೆ ಅದರ ಬಗ್ಗೆ ನನಗೆ ಸಂಪೂರ್ಣವಾದ ಮಾಹಿತಿ ಸಿಕ್ಕಿರುವುದಿಲ್ಲ. ನಾನು ಒಂದು ಹಳ್ಳಿಗೆ ಹೋದೆ. ಅಲ್ಲಿ ಜನರು ಬಹಳ ದೊಡ್ಡಪ್ರಮಾಣದಲ್ಲಿ ನಿರೀಕ್ಷೆಯನ್ನು ಇಟ್ಟುಕೊಂಡಿರುವುದಿಲ್ಲ. ಅವರು ನಮಗೆ ಏನು ಕೇಳುತ್ತಾರೆಂದರೆ ನಮ್ಮ ಊರಿಗೊಂದು ಒಳ್ಳೆಯ ರಸ್ತೆ ಇರಲಿ, ಒಂದು ಒಳ್ಳೆಯ ಶಾಲೆ ಇರಲಿ, ಕುಡಿಯುವ ನೀರಿನ ವ್ಯವಸ್ಥೆ ಇರಲಿ, ಊರಲ್ಲಿ ಚರಂಡಿ ವ್ಯವಸ್ಥೆ ಮತ್ತು ರೋಡಿನ ವ್ಯವಸ್ಥೆ ಇರಲಿ, ಇಷ್ಟನ್ನು ಅವರು ಕೇಳುವುದು ತಪ್ಪೇ ? ಇದಕ್ಕೆ ನಿಮ್ಮ ಹತ್ತಿರ ಒಂದು ಪ್ಲಾನ್ ಆದರೂ ಇರಲೇಬೇಕಲ್ಲವೇ ? ಇದಕ್ಕೆ ನಾವು ಒಂದು ದೊಡ್ಡ ಪ್ರಮಾಣದ ಬೆಂಗಳೂರು-ಮೈಸೂರು ತರಹ ದೊಡ್ಡ ದೊಡ್ಡ ಆಕಾಂಕ್ಷೆಗಳು ಇಲ್ಲ. ಪಾಪ,

ಅವರು ಏನೋ personal benefitಗಳನ್ನು ಕೇಳುತ್ತಿಲ್ಲ. ಈ ಊರಿನ ಅಭಿವೃದ್ಧಿಯ ಬಗ್ಗೆ ನಾನು ಕಳೆದ ಸಾರಿ ಹೇಳಿದ್ದೆ. ಒಂದು appreciate ಮಾಡುತ್ತೇವೆಂದರೆ ಸುವರ್ಣಗ್ರಾಮ ಮಾಡಿದ್ದೀರಿ ಅದು ಒಳ್ಳೆಯ ಕಾರ್ಯಕ್ರಮವಾಗಿದೆ. ಇದು appreciate ಮಾಡಬೇಕಾಗಿದೆ. ತಾವು ಎಸ್‌ಸಿ ಬಡಾವಣೆಗಳಿಗೆ ಹೆಚ್ಚಿನ ಹಣವನ್ನು ಕೊಡುತ್ತಿದ್ದೀರಿ, ಅದನ್ನೂ ಸಹ ನಾವು appreciate ಮಾಡಬೇಕಾಗುತ್ತದೆ. ಇವೆಲ್ಲವೂ ಒಳ್ಳೆಯ ಕಾರ್ಯಕ್ರಮಗಳಾಗಿದೆ. ನಾನು ಸರ್ಕಾರವನ್ನು ಟೀಕೆ ಮಾಡುವಂತಹದ್ದನ್ನು ಹೇಳುತ್ತಿಲ್ಲ. ಸರ್ಕಾರ ಒಳ್ಳೆಯ ಕೆಲಸವನ್ನು ಮಾಡಿದರೆ ಅದಕ್ಕೆ ನಾವು appreciate ಮಾಡುತ್ತೇವೆ. ನೀವು ಕೆಟ್ಟಕೆಲಸವನ್ನು ಮಾಡುವುದಕ್ಕೂ ಅದಕ್ಕೆ ತಪ್ಪು ಇದೆ ಎಂದು ತೋರಿಸುವುದು ಸಹ ನಮ್ಮ ಕರ್ತವ್ಯವೇ. Suvarnagrama is a good scheme, I appreciate it. ಆದರೆ ಅದರಲ್ಲಿ ಒಂದು ನ್ಯೂನ್ಯತೆ ಏನು ಮಾಡಿದ್ದಾರೆಂದರೆ 2001 ಸೆನ್ಸಸ್ ಪ್ರಕಾರ ಮಾಡಿದ್ದಾರೆ. ನಾನು ಏನಾದರೂ ತಪ್ಪು ಹೇಳಿದರೆ ನೀವು ಹೇಳಿ. 2001ರ ಸೆನ್ಸಸ್ ಪ್ರಕಾರ ನೀವು allocation ಮಾಡಿದ್ದೀರಿ. 2011ರ ಪ್ರಕಾರ ನೀವು allocation ಮಾಡಬೇಕಾಗಿತ್ತು. ಮಾನ್ಯ ಅಧ್ಯಕ್ಷರೆ, ನೀವು ಈ ಮಾತನ್ನು ಒಪ್ಪಿಕೊಳ್ಳುತ್ತೀರಿ. ನಮ್ಮ ಹತ್ತಿರ figures ಇಲ್ಲ ಅದಕ್ಕೋಸ್ಕರ 2001ರ ಪ್ರಕಾರ ಮಾಡಿಬಿಟ್ಟಿದ್ದೇವೆ. ಇನ್ನೊಂದು ಒಳ್ಳೆಯ ಕೆಲಸವನ್ನು ನೀವು ಏನು ಮಾಡಿದ್ದೀರೆಂದರೆ ಹೋದ ಸಾರಿ ನಾನು ಈ ಬಗ್ಗೆ ಈ ಸದನದಲ್ಲಿ ಸಲಹೆಯನ್ನು ಕೊಟ್ಟಿದ್ದೆ. ನೀವು ಸುಮ್ಮನೆ ರಸ್ತೆಯನ್ನು ಮಾಡುತ್ತಿದ್ದೀರಿ. ಅದರಿಂದ ನಮಗೆ ಅನುಕೂಲವಾಗುತ್ತಿಲ್ಲ. ಪ್ರತಿ ವಿಧಾನಸಭಾ ಮತಕ್ಷೇತ್ರಕ್ಕೆ 50 ಕಿ.ಮೀ. ನೀವು ರೋಡ್ ಅನ್ನು ಡೆವಲಪ್ ಮಾಡಿ. ಅಂದರೆ ಇವತ್ತು visible development ಆಗುತ್ತದೆ ಎಂದು ನಾನು ಸಲಹೆಯನ್ನು ಕೊಟ್ಟಿದ್ದೆ. ನೀವು ಹೋದ ವರ್ಷ ಸುಮಾರು 20 ಕಿ.ಮೀ. ರಸ್ತೆಯನ್ನು ಮಾಡಿದ್ದೀರಿ. ಈ ವರ್ಷ ನೀವು 30 ಕಿ.ಮೀ. ರಸ್ತೆಯನ್ನು ಮಾಡುತ್ತೇವೆಂದು ಹೇಳಿದ್ದೀರಿ. I welcome it, it is a very good scheme. ನಿಮಗೆ ಇನ್ನು 8 ತಿಂಗಳ ಅವಧಿ ಇದೆ. ನೀವು ಈ ಎಂಟು ತಿಂಗಳ ಅವಧಿಯಲ್ಲಿಯೇ ಪೂರ್ಣ ಮಾಡಬೇಕು. ಮುಂದಿನ ವರ್ಷದಲ್ಲಿ ಮಾಡುವುದಕ್ಕೆ ಹೋದರೆ ಇದರಿಂದ ಏನೂ ಉಪಯೋಗವಿಲ್ಲ. ಗ್ರಾಮೀಣಾಭಿವೃದ್ಧಿ ಇಲಾಖೆಯಲ್ಲಿ ಇವತ್ತು ಕುಡಿಯುವ ನೀರಿಗೆ ನೀವು ಕೊಟ್ಟಿರುವಂತಹ ಅಂಕಿ ಅಂಶದ ಪ್ರಕಾರ ನಮಗೆ ಕಳೆದ ಸಾರಿ 800 ಕೋಟಿ ರೂಪಾಯಿಗಳ ಕುಡಿಯುವ ನೀರಿಗಾಗಿ ಇವತ್ತು ಹಣವನ್ನು ಉಪಯೋಗ ಮಾಡುವುದಕ್ಕಾಗಲಿಲ್ಲ. ನೀವು 600 ಕೋಟಿ ರೂಪಾಯಿಗಳನ್ನು ಕುಡಿಯುವ ನೀರಿನ ಸಲುವಾಗಿ ಇವತ್ತು ಕೇಂದ್ರ ಸರ್ಕಾರ ಹಣ ಕೊಡುತ್ತಿತ್ತು. ಆದರೂ ಹಣವನ್ನು ಉಪಯೋಗ

ಮಾಡುವುದಕ್ಕಾಗಲಿಲ್ಲ. ಇವತ್ತು ರಾಜ್ಯದಲ್ಲಿ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಬರಗಾಲವಿದೆ. ನೀರಿಗಾಗಿ ಇವತ್ತು ಬಹಳಷ್ಟು ಹಳ್ಳಿಗಳಲ್ಲಿ ಹಾಹಾಕಾರ ಇದೆ. ಆದರೂ ಕೂಡ ನೀವು ಕುಡಿಯುವ ನೀರಿಗಾಗಿ ಕೊಟ್ಟಿರುವಂತಹ ಹಣ ಸಂಪೂರ್ಣವಾಗಿ ಖರ್ಚು ಮಾಡಲಿಲ್ಲವೆಂದರೆ, whom should we blame ? ನನಗೆ ಏನು ಅನಿಸುತ್ತದೆ ಅಂದರೆ ನೀವು ಜಿಲ್ಲಾವಾರು ಹೋಗಿ, ಜಿಲ್ಲೆಗಳಿಗೆ ಹೋಗಿ ಅಲ್ಲಿ review ಮಾಡಿ ನಿಮಗೆ ಎಷ್ಟು ಹಣವು allocate ಆಗಿದೆ, ಎಷ್ಟು ಟೆಂಡರ್ ಆಗಿದೆ ಎಂದು ನೋಡಬೇಕು. ಟೆಂಡರ್ ಮಾಡುವುದಕ್ಕೆ ಸುಮಾರು 6–6 ತಿಂಗಳ ಸಮಯ ಹಾಳು ಮಾಡುತ್ತಾರೆ. ಅದು approve ಆಗಿ implement ಆಗುವುದಕ್ಕೆ ಒಂದು ವರ್ಷದಲ್ಲಿ ಆಗುವ ಕೆಲಸಕ್ಕೆ ಎರಡು ವರ್ಷದಲ್ಲಿ ಮಾಡುತ್ತಾರೆ. ಇದರಿಂದ ಯಾರಿಗೆ ಅನಾಹುತ ಆಗುತ್ತದೆ ಎಂದರೆ ನಮಗೆ ಆಗುತ್ತದೆ. ಕೇಂದ್ರ ಸರ್ಕಾರದವರು ಕೊಡತಕ್ಕಂತಹ ಹಣವನ್ನು ಸಹ ನಾವು ಸರಿಯಾಗಿ ಉಪಯೋಗ ಮಾಡುವುದಕ್ಕಾಗುತ್ತಿಲ್ಲ. ಇವತ್ತು ಈ ಸದನದಲ್ಲಿ ಗ್ರಾಮೀಣಾಭಿವೃದ್ಧಿ ಸಚಿವರು ಇಲ್ಲ. ಆದರೂ ನಾನು ಸದನದ ಗಮನಕ್ಕೆ ತರುತ್ತಿದ್ದೇನೆ. ಇದನ್ನು ತಪ್ಪಿಸುವಂತಹ ಕೆಲಸವನ್ನು ತಾವು ಮಾಡಬೇಕು. ಇವತ್ತು Housing Departmentನಲ್ಲಿ ಸೋಮಣ್ಣನವರು ಈ ಕಡೆಗೆ ಬಂದ ಮೇಲೆ ಸ್ವಲ್ಪ ಹೆಚ್ಚಿನ ಮನೆಗಳನ್ನು ಕೊಡುವುದನ್ನು ಮಾಡಿದ್ದಾರೆ. We appreciate it. ಅದರಲ್ಲಿ ಒಂದು ಒಳ್ಳೆಯ ಕೆಲಸ ಏನಾಗಿದೆ ಎಂದರೆ ಅವರು GPS ಅಳವಡಿಸಿ ಅಲ್ಲಿ ಮನೆಯಾಗಿದೆ ಅಥವಾ ಇಲ್ಲವೆಂದು ನಾವು satellite ಮುಖಾಂತರ verify ಮಾಡಿ ಹಣ ಬಿಡುಗಡೆ ಮಾಡುವುದು ಅದು ಒಂದು ಒಳ್ಳೆಯ ಪದ್ಧತಿಯಾಗಿದೆ. ಏಕೆಂದರೆ ಅಲ್ಲಿ ಅವ್ಯವಹಾರಗಳು ಆಗುವುದಿಲ್ಲ. ಇವತ್ತು ಬೋಗಸ್ ಬಿಲ್ಲಿಂಗ್ ಆಗುವುದಿಲ್ಲ. ಯಾರು ಮನೆಯನ್ನು ಕಟ್ಟಿಸುವಂತಹ ಅಸಕ್ತಿ ಹೊಂದಿರುತ್ತಾರೋ ಅವರು ಮಾತ್ರ ಮನೆಯನ್ನು ಕಟ್ಟಿಸಿಕೊಳ್ಳುತ್ತಾರೆ. ಇದು ಒಂದು good scheme ಆಗಿದೆ. ಇದಕ್ಕೆ ಇನ್ನು ಹೆಚ್ಚಿನ ಹಣವನ್ನು ರಾಜ್ಯ ಸರ್ಕಾರವು ಕೊಡಬೇಕಾಗಿತ್ತು. Housing Department ಇನ್ನೊಂದು ಒಳ್ಳೆಯ ಸಲಹೆಯನ್ನು ಕೊಡುತ್ತೇನೆ. ಇವತ್ತು ನಮ್ಮ ಕಡೆಯಲ್ಲಿ ಏನಿದೆ ಎಂದರೆ ಇವತ್ತು almost ಮನೆಗಳನ್ನು ಕೊಟ್ಟ ಮೇಲೆ ಇನ್ನೊಂದು ಹೊಸ ಸ್ಕೀಮ್ ಅನ್ನು ತರಬೇಕು. ಅದೇನೆಂದರೆ, ಈ ಕಚ್ಚಾ ಇರತಕ್ಕಂತಹ ಮನೆಗಳನ್ನು ಪಕ್ಕಾ ಮಾಡುವಂತಹದ್ದು ಆಗಬೇಕು. ಏಕೆಂದರೆ ನಮ್ಮ ಕಡೆಯಲ್ಲಿ ಇವತ್ತು earthquake prone area ಅದು. Seismic Zone ನಲ್ಲಿ earthquake ಆಗುವಂತಹ ಸಂಭವ ಇದೆ Geography Department ನವರು ಹೇಳುತ್ತಾರೆ. ಅದಕ್ಕೆ ಇವತ್ತು ನಮ್ಮ ಕಡೆಗಳಲ್ಲಿ ಅಡ ಚಪ್ಪರದ ಮನೆಗಳನ್ನು ಇರುತ್ತವೆ. ಒಂದು ವೇಳೆ

ಇವತ್ತು earthquake ಆಯಿತೆಂದರೆ, ಕಿನಾರೆಯಲ್ಲಿ ಎಂತಹ ದೊಡ್ಡ ಪ್ರಮಾಣದ ಅನಾಹುತ ಆಯಿತು ಆ ರೀತಿ ಅನಾಹುತ ಆಗುತ್ತದೆ. ಯಾವ ಯಾವ ಅಡ ಚಪ್ಪರ ಮನೆಗಳು ಇವೆ, ಅವುಗಳಿಗೆ ನೀವು ಚೆತ್ ಹಾಕುವುದಕ್ಕೆ ಸಹಾಯ ಮಾಡಿ. ಹೊಸ ಮನೆಗಳನ್ನು ಕಟ್ಟತಕ್ಕಂಥ ಅವಶ್ಯಕತೆ ಇಲ್ಲ. ಅಷ್ಟೇ ಹಣದಲ್ಲಿ ಇರತಕ್ಕಂಥ ಮನೆಗಳನ್ನು ಪಕ್ಕಾ ಮಾಡುವುದು. ಒಂದು ಹಳ್ಳಿಯಲ್ಲಿ 300 ಮನೆಗಳು ಇವೆ, ಅವರಿಗೆ ನೀವು ಮುಂದೆ ನಿಮ್ಮ ಎಲ್ಲಾ ಮನೆಗಳನ್ನು ಪಕ್ಕಾ ಮಾಡುತ್ತೇವೆ, ನಿಮಗೊಂದು RCC concrete ಹಾಕುತ್ತೇವೆ ಎನ್ನುವಂಥ ಒಂದು ಯೋಜನೆ ಮಾನ್ಯ ಸೋಮಣ್ಣನವರು ತರಬೇಕೆನ್ನುವುದು ನನ್ನ ಒಂದು ಮನವಿ.

ಶ್ರೀ ವಿ. ಸೋಮಣ್ಣ (ಮಾನ್ಯ ವಸತಿ ಸಚಿವರು) :- ಮಾನ್ಯ ಅಧ್ಯಕ್ಷರೆ, ಇವತ್ತು ಮಾನ್ಯ ಸದಸ್ಯರು ಏನು ಹೇಳುತ್ತಿದ್ದಾರೆ, ಇವತ್ತು awareness create ಅಂತೂ ಆಗಿದೆ. ವಿಶೇಷವಾಗಿ ಬೀದರ್, ಗುಲ್ಬರ್ಗಾ, ರಾಯಚೂರು, ಬಿಜಾಪುರ ಈ ಜಿಲ್ಲೆಗಳ ಬಗ್ಗೆ ಸನ್ಮಾನ್ಯ ಸದಸ್ಯರು ಹೇಳುತ್ತಿರುವಂಥದ್ದು, ಜನರ ಜೀವನಮಟ್ಟ ಇನ್ನು ಕೂಡ ಸಾಕಷ್ಟು ಬದಲಾವಣೆ ಆಗಬೇಕಾಗಿದೆ. ಅದಕ್ಕೋಸ್ಕರವಾಗಿ ನಾವು ಈ ವರ್ಷದ ಸೆಪ್ಟೆಂಬರ್‌ನಲ್ಲಿ ಒಂದು ಯೋಜನೆಯನ್ನು ರೂಪಿಸುತ್ತಿದ್ದೇವೆ. ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ರಾಜೀವ್ ಆವಾಸ್ ಯೋಜನೆಯನ್ನು ನಾವು ಆಗಸ್ಟ್ ಮೊದಲನೆಯ ವಾರದಲ್ಲಿ introduce ಮಾಡುತ್ತಿದ್ದೇವೆ. ಆ introduce ಮಾಡತಕ್ಕಂಥ ಸಂದರ್ಭದಲ್ಲಿ ಹೆಚ್ಚಿನ ಭಾಗವನ್ನು ಹೈದ್ರಾಬಾದ್-ಕರ್ನಾಟಕ ಮತ್ತು ಬಾಂಬೆ-ಕರ್ನಾಟಕಕ್ಕೆ ಮತ್ತು ಎಲ್ಲೆಲ್ಲಿ ಈ ರೀತಿಯ ತೊಂದರೆಗಳು ಇವೆ, ವಿಶೇಷವಾಗಿ ಚಾಮರಾಜನಗರ ಇರಬಹುದು ಮತ್ತು ಬಹುತೇಕ ಜಿಲ್ಲೆಗಳಿಗೆ ಆದ್ಯತೆ ಕೊಡುವುದಕ್ಕೆ ಸರ್ಕಾರ ಒಂದು ಹೆಜ್ಜೆ ಮುಂದೆ ಇಟ್ಟಿದೆ. ಒಂದು ತಮ್ಮಲ್ಲಿ ಮನವಿ ಮಾಡುವುದೇನೆಂದರೆ, GPS ಮಾಡಿದ್ದೇವೆನ್ನುವಂಥ ಒಂದು ದೊಡ್ಡ ಮಾತನ್ನು ತಾವು ಹೇಳಿದ್ದೀರಿ. ಇಡೀ ಈ ನಮ್ಮ ವ್ಯವಸ್ಥೆಯನ್ನು ಕೇಂದ್ರ ಸರ್ಕಾರವು ಮನವರಿಕೆ ಮಾಡಿ ಇಡೀ ರಾಷ್ಟ್ರದಲ್ಲಿ ಇದನ್ನು ತರುತ್ತಿದ್ದಾರೆ. ನಾನು ತಮ್ಮ ಮೂಲಕ ಎಲ್ಲಾ ಮಾನ್ಯ ಸದಸ್ಯರಿಗೆ ಮನವಿ ಮಾಡುವುದು ಇಷ್ಟೆ. ಯಾವುದೇ ಕಾರಣಕ್ಕೆ ನಮ್ಮ ನೋಡಲ್ ಆಫೀಸರ್‌ಗಳನ್ನು, ನಮ್ಮ ಪಿಡಿಓ ಗಳನ್ನು ಮತ್ತು Executive Officer ಗಳಿಗೆ ಹೇಳಿ ಒತ್ತಡ ತರುವುದು. Digital ನಲ್ಲಿ ಕೆಲವು photo ಗಳನ್ನು ಹಾಕುವಂಥದ್ದು, ತಲೆ ಒಬ್ಬರದು, ಕಾಲು ಒಬ್ಬರದು, ಕೈ ಒಬ್ಬರದು ಇರತ್ತದೆ. ಇಂತಹ ಕೆಲಸ ಮಾಡುವಂಥದ್ದನ್ನು ಮಾನ್ಯ ಶಾಸಕರುಗಳ ಗಮನಕ್ಕೆ ತಂದರೆ ದಯಮಾಡಿ ಯಾವುದೇ ಕಾರಣಕ್ಕು ಉತ್ತೇಜನ ಕೊಡತಕ್ಕಂಥದ್ದು ಅಲ್ಲ, ಇದೊಂದು ಪಾರದರ್ಶಕವಾಗಿ ನಡೆಯುವಂಥದ್ದು, ತಮ್ಮ ಸಲಹೆಯನ್ನು ನಾನು ಸ್ವೀಕಾರ ಮಾಡುತ್ತೇನೆ.

ಶ್ರೀ ಗೂಳಿಹಟ್ಟಿ ಡಿ. ಶೇಖರ್ :- ಮಾನ್ಯ ಅಧ್ಯಕ್ಷರೆ, ಎಂ.ಎಲ್.ಸಿ.ಗಳನ್ನು ಉಪಾಧ್ಯಕ್ಷರನ್ನಾಗಿ ಮಾಡಿದ್ದಾರೆ. ಹಿಂದೆ ಎರಡು ಮೂರು ಸಲ ಹೇಳಲಾಗಿದೆ. ದಯಮಾಡಿ ಅದನ್ನು ತೆಗೆದರೆ ಬಹಳ ಒಳ್ಳೆಯದು.

ಅಧ್ಯಕ್ಷರು :- ಮಾನ್ಯ ಸದಸ್ಯರು ಮಾತನಾಡುವುದನ್ನು ಮುಗಿಸಲಿ.

ಶ್ರೀ ಟಿ.ಬಿ. ಜಯಚಂದ್ರ :- ಬಹಳ ಮುಖ್ಯವಾದಂಥ ವಿಚಾರ.

ಅಧ್ಯಕ್ಷರು :- Please, ಅವರು yield ಆಗಿಲ್ಲ.

ಶ್ರೀ ಟಿ.ಬಿ. ಜಯಚಂದ್ರ :- ಈಗ ಡಾ॥ ಶರಣ ಪ್ರಕಾಶ್ ಪಾಟೀಲ್‌ರವರು ನೀವು ಪಾರದರ್ಶಕತೆ ತರುವಂಥ ಪ್ರಯತ್ನ ಮಾಡಿದ್ದೀರೆಂದು ತಮ್ಮನ್ನು ಮುಕ್ತಕಂಠದಿಂದ ಹೊಗಳಿದರು, ಅದನ್ನು ನಾನೂ ಕೂಡ ಒಪ್ಪುತ್ತೇನೆ. ನೇರವಾಗಿ ಆ ಹಣ ಅವನ ಅಕೌಂಟಿಗೆ ಹೊಂದಾಣಿಕೆ ಆಗತಕ್ಕಂಥದ್ದು ಒಳ್ಳೆಯದು. ಮಧ್ಯವರ್ತಿಗಳ ಪಾತ್ರ ಕಡಿಮೆ ಆಗಿದೆ. ನಾನು ಇನ್ನೊಂದು ಮುಖ್ಯವಾದ ವಿಷಯವನ್ನು ಪದೇ ಪದೇ ಹೇಳುತ್ತಿದ್ದೇನೆ. ಇವತ್ತು ನೀವು ಯಥೇಚ್ಛವಾಗಿ ಮನೆಗಳನ್ನು ಕೊಟ್ಟಿದ್ದೀರಿ. 2011-12, 2012-13ನೇ ಸಾಲಿಗೆ ಯಾರಿಗೂ ಒಂದು ಮನೆಯನ್ನು ಕೊಡುವುದಕ್ಕೆ ನಿಮ್ಮಿಂದ ಆಗಿಲ್ಲ. ನಿಮಗೆ demand ಕಡಿಮೆ ಆಗುವುದಕ್ಕೆ ಕಾರಣವೇನೆಂದರೆ ನಿವೇಶನಗಳು ಇಲ್ಲದಿರುವುದು ನಿಮ್ಮಲ್ಲಿರುವ ದೊಡ್ಡ ತೊಂದರೆ. ಸನ್ಮಾನ್ಯ ದೇವರಾಜ್ ಅರಸ್‌ರವರು ಇದ್ದಂಥ ಸಂದರ್ಭದಲ್ಲಿ Landless House Sites Act of 1972 ಇತ್ತು. ಆ Act ಅನ್ನು ನಾವು replace ಮಾಡಿ annual ಮಾಡಿ ಸುಮಾರು ಒಂದು ವರ್ಷವಾಯಿತು. ಅದಾದ ಮೇಲೆ ಬೇರೆ act ತರಬೇಕೆಂಬ ಮಾತನ್ನು ಹೇಳಿದರು. ಇವತ್ತು ನೀವು ಹೇಳಿ ಸ್ವಾಮಿ. ಯಾವ Act ಪ್ರಕಾರ ನೀವು ನಿವೇಶನವನ್ನು ತರಲಿಕ್ಕೆ ಸಾಧ್ಯ. ನೀವು Land Acquisition Act ಪ್ರಕಾರ acquire ಮಾಡಲಿಕ್ಕೆ ಹೋದರೆ ಖಂಡಿತವಾಗಿಯೂ guidance value ಒಳಗೆ ಮೂರರಷ್ಟು ಕೊಟ್ಟರೂ ಕೂಡ ನಿವೇಶನಕ್ಕೆ ಯಾರೂ ಬರುತ್ತಿಲ್ಲ. ಅದಕ್ಕೆ ವಿಶೇಷವಾಗಿರತಕ್ಕಂಥ ಒಂದು ಕಾನೂನು ಮಾಡಿ ಎಂದು ನಾವು ಸಲಹೆ ಕೊಡುತ್ತಲೇ ಇದ್ದೇವೆ. ಆ ಕಾನೂನು ಮಾಡಿದರೆ ನಿಜವಾಗಿಯೂ ಕೂಡ ಸಹಾಯವಾಗುತ್ತದೆ. ಅದರ ಬಗ್ಗೆ ಯೋಚನೆ ಮಾಡಿ. ಈಗಲೂ ಕೂಡ ಕಾಲ ಮಿಂಚಿಲ್ಲ. ಒಳ್ಳೆಯ ಹೆಸರು ಬರುತ್ತದೆ. ಎರಡನೆಯದಾಗಿ, ಭಾರತ ಸರ್ಕಾರ ಈಗಲೇ ರಾಜೀವ್ ಆವಾಸ್ ಯೋಜನೆ ಏನು ತರಬೇಕೆಂದು ಮಾಡಿದ್ದಾರೆ. ನಾನೂ ಕೂಡ 15 ದಿವಸಗಳ ಕೆಳಗೆ ದೆಹಲಿಗೆ ಹೋದಾಗ ಕುಮಾರಿ ಶೆಲ್ಜಾರವರನ್ನು ಭೇಟಿ ಮಾಡಿದ್ದೇನೆ.

ರಾಜೀವ್ ಆವಾಸ್ ಯೋಜನೆ ಇನ್ನೂ ಅಂತಿಮವಾಗಿ ಫೈನಲ್ ಆಗುತ್ತಿದೆ. ಇದೆಲ್ಲಕ್ಕಿಂತ ಮುಂಚೆ IHSBP 2nd Phaseಗೆ ಪ್ರಪೋಸಲ್ ಕೇಳುತ್ತಿದ್ದಾರೆ. ಅದಕ್ಕೆ ಏನಾದರೂ ಮಾಡಿ 50 ತಾಲ್ಲೂಕುಗಳನ್ನು ಸೇರಿಸುವಂಥ ಕೆಲಸವನ್ನು ಮಾಡಿ ಬೇಗ ಪ್ರಪೋಸಲ್ ಕಳುಹಿಸಿ, ಜಯಚಂದ್ರರವರೇ ಪ್ರಪೋಸಲ್ ಕೊಟ್ಟಿದ್ದೇವೆ, ನೀವು ಹೋಗಿ ಮಾಡಿಕೊಂಡು ಬನ್ನಿ ಎಂದು ಹೇಳುವಂಥ ಕೆಲಸವನ್ನು ಮಾಡಬೇಕು. ಆ ಸಂದರ್ಭದಲ್ಲಿ ಶಿರಾ ಬಿಟ್ಟು ಬೇರೆ ತಾಲ್ಲೂಕುಗಳ ಹೆಸರುಗಳನ್ನು ಕಳುಹಿಸಬೇಡಿ. ಶಿರಾ ಬೇಕು.

ಶ್ರೀ ವಿ. ಸೋಮಣ್ಣ (ಮಾನ್ಯ ವಸತಿ ಸಚಿವರು) :- ಮಾನ್ಯ ಅಧ್ಯಕ್ಷರೆ, ನಾವು IHSBP ಯಲ್ಲಿ ಈ ತಿಂಗಳ 30 ನೇ ತಾರೀಖು ನಮ್ಮ ಅಧಿಕಾರಿಗಳು ಹೋಗುತ್ತಿದ್ದಾರೆ. 50 ತಾಲ್ಲೂಕುಗಳನ್ನು ಈಗಾಗಲೇ ಆಯ್ಕೆ ಮಾಡಲಾಗಿದೆ. ಅದರಲ್ಲಿ ಶಿರಾ ಕೂಡ ಇದೆ. ಆದರೆ ನಾವು ಒಂದು ಮಾಡಿದ್ದೇವೆ ನಾವು ಯಾವು ಯಾವುದೇ ಒಂದು ಪಕ್ಷಕ್ಕೆ ಎಲ್ಲೆಲ್ಲಿ ಇದರ ಅವಶ್ಯಕತೆ ಇದೆ. ಎಲ್ಲಿ ಇದಕ್ಕೆ ತೊಂದರೆ ಜಾಸ್ತಿ ಇದೆ. ಅಂಥ places ನಾವು ಆಯ್ಕೆ ಮಾಡಿಕೊಂಡಿದ್ದೇವೆ. ಅದಲ್ಲದೆ ರಾಜೀವ್ ಆವಾಸ್‌ನಲ್ಲಿ 75 ತಾಲ್ಲೂಕುಗಳನ್ನು ಮಾಡಬೇಕೆನ್ನುವ ಒಂದು ಯೋಜನೆಯನ್ನು ಮಾಡಿದ್ದೇವೆ. ಈ ಎಲ್ಲದರ ನಡುವೆ ದೇವರಾಜ್ ಅರಸ್‌ರವರು ಇದ್ದಾಗ ಒಂದು ಕಾನೂನು ಮಾಡಿದ್ದೇವೆಂದು ಹೇಳಿದಿರಿ. ಅದನ್ನು ನಾನು ಈಗಾಗಲೇ ಎರಡು ಮೂರು ಸಾರಿ ವಿಮರ್ಶೆ ಮಾಡಿದೆ. ತಾವು ಶುಕ್ರವಾರ ಬೆಂಗಳೂರಿನಲ್ಲಿ ಇರುವುದಾದರೆ ಮಧ್ಯಾಹ್ನ ಒಂದು ಸಭೆಯನ್ನು ಕರೆಯುತ್ತೇನೆ. ತಾವು ದಯಮಾಡಿ ಬಂದರೆ ನಮ್ಮ ಕಾರ್ಯದಶಿಗಳನ್ನು ಕೂರಿಸಿಕೊಂಡು ಅದನ್ನು ಒಂದು ಮಾಡೋಣ. ಎರಡನೆಯದು ಅಧ್ಯಕ್ಷರೆ, ನಾವು ತಮ್ಮ ಮೂಲಕ ನಾವು ಇವತ್ತಿನವರೆಗೆ 2010-11, 2011-12, 2012-13 ರಲ್ಲಿ ರೈತರ ಹತ್ತಿರವೇ ಡೈರೆಕ್ಟ್ ಆಗಿ 2100 ಎಕರೆ ಜಮೀನನ್ನು ಈ ಆಶ್ರಯ ಮನೆಗಳಿಗೆ ಈಗಾಗಲೇ ಖರೀದಿ ಮಾಡಿ ಕೆಲವು ಕಡೆ ಮಾಡಿದ್ದೇವೆ. ಅದನ್ನು ನಾವು meet ಮಾಡಲಿಕ್ಕೆ ಆಗುವುದಿಲ್ಲ. ತಾವು ಏನು ಹೇಳಿದ್ದೀರಿ ಇವತ್ತು, ಅದನ್ನು ಮಾಡದೇಹೋದರೆ ಮುಂದೆ ಈ ರೀತಿಯಾದ ಸೂರನ್ನು ಒದಗಿಸುವುದು ಕಷ್ಟವಾಗುತ್ತದೆ. ಹಾಗಾಗಿ ತಾವು ಶುಕ್ರವಾರ ಬಂದರೆ ಕುಳಿತುಕೊಂಡು ಮಾತನಾಡಿ ಅದಕ್ಕೊಂದು ರೂಪ ಕೊಡೋಣ.

ಶ್ರೀ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ :- ಇಲಾಖೆಯಲ್ಲಿ ಸುಮಾರು ಒಂದು ಲಕ್ಷ ಕಿ.ಮೀ. ರಸ್ತೆ village roads ಇದೆ. ನಮ್ಮ ರಾಜ್ಯದ ರಸ್ತೆ ಜಾಲದಲ್ಲಿ ನಾವು ನೋಡುತ್ತೇವೆ,

State Highways, National Highways, major district roads, other district roads and village roads. ನಮ್ಮ ಸರ್ಕಾರದ ಆದ್ಯತೆ ಹಳ್ಳಿಗಳ ರಸ್ತೆಗಳನ್ನು ಅಭಿವೃದ್ಧಿಗೊಳಿಸುವುದಾಗಿರಬೇಕು. ಸುಮಾರು ಒಂದು ಲಕ್ಷ ಕಿ,ಮೀ. ರಸ್ತೆಗಳು ಇವತ್ತು ನಮ್ಮ ರಾಜ್ಯದಲ್ಲಿದೆ. ಆದರೆ ಎಷ್ಟು ಹಣವನ್ನು ನಾವು ಇದಕ್ಕೆ ಕೊಡುತ್ತಿದ್ದೇವೆ. ಇಲ್ಲಿ ಹಣದ ಕೊರತೆ ಬಹಳ ಇದೆ ಅಧ್ಯಕ್ಷರೆ, ಒಂದು ವರ್ಷಕ್ಕೆ ಸುಮಾರು 20000 ಕಿ.ಮೀ. ನಷ್ಟು ರಸ್ತೆ ಮಾಡತಕ್ಕಂಥದ್ದಕ್ಕೆ ನಾವು plan ಹಾಕಿಕೊಳ್ಳಬೇಕು. ನಾವು 5 ವರ್ಷದಲ್ಲಿ ಎಲ್ಲಾ ಗ್ರಾಮೀಣ ರಸ್ತೆಗಳನ್ನು ಡಾಂಬರೀಕರಣ ಮಾಡಬೇಕಾದರೆ ಒಂದು ವರ್ಷದಲ್ಲಿ at least 10000 ಕಿ,ಮೀ. ರಸ್ತೆಯನ್ನು ಮಾಡತಕ್ಕಂಥ ಯೋಜನೆಯನ್ನು ಹಾಕಿಕೊಂಡಿಲ್ಲವೆಂದರೆ ಮಾನ್ಯ ಅಧ್ಯಕ್ಷರೆ, ನಮ್ಮ ಹಳ್ಳಿಗಳು ಉದ್ಧಾರವಾಗುವುದು ಹೇಗೆ ? ನಾವು ಬೆಂಗಳೂರಿನಲ್ಲಿ ನೋಡುತ್ತೇವೆ. ಟಾರ್ ಮೇಲೆ ಟಾರ್ ಹಾಕಿ ಒಂದು foot ಟಾರ್ ಆಗಿದೆ. I really surprised. ಎಷ್ಟು ಟಾರ್ ಹಾಕುತ್ತಾರೆಂದರೆ ಒಂದೂವರೆ feet ಟಾರ್ ಹಾಕಿದ್ದಾರೆ. ಅಂದರೆ ಇದನ್ನು ಯಾರು ಕೇಳುವವರೆ ಇಲ್ಲವೇ ? ನಮ್ಮ ಕಡೆ ಇವತ್ತು ರಸ್ತೆಗಳಿಗೆ ಒಂದು ಸಾರಿಯೂ ಟಾರ್ ಹಾಕಲಿಕ್ಕೆ ಆಗಿಲ್ಲ. ನಾವು ಟಾರ್ ನೋಡಿಲ್ಲ. ಅದು 20 ಮಿಲಿಮೀಟರ್ ಟಾರ್ ಹಾಕದೇನೆ ಇವರು ಟಾರ್ ಮೇಲೆ ಟಾರ್ ಹಾಕಿಕೊಂಡು ಹಳ್ಳಿಗಳಿಗೆ ಅನ್ಯಾಯವಾಗುತ್ತಿದೆ. ಮಾನ್ಯ ಅಶೋಕ್‌ರವರು ಬೆಂಗಳೂರಿಗೆ ಮಾತ್ರ ಸಚಿವರಲ್ಲ. ಈಗ ಪ್ರಭಾವಿ ಉಪ ಮುಖ್ಯಮಂತ್ರಿಗಳಾಗಿದ್ದೀರಿ. ಸ್ವಲ್ಪ ರೈತರ ಕಡೆಯೂ ಹಳ್ಳಿ ಭಾಗದ ಕಡೆಯೂ ನೋಡಬೇಕು. ನಿಮ್ಮ ಬಸ್‌ಗಳು ಓಡಾಡಬೇಕು. ಏನೆಂದರೆ ನಮ್ಮ ಹಳ್ಳಿಗಳಲ್ಲಿ it is so surprising. ಇದನ್ನು ನಮ್ಮ ಸಚಿವರ ಗಮನಕ್ಕೂ ತಂದಿದ್ದೇನೆ. ನನ್ನ ಮತ ಕ್ಷೇತ್ರದಲ್ಲಿ 30% villages ಗೆ ಇವತ್ತು ಬಸ್‌ಗಳು ಹೋಗುವುದಿಲ್ಲ. ರಸ್ತೆ ಮಾಡಿದ್ದೇವೆ, ಆದರೆ ನಿಮ್ಮವರು ಬಸ್ ಓಡಿಸಲಿಕ್ಕೆ ತಯಾರಿಲ್ಲ. ನಾನು ಹತ್ತು ಸಾರಿ ಮನವಿ ಮಾಡಿದ್ದೇನೆ. ಏನೆಂದರೆ ನಮ್ಮ ಸೇಡಂ ಡಿಪೋಗೆ ನೀವು ಇನ್ನೊಂದು 20 ಷೆಡ್ಯೂಲ್ಸ್ ಜಾಸ್ತಿ ಕೊಡಿ ಎಂದರೆ ಇಲ್ಲಿಯವರೆಗೆ ಕೊಟ್ಟಿಲ್ಲ. ಆರು ವರ್ಷಗಳ ಹಿಂದೆ ಏನು open ಆದಾಗ 40 ಷೆಡ್ಯೂಲ್ಸ್‌ನಲ್ಲಿ ಓಡಿಸುತ್ತಿದ್ದರು, ಇನ್ನೂ ಅದೇ 40 ಷೆಡ್ಯೂಲ್ಸ್ ಓಡಿಸಲಿಕ್ಕೆ ಆಗುತ್ತಿಲ್ಲ ಅವರಿಗೆ. ಏಕೆಂದರೆ ನಾವು ಗಡಿಭಾಗದಲ್ಲಿದ್ದೇವೆ ಎಂದು ಹಳೆಯ ಬಸ್‌ಗಳನ್ನು ಕೊಡುವುದು. ಆ ಬಸ್‌ಗಳೆಲ್ಲಾ ಬ್ರೇಕ್ ಡೌನ್ ಆಗುವುದು. ಇಲ್ಲವಾದರೆ ಕಂಡೆಕ್ಟರ್ಸ್ shortage ಇದ್ದಾರೆಂದು ಹೇಳಿ ಇವತ್ತು ಸುಮಾರು ನಾಲ್ಕೈದು ಷೆಡ್ಯೂಲ್ಸ್ ಇರುವುದಿಲ್ಲ. 20 ಷೆಡ್ಯೂಲ್ಸ್ ಜಾಸ್ತಿ ಮಾಡಿಕೊಡಿ ಎಂದು ನಾನು ಇಪ್ಪತ್ತು ಸಾರಿ ಅಶೋಕ್‌ರವರ ಹತ್ತಿರ ಮನವಿ

ಮಾಡಿಕೊಂಡಿದ್ದೇನೆ. ಮಾನ್ಯ ಅಶೋಕ್‌ರವರು ಖಂಡಿತವಾಗಿ ಅದನ್ನು ಮಾಡಿಕೊಡಬೇಕು. ಏಕೆಂದರೆ ಗ್ರಾಮೀಣ ಭಾಗದಲ್ಲಿ ರಸ್ತೆ ಮಾಡದೆಹೋದರೆ ನಾವು ಯಾವರೀತಿಯಾಗಿ ಈ ರಾಜ್ಯವನ್ನು ಅಭಿವೃದ್ಧಿ ಮಾಡಿದ್ದೇವೆಂದು ಹೇಳುವುದಕ್ಕಾಗುತ್ತದೆ ?

ಶ್ರೀ ಆರ್. ಅಶೋಕ್ (ಮಾನ್ಯ ಉಪ ಮುಖ್ಯಮಂತ್ರಿಗಳು) :–ನಮ್ಮ ರಾಜ್ಯದಲ್ಲಿ ಒಂದೇ ಕಡೆ 23000 ಬಸ್‌ಗಳು ಇರುವುದು . ನಮ್ಮದು ಸಣ್ಣ ರಾಜ್ಯ, ಬೇರೆ ರಾಜ್ಯಕ್ಕೆ compare ಮಾಡಿದರೆ ಉತ್ತರ ಪ್ರದೇಶ, ಬಿಹಾರ್‌ನಲ್ಲಿ 23000 ಬಸ್‌ಗಳಿವೆ. ಹಳೆಯ ಬಸ್‌ಗಳನ್ನು ಈಗ ಕೊಡುವ systemನಲ್ಲಿ ಹಿಂದೆ ಎಲ್ಲಾ ಕೊಟ್ಟಿದ್ದರು. ಬೆಂಗಳೂರಿನಿಂದ free ಆಗಿ ಬಸ್‌ಗಳನ್ನು ಕೊಡುತ್ತಿದ್ದರು. ಈಗಿಲ್ಲ. ಅಲ್ಲಿ especially ಗುಲ್ಬರ್ಗಾ division ಏನಿದೆ ಅದೇ ಸ್ವತಂತ್ರವಾಗಿ ನಿಲ್ಲುವಂಥ ಶಕ್ತಿ ಬಂದಿದೆ. ಪ್ರತಿ ವರ್ಷ ಸುಮಾರು 800–900 ಹೊಸ ಬಸ್‌ಗಳನ್ನು ಕೊಡುತ್ತಿದ್ದರು. ಈ sleepers ಅನ್ನು ಮೊದಲೇ introduce ಮಾಡುತ್ತಿದ್ದಿರಿ. ನಮ್ಮ ಉದ್ದೇಶವಿರುವುದು ಪ್ರತಿ ಹಳ್ಳಿಗೆ loss ಆಗುತ್ತದೋ gain ಆಗುತ್ತದೋ ನಾನು ಹೇಳಿದೆ ಮೊನ್ನೆ ಹಳ್ಳಿಗಳಲ್ಲಿ ಬಸ್ ಓಡಿಸುವುದರಿಂದ ಪ್ರತಿ ವರ್ಷ 400 ಕೋಟಿ ರೂಪಾಯಿಗಳಷ್ಟು loss ಆಗುತ್ತಿದೆ. ಆದರೂ ಅದು ನಮ್ಮ priority ನಾವು ಮಾಡಬೇಕು ನಮ್ಮ ಕರ್ತವ್ಯ. ತಾವು ಮೊನ್ನೆ ನನ್ನ ಭೇಟಿ ಮಾಡಿದ್ದೀರಿ. ಪ್ರತಿ ಹಳ್ಳಿಗೆ ನಮ್ಮ ಬಸ್ ಹೋಗಬೇಕು. ಅದು ನಮ್ಮ ಉದ್ದೇಶವಿದೆ. ಆ ರೀತಿ ನಾವು ಕೆಲಸ ಮಾಡುತ್ತೇವೆ.

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ :– ಮಾನ್ಯ ಅಧ್ಯಕ್ಷರೆ, ಇವತ್ತು ಸಚಿವರು ಹೇಳಿದ್ದಕ್ಕೆ ಅವರಿಗೆ ಧನ್ಯವಾದಗಳನ್ನು ಹೇಳುತ್ತೇನೆ. ದಯವಿಟ್ಟು ಮಾನ್ಯ ಅಶೋಕ್‌ರವರೆ ತಾವು ಒಂದು ಸಾರಿ ಗುಲ್ಬರ್ಗಾಕ್ಕೆ ಬನ್ನಿ. ಬಂದು ನಮ್ಮ NEKRTC ಯಲ್ಲಿ ಎಲ್ಲಾ ಶಾಸಕರನ್ನು ಕರೆದು ಅಲ್ಲಿ ಏನೇನು ಸಮಸ್ಯೆಗಳಿವೆ, ಅದರ ಬಗ್ಗೆ ಚರ್ಚೆ ಮಾಡೋಣ. ಏನಾಗುತ್ತದೆಂದರೆ ನೀವು ನಮ್ಮ ಜಿಲ್ಲೆಗೆ ಬಂದು ಚರ್ಚೆ ಮಾಡಿ ಏನೇನಿದೆ ಎಂದರೆ ನಾವು ನಿರ್ದಿಷ್ಟವಾಗಿ ಹೇಳಬಹುದು. ಇಲ್ಲೇ ಸಭೆಯನ್ನು ಕರೆಯಿರಿ. ಇನ್ನು ನಮ್ಮ ಮತಕ್ಷೇತ್ರದಲ್ಲಿ ಕೆಲವು ಕಡೆ ನಮ್ಮ ಹತ್ತಿರ bus stand up-gradation ಆಗಬೇಕು. ಏಕೆಂದರೆ ನೀವು ಹೊಸ ಬಸ್‌ಗಳನ್ನು ಕೊಟ್ಟರೆ appreciate ಮಾಡುತ್ತೇವೆ. We have to strengthen the Public Transport. ಇವತ್ತು ಬಾಂಬೆ ಲೋಕಲ್ ಏನಿದೆ, ಬಾಂಬೆಯಲ್ಲಿರತಕ್ಕಂಥ system, one of th best in the country. ಆ ರೀತಿ ಬೆಂಗಳೂರಿನಲ್ಲಿಯೂ ಸಾಕಷ್ಟು improvement ಆಗಿದೆ. ಇಲ್ಲವೆಂದು ಹೇಳುವುದಿಲ್ಲ.

ಶ್ರೀ ಆರ್. ಅಶೋಕ್ (ಮಾನ್ಯ ಉಪ ಮುಖ್ಯಮಂತ್ರಿಗಳು) :– ತಪ್ಪು, ಬಾಂಬೆ ಅಲ್ಲ, ಬೆಂಗಳೂರು best in the country. Best award ಬಂದಿರುವುದು ಬೆಂಗಳೂರಿಗೆ. ಕರ್ನಾಟಕಕ್ಕೆ best award ಬಂದಿರುವುದು. ನಾನು ಅಭಿನಂದನೆ ಸಲ್ಲಿಸುತ್ತೇನೆ. ಗುಲ್ಬರ್ಗಾ division ನಲ್ಲಿ ಖರ್ಗೆಯವರಿದ್ದಾಗ tax exemption ಕೊಟ್ಟರು. ಇವತ್ತು ಗುಲ್ಬರ್ಗಾ division ಏನಾದರೂ ಒಳ್ಳೆಯ ದಾರಿಯಲ್ಲಿ ಹೋಗುತ್ತಿದೆ, ಸಾರಿಗೆ ವ್ಯವಸ್ಥೆ ಬದಲಾವಣೆ ಆಗುತ್ತಿದೆ ಎಂದರೆ ಆವತ್ತು exemption ಕೊಟ್ಟಿದ್ದರಿಂದ. ಅದಾದ ಮೇಲೆ ನಮ್ಮ ಸರ್ಕಾರ ಕಳೆದ ನಾಲ್ಕು ವರ್ಷಗಳಿಂದ tax exemption ಅನ್ನು ಕೊಟ್ಟಿದ್ದೀರಿ. ಹುಬ್ಬಳ್ಳಿಗೆ compare ಮಾಡಿದರೆ Gulbarga is very very better. Positive ಆಗಿ ಕೆಲಸ ಮಾಡುತ್ತಿದೆ.

ಡಾ|| ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ :–ಧನ್ಯವಾದಗಳು, ಇನ್ನೂ ಸ್ವಲ್ಪ ಸುಧಾರಣೆ ಮಾಡಿದರೆ ನಮಗೆ ಇನ್ನೂ ಸಹಕಾರವಾಗುತ್ತದೆ. ಏಕೆಂದರೆ ನನಗೆ ಬಲವಾದ ನಂಬಿಕೆ ಇದೆ. Public Transport System ಅನ್ನು ನಾವು strengthen ಮಾಡಬೇಕು. ಈಗೇನಾಗುತ್ತಿದೆ ಅಂದರೆ ಈ ಜಾಗತೀಕರಣದಿಂದ ಎಲ್ಲರ ಹತ್ತಿರ ಕಾರುಗಳಿವೆ, ಎಲ್ಲರೂ ಬಹಳ ಶ್ರೀಮಂತರಾಗಿಬಿಟ್ಟಿದ್ದಾರೆ. The gap between rich and poor has increased so much that everybody is owning four four cars. ಹಣವಿದ್ದವರು ಐದು, ಆರು ಕಾರುಗಳನ್ನು ಇಟ್ಟುಕೊಂಡಿದ್ದಾರೆ. ಪಾಪ, ಬಡವನ ಹತ್ತಿರ ಒಂದು ಸೈಕಲ್, ಮೋಟರ್ ಸೈಕಲ್ ಸಹ ಇಲ್ಲ. ಅವನು ಇನ್ನು ಬಸ್ ಮೇಲೆ ಅವಲಂಬಿತನಾಗಿದ್ದಾನೆ. ಈ ದೇಶಕ್ಕೆ ಸ್ವಾತಂತ್ರ್ಯ ಬಂದಿರುವುದು ಕೇವಲ ಶ್ರೀಮಂತರಿಗೋಸ್ಕರ ಅಲ್ಲ ಅಧ್ಯಕ್ಷರೆ, ಇಲ್ಲಿರುವ ಬಡವರಿಗೆ ಒಳ್ಳೆಯ ಬದುಕು ಕೊಡಬೇಕಾಗಿದೆ. This is our priority. This should be our priority. So, Public Transport System ಅನ್ನು ನಾವು strengthen ಮಾಡಬೇಕು. ಬಡವರಿಗೆ ಅನುಕೂಲ ಮಾಡಬೇಕು. ಅದರಿಂದ ನಮಗೆ ನಷ್ಟವಾದರೂ ಪರವಾಗಿಲ್ಲ. ಹಾಗಾಗಿ ನೀವು ದಯವಿಟ್ಟು ನಿಮ್ಮ MD ಗಳಿಗೆ directions ಕೊಡಿ. ನಮಗೆ ಲಾಸ್ ಆಗುತ್ತದೆಂದು ಹೇಳಬಾರದು. ನೀವು ಅಲ್ಲಿ ಬೆಂಗಳೂರಿನಲ್ಲಿ ಹಣ ಗಳಿಸುತ್ತಿದ್ದೀರಲ್ಲಾ, ನೀವು ಹಳ್ಳಿ ಪ್ರದೇಶದಲ್ಲಿ ಸ್ವಲ್ಪ ಬಡವರಿಗೆ ಸಹಾಯ ಮಾಡಿ, ನಿಮಗೇನೂ ಕಷ್ಟವಾಗುವುದಿಲ್ಲ. ಮಾನ್ಯ ಅಧ್ಯಕ್ಷರೆ, Public Transport System .... ಅಧ್ಯಕ್ಷರೆ ಇನ್ನೂ ಬಹಳಷ್ಟಿದೆ. ಇನ್ನೂ ಸಮಯ ಇದೆ. ಇನ್ನೂ ಬಹಳಷ್ಟು ಜನರಿದ್ದಾರೆ. ಚರ್ಚೆ ಮಾಡೋಣ. ಇನ್ನೂ ಸ್ವಲ್ಪ ಒಂದು ಗಂಟೆ.

ಅಧ್ಯಕ್ಷರು :– ಮಾತನಾಡಿ ಮುಗಿಸಿ.

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ :–ಇನ್ನೂ ಎರಡು ಇಲಾಖೆಗಳಿವೆ. ಮಾನ್ಯ ಅಧ್ಯಕ್ಷರೆ, ನಾನು ಸುಮ್ಮನೆ ಕಾಲಹರಣ ಮಾಡುತ್ತಿಲ್ಲ. Constructive opinion ಕೊಡುತ್ತಿದ್ದೇನೆ. ಕಂದಾಯ ಇಲಾಖೆ ಬಗ್ಗೆ ಇದೆ. ಜಯಚಂದ್ರರವರು ಮಾತನಾಡಿದ್ದಾರೆ. ಕಂದಾಯ ಇಲಾಖೆಯ ಬಗ್ಗೆ ನಾನು ಜಾಸ್ತಿ discuss ಮಾಡಲಿಕ್ಕೆ ಹೋಗುವುದಿಲ್ಲ. ಏಕೆಂದರೆ ಬರಗಾಲದ ಮೇಲೆ ಸುಧೀರ್ಘವಾಗಿ ಚರ್ಚೆಯಾಗಿದೆ. ಒಂದೇ ಒಂದು ನನ್ನ ಸಲಹೆ ಇದೆ. ಏನೆಂದರೆ Stamp and Registration ಕಂದಾಯ ಇಲಾಖೆಯಡಿ ಬರುತ್ತದೆ. Land guidance value ಬಗ್ಗೆ ಜಯಚಂದ್ರರವರು ಹೇಳಿದರು. ನೀವು ಭೂಮಿಯನ್ನು ಹೇಗೆ ಖರೀದಿ ಮಾಡುತ್ತೀರಿ ? Land guidance value is so low in rural area.ನಮ್ಮ ಕಡೆ ಒಂದು ಎಕರೆಗೆ Land guidance value 40,000 ರೂ.ಗಳಿವೆ. ಆದರೆ ಬೆಂಗಳೂರಿನಲ್ಲಿರುವ Land guidance value 40 ಲಕ್ಷ ರೂ.ಗಳು, 30 ಲಕ್ಷ ರೂ.ಗಳು. ಇದನ್ನು ನೋಡಿದರೆ ನನಗೆ ಬಹಳ ಆಶ್ಚರ್ಯವಾಗುತ್ತದೆ. ನಾನು ಒಂದು ಸಾರಿ ಆ ಇಲಾಖೆಯನ್ನು Land Guidance Value ವನ್ನು ಯಾವ ಆಧಾರದ ಮೇಲೆ ನೀವು ಫಿಕ್ಸ್ ಮಾಡುತ್ತೀರೆಂದು ಕೇಳಿದೆ. What is the criteria ? Land guidance value fix ಮಾಡುವುದಕ್ಕೆ ಮಾನದಂಡವೇನಿದೆ ? ನಮ್ಮ ಕಡೆ ಇರುವ ಭೂಮಿ ಫಲವತ್ತಾಗಿದೆ, ಒಳ್ಳೆಯ ಬೆಳೆ ಬೆಳೆಯುವಂತಹ ಭೂಮಿಯಾಗಿದ್ದರೂ ಅಲ್ಲಿ Land guidance value 40,000 ರೂ.ಗಳಿವೆ. ಆದರೆ ಬೆಂಗಳೂರಿನ ಸುತ್ತಮುತ್ತ ಇರುವುದು ಬರಡು ಭೂಮಿಯಾಗಿದ್ದು ಇಲ್ಲಿ ಏನೊಂದು ಬೆಳೆಯನ್ನು ಬೆಳೆಯುವುದಕ್ಕಾಗುವುದಿಲ್ಲ. ಆದರೆ, Land guidance value 40 ಲಕ್ಷ ರೂ.ಗಳಿವೆ. ನಮ್ಮ ಕಡೆ Public propose ಗೆ land purchase ಮಾಡಬೇಕಾದರೆ ಯಾವ ರೈತರೂ ಕೂಡ ಎಕರೆಗೆ 40,000 ರೂ.ಗಳಿಗೆ ಡಿ.ಸಿ.ಗೆ request ಮಾಡಿದರೆ ಅವರು three times enhance ಮಾಡಿ ಒಂದೂವರೆ ಲಕ್ಷಕ್ಕೆ ಯಾರೂ ಕೊಡುವುದಿಲ್ಲ. Kindly enhance the Land guidance value. ಹಳ್ಳಿ ಪ್ರದೇಶದಲ್ಲಿ land guidance value enhance ಮಾಡಿ, enhance ಮಾಡುವಾಗ ಕೆಲವು ಜನ objection ಮಾಡುತ್ತಾರೆ. ಲ್ಯಾಂಡ್ purchase ಮಾಡುವಾಗ ನಮ್ಮ ಸ್ಟ್ಯಾಂಪ್ ಡ್ಯೂಟಿಯನ್ನು ಶೇ. ಎಷ್ಟು ಪರ್ಸೆಂಟ್ ಮಾಡಿದ್ದೀರಿ, ಅದಕ್ಕೆ ಬಹಳ ಹಣ ಕೊಡಬೇಕಾಗುತ್ತದೆ. Kindly reduce the stamp duty and increase the land guidance value. ನೀವು ಈ

ರೀತಿ ಮಾಡಿದರೆ ರೈತರಿಗೆ ಮನೆಯಲ್ಲಿಯೇ ಕೂರಿಸಿ ಆದಾಯ ಹೆಚ್ಚು ಮಾಡಿದಂತಾಗುತ್ತದೆ. ಅವರ ಲ್ಯಾಂಡ್ ಹೋಲ್ಡಿಂಗ್ಸ್ ಪ್ರಕಾರ ಅವರಿಗೆ ಜಾಸ್ತಿ ಆದಾಯ ಬಂದಂತಾಗುತ್ತದೆ. 10 ಎಕರೆ ಭೂಮಿಯನ್ನು ಬ್ಯಾಂಕಿನಲ್ಲಿ ಅಡವಿಟ್ಟರೆ 5 ಲಕ್ಷ ರೂ.ಗಳನ್ನು ಸಾಲ ಕೊಡುವುದಕ್ಕೆ ಯಾರೂ ತಯಾರಿರುವುದಿಲ್ಲ. ಆದರೆ, ಬೆಂಗಳೂರಿನಲ್ಲಿ 30x40 ಅಳತೆಯ ಒಂದು ನಿವೇಶನವಿದ್ದರೆ ಅದಕ್ಕೆ 50 ಲಕ್ಷ ರೂ.ಗಳ ಸಾಲ ಕೊಡುವುದಕ್ಕೆ ತಯಾರಿದ್ದಾರೆ. ರಾಜ್ಯದಲ್ಲಿರುವ ರೈತರಿಗೆ, ಬಡವರಿಗೆ ಪಾಲೇ ಇಲ್ಲವೇ ? ಯಾರೂ ಇದನ್ನು ಕೇಳುವವರೇ ಇಲ್ಲವೇ ? ಈ ಮಾತನ್ನು ನಾನು ಕಳೆದ ಮೂರು ವರ್ಷಗಳಿಂದ ಹೇಳುತ್ತಿದ್ದೇನೆ. ಆದರೂ ಮಾನ್ಯ ಕಂದಾಯ ಸಚಿವರು ಇದನ್ನು ಕೇಳುತ್ತಿಲ್ಲ. land guidance value ಜಾಸ್ತಿ ಮಾಡದೇ ಹೋದರೆ ಆಶ್ರಯ ಮನೆಗಳಿಗೆ ಭೂಮಿ ಸಿಗುವುದಿಲ್ಲ. ಆಸ್ಪತ್ರೆಗಳಿಗೆ ಭೂಮಿ ಸಿಗುವುದಿಲ್ಲ, ಕಾಲೇಜ್‌ಗಳನ್ನು ಕಟ್ಟಬೇಕಾದರೆ ಭೂಮಿ ಸಿಗುವುದಿಲ್ಲ. ಹಳ್ಳಿಯಾಗಲಿ, ನಗರ ಪ್ರದೇಶಗಳಲ್ಲಾಗಲಿ ಭೂಮಿ ಸಿಗುತ್ತಿಲ್ಲ. ಇವತ್ತು ನೀವು ನಿರ್ಬಂಧ ಹಾಕುತ್ತೀರಿ. Deputy Commissioner ಅವರು three timesಗಿಂತ ಜಾಸ್ತಿ enhancement ಕೊಡುವುದಿಲ್ಲವೆನ್ನುವುದನ್ನಾದರೂ ಸಡಿಲ ಮಾಡಿ. Public purposesಗೆ market value ಅಲ್ಲಿ purchase ಮಾಡುತ್ತೇವೆಂದು ಸ್ಟೇಟ್‌ಮೆಂಟ್ ಕೊಡಿ. ಈ ರೀತಿ ಮಾಡುತ್ತಿಲ್ಲವಾದ್ದರಿಂದ ಪ್ರಗತಿ ಕೂಡ ಆಗುತ್ತಿಲ್ಲ. ಇದನ್ನು ಸರಿಪಡಿಸಬೇಕೆಂಬುದೇ ನನ್ನ ಮನವಿ.

ಇಂಧನ ಇಲಾಖೆ ಬಗ್ಗೆ ಜಾಸ್ತಿ ಮಾತನಾಡುವುದಕ್ಕೆ ಹೋಗುವುದಿಲ್ಲ. ಎರಡೇ ಎರಡು ವಿಷಯಗಳನ್ನು ಪ್ರಸ್ತಾಪ ಮಾಡುವುದಕ್ಕೆ ಬಯಸುತ್ತೇನೆ. ಇವತ್ತು ಕೂಡ ನಮ್ಮ ರಾಜ್ಯದಲ್ಲಿ ನಿಮ್ಮ transmission l ಲಾಸ್ ಎಷ್ಟಿದೆ ಗೊತ್ತಿದೆಯೇ ? 30% ನಷ್ಟಿದೆ. Distribution and Transmission Loss is 30% highest in the Country. ಇದನ್ನು ನೀವು ಒಂದು ವೇಳೆ reduce ಮಾಡಬೇಕಾದರೆ, you should improve the system. 33% ಸಬ್ ಸ್ಟೇಷನ್‌ನ್ನು ಜಾಸ್ತಿ ಮಾಡಿ. 110 ಕೆ.ವಿ. ಸಬ್ ಸ್ಟೇಷನ್‌ನ್ನು ಮಾಡಿ, ಲೈನ್ improvement ಮಾಡಿ. 11 ಕೆ.ವಿ. ಲೈನ್‌ನ್ನು replace ಮಾಡಿ, re-conducting ಮಾಡಿ. ಹಳ್ಳಿಗಳಲ್ಲಿ ಸುಮಾರು 40 ವರ್ಷಗಳ ಹಿಂದೆ ಹಾಕಿರುವ ವೈರ್‌ಗಳನ್ನು ಇಂದಿಗೂ ಬದಲಾವಣೆ ಮಾಡಿಲ್ಲ, ಅವುಗಳು ಕಡಿದು ಬೀಳುವುದರಿಂದ ನಮ್ಮ ರೈತರು ಸಾಯುತ್ತಿದ್ದಾರೆ. ಅದನ್ನು ಬದಲಾವಣೆ ಮಾಡಿ. ಹೀಗಿರುವಂತಹ ವ್ಯವಸ್ಥೆಯನ್ನು ಸುಧಾರಣೆ ಮಾಡುವುದರಿಂದ ನಿಮ್ಮ transmission loss ಕಡಿಮೆಯಾಗುತ್ತದೆ. ಪ್ರತಿಯೊಂದು ಟ್ರಾನ್ಸ್‌ಫಾರ್ಮರ್‌ಗೆ ಒಂದು ಮೀಟರ್‌ನ್ನು ಅಳವಡಿಸಬೇಕೆಂದು ಕಳೆದ ಸಾರಿ ಅಧಿವೇಶನದಲ್ಲಿಯೇ ಸಲಹೆ

ನೀಡಿದ್ದೇನೆ. ಕೆಲವು ಕಡೆಗಳಲ್ಲಿ oppose ಮಾಡುತ್ತಿದ್ದಾರೆ. ಏಕೆಂದರೆ ನೀವು ಏನು blame ಮಾಡುತ್ತಿದ್ದೀರೆಂದರೆ, ನಮ್ಮಲ್ಲೇನು theft ಇದೆ, ಅದನ್ನೆಲ್ಲಾ ರೈತರ ಮೇಲೆ ಹಾಕುವುದು ಅಥವಾ ಏನು ಅಗ್ರಿಕಲ್ಚರ್‌ಗೆ ಕೊಟ್ಟಿದೆಯೋ ಅದರ ಮೇಲೆ ಹಾಕುತ್ತಾರೆ. Theft ಆಗುವುದು Industries ಹಾಗೂ town ಗಳಲ್ಲಿ ಮಾತ್ರ, ರೈತರಿಂದ ಯಾವುದೇ ರೀತಿಯ theft ಆಗುತ್ತಿಲ್ಲ. ನೀವು ಪುಕ್ಕಟೆಯಾಗಿ ವಿದ್ಯುತ್ ಕೊಡುತ್ತೇವೆಂದು ಏನು ಹೇಳುತ್ತಿದ್ದೀರಿ, ಅದನ್ನು ಕೊಡಬೇಡಿ, ಬೇಕಾದರೆ ಚಾರ್ಜ್ ಮಾಡಿ. ಒಳ್ಳೆಯ ಗುಣಮಟ್ಟದ ವಿದ್ಯುತ್ ಕೊಡುವ ವ್ಯವಸ್ಥೆಯನ್ನು ಮಾಡಬೇಕು. ಏಕೆಂದರೆ ಪ್ರತಿ ಸಾರಿ ನಾವು ಗ್ರಾಮೀಣ ಪ್ರದೇಶಗಳಿಗೆ ಹೋದಾಗ ರೈತರನ್ನು face ಮಾಡಬೇಕಾಗುತ್ತದೆ. ಏನ್ರೀ 6 ಗಂಟೆಗಳ ವಿದ್ಯುತ್ ಕೊಡುತ್ತಿಲ್ಲ., 3 ಗಂಟೆಗಳ ಕಾಲ ವಿದ್ಯುತ್ ಕೊಟ್ಟು, ಇದರಿಂದ ಯಾವುದೇ ಬೆಳೆ ಬೆಳೆಯುವುದಕ್ಕೂ ಸಹ ಆಗುತ್ತಿಲ್ಲ ಎಂದು ಹೇಳುತ್ತಾರೆ. ಇಂದು ಗ್ರಾಮೀಣ ಪ್ರದೇಶಗಳಲ್ಲಿ ವಿದ್ಯಾರ್ಥಿಗಳಿಗೆ ಓದುವುದಕ್ಕೂ ಆಗುತ್ತಿಲ್ಲ. ಏಕೆಂದರೆ ಸಿಂಗಲ್ ಫೇಸ್ ಕರೆಂಟ್ ಸಹ ಕೊಡುತ್ತಿಲ್ಲ. ಈಗೇನು 'ನಿರಂತರ ಜ್ಯೋತಿ' ಎಂಬ ಒಂದು ಸ್ಕೀಮ್‌ನ್ನು ತಂದಿದ್ದಾರೆ ಅದು ಬಹಳ ವಿಳಂಬವಾಗಿ ನಡೆಯುತ್ತಿದೆ. ಆದರೆ ನಿರಂತರ ಜ್ಯೋತಿ is a good scheme. I don't differ with that, Implementation ಸರಿಯಾದ ರೀತಿಯಲ್ಲಿ ಆಗಬೇಕು. ಮೂರು ವರ್ಷಗಳಲ್ಲಿ implement ಆಗುವುದನ್ನು ನೀವು ಆರಾರು ವರ್ಷಗಳಿಗೆ ತೆಗೆದುಕೊಂಡು ಹೋದರೆ ಯಾವಾಗ ಅದು ಮುಗಿಯುವುದು ? ಆದಕಾರಣ ಅದನ್ನು ಶೀಘ್ರದಲ್ಲಿ ಮುಗಿಸುವ ಕೆಲಸವನ್ನು ಮಾಡಬೇಕು. ನನಗೆ ಬಹಳ surprise ಆಗಿರುವ ವಿಷಯವೇನೆಂದರೆ ಇವತ್ತು we have spent nearly Rs. 10,000 crores for power purchase. ಈ ರಾಜ್ಯದಲ್ಲಿ ಇಷ್ಟೊಂದು ದೊಡ್ಡ ಪ್ರಮಾಣದ ಹಣವನ್ನು ವಿದ್ಯುತ್ ಖರೀದಿ ಮಾಡುವುದಕ್ಕೆ ಉಪಯೋಗ ಮಾಡಿದ್ದೇವೆಂದರೆ ಖಂಡಿತವಾಗಿ there is some malpractice in this. ಇದರ ಬಗ್ಗೆ ತನಿಖೆಯಾಗಬೇಕು, ಇದಕ್ಕೊಂದು ಸದನ ಸಮಿತಿ ರಚನೆಯಾಗಬೇಕು. ಈ ರಾಜ್ಯದ ಸುಮಾರು 9 ರಿಂದ 10 ಸಾವಿರ ಕೋಟಿ ರೂ.ಗಳ ಹಣವನ್ನು ನಾವು ವಿದ್ಯುತ್ ಖರೀದಿ ಮಾಡುವುದಕ್ಕೆ ಉಪಯೋಗಿಸುತ್ತಿದ್ದೇವೆಂದರೆ ನಾವು ಯಾರ್‍ಯಾರ ಹತ್ತಿರ ವಿದ್ಯುತ್ ಖರೀದಿ ಮಾಡುತ್ತಿದ್ದೇವೆ, ಯಾವ ದರದಲ್ಲಿ ವಿದ್ಯುತ್ ಖರೀದಿ ಮಾಡುತ್ತಿದ್ದೇವೆ, ಇದರಲ್ಲಿ ಪಾದರ್ಶಕತೆ ಇಲ್ಲ. ಈ ರಾಜ್ಯದ ಜನ ಅನುಮಾನದಿಂದ ನೋಡುವ ರೀತಿ ಇವತ್ತು ಈ ರಾಜ್ಯದಲ್ಲಿ ವಿದ್ಯುತ್ ಖರೀದಿ ನಡೆಯುತ್ತಿದೆ. ಯಾರ್‍ಯಾರ ಹತ್ತಿರ power purchase ಮಾಡುತ್ತಿದ್ದೀರಿ, ಏನೇನು ದರದಲ್ಲಿ purchase ಮಾಡುತ್ತಿದ್ದೀರಿ ಎಂಬುದನ್ನು

ತಿಳಿಯುವ ಕಾರಣದಿಂದ ಒಂದು ಸದನ ಸಮಿತಿಯನ್ನು ಮಾಡಬೇಕು. ಇದರಲ್ಲಿ ಖಂಡಿತವಾಗಿಯೂ ಅವ್ಯವಹಾರ ನಡೆಯುತ್ತಿದೆ.

ಶ್ರೀ ಸಿದ್ದರಾಮಯ್ಯ :– ಹೈ ಕಾಸ್ಟ್‌ನಲ್ಲಿ ಪವರ್ purchase ಮಾಡುತ್ತಿದ್ದಾರೆ, ಖಾಸಗಿಯವರು ಮಾಡುತ್ತಿರುವ ಸಕ್ಕರೆ ಕಾರ್ಖಾನೆಗಳು ಹಾಗೂ ಬೇರೆ ಬೇರೆಯವೆಲ್ಲ ಇವೆ. ಅಲ್ಲಿ ಬಿಟ್ಟು ಬೇರೆ ಕಡೆ ಖರೀದಿ ಮಾಡುತ್ತಿದ್ದಾರೆ. ಏಕೆ ಹೀಗೆ ಮಾಡುತ್ತಿದ್ದಾರೆ ? ಇಷ್ಟೊಂದು costly power ನ್ನು ಏಕೆ ಖರೀದಿ ಮಾಡುತ್ತಿದ್ದಾರೆ ? ಇಷ್ಟೆಲ್ಲಾ ಖರೀದಿ ಮಾಡಿದರೂ ಸಹ ಕೇವಲ ಹಗಲು ವೇಳೆಯಲ್ಲಿ 2–3 ಗಂಟೆಗಳ ಕಾಲ ಮಾತ್ರ ಏಕೆ ವಿದ್ಯುತ್ ಕೊಡತ್ತಿದ್ದೀರಿ. ಇಲ್ಲಿಯವರೆಗೆ ಸುಮಾರು 9 ಸಾವಿರ ಕೋಟಿ ರೂ.ಗಳ ವಿದ್ಯುತ್ purchase ಮಾಡಿದರೂ ರೈತರಿಗೆ ಪವರ್ ಇಲ್ಲ, ಪಂಪ್‌ಸೆಟ್ ಓಡುವುದಿಲ್ಲವೆಂದರೆ ಏಕೆ ಇಷ್ಟೊಂದು ಹಣವನ್ನು ಖರ್ಚು ಮಾಡಿದ್ದೀರಿ ?

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ :– ಸುಮಾರು ಎಷ್ಟೋ ಮೆಗಾ ವ್ಯಾಟ್‌ಗಳ ಲೆಕ್ಕ ಸಿಗುತ್ತಿಲ್ಲವೆಂದು ಈ ಹಿಂದೆ ಮಾನ್ಯ ಇಂಧನ ಸಚಿವರು ಒಂದು ಹೇಳಿಕೆಯನ್ನು ಕೊಟ್ಟಿದ್ದರು. ಎಲ್ಲಿಗೆ ಹೋಗುತ್ತಿದೆ ಎನ್ನುವುದೇ ಇಂಧನ ಸಚಿವರಿಗೆ ಗೊತ್ತಿಲ್ಲ, ಮಾನ್ಯ ಇಂಧನ ಸಚಿವರೇ ಈ ರೀತಿ ಹೇಳಿದರೆ ರಾಜ್ಯದ ಜನರಿಗೆ ಸಂಶಯ ಬರುವುದಿಲ್ಲವೇ ? ಮಾನ್ಯ ಇಂಧನ ಸಚಿವರೇ ಈ ರೀತಿ ಹೇಳಿದರೆ ನಾವು ಏನೆಂದು ಅರ್ಥ ಮಾಡಿಕೊಳ್ಳಬೇಕು. Power purchase ಗೆ ಇಂದು ಅಗ್ರಿಮೆಂಟ್ ಆಗಿರುವುದು ರಿವೈಸ್ ಆಗುತ್ತಿದೆ. ಇದು ಯಾವ ಕಾರಣಕ್ಕೆ ಆಗುತ್ತಿದೆ, what is the reason behind it ? ಕಡಿಮೆ ದರದಲ್ಲಿ ವಿದ್ಯುತ್ ಕೊಡುವುದಕ್ಕೆ ರೆಡಿಯಿರುವ ಕಂಪನಿಗಳ ಹತ್ತಿರ purchase ಮಾಡುತ್ತಿಲ್ಲ. ಹೈ ಕಾಸ್ಟ್ ವಿದ್ಯುತ್ ಪರ್ಚೇಸ್ ಮಾಡುವುದಕ್ಕೆ ಸರ್ಕಾರಕ್ಕೆ ಏನು commitment ಇದೆ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ಖಂಡಿತವಾಗಿಯೂ ಇದರ ಬಗ್ಗೆ ಸದನ ಸಮಿತಿ ರಚನೆಯಾಗಬೇಕು ಹಾಗೂ ತನಿಖೆಯಾಗಬೇಕು. ಇದೇ ರೀತಿಯಲ್ಲಿ ಮುಂದುವರೆದರೆ ಮುಂದೆ ಎಂದೂ situation improve ಆಗುವುದಿಲ್ಲ. ಏಕೆಂದರೆ ಇದರಲ್ಲಿ ಕೆಲವು ಅಧಿಕಾರಿಗಳು, ಜನಪ್ರತಿನಿಧಿಗಳು gang up ಆಗಿ ನಮ್ಮ ರಾಜ್ಯದಲ್ಲಿ ಶಾಶ್ವತವಾಗಿ ವಿದ್ಯುತ್ ಅಭಾವವನ್ನು maintain ಮಾಡುತ್ತಾರೆ. ಏಕೆಂದರೆ ಅವರ ಆದಾಯ ಕಡಿಮೆ ಆಗಬಾರದೆಂಬ ದೃಷ್ಟಿಯಲ್ಲಿ ಶಾಶ್ವತವಾಗಿರುವ ಅಭಾವವನ್ನು ಕ್ರಿಯೇಟ್ ಮಾಡುವುದಕ್ಕೆ ರೆಡಿಯಾಗುತ್ತಾರೆ. ಆದ್ದರಿಂದ ಸರ್ಕಾರ ನಮಗೆ ಎಷ್ಟು ವಿದ್ಯುತ್

ಅವಶ್ಯಕತೆಯಿದೆಯೋ, ಅಷ್ಟಕ್ಕೆ ಅನುಗಣವಾಗಿ ಮಾತ್ರ ಉತ್ಪಾದನೆ ಮಾಡುವುದಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕು. ಸರ್ಕಾರ ಕಳೆದ ಐದು ವರ್ಷದಲ್ಲಿ ವಿದ್ಯುತ್ತಿನ ಯಾವುದೇ ಒಂದು ಹೊಸ ಯೋಜನೆಯನ್ನು ಅನುಷ್ಠಾನ ಮಾಡಿಲ್ಲ, ಒಂದು ಮೆಗಾವ್ಯಾಟ್‌ನ್ನೂ ಸಹ ಇವರು ಹೊಸದಾಗಿ ಉತ್ಪಾದನೆ ಮಾಡಿರುವುದಿಲ್ಲ. ಇದರ ಹಿಂದೆ ದುರುದ್ದೇಶವಿರಬಹುದು ಎನ್ನುವ ಸಂಶಯ ನನಗೆ ಬರುತ್ತಿದೆ. ಹೆಚ್ಚಿನ ವಿದ್ಯುತ್‌ನ್ನು ಉತ್ಪಾದನೆ ಮಾಡಿದರೆ ಪರ್ಚೇಸ್ ಮಾಡುವುದು ಕಡಿಮೆ ಆಗುತ್ತದೆ ಎನ್ನುವ ಉದ್ದೇಶದಿಂದ ಈ ರೀತಿ ಮಾಡುತ್ತಿದ್ದಾರೆಂಬ ಸಂಶಯ ಈ ರಾಜ್ಯದ ಜನತೆಗೆ ಬರುತ್ತಿದೆ. ಆದಕಾರಣ ಇದರ ಬಗ್ಗೆ ಒಂದು ಸದನ ಸಮಿತಿಯನ್ನು ಮಾಡಬೇಕೆಂದು ನನ್ನ ಸಲಹೆ.

ಆಹಾರ ಇಲಾಖೆಯಲ್ಲಿ ಇವತ್ತಿನ ದಿನಗಳಲ್ಲಿ ಪಡಿತರದಲ್ಲಿ ಎಷ್ಟು ಗೊಂದಲವಿದೆ ಎನ್ನುವ ಬಗ್ಗೆ ಈಗಾಗಲೇ ಬಹಳಷ್ಟು ಚರ್ಚೆಯಾಗಿದೆ. ಆದರೆ ಒಂದೇ ಒಂದು ಸಲಹೆ ಇದೆ. ಇವತ್ತು ಈ ರಾಜ್ಯದಲ್ಲಿ ಬರಗಾಲವಿದೆ. ಈ ಬರಗಾಲದಲ್ಲಿ ಏನು ಮಾಡಬೇಕೆಂದರೆ We have to give food security to the people. ವಿಶೇಷವಾಗಿ ಬಡವರಿಗೆ, ಸಾಮಾನ್ಯ ಜನರಿಗೆ, ಆದಾಯಕ್ಕಿಂತ ಕಡಿಮೆ ಅಂದರೆ ಬಡತನ ರೇಖೆಗಿಂತ ಕಡಿಮೆ ಇರುವವರಿಗೆ, ಯಾರೇ ವ್ಯಕ್ತಿಯಾಗಲಿ ಈ ರಾಜ್ಯದಲ್ಲಿ ಆಹಾರ ಧಾನ್ಯಗಳು ಬೇಕೆಂದು ಬಂದಾಗ ಅವರಿಗೆ ಮುಕ್ತವಾಗಿ ಕೊಡುವಂತಹ ವ್ಯವಸ್ಥೆಯಾಗಬೇಕು. ಇದಕ್ಕೆ ಒಂದೇ ಒಂದು ಸಲಹೆ ಎಂದರೆ ಈ ವರ್ಷ ಸರ್ಕಾರ APL, BPL ಅಲ್ಲದೆ ಗ್ರಾಮೀಣ ಪ್ರದೇಶಗಳಲ್ಲಿ, ನಗರ ಪ್ರದೇಶಗಳಲ್ಲಿರತಕ್ಕಂಥಹ ಯಾರೇ ಆಗಲಿ ರೇಷನ್ ಡಿಪೋಗಳಿಗೆ ಬಂದರೆ ನೀವು ಅವರಿಗೆ subsidized food-grains ನ್ನು ಕೊಡಬೇಕು. ಇದರಿಂದ ಸರ್ಕಾರಕ್ಕೆ ದೊಡ್ಡ ಹೊಣೆಯೇನೂ ಆಗುವುದಿಲ್ಲ, ಏಕೆಂದರೆ ಈಗ Right to Food Act ಬಂದ ಮೇಲೆ, ಕೇಂದ್ರ ಸರ್ಕಾರದವರೇ ಸುಮಾರು 65% ರಷ್ಟು food-grains ಕೊಡುತ್ತಿದ್ದಾರೆ. ಮುಂದೆ ನೀವು 100%ನ್ನು ಜನರಿಗೆ ಕೊಡುವಂತಹದ್ದನ್ನು ಮಾಡಬಹುದು. ಇದರಿಂದ ಸರ್ಕಾರಕ್ಕೆ ಬಹಳ ಭಾರವೇನೂ ಆಗುವುದಿಲ್ಲ. ತಮಿಳುನಾಡು ರಾಜ್ಯದಲ್ಲಿ APL, BPL ಕುಟುಂಬಗಳಿಗೆಲ್ಲರಿಗೂ subsidized food-grains ಕೊಡುತ್ತಿದ್ದಾರೆ. ಇದು ಎಲ್ಲಾ ನಾಗರೀಕ ಸರ್ಕಾರಗಳ ಆದ್ಯತೆಯಾಗಿರಬೇಕು. ನಮ್ಮ ದೇಶದಲ್ಲಿ ಯಾವುದೇ ಒಬ್ಬ ವ್ಯಕ್ತಿ, ಯಾರೇ ಆಗಿರಲಿ ಉಪವಾಸದಿಂದ ಸಾಯಬಾರದು, ಉಪವಾಸದಿಂದ ಮಲಗಬಾರದು. ಕೆಲವು ಜನ underserving ಇರುವವರಿಗೆ ಕೊಟ್ಟರೂ ಪರವಾಗಿಲ್ಲ. ಆದರೆ deserving ಇರುವ ಒಬ್ಬೇ ಒಬ್ಬ ವ್ಯಕ್ತಿಗೂ ಕೂಡ ಈ food grains ನಿಂದ ವಂಚನೆಯಾಗಬಾರದು, ಅವನು

ಉಪವಾಸ ಮಲಗಬಾರದು. ಈ ರೀತಿಯ ವ್ಯವಸ್ಥೆಯನ್ನು ಆಹಾರ ಇಲಾಖೆಯವರು ಮಾಡಬೇಕೆಂಬುದೇ ನನ್ನ ಸಲಹೆ.

ಪಶುಸಂಗೋಪನೆ ಇಲಾಖೆಯ ಬಗ್ಗೆ ಈಗಾಗಲೇ ಸಾಕಷ್ಟು ಚರ್ಚೆಯಾಗಿದೆ. ಇವತ್ತು ಮೇವಿನ ಕೊರತೆ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಅದನ್ನು ಈಗ ಏನೂ ಮಾಡುವುದಕ್ಕಾಗುವುದಿಲ್ಲ. ಸರ್ಕಾರ ಇದನ್ನು ಯಾವ ರೀತಿ ನಿಭಾಯಿಸುತ್ತದೆ ಎನ್ನುವುದು ನನಗಂತೂ ಗೊತ್ತಿಲ್ಲ. I am at loss of words. ಏಕೆಂದರೆ this is going to be the situation ಎಂದು ಈ ಸಲಹೆಗಳನ್ನು ನಾವು 6 ತಿಂಗಳ ಹಿಂದೆಯೇ ಕೊಟ್ಟಿದ್ದೇವೆ. ಆ ಸಮಯದಲ್ಲಿ ಇಲಾಖೆ ಎಚ್ಚೆತ್ತುಕೊಳ್ಳಲಿಲ್ಲ, ಯಾವುದೇ ಪ್ರಿಪರೇಷನ್ ಮಾಡಿಲ್ಲ. ಇಂದು ಯಾವ ರೀತಿ ಮೇವನ್ನು ಸಂಗ್ರಹಿಸುತ್ತಾರೆಂಬುದು ನನಗೆ ಗೊತ್ತಿಲ್ಲ. it is left to the Government and concerned department to find a solution to this.

ಶಿಕ್ಷಣ ಸಚಿವರು ಸದನದಲ್ಲಿಯೇ ಇದ್ದಾರೆ. ನಾನೇನೂ ದೊಡ್ಡ ನಿರೀಕ್ಷೆಯಿಂದ ಹೇಳುತ್ತಿಲ್ಲ. ಏಕೆಂದರೆ ಈ ಸದನದಲ್ಲಿ ಬೆಳಿಗ್ಗೆಯಿಂದಲೂ ಬಹಳಷ್ಟು ಚರ್ಚೆಯಾಗಿದೆ. ಇಂದು ಪ್ರಾಥಮಿಕ ಶಿಕ್ಷಣದಲ್ಲಿ ಕೇಂದ್ರ ಸರ್ಕಾರವು Right to Education Bill ಅನ್ನು ಜಾರಿಗೆ ತಂದ ಮೇಲೆ 6–14 ವರ್ಷದೊಳಗಿನ ಎಲ್ಲಾ ಮಕ್ಕಳಿಗೆ it is a fundamental right of every child. Education is a fundamental right. ಅದಕ್ಕಾಗಿ, ಯಾವುದೇ ಹಳ್ಳಿ ಪ್ರದೇಶ, ಗುಡ್ಡ ಗಾಡು ಪ್ರದೇಶ, ಯಾವುದೇ ತಾಂಡವಿರಲಿ, ಅಲ್ಲಿನ ಮಕ್ಕಳು ಶಾಲೆಗೆ ಹೋಗುವುದಕ್ಕೆ ಅಪೇಕ್ಷೆಪಟ್ಟರೆ ಖಂಡಿತವಾಗಿಯೂ ಅಲ್ಲಿ ಶಾಲೆಯ ವ್ಯವಸ್ಥೆಯಿರಲೇಬೇಕು. It is the responsibility of the Government, not the parents, to give a quality education to the child. ಶಿಕ್ಷಣ ಇಲಾಖೆಯಲ್ಲಿ ಇಂದು 14,000 ಹುದ್ದೆಗಳನ್ನು ತುಂಬಬೇಕಾಗಿದೆ. ಆದರೆ ತುಂಬಿಲ್ಲ, ತುಂಬುತ್ತೇವೆ, ಇಲ್ಲದಿದ್ದರೆ guest lecturers ತೆಗೆದುಕೊಳ್ಳುತ್ತೇವೆ ಎನ್ನುವ ಮಾತನ್ನು ಶಿಕ್ಷಣ ಸಚಿವರು ಹೇಳಿದ್ದಾರೆ. ಕಳೆದ ನಾಲ್ಕು ವರ್ಷದಿಂದ ಈ ಸರ್ಕಾರ ಬಂದ ಮೇಲೆ ಒಂದೇ ಒಂದು ಹೈಸ್ಕೂಲು ಆಗಲಿ, ಜೂನಿಯರ್ ಕಾಲೇಜ್ ತೆರೆಯಲಿಲ್ಲವೆಂದು ಬಹಳ ವಿಷಾದದಿಂದ ಹೇಳುತ್ತೇನೆ. ಡಿಗ್ರಿ ಕಾಲೇಜ್ ಕೊಟ್ಟರು. ಈ ಬಗ್ಗೆ ನಾನು ಪ್ರತಿ ಸದನದಲ್ಲೂ ಈ ವರ್ಷ ಎಷ್ಟು ಜೂನಿಯರ್ ಕಾಲೇಜ್‌ಗೆ, ಹೈಸ್ಕೂಲ್‌ಗೆ ಎಷ್ಟು ಅಲೋಕೇಷನ್ ಆಗಿದೆ ಎನ್ನುವ ಪ್ರಶ್ನೆಯನ್ನು ಕೇಳುತ್ತಲೇ ಇರುತ್ತೇನೆ. ಒಂದೂ ಮಾಡಲಿಲ್ಲ. This shows the commitment of the Government towards

eduction. ಇದು ಬದಲಾಗಬೇಕು. ಇದನ್ನು ಮುಂದೆ ಸರಿಪಡಿಸುವುದಕ್ಕೆ ಇವರ ಹತ್ತಿರ ಸಮಯವೂ ಇಲ್ಲ. ಏಕೆಂದರೆ, ಬಿಜೆಪಿ ಮುಂದೆ ಅಧಿಕಾರಕ್ಕೆ ಬರುತ್ತದೆಯೆನ್ನುವುದು ಕನಸಿನಲ್ಲಿಯೂ ಕಾಣುತ್ತಿಲ್ಲ. ಆದರೆ ಮುಂದೆ ಇದನ್ನು ಸುಧಾರಣೆ ಮಾಡುವುದಕ್ಕೆ ಸಮಯವೂ ಇಲ್ಲ. ಅದಕ್ಕಾಗಿ ಇದೇ ವರ್ಷದಲ್ಲಿ ಮರು ಹೊಂದಾಣಿಕೆ ಮಾಡಿಕೊಂಡು ಹೈಸ್ಕೂಲಿಗೆ, ಜೂನಿಯರ್ ಕಾಲೇಜಿಗೆ ಸ್ವಲ್ಪ ಹಣವನ್ನು ನೀಡಬೇಕೆಂದು ನಾನು ತಮ್ಮ ಮೂಲಕ ಮನವಿ ಮಾಡುತ್ತಿದ್ದೇನೆ.

ಸಮಾಜ ಕಲ್ಯಾಣ ಇಲಾಖೆಯ ಸಚಿವರು ಸದನದಲ್ಲಿದ್ದರು. ಸರ್ಕಾರಕ್ಕೆ ಒಂದು ಕಳಕಳಿಯ ಮನವಿಯಿದೆ. ನಮ್ಮ ರಾಜ್ಯದಲ್ಲಿ ಬಡತನ ರೇಖೆಗಿಂತ ಕೆಳಗಿರುವ ಜನ, ವಿಶೇಷವಾಗಿ ಯಾರೆಂದರೆ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದವರು. ಪರಿಶಿಷ್ಟ ವರ್ಗದವರ ಓಣಿಯಲ್ಲಿರತಕ್ಕಂತಹ ಜನ, I can say 100% of the People are below poverty line. what is the plan of the Government for the poverty alleviation? ಇವತ್ತು ಸಮಾಜ ಕಲ್ಯಾಣ ಇಲಾಖೆಗೆ ಒದಗಿಸಿರತಕ್ಕಂತಹ ಹಣ ಬಹಳ ಕಡಿಮೆಯಾಗಿದೆ. ಈ ವರ್ಗದ ಜನರಿಗೆ ಇನ್ನು ಹೆಚ್ಚಿನ ರೀತಿಯಲ್ಲಿ ಕಾರ್ಯಕ್ರಮಗಳನ್ನು ತರಬೇಕಾಗಿದೆ. ಸಾಲ ಮನ್ನಾ ಮಾಡುವ ಸಮಯದಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ಪರಿಶಿಷ್ಟ ಜಾತಿ ಮತ್ತು ಪಂಗಡದವರು ತೆಗೆದುಕೊಂಡಿರುವ ಸಾಲವನ್ನು ಮನ್ನಾ ಮಾಡಿ. ಈ ರಾಜ್ಯದಲ್ಲಿ ಪರಿಶಿಷ್ಟ ಜಾತಿ ಮತ್ತು ವರ್ಗದವರು ತೆಗೆದುಕೊಂಡಿರುವ ಸಾಲವನ್ನು ಮನ್ನಾ ಮಾಡುತ್ತೇವೆ. ಎನ್ನುವ ಕಮಿಟ್‌ಮೇಂಟ್‌ನ್ನು ತೋರಿಸಿ. ಇದರಿಂದ ಸರ್ಕಾರಕ್ಕೆ ಯಾವುದೇ ರೀತಿಯ ಹೊಣೆಯಾಗುವುದಿಲ್ಲ. ರಾಜ್ಯದಲ್ಲಿರುವ ಪರಿಶಿಷ್ಟ ಜಾತಿ ಮತ್ತು ವರ್ಗದವರ ಎಷ್ಟು ಲ್ಯಾಂಡ್ ಹೋಲ್ಡಿಂಗ್ಸ್ ಬಹಳ ಕಡಿಮೆ ಇರುವುದದರಿಂದ ಆ ಎಲ್ಲಾ ಲ್ಯಾಂಡ್ ಹೋಲ್ಡಿಂಗ್‌ಗೆ ನಾವು ಇರಿಗೇಷನ್ ಫೆಸಿಲಿಟಿಯನ್ನು ಕೊಡುತ್ತೇವೆ, ಮುಖ್ಯವಾದ ವಿಚಾರಗಳಿರುವುದರಿಂದ ಉಳಿದ 15 ನಿಮಿಷಗಳಲ್ಲಿ ನನ್ನ ಮಾತನ್ನು ಮುಗಿಸುತ್ತೇನೆ. ನಿಮ್ಮ ಕಮಿಟ್‌ಮೆಂಟ್ ಏನಿದೆ ಎರಡು ಮೂರು ವರ್ಷದ ಹಿಂದೆ ರಾಜ್ಯ ಸರ್ಕಾರ ಒಂದು ಸುತ್ತೋಲೆ ಹೊರಡಿಸಿತ್ತು ಅದೇನೆಂದರೆ, Pooled funds ಯಾವುದೇ ಕಾರಣಕ್ಕೂ lapsable ಅಲ್ಲ ಎನ್ನುವ ಒಂದು ಸುತ್ತೋಲೆಯನ್ನು ಕಳೆದ 2–3 ವರ್ಷಗಳ ಹಿಂದೆ ರಾಜ್ಯ ಸರ್ಕಾರದಲ್ಲಿ ಹೊರಡಿಸಲಾಗಿತ್ತು. ಒಂದು ವರ್ಷ ಪೂಲ್ಡ್ ಫಂಡ್‌ನ್ನು ನೀವು ಯಟಿಲೈಸ್ ಮಾಡದೇ ಇದ್ದರೆ It should be carried over for the next year

ಎನ್ನುವ ವಿಷಯ ತಮ್ಮ ಗಮನದಲ್ಲಿರಲಿ. ಆದರೆ ಇದು ಯಾವ ಇಲಾಖೆಯಲ್ಲಿಯೂ ಆಗುತ್ತಿಲ್ಲ. ಇವತ್ತು pooled fund ನಲ್ಲಿ ಎಷ್ಟು ಹಣ ಬರಬೇಕಿತ್ತೋ ಅಷ್ಟು ಹಣ ಬಂದಿರುವುದಿಲ್ಲ ಮತ್ತು ಬಂದಿರುವಂತಹ ಹಣವು ಸಂಪೂರ್ಣವಾಗಿ ಉಪಯೋಗವಾಗಿರುವುದಿಲ್ಲ. ಆದಕಾರಣ ಎಸ್.ಸಿ./ಎಸ್.ಟಿ. ಲ್ಯಾಂಡ್ ಎಲ್ಲೆಲ್ಲಿದೆಯೋ ಅಂತಹ ಕಡೆಗಳಲ್ಲಿ minor irrigation, lift irrigation ಗೆ ಸಂಪೂರ್ಣವಾಗಿ ನೀರಾವರಿ ಬಳಕೆಗೆ ಹೆಚ್ಚಿನ ಹಣವನ್ನು ಕೊಡಬೇಕು. This is the only way you can help them. ಬ್ಯಾಂಕಿನಲ್ಲಿ ಸಾಲ ಪಡೆಯುವುದಕ್ಕಾಗಿ ಎಸ್.ಸಿ./ಎಸ್.ಟಿ ಜನಗಾಂಗದವರು ಅರ್ಜಿಯನ್ನು ಸಲ್ಲಿಸುತ್ತಾರೆ. ನಿಗಮದಿಂದ ಸಾಲವನ್ನು ವಿತರಣೆ ಮಾಡುವ ಯೋಜನೆಗೆ ಶಾಸಕರುಗಳನ್ನು ಅಧ್ಯಕ್ಷರನ್ನಾಗಿ ಮಾಡಿದ್ದೀರಿ. ಆದರೆ ಅಲ್ಲಿನ ಟಾರ್ಗೆಟ್ ಎಷ್ಟು ಲೋ ಇದೆ ಎಂದರೆ ನಾವು ಅಲ್ಲಿ ಪಾಪ್ಯುಲರ್‌ಗಿಂತ ಹೆಚ್ಚಾಗಿ ಅನ್-ಪಾಪ್ಯುಲರ್ ಆಗುತ್ತಿದ್ದೇವೆ. This is the not way to conduct it. ಈ ಜನಾಂಗದವರು ಯಾರೇ ಆಗಲಿ ಸಾಲ ಬೇಕೆಂದು ಬ್ಯಾಂಕಿಗೆ ಅರ್ಜಿ ಹಾಕಿದರೆ 100% ಆಗಿ The state Government should stand guarantee for that ಎಂದು ಸಲಹೆ ಮಾಡಿದ್ದೆ, ಮತ್ತು ನೀವು ಅವರಿಗೆ back hand ಸಬ್ಸಿಡಿ ಕೊಡಿ. ಮರುಪಾವತಿ ಮಾಡುವ ಯಾರೇ ಆಗಲಿ ಅವರಿಗೆ ನೀವು back hand ಸಬ್ಸಿಡಿ ಕೊಡಿ. ಇದಕ್ಕೇನು ಜಾಸ್ತಿ ಹಣ ಬೇಕಾಗುವುದಿಲ್ಲ. ನಿಮ್ಮ ಹತ್ತಿರ ಕಮಿಟ್‌ಮೆಂಟ್ ಇರುವುದರಿಂದ ನೀವು ಮಾಡಬಹುದು. But nobody is trying to do this. ಎಸ್.ಸಿ. ಓಣಿಗಳಿಗೆ ಹಣ ಕೊಡುವ ಪ್ರಯತ್ನವನ್ನು ಮಾನ್ಯ ಸಚಿವರು ಏನು ಮಾಡುತ್ತಿದ್ದಾರೆ, ಅದು ಸ್ವಲ್ಪ ದೊಡ್ಡ ಪ್ರಮಾಣದಲ್ಲಿ ಆಗಬೇಕು. ಸಮಾಜ ಕಲ್ಯಾಣ ಇಲಾಖೆಯಲ್ಲಿ ಇನ್ನೂ ಹೆಚ್ಚಿನ ಹಣವನ್ನು ಕೊಡುವಂತಹ ಪ್ರಯತ್ನ ಮಾಡಬೇಕು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಬಗ್ಗೆ ಇಂದು ಬೆಳಿಗ್ಗೆಯೇ ಚರ್ಚೆಗೆ ಬಂದಿತ್ತು. ಆಸ್ಪತ್ರೆಗಳಲ್ಲಿ ವೈದ್ಯರ ಕೊರತೆಯನ್ನು ನೀಗಿಸಬೇಕಾದರೆ ಬಿಲ್ ಅನ್ನು ತನ್ನಿ ಎಂದು ಕಳೆದ 4ವರ್ಷಗಳಿಂದ ಸಲಹೆಯನ್ನು ಕೊಡುತ್ತಿದ್ದೇನೆ. ಇಂದು ಮಾನ್ಯ ವೈದ್ಯಕೀಯ ಸಚಿವರು We are going to introduce a Bill on 30th of this month ಎಂದು ಹೇಳಿದರು. ನನಗೆ ಬಹಳ ಖುಷಿಯಾಯಿತು. ಆ ಬಿಲ್ ಅನ್ನು ನೀವು introduce ಮಾಡಿದರೆ ಖಂಡಿತವಾಗಿಯೂ ಈ ಸಮಸ್ಯೆ ಮುಂದಿನ ವರ್ಷ ಇರುವುದಿಲ್ಲ. ಈ ರಾಜ್ಯದಲ್ಲಿ ಪಾಸ್ ಆಗುವ ಎಲ್ಲಾ MBBS, MD ಯವರು ಒಂದು ವರ್ಷ ಕಡ್ಡಾಯವಾಗಿ

ಗ್ರಾಮೀಣ ಪ್ರದೇಶದಲ್ಲಿ ಕೆಲಸ ಮಾಡುವ ನಿಬಂಧನೆಯನ್ನು ಹಾಕಬೇಕು. ಹಾಗೂ ಅವರಿಗೆ ಒಳ್ಳೆಯ ಸಂಬಳವನ್ನು ಕೊಡಬೇಕು. ಆದರಿಂದ ಅವರಿಗೇನೂ ನಷ್ಟವಾಗುವುದಿಲ್ಲ ಇದರಿಂದ ಬೇರೆಯವರು ಬೇರೆ ಬೇರೆ ರೀತಿಯಲ್ಲಿ ತಿಳಿದುಕೊಳ್ಳಬಹುದು. ಇದರಿಂದ ಅವರಿಗೆ ಒಳ್ಳೆಯ ಅನುಭವವಾಗುತ್ತಿದೆ. ನೀವು ಪ್ರಾರಂಭದ ದಿನಗಳಲ್ಲಿ ಒಳ್ಳೆಯ ಸಂಬಳವನ್ನು ನೀಡುವುದರಿಂದ ಅವರು ಬೇರೆ ಕಡೆ Practice ಗೆ ಹೋದರೂ ಅಷ್ಟು ಹಣ ಸಿಗುವುದಿಲ್ಲ. ಅದಕ್ಕಾಗಿ ಇದಕ್ಕೆ ಒಂದು ಬಿಲ್‌ಅನ್ನು ತರಬೇಕೆಂದು ಸಲಹೆ ಮಾಡುತ್ತೇನೆ. ಆರೋಗ್ಯ ಇಲಾಖೆಗೆ ಎಷ್ಟು ಹಣವನ್ನು ಸರ್ಕಾರ ಕೊಟ್ಟಿದೆ? ಬಹಳ ಕಡಿಮೆ ಹಣವನ್ನು ಕೊಟ್ಟಿದೆ. ಪ್ರಾಥಮಿಕ ಆರೋಗ್ಯ ಕೇಂದ್ರದ ವ್ಯಾಪ್ತಿಯಲ್ಲಿ 30,000 ಜನರಿಗೆ ಒಂದು ಪಿ.ಎಚ್.ಸಿ. ಯನ್ನು ಮಾಡಿದ್ದೇವೆ. ಆದರೆ ಅಲ್ಲಿ ಸರಿಯಾದ ರೀತಿಯಲ್ಲಿ ವ್ಯವಸ್ಥೆಯನ್ನು ಕಲ್ಪಿಸುವುದಕ್ಕೆ ಆಗಿಲ್ಲ. "ಆರೋಗ್ಯ ಶ್ರೀ" ಯೋಜನೆಯಿಂದ ಬಿಪಿಎಲ್ ಕಾರ್ಡುದಾರರಿಗೆ, ವಿಶೇವಾಗಿ heart ailments, cancer, kidney ailments ಆಗಲಿ, ಹೀಗೆ ಹೆಚ್ಚಿನ ಪ್ರಮಾಣದಲ್ಲಿ ಹಣ ಖರ್ಚಾಗುವ ಚಿಕಿತ್ಸೆಗೆ ನೆರವಾಗುತ್ತಿದೆ ಎನ್ನುವ ರಿಲೀಫ್ ಇದೆ. ಇದು ಒಂದು ಉತ್ತಮ ಕೆಲಸವನ್ನು ಈ ಸರ್ಕಾರ ಮಾಡಿದೆ ಎಂದು ಹೇಳಲೇಬೇಕಾಗುತ್ತದೆ. ಗ್ರಾಮೀಣ ಪ್ರದೇಶಗಳಲ್ಲಿ ಇನ್ನೂ ಹೆಚ್ಚಿನ ರೀತಿಯಲ್ಲಿ ಒಳ್ಳೆಯ ವ್ಯವಸ್ಥೆಯನ್ನು ಕೊಡುವುದಕ್ಕೆ ಸಾಧ್ಯವಾಗಿಲ್ಲ, ಏಕೆಂದರೆ ವೈದ್ಯರುಗಳು ಹಾಗೂ ಅಲ್ಲಿರುವ other staff support ಕೊಡದೇ ಇರುವ ಕಾರಣದಿಂದ ಈ ರೀತಿ ಆಗುತ್ತಿದೆ. ಈ ವ್ಯವಸ್ಥೆಯನ್ನು ಸಹ ಉತ್ತಮಗೊಳಿಸಬೇಕೆಂದು ನನ್ನ ಸಲಹೆ ಇದೆ.

Industries Department ಗೆ ಸಂಬಂಧಿಸಿದಂತೆ, ಕಳೆದ ಸಾರಿ ಒಂದು ಪ್ರಶ್ನೆ ಬಂದಿದ್ದು, ಅದಕ್ಕೆ ಸಲಹೆಯನ್ನು ಸಹ ನೀಡಿದ್ದೆ. Industries Department ನಲ್ಲಿ ಇವತ್ತು ಅಗತ್ಯಕ್ಕಿಂತ ಹೆಚ್ಚಿನ ಭೂಮಿಯನ್ನು ಮಂಜೂರು ಮಾಡುತ್ತಿದ್ದಾರೆ. GIM ನಲ್ಲಿ ಇಂಪ್ಲಿಮೆಂಟ್ ಮಾಡುತ್ತೇವೆಂದು ಪ್ರಾಮಿಸ್ ಮಾಡಿದ ಎಲ್ಲಾ ಯೋಜನೆಗಳು ಅನುಷ್ಠಾನಗೊಳ್ಳುತ್ತಿಲ್ಲ. ದಿನೇ ದಿನೇ ನಿರುದ್ಯೋಗಿಗಳ ಸಂಖ್ಯೆ ಜಾಸ್ತಿಯಾಗುತ್ತಿರುವ ಕಾರಣದಿಂದ ಇದಕ್ಕೆ ತಾವು ವಿಶೇಷವಾಗಿ ಕಾಳಜಿ ವಹಿಸಿ ಹೆಚ್ಚಿನ ರೀತಿಯಲ್ಲಿ ಕೈಗಾರಿಕೆಗಳು ಸ್ಥಾಪಿಸುವಂತಾಗಬೇಕು. ಕಡಿಮೆ ಮಾಡುವ ದೃಷ್ಟಿಯಿಂದ Employment intensive industriesಗೆ encouragement ಮಾಡಬೇಕೇ ವಿನಃ Employment curtailing Industries ಗೆ ಹೆಚ್ಚಿನ ಗೆ ಆದ್ಯತೆ ಕಟ್ಟರೆ ನಮಗೇನೂಲಾಭವಾಗುವುದಿಲ್ಲ.

ಲೋಕೋಪಯೋಗಿ ಇಲಾಖೆಯ ಬಗ್ಗೆ ಕೆಲವೊಂದು ಸಲಹೆಗಳಿರುವ ಕಾರಣದಿಂದ ಮಾನ್ಯ ಲೋಕೋಪಯೋಗಿ ಸಚಿವರು ಸದನದಲ್ಲಿದ್ದು ಅವರು ಈ ಬಗ್ಗೆ ಸ್ವಲ್ಪ ಗಮನಹರಿಸಬೇಕು. ನಮ್ಮ ರಾಜ್ಯದಲ್ಲಿ ಎಷ್ಟು ಸ್ಟೇಟ್ ಹೈವೇಗಳಿವೆ, ಅವುಗಳ maintenance ಗಾಗಿ ಅವುಗಳೆಲ್ಲವನ್ನೂ ನೀವು privatize ಮಾಡಿ. ಏಕೆಂದರೆ BOOT ನಲ್ಲಿ ನಮ್ಮ ರಾಜ್ಯದಲ್ಲಿರುವ ಎಲ್ಲಾ ಸ್ಟೇಟ್ ಹೈವೇಗಳನ್ನು ಕೊಟ್ಟರೂ ಅವುಗಳನ್ನು maintain ಮಾಡುವುದಕ್ಕೆ ಜನ ತಯಾರಿದ್ದಾರೆ. ಇಲ್ಲವೆಂದರೆ viability gap ನಲ್ಲಿ ಮಾಡಿ. ಯಾವುದೋ ಒಂದು ಖಾಸಗಿ ಸಹಭಾಗಿತ್ವದಿಂದ ರಾಜ್ಯದ ಹೆದ್ದಾರಿಗಳನ್ನು ನಿರ್ವಹಣೆ ಮಾಡುವುದಕ್ಕೆ ಕಡ್ಡಾಯವಾಗಿ ಆಗಬೇಕು. ಈ ಮಾತನ್ನು ನಾನು ಏಕೆ ಹೇಳುತ್ತಿದ್ದೇನೆಂದರೆ, ನಮ್ಮ ಆದ್ಯತೆ, our priority should be village roads and Major District Roads. Village roads ಮತ್ತು Major District Roads ಗೆ ಸಾರ್ವಜನಿಕರಿಂದ ಬಂದಿರತಕ್ಕಂಥ ಹಣ ಖರ್ಚು ಆಗಬೇಕು. National Highways, State Highways ಅನ್ನು ನೀವು ಖಾಸಗಿ ಸಹಭಾಗಿತ್ವದಿಂದ ಮಾಡಬೇಕು. ಇನ್ನೂ ಬಹಳಷ್ಟು ದೊಡ್ಡ ಪ್ರಮಾಣದಲ್ಲಿ ನನ್ನ ಮತ ಕ್ಷೇತ್ರದಲ್ಲಿ MDRs improvement ಆಗಬೇಕಾಗಿದೆ. ಇವತ್ತು ಇಡೀ ರಾಜ್ಯದ ಪರಿಸ್ಥಿತಿ ನೋಡಿದರೆ MDRs ಗೆ ಇನ್ನೂ ಹೆಚ್ಚಿನ ಹಣ ಬೇಕಾಗಿದೆ. ಇವತ್ತು ಮಾನ್ಯ ಹಣಕಾಸು ಸಚಿವರು ಇಲ್ಲ. ನಾವು PWD ಇಲಾಖೆಗೆ ಹೆಚ್ಚಿನ ಹಣ ಕೊಡಬೇಕಾಗಿದೆ. ಏಕೆಂದರೆ, ಈ ರಾಜ್ಯದಲ್ಲಿ ಒಂದು ಒಳ್ಳೆಯ ರಸ್ತೆ ಜಾಲ ಇದ್ದಾಗ ಮಾತ್ರ ಈ ರಾಜ್ಯದ ಆರ್ಥಿಕ ಬೆಳವಣಿಗೆ ಆಗುವ ಸಾಧ್ಯತೆ ಇದೆ. ಹಿಂದೆ ನಾನು ಬಹಳಷ್ಟು ಕಡೆ ಓದಿದ್ದೇನೆ. ಅಮೇರಿಕಾದಲ್ಲಿ economic development fast ಆಗಬೇಕಾದರೆ. it is because of the good road network. Road network is a very important indicator for the economic development of the region. ಮಾನ್ಯ ಅಧ್ಯಕ್ಷರೆ, ಲೋಕೋಪಯೋಗಿ ಇಲಾಖೆಗೆ ಹೆಚ್ಚಿನ ಹಣವನ್ನು ಕೊಡಬೇಕು ಮತ್ತು ನಮ್ಮ ಮಾನ್ಯ ಲೋಕೋಪಯೋಗಿ ಸಚಿವರು ಹಣದ ಬಗ್ಗೆ ಅವಲಂಬಿತವಾಗಿರಬಾರದು. You have to find out innovative ways. ಇವತ್ತು ಖಾಸಗಿ ಸಹಭಾಗಿತ್ವದಲ್ಲಿ ಯಾವುದು ಮಾಡುವುದಕ್ಕೆ ಸಾಧ್ಯವಿದೆ. ಮತ್ತು ಬೇರೆ ಬೇರೆ ರೀತಿಯಲ್ಲಿ ಹಣ ಯಾವ ರೀತಿ ಸಂಗ್ರಹ ಮಾಡಬೇಕೆಂದು ವಿಚಾರ ಮಾಡಿ, ನೀವು ಒಂದು ಹೆಜ್ಜೆ ಮುಂದೆ ಹೋಗಿ, ಬೇರೆ ಬೇರೆ ಕಡೆ ಯಾವ ರೀತಿ ಮಾಡುತ್ತಿದ್ದಾರೆ. ಎಂದು ನೋಡಬೇಕು ಇನ್ನೊಂದು ಬಹಳ ಮುಖ್ಯವಾದ ವಿಚಾರವೆಂದರೆ, ನಮ್ಮ road designing ಸಮರ್ಪಕವಾಗಿ ಆಗುತ್ತಿಲ್ಲ. ಕೆಲವು ಕಡೆ ಅನಾವಶ್ಯಕವಾಗಿ ಹೆಚ್ಚಿನ ಒಂದು

ರೀತಿಯಲ್ಲಿ inflated estimates ಆಗುತ್ತಿದೆ. ಕೆಲವೊಂದು ಕಡೆ ಏನಾಗುತ್ತಿದೆ ಎಂದರೆ ಸರಿಯಾಗಿ quality parameters ನ್ನು meet ಮಾಡದಂಥ estimates ಆಗುತ್ತಿದೆ. ಇವತ್ತು ಬೇರೆ ಬೇರೆ ರಾಜ್ಯಗಳಲ್ಲಿ development ಆಗಿರತಕ್ಕಂಥ road network ಎಲ್ಲಿ ಚೆನ್ನಾಗಿ ಆಗಿದೆ, ಅದನ್ನು ನೋಡಿ. ಅದನ್ನು ನೋಡಿ ನೀವು ಒಂದು innovative method ತಂದು ಈ ರಾಜ್ಯದ ರಸ್ತೆ ವ್ಯವಸ್ಥೆಯನ್ನು ಸುಧಾರಣೆ ಮಾಡಬೇಕೆನ್ನುವುದು ನನ್ನ ಒಂದು ಸಲಹೆಯಾಗಿದೆ. ಕೊನೆಯದಾಗಿ, ಇವತ್ತು ಮಾನ್ಯ ಸಭಾಧ್ಯಕ್ಷರೆ, ಇವತ್ತು ಜಲಸಂಪನ್ಮೂಲ ಸಚಿವರು ಇಲ್ಲಿ ಇಲ್ಲ. ನೀರಾವರಿಗೆ ಹೆಚ್ಚಿನ ಆದ್ಯತೆಯನ್ನು ಕೊಡಲೇಬೇಕಾಗುತ್ತದೆ. what is the priority of theis Government? ನಾನು ಮೊದಲ ಸಲ 2004ರಲ್ಲಿ ಸದನಕ್ಕೆ ಬಂದಾಗ ಮಾನ್ಯ ಸಿದ್ದರಾಮಯ್ಯನವರು ಹಣಕಾಸು ಸಚಿವರಾಗಿದ್ದಾಗ ಅವರು ನೀರಾವರಿ 24%, 25%, 28% ಹಣವನ್ನು ಕೊಡುತ್ತಿದ್ದರು. ಇವತ್ತು 13%, 14% ಗೆ ಇಳಿಸಿದ್ದಾರೆ. ಇದಕ್ಕೂ ಮುಂಚೆ 30% ಇತ್ತು. 30% ನೀರಾವರಿಗೆ ಇಂತಕ್ಕಂಥ ಹಣ 13% ಗೆ ಇಳಿಸಿದ್ದಾರೆ. ವಿಶೇಷವಾಗಿ ಇವತ್ತು ನಮಗೆ surplus water ಬಂದಿದೆ. ನಾವು ಕೃಷ್ಣಾ ನದಿಯಿಂದ ಹೆಚ್ಚಿನ ನೀರನ್ನು ಬಳಕೆ ಮಾಡಿಕೊಳ್ಳುವುದಕ್ಕೆ ದೊಡ್ಡ ಪ್ರಮಾಣದಲ್ಲಿ ಹಣವನ್ನು ಖರ್ಚು ಮಾಡಬೇಕಾಗುತ್ತದೆ. ಅದಕ್ಕೆ what is your plan? You should have a concrete plan for that. ಒಳ್ಳೆಯ ರೀತಿಯ ವ್ಯವಸ್ಥೆಯನ್ನು ಮಾಡಬೇಕು. ನಾವು ಹಿಂದೆ ಮಾಡಿರಲಿಲ್ಲ. ನಾವು ಈಗಲಾದರೂ ಮಾಡಬೇಕು. ನಾವು time-bound programme ಮಾಡಬೇಕು. ಐದು ವರ್ಷದಲ್ಲಿ ಒಂದು ಯೋಜನೆಯನ್ನು implement ಮಾಡಿದರೆ 7 ಸಾವಿರ ಕೋಟಿ ಖರ್ಚು ಮಾಡಲು ಸಾಧ್ಯವಾಗಬಹುದು. ಇಲ್ಲವಾದರೆ, ಅದೇ ಕೆಲಸ ಇವತ್ತು ಮಾಡುವುದಕ್ಕೆ 10, 12 ಸಾವಿರ ಕೋಟಿ ಬೇಕಾಗಬಹುದು. ನಮ್ಮ ಭಾಗದಲ್ಲಿ ವಿಶೇಷವಾಗಿ ಬೆಣ್ಣೆತೊರಾ ಲೋಯರ್ ಮುಲ್ಲಾಮಾಡಿ project ಗಳು ಇನ್ನು complete ಆಗಿಲ್ಲ. 20 ವರ್ಷದಿಂದ ನಡೆಯುತ್ತಿದೆ. ಅದನ್ನು complete ಮಾಡುವುದಕ್ಕೆ ಮಾನ್ಯ ನೀರಾವರಿ ಸಚಿವರು ಹೆಚ್ಚಿನ ಹಣವನ್ನು ಕೊಟ್ಟು complete ಮಾಡಬೇಕೆಂದು ನನ್ನ ಸಲಹೆ ಇದೆ. ಕೊನೆಯದಾಗಿ, ನಮ್ಮ ನಗರಾಭಿವೃದ್ಧಿ ಸಚಿವರು ಇಲ್ಲಿ ಇದ್ದಾರೆ. ನನ್ನ ಮತ ಕ್ಷೇತ್ರದಲ್ಲಿ raising main ಮಾಡಿದ್ದಾರೆ, ಆದರೆ ಸೇಡಂಗೆ distribution systems 24/7 ತೆಗೆದುಕೊಂಡಿದ್ದೇವೆಂದು ಹೇಳಿದರು. 24/7 ತೆಗೆದುಕೊಂಡಿದ್ದೇವೆಂದು distribution system ಅನ್ನು cancel ಮಾಡಿದರು. Estimate ಆಗಿದೆ, ಆದರೆ ಇಲ್ಲಿಯವರೆಗೆ ಟೆಂಡರ್ ಆಗಿಲ್ಲ. Immediate ಆಗಿ ಅದನ್ನು

ಮಾಡದೆ ಹೋದರೆ ಬರೀ bulk water supply ಮಾಡಿದ ಹಾಗೆ ಆಗುತ್ತದೆ, ಆದರೆ distribution ಇಲ್ಲದೆ ಹೋದರೆ ಬಹಳ ತೊಂದರೆ ಆಗುತ್ತಿದೆ. ನಮ್ಮ ಸೇಡಂಗ UGD sanction ಆಗಿದೆ, ಟೆಂಡರ್ ready ಆಗಿದೆ. ಆದರೆ ನಿಮ್ಮ ಇಲಾಖೆಯವರು ಟೆಂಡರ್ ಕರೆಯುವುದಕ್ಕೆ ready ಇಲ್ಲ., ಏತಕ್ಕೆಂದರೆ ಇಲ್ಲ ನಾವು ಭೂಮಿಯನ್ನು ಸಂಪೂರ್ಣವಾಗಿ ವಶಕ್ಕೆ ತೆಗೆದುಕೊಂಡ ಮೇಲೆ ಮಾಡಬೇಕೆಂದು ನೀವು ಒತ್ತಾಯ ಮಾಡುತ್ತಿದ್ದೀರಿ. ಆ ರೀತಿ ಮಾಡುವಂಥ ಅವಶ್ಯಕತೆ ಇಲ್ಲವೆಂದು ನಾನು ಅಂದುಕೊಳ್ಳುತ್ತೇನೆ. ನೀವು emergency clause ನಲ್ಲಿ land ಅನ್ನು acquire ಮಾಡಿ ಯಾರು ಬೇಡವೆಂದು ಹೇಳುತ್ತಾರೆ. ನೀವು D.C. ಯವರಿಗೆ direction ಕೊಡಿ emergency clause ನಲ್ಲಿ ಬೇಕಾಗಿರುವಂಥ ಭೂಮಿಯನ್ನು acquire ಮಾಡಿ. ಆಮೇಲೆ STP ಗಳಿಗೆ ಬೇಕಾಗಿರುವಂಥ ಭೂಮಿಯನ್ನು ಒದಗಿಸಿ ನೀವು ಟೆಂಡರ್ ಅನ್ನು ಮಾಡಿ. ನಮ್ಮಲ್ಲಿ UGD snaction ಮಾಡಿ ಒಂದು ವರ್ಷವಾಯಿತು. UGD ಮತ್ತು water supply scheme ಅನ್ನು ಅತೀ ಶೀಘ್ರದಲ್ಲಿ ಮಾಡಬೇಕೆಂದು ಮಾನ್ಯ ಸಚಿವರಲ್ಲಿ ನನ್ನ ಮನವಿ ಇದೆ. ಇವತ್ತು, ನಗರ ಪ್ರದೇಶದಲ್ಲಿ ಜಾಸ್ತಿ ಹಣ ಕೊಟ್ಟಿದ್ದಾರೆ. ಬಿಜೆಪಿ ಅಜೆಂಡಾ ಏನಿದೆ, ಅದು ಗೊತ್ತಿಲ್ಲ. ನಮ್ಮ voters ಎಲ್ಲಾ town ನಲ್ಲಿ concentrate ಆಗಿ ಇರುತ್ತಾರೆಂದು ಜಾಸ್ತಿ ಹಣ ಕೊಟ್ಟಿರುತ್ತಾರೆ. ಪರವಾಗಿಲ್ಲ, ತಾವು ಯಾರಿಗಾದರೂ ಆಗಲಿ ಹಣ ಕೊಟ್ಟಿದ್ದೀರಲ್ಲ ನಮಗೆ ಸಂತೋಷವಿದೆ. ಆದರೆ, ಮಾನ್ಯ ಸಚಿವರು ಗ್ರಾಮೀಣ ಪ್ರದೇಶಗಳಿಗೆ ಹೆಚ್ಚಿನ ಆದ್ಯತೆ ಕೊಡಬೇಕು. ನಮ್ಮ ಗುಲ್ಬರ್ಗ ನಗರಕ್ಕೆ ತಾವು ಇನ್ನೂ ಹೆಚ್ಚಿನ ಹಣ ಕೊಡಬೇಕು. ರೂ. 100 ಕೋಟಿ ಕೊಟ್ಟಿದ್ದೀರಿ ಹಾಗು ಎರಡನೇ ಕಂತಿನಲ್ಲಿ ರೂ. 100 ಕೋಟಿ ಕೊಟ್ಟಿದ್ದರೂ ಸರಿಯಾಗಿ ಹೋಗುತ್ತಿಲ್ಲ. ನೀವು ಪ್ರಯತ್ನ ಮಾಡುತ್ತೀರಿ. we appreciate your efforts. ಮಾನ್ಯ ಸುರೇಶ್ ಕುಮಾರ್ ರವರೆ, ತಾವು ಗುಲ್ಬರ್ಗದಂಥ second line city ಗಳನ್ನು development ಮಾಡಿರುವುದು ಸಾಕು. ಬೆಂಗಳೂರು, ಮೈಸೂರು, ಬೆಳಗಾಂ ಇಷ್ಟೇ ಅಲ್ಲ, ನಮ್ಮ ಗುಲ್ಬರ್ಗಾ, ಬೀದರ್, ಬಿಜಾಪುರ, ಬಾಗಲಕೋಟಿ ಇಂಥ ಜಿಲ್ಲೆಗಳನ್ನು ತಾವು ಸ್ವಲ್ಪ development ಮಾಡುವುದಕ್ಕೆ ಪ್ರಯತ್ನ ಮಾಡಿ. ಅದಕ್ಕೆ ಹೆಚ್ಚಿನ ಹಣವನ್ನು ಕೊಡಬೇಕೆಂದು ಅವರನ್ನು ಮನವಿ ಮಾಡುತ್ತೇನೆ. ನೀವು ಮಂಡಿಸಿರತಕ್ಕಂಥ ಒಂದು ಲಕ್ಷ ಕೋಟಿ ಬಜೆಟ್ ನನಗೆ ತೃಪ್ತಿ ತಂದಿಲ್ಲ. ಇದರಲ್ಲಿ ಬಹಳಷ್ಟು ನ್ಯೂನತೆಗಳು ಇವೆ. ಒಂದು ಲಕ್ಷ ಕೋಟಿ ಬಜೆಟ್ ಅನ್ನು ತಾವು implement ಮಾಡುವುದಕ್ಕಂತೂ ಆಗುವುದಿಲ್ಲ. ಆದರೆ, ತಾವು 3 ಸಾವಿರ ಕೋಟಿ ಸಾಲ ಮನ್ನಾ ಮಾಡುತ್ತೇವೆಂದು ಹೇಳಿದ್ದೀರಿ. ನಾವು ಅದನ್ನು

welcome ಮಾಡಿದ್ದೇವೆ. ಆದರೆ ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಹೇಳುವಂಥ ಸಂದರ್ಭದಲ್ಲಿ ತಾವು ಹಣವನ್ನು ಯಾವ ರೀತಿ ಕೂಡಿಸುತ್ತೀರಿ ಆದರ ಬಗ್ಗೆ clarification ಕೊಡಬೇಕು. ರೂ. 3,500 ಸಾವಿರ ಕೋಟಿ ಯಲ್ಲಿ ಯಾವ ಯೋಜನೆಗಳಿಗೆ ತಾವು ಕತ್ತರಿ ಹಾಕುತ್ತೀರೆಂದು ನಮಗೆ ಹೇಳಬೇಕು. opposition M.L.A. ಗಳು ಇರತಕ್ಕಂಥ ಕ್ಷೇತ್ರಗಳಲ್ಲಿನ ಯೋಜನೆಗಳನ್ನು ಕಟ್ ಮಾಡಿಕೊಡುತ್ತೀರೋ ? ಅಥವಾ ಹೆಚ್ಚಿನ ಸಾಲ ತೆಗೆದುಕೊಳ್ಳುತ್ತೀರೋ? ಏನು ಮಾಡುತ್ತೀರೆಂದು ನಮಗೆ ಹೇಳಬೇಕು. ತಾನೆ? ನೀವು ಏನೇ ಮಾಡಿದರೂ accept ಮಾಡುವುದಕ್ಕೆ ನಾವು ready ಇದ್ದೇವೆ. For the sake of famers of the state we are ready to sacrifice. ಹೆಚ್ಚಿನ ಹಣವನ್ನು ಸಂಗ್ರಹಣೆ ಮಾಡುವುದಾಗಲಿ, ಸಾಲ ಪಡೆದು ಮಾಡುವುದಾಗಲಿ ಮಾಡಬೇಕೆಂದು ಸಲಹೆ ಮಾಡಿ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಗಮನ ಸೆಳೆಯುವ ಸೂಚನೆಗಳು. ಮಾನ್ಯ ಅಭಯ್ ಪಾಟೀಲ್‌ರವರೆ, ಮಾತನಾಡಿ.

6. ಗಮನ ಸೆಳೆಯುವ ಸೂಚನೆಗಳು

ವಿಷಯ: ಬೆಳಗಾವಿಯಲ್ಲಿ ಐ.ಐ.ಟಿ. ಸ್ಥಾಪನೆ ಬಗ್ಗೆ

ಶ್ರೀ ಅಭಯ್ ಪಾಟೀಲ್ (ಬೆಳಗಾಂ ದಕ್ಷಿಣ) : ಮಾನ್ಯ ಸಭಾಪತಿಯರೆ, ಬೆಳಗಾವಿಯಲ್ಲಿ ಐ.ಐ.ಟಿ. ಸ್ಥಾಪನೆ ಮಾಡುವ ಕುರಿತು ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರುವ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎನ್ನುವುದರ ಬಗ್ಗೆ ಸರ್ಕಾರದ ಗಮನ ಸೆಳೆಯುವುದಕ್ಕೆ ಇಚ್ಛೆಪಡುತ್ತೇನೆ.

ಅಧ್ಯಕ್ಷರು : ಮಾನ್ಯ ಉನ್ನತ ಶಿಕ್ಷಣ ಸಚಿವರು ಮಾತನಾಡಿ.

ಶ್ರೀಸಿ.ಟಿ. ರವಿ (ಉನ್ನತ ಶಿಕ್ಷಣ ಸಚಿವರು) : ಮಾನ್ಯ ಸಭಾಧ್ಯಕ್ಷರೆ, ಭಾರತ ಸರ್ಕಾರವು ಹನ್ನೊಂದನೇ ಪಂಚವಾರ್ಷಿಕ ಯೋಜನೆಯಡಿ ದೇಶದಲ್ಲಿ 06 Indian Institute of Technology ಗಳನ್ನು ಸ್ಥಾಪಿಸಲಾಗುವುದೆಂಬ ವಿಷಯವನ್ನು ತಿಳಿದು, ಅಂದಿನ ಮಾನ್ಯ ಮುಖ್ಯಮಂತ್ರಿಗಳು ದಿನಾಂಕ: 11-08-2006 ರಂದು ಅಂದಿನ ಮಾನ್ಯ